ಭಾನುವಾರ, ಡಿಸೆಂಬರ್ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 332 | ಪುಟ 20

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ನೋವು ಮರೆತು ಈಜು ಕಲಿತು ದಡ ಸೇರಿದವರ ಕಥೆ





ಬಾಣಂತಿಯರ ಸಾವು: ತನಿಖೆಗೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಸಮಿತಿ ರಚನೆ – ಮುಖ್ಯಮಂತ್ರಿ

# ರಾಜ್ಯ ಔಷಧ ನಿಯಂತ್ರಕ ಅಮಾನತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಸಂಭವಿಸಿದ ನಾಲ್ವರು ಬಾಣಂತಿಯರ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದಲ್ಲಿ ರಾಜ್ಯ ಔಷಧ ನಿಯಂತ್ರಕ ಉಮೇಶ್ ಅವರನ್ನು ಅಮಾನತು ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಘಟನೆಯ ಕುರಿತಂತೆ ಶನಿವಾರ ಉನ್ನತಮಟ್ಟದ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಾಣಂತಿಯರಿಗೆ ನೀಡಲಾಗಿರುವ ರಿಂಗರ್ ಲ್ಯಾಕ್ಟೇಟ್ ದ್ರಾವಣ ಪೂರೈಸಿರುವ 'ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್ ಕಂಪನಿ'ಯನ್ನು ಕಪ್ಪುಪಟ್ಟಿಗೆ ಸೇರಿಸಿ, ಈ ಕಂಪನಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶ ನೀಡಲಾಗಿದೆ' ಎಂದರು.

'ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಸಂಭವಿಸಿರುವ ಈ ರೀತಿಯ ಸಾವಿನ ಪ್ರಕರಣಗಳ ಕುರಿತು ತನಿಖೆ ನಡೆಸಲು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಿ, ವಾರದೊಳಗೆ ವರದಿ ಪಡೆಯಲಾಗುವುದು. ಔಷಧ ನಿಯಂತ್ರಣ ಕಾಯ್ದೆಯನ್ನು ಇನ್ನಷ್ಟು ಬಿಗಿಗೊಳಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಕೂಡಾ ನಿರ್ಧರಿಸಲಾಗಿದೆ' ಎಂದರು.

'ನವೆಂಬರ್ 11ರಿಂದ ಬಳ್ಳಾರಿಯಲ್ಲಿ ಹಿಮೋಡಯಾಲಿಸಿಸ್ ಮತ್ತು ಬಹು ಅಂಗಗಳ ವೈಫಲ್ಯ ಹಾಗೂ ತೀವ್ರತರ ಮೂತ್ರಪಿಂಡದ ಗಾಯದಂತಹ ತೊಂದರೆಗಳ ಏಳು ಪ್ರಕರಣಗಳಲ್ಲಿ ನಾಲ್ವರು ಬಾಣಂತಿಯರು ಸಾವಿಗೀಡಾಗಿದ್ದಾರೆ. ಉಳಿದ ಮೂರು ರೋಗಿಗಳಲ್ಲಿ ಇಬ್ಬರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, ಒಬ್ಬರು ಬಳ್ಳಾರಿ ವಿಮ್ಸ್‌ನಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ತಜ್ಞರ ಸಮಿತಿ ರಚಿಸಿ ಬಾಣಂತಿಯರ ಸಾವಿನ ಕುರಿತು ಪ್ರಾಥಮಿಕ ವರದಿ ಪಡೆಯಲಾಗಿದೆ' ಎಂದರು.

'ರಿಂಗರ್ ಲ್ಯಾಕ್ಟೇಟ್ ದ್ರಾವಣದ ಎಲ್ಲ ಬ್ಯಾಚ್‌ಗಳ ಬಳಕೆಯನ್ನು ಹಿಂಪಡೆಯಲಾಗಿದೆ. ಬಳ್ಳಾರಿಯಲ್ಲಿ ಬಳಸಲಾದ ಈ ದ್ರಾವಣವನ್ನು ಪರೀಕ್ಷಿಸಲು ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ವರದಿ ಬಂದ ಬಳಿಕ ಘಟನೆಗೆ ಕಾರಣರಾದವರನ್ನು ಗುರುತಿಸಿ ಕ್ರಮ ಕೈಗೊಳ್ಳಲಾಗುವುದು. ಔಷಧ ನಿಯಂತ್ರಕರ ಮೇಲೆಯೂ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

7ನೇ ಪುಟ ನೋಡಿ

- ಪಶ್ಚಿಮ್ ಬಂಗಾ ಫಾರ್ಮಾ ಕಂಪನಿ ಕಪ್ಪುಪಟ್ಟಿಗೆ
- ರಿಂಗರ್ ಲ್ಯಾಕ್ಟೇಟ್ ದ್ರಾವಣ ಪರೀಕ್ಷೆ ವರದಿ ಬಳಿಕ ಇನ್ನಷ್ಟು ಕ್ರಮದ ಭರವಸೆ
- ಗಂಭೀರ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ



ತಮಿಳುನಾಡು ಮಾದರಿಯಲ್ಲಿ ಔಷಧ ಖರೀದಿ ಪ್ರಕ್ರಿಯೆ ನಿಯಂತ್ರಣ ಇಲಾಖೆ ಪುನರ್‌ರಚಿಸಲು ಮುಂದಿನ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಲು ಸೂಚಿಸಲಾಗಿದೆ

**ಸಿದ್ದರಾಮಯ್ಯ,** ಮುಖ್ಯಮಂತ್ರಿ

ಗರ್ಭಿಣಿ, ಬಾಣಂತಿಯರ ಸಾವಿಗೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ. ಸಚಿವರಾದ ದಿನೇಶ್, ಶರಣಪ್ರಕಾಶ್, ಜಮೀರ್ ಅವರನ್ನು ಸಂಪುಟದಿಂದ ವಜಾ ಮಾಡಿ

**ಆರ್. ಅಶೋಕ**
ವಿಧಾನಸಭೆ ವಿರೋಧ ಪಕ್ಷದ ನಾಯಕ

## ವೈದ್ಯರ ವಿರುದ್ಧ 'ಲೋಕಾ' ಪ್ರಕರಣ

ಬಳ್ಳಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ ಲೋಕಾಯುಕ್ತವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. 'ಮಾಧ್ಯಮಗಳಲ್ಲಿ ಸುದ್ದಿಗಳು ಬಂದ ನಂತರ, ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು, ಈ ಬಗ್ಗೆ ಪರಿಶೀಲನೆ ನಡೆಸುವಂತೆ ಬಳ್ಳಾರಿ ಲೋಕಾಯುಕ್ತ ಎಸ್‌ಪಿಗೆ ಸೂಚಿಸಿದ್ದರು. ಅವರು ಇದೇ 29ರಂದು ನೀಡಿದ ವರದಿಯ ಆಧಾರದಲ್ಲಿ ಬಳ್ಳಾರಿ ಜಿಲ್ಲಾಸ್ಪತ್ರೆ ಮತ್ತು ಬಿಎಂಆರ್‌ಸಿ ವೈದ್ಯರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅವರಿಂದ ವಿವರಣೆ ಕೇಳಲಾಗಿದೆ' ಎಂದು ಲೋಕಾಯಕ್ತ ಮೂಲಗಳು ಹೇಳಿವೆ. 'ಈ ಸಂಬಂಧ ಹೆಚ್ಚಿನ ತನಿಖೆ ನಡೆಸಿ, ತಿಂಗಳೊಳಗೆ ವರದಿ ಸಲ್ಲಿಸಿ ಎಂದು ಬಳ್ಳಾರಿಯ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತಿ ಸಿಇಒ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಸೂಚಿಸಿದ್ದಾರೆ' ಎಂದು ಲೋಕಾಯುಕ್ತ ಮಾಹಿತಿ ನೀಡಿದೆ.

### '₹ 2 ಲಕ್ಷ ಪರಿಹಾರ'

'ಮೃತ ಬಾಣಂತಿಯರ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ₹ 2 ಲಕ್ಷ ಪರಿಹಾರ ಘೋಷಿಸಲಾಗಿದೆ. ಅಲ್ಲದೆ, ಸಾವಿಗೆ ಕಾರಣವಾದ ಔಷಧ ಪೂರೈಸಿದ ಕಂಪನಿಯಿಂದಲೂ ಪರಿಹಾರ ವಸೂಲಿ ಮಾಡಿ, ಮೃತರ ಕುಟುಂಬಕ್ಕೆ ನೀಡಲು ಸೂಚನೆ ನೀಡಲಾಗಿದೆ' ಎಂದು ಸಿದ್ದರಾಮಯ್ಯ ಹೇಳಿದರು.



ಚೆನ್ನೈನ ಮರೀನಾ ಬೀಚ್ ಬಳಿ ಜನರು ಅಲೆಗಳ ಅಬ್ಬರವನ್ನು ವೀಕ್ಷಿಸಿದರು ಎಎಫ್‌ಪಿ ಚಿತ್ರ

**ಚೆನ್ನೈನಲ್ಲಿ ಮಹಾ ಮಳೆ**

**22,000** ಪರಿಹಾರ ಕಾರ್ಯದಲ್ಲಿ ತೊಡಗಿರುವ ಗ್ರೇಟರ್ ಚೆನ್ನೈ ಕಾರ್ಪೊರೇಷನ್ ಸಿಬ್ಬಂದಿ

**1,686** ಮಳೆ ನೀರು ತೆರವಿಗೆ ಬಳಸಿದ ಪಂಪ್‌ಸೆಟ್‌ಗಳು

**334** ಚೆನ್ನೈನಲ್ಲಿ ನೀರು ನಿಂತು ತೊಂದರೆಯಾಗಿರುವ ಸ್ಥಳಗಳು

# 'ಫೆಂಗಲ್' ಅಬ್ಬರ

ಪ್ರಜಾವಾಣಿ ವಾರ್ತೆ

**ಚೆನ್ನೈ/ಹೈದರಾಬಾದ್:** 'ಫೆಂಗಲ್' ಚಂಡಮಾರುತ ತಮಿಳುನಾಡು ಕರಾವಳಿಗೆ ಶನಿವಾರ ಅಪ್ಪಳಿಸಿದ್ದು, ಚೆನ್ನೈ ಸೇರಿದಂತೆ ತಮಿಳುನಾಡಿನ ಹಲವು ನಗರಗಳು ಹಾಗೂ ಆಂಧ್ರಪ್ರದೇಶದ ಕರಾವಳಿ ಮತ್ತು ರಾಯಲಸೀಮಾ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದೆ.

ಚೆನ್ನೈನಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಚೆನ್ನೈನಲ್ಲಿ ವಿಮಾನಗಳ ಕಾರ್ಯಾಚರಣೆಯನ್ನು ಡಿ.1ರ ನಸುಕಿನ 4ರವರೆಗೆ ಸ್ಥಗಿತಗೊಳಿಸಲು ತೀರ್ಮಾನ ತೆಗೆದುಕೊಂಡಿತ್ತು.

ಶನಿವಾರ ಬೆಳಿಗ್ಗೆಯಿಂದಲೇ, 55 ವಿಮಾನಗಳ ಸಂಚಾರ ರದ್ದಾಗಿತ್ತು. 19 ವಿಮಾನಗಳ ಮಾರ್ಗ ಬದಲಾಯಿಸಲಾಗಿತ್ತು. ಹೈದರಾಬಾದ್‌ನಿಂದ ಹೊರಡಬೇಕಿದ್ದ ಕನಿಷ್ಠ 20 ವಿಮಾನಗಳ ಸಂಚಾರ ರದ್ದುಗೊಳಿಸಲಾಗಿತ್ತು.

ವಿವರ ಪುಟ 9

**ಒಳನೋಟ**



ಗರ್ಭಕೋಶಕ್ಕೆ ಕತ್ತರಿ ಬೇಕೇ? 6

# ಬಿಜೆಪಿ ಬಣ ಜಗಳ ವರಿಷ್ಠರ ಅಂಗಳಕ್ಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬಣ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣಗಳ ನಡುವಿನ ಕಿತ್ತಾಟ ಪಕ್ಷದ ವರಿಷ್ಠರ ಅಂಗಳಕ್ಕೆ ತಲುಪಿದೆ.

ಬಣ ಜಗಳ ತಾರಕಕ್ಕೇರಿರುವ ನಡುವೆಯೇ ಶುಕ್ರವಾರ ರಾತ್ರಿ ರಾಷ್ಟ್ರ ರಾಜಧಾನಿಗೆ ಧಾವಿಸಿದ ವಿಜಯೇಂದ್ರ ಅವರು ಶನಿವಾರ ಬೆಳಿಗ್ಗೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಭಿನ್ನಮತೀಯ ನಾಯಕರ ವಿರುದ್ಧ ದೂರಿತ್ತರು. ಗೊಂದಲ ಬಗೆಹರಿಸುವಂತೆ ರಾಜ್ಯದ ಬಿಜೆಪಿ ಸಂಸದರು ಸಹ ಮನವಿ ಮಾಡಿಕೊಂಡರು.

ಇದರ ಬೆನ್ನಲ್ಲೇ ಬಸನಗೌಡ ಪಾಟೀಲ ಯತ್ನಾಳ ಅವರು 'ಡಿ.2ರಂದು ನಾನು, ಪ್ರತಾಪ್ ಸಿಂಹ, ಜಿ.ಎಂ. ಸಿದ್ದೇಶ್ವರ, ಕುಮಾರ ಬಂಗಾರಪ್ಪ, ಶಾಸಕ ಚಂದ್ರಪ್ಪ ಮತ್ತು ಹರೀಶ ದೆಹಲಿಗೆ ತೆರಳಿ ವಕ್ಫ್ ಕುರಿತು ಮಧ್ಯಂತರ ವರದಿ ಸಲ್ಲಿಸುತ್ತೇವೆ' ಎಂದು ಹೇಳಿದ್ದಾರೆ.

**ಚಿನಕುರುಳಿ**

ಪ್ರಕಾಶ್ ಶೆಟ್ಟಿ



ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗೆ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

## REAL ESTATE SELLING

### Sites

#### Anjanapura

ANJANAPURA 10TH Block 30x40 S/F Very Good Location, Immediate Construction 2km From Bannerghatta Road: 9964627255

**BDA SITE** for Sale, Residential and Commercial Anjanapura BDA Layout Narayananagara BCMC Layout, Judicial Layout, Vakil Garden, Kanakapura Road 30x40, 40x60, 50x80 BDA E AUCTION and corner sites available. 80% Bank Loan, 9916592400

**ANJANAPURA SITE** for sale 4th Block 30x40 Facing south good location immediate construction near last Busstop. 9845132011, 9663554448

**ANJANAPURA BDA** Site For Sale 40X55 No 786 8th Block 12000/- per sqft Contact:8095504466

#### Airport Road

"SALE-30X40 CORNER-SITE 60`feet`Road BIAPPA`approved formed`in`2008 already`23`houses built`in Layout,fully-compounded with`24`hour security near`KIADB Aero park &`Bagalur Police station Rs.65`Lakhs. 9845286505"

#### Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES, BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/`A` Khatha SITES, BANASHANKARI 6th Stage, Anjanapura, Vishweswaraiah Layout. 9945724472.

BSK 6TH Stage 11th Block_BDA 20X30 North facing allottee site, excellent vastu for sale -9986075122

**BDA SITE** for Sale, Residential and Prime Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80, 80% Bank Loan. 9916592400

#### Basaweshwaranagar

**BASVESHWARNAGAR 30×40,** West 30×51 East Residential, Mahalaxmi Layout 40×60, Rajajinagar 40×60 North Commercial Sale 8660075308.

#### Devanahalli

**"CONTACT BUYING/** Selling 30x40, 30x50 BIAPA Approved Site near Rajankunte, Kundana, Bagalur, Devanhalli Surroundings. 9845178335"

#### Gnanabharathi

**EAST FACING** BDA site measuring 30ftx40ft. Gnanabharathi BDA 2nd Block. Near Mariyappanapalya Busstop. Ph - 6364657940/ 9980261185

#### Hebbal

4-ACRE CONVERTED LAND Near Mahesh Bupathi Tennis Court Sahakarnagar, Genuine Buyers/ Sellers/ Brokers Call 9900001973

#### Jakkur

JUDICIAL LAYOUT JAKKUR 50x80 BDA Site East Facing 40 Feet Road For Sale Contact: 9341260828

#### Jayanagar

**BDA SITE** for Sale, Residential and Prime Commercial Jayanagara, JP Nagara, BTM Layout, HSR Layout, Koramangala 30x40, 40x60, 50x80, 80% Bank Loan. 9916592400

#### J P Nagar

SALE 30X40,_40X60 BDA Prime Corner Property J.P.Nagar 2nd_Phase_Near Innisfree House School Only Genuine Buyers Call:9986490019

**JP-NAGAR 2ND** PHASE 40X60 SOUTH FACING RS. 28000/- NEGOTIABLE BROCKERS EXCUSE: 9449655947

#### Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

**40X60 EF,** 30x40 WF 50x80 WF Judicial Layout Talaguttapur Metro, 40x60 EF Kendiya Layout: 9341238064

#### Kempegowda Layout

BDA SITE FOR SALE @ Kempegowda Layout 40x60, 50x80 Good Location Contact: 9845555666

KEMPEGOWDA LAYOUT BDA, Commercial Property East Facing 50×80Measurement, Only Genuine Buyer Contact. Owner. 9663005859/ 9731594565

#### Multiple Locations

**MALLESHWARAM 100X80,** Vyalikaval 40x90, Sadashivanagar 80x120, Sanjaynagar 40x60, 30x40, 50x80. Contact:- 9538111239.

#### Nagarabhavi

**"NAGARABHAVI NEAR** BDA-complex Annapoorneshwarinagar 40x60 South 40ft Road, 100% Vasthu BDA Site Sale. 9448432633"

**"BINNY LAYOUT** 30x40 West facing BDA Site 40`ft Road near BDA-Complex Nagarabhavi, Direct Owner. 9845314932"

**SITE SALE** 40x60 East Facing RHCS Layout 60ft Rood A-Block 80% White Price 14500/-: 9980409820

#### Nelamangala

NELAMANGALA NEAR NH-4, RASHI LAYOUT 30x50 BMRDA Site Sale West Facing 4500/- Per Sqft: 9845488488

#### Rajarajeshwari Nagar

RAJARAJESHWARI NAGAR Ideal Homes South East Corner 100x74, BEML VII Stage 40x60, 80x60, Banashankari VI 40x60, 50x80. 94484-83699

#### Seshadripuram

SALE 2660SFT East Semi Commercial Site Rs._32000/- sft, Near_kumar Park Seshadripuram Prime Location 9900329373, 9916805916

#### Sanjaynagar

**SALE SITE** 27x40 Measurement West Facing, BBMP Khatha, Ashwathnagar. Genuine Buyers. Contact:- 9845611113

#### Vishweshwariah Layout

"30X40 NF NEWLY_BUILT RENTAL_HOUSE SALE VISHVESHWARAIAH LAYOUT 4TH BLOCK BDA [GENUINE_BUYER'S]- 9845143579"

**BDA SITES** AVAILABLE NADAPRABHU KEMPEGOWDA LAYOUT VISHVESHWARAIYA LAYOUT 40X60, 50X80 GOOD LOCATION. CONTACT: 9686469799

AVAILABLE 40X60 BDA Site Vishveshwaraiah Layout 60ft, 3rd Block Near Ullal Main Road Amma Asharmma: 9844603127

**"VISHVESHWARAIAH LAYOUT** Wanted BDA Sites 20x30,30x40, 40x60, 50x80 for Immediate Settlement, "Anugraha Construction"- 9886294610"

#### Out-Station

PRIME LAND FOR SALE
ON NH- 81 5 ACRES, SINGANALLUR (TRICHY ROAD) COIMBATORE
500 FEET FRONTAGE ROAD FACE
For Details Contact
98203 07252
93631 20008

#### Vidyaranyapura

BDA SITES HMT LAYOUT VIDHYARANYAPURA (1) 1200sqft Rs. 12000 Psqft, (2) 2000sqft, Rs.13000 Psqft, (3) 2400sqft Rs. 14500 Psqft: 9035883017

#### Mysore

**SALE. VIJAYANAGAR** 4th Stage, 4000 sqft North Facing site on 80 feet double road. Only serious buyers, contact:- 8762018445.

#### Doddaballapur Road

**GOWRIBHIDHANUR 40** Acers Single Owner Developed Agriculture Land Sale 40 Lakhs/Per Acer Brockers Excuse 9449655947

#### Chandapura

SALE CONVERSION Villa Site 30x35 'E' Khatha at Chandapura Marsur, Rs. 36 Lakhs 7892531744 9448369117

#### Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

### House

#### Jayanagar

JAYANAGAR 4TH T`Block North facing 22x60, 3 unit House 3,30,00,000/- Rental income Building -9731775536.

SALE 45X60 Corner Jayanagar 4th T Block With old House on 80 and 60feet Road ct: 9844134068 8073859758


JAYANAGAR 7TH Block West, HOUSE on 30x50, facing south, Ground + Two floors, Contact: 90715-38719.

#### J P Nagar

SALE 45X70 at J.P.Nagar 3rd Phase With old House Excellent Location Close to Mini Forest ct: 9844134068 8073859758

## PROPERTY CORNER

ಕ್ಲಾಸಿಫೈಡ್ಸ್



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

AASTHA INDUSTRIAL CITY
INDUSTRIAL PLOTS FOR SALE
Dabaspete
Bangalore-Mumbai Economic Corridor
Ready For Registration
Clear Title, Bank Loan Available
Call for more details :
7676343099, 9513142299




#### J.P.NAGAR_2ND

J.P.NAGAR_2ND Near`Central Mall 30x40, 5BHK`Duplex house_with Interiors, Lift- 4,00,00000/- 30x55, 4BHK`Duplex House 5,10,00000/- -9731775536

J.P.NAGAR 2ND 40x60 Two unit House 6,25,00000/-, 6th Phase K.R.Layout 40x60 Two unit_House, 3,60,00,000/- -9731775536

#### Uttarahalli

***VAJAPEYENAGAR NEAR*** KSRTC Layout,Uttarahalli 40x60 north-west corner 2Bedroom House 2.60crore negotiable. ABHILASHA CONSULTANT:9480565758

#### Vidyaranyapura

SALE ONE BHK NEW HOUSE, NORTH EAST CORNER 1200sqft SITE Rs.84 LAKHS VIDHYARANYAPURA: 9035883017

#### Neelasandra

**SALE- NEELASANDRA** (AustinTown), BBMP 'A' Khata Corner House 750 sft, 4 floors. 99 Lakhs. 8088644440.

#### Banashankari

30X52 E/S, CORNER_VILLA HOUSE`SALE Banashankari 6th.Stage, 10th Block Attached, Gated Community, 2.5Cr, Full Cheque Payment 9799099699, 9740075563.

### Flat

#### Jayanagar

SALE 60X80 Jayanagar 1st Block With 4 floor Flat Each 3 BHK Excellent Location ct: 9844134068 8073859758

#### J P Nagar

J.P.NAGAR SALE 2BHK 1350 sqft WF/EF carparking DG liftbehind Kalyani Magnum' Contact 9845522122/ 9591908228

**GOING CHEAP.** 2 Bhk Flat near J P Nagar Metro. 50 Lakhs. You get 25K Rent PM. 9663676464.

### Commerical

#### Hosur Road

**ONLY FOR commercial.** Hosur Bus stand opposite near Axis bank. 2400 square feet. contact 9005008073

#### HRBR Layout

HRBR COMMERCIAL 100 Feet Road BDA North Facing, Excellent Site 40x60 For Sale Call: 7829203369

#### Jayanagar

JAYANAGAR_9TH 30x40 Commercial Building`5.15cr &.30x40`North 3.45cr &.JPN 3rd 40x60 S/w`Corner 26500/-, 30x40`South 3.15cr80k`Returns- 9945310899

#### J P Nagar

J.P.NAGAR 2ND Phase Commercial 105x100, Corner 80 feet Road 35,000/- Sft. (Genuine buyers only) -9731775536

#### Mysore Road

MYSORE ROAD Timber Yard Layout Industrial/Commercial Warehouse/ Godown Plot-1350,4100, 10000 14000,17000 Sqft 40x60-N/E 40x65-E/S- 9900399006

#### Old Madras Road

PRIME OFFICE/ Showroom Sale 1638sft,`1st Floor, on`Old Madras Road, Opp.RMZ Infinity, Near Gopalan Signature Mall,`Metro Station, inside ORR- -9948661379

#### Vishweshwariah Layout

FOR SALE 50x80 BDA Commercial Site On 100 feet Road, East facing, at 6th BLOCK, Sir M.V. Layout Contact: 9880956229

### Commercial Building

#### Yelahanka

**HOTEL FOR** Lease / Sale at Puttenahalli Yelahanka New Town, Doddaballapura Road Bangalore Contact: 8951231466

### Agricultural Land

#### Out-Station

**FOR SALE** 73 acres of well maintained Coffee estate on main road with all facilities near Gonikoppa, S.Coorg. No brokers- 9611103037, 7619319037

## REAL ESTATE BUYING

### Industrial & Factory

#### Out-Station

**REQUIRE A-GRADE** Industrial Shed/ Rent/ 20000- 50000 sqft Narasapura & Vemgal Kiadb Industrial area. Ready to move /Built to Suit. Blumefield Industrial Realty and Projects Pvt Ltd. 9900570439

### Sites

#### Banashankari

WANTED BDA & BBMP SITES Anjanapura Banashankari 6th Stage BCC & BCMC Layout JP.nagar 8th/ 9th Phase NarayanaNagar 1st 2nd 3rd Block NPKL Layout. Vishveshwaraiah Layout. Contact: 9845298419

BDA SITES WANTED ARKAVATHY ANJANAPURA BANASHANKRI 6TH STAGE VISHWESWARAIA KEMPEGOWDA ANY BDA LAYOUT. CONTACT: 9845062822, 8660751654

#### Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

#### Vishweshwariah Layout

*BUYING/ SELLING* 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED BDA SITE 30x40,40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

## BUILDERS ESSENTIAL

### Building Contractors

**BUILDIYA PROJECTS** Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

### Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

## RENTAL PROPERTIES

### Accommodation Available

#### Commercial

RENT-8000SQFT GROUND`FLOOR Commercial Space Suitable`For Hospital, Diagnostic Centre, Showroom,`IT With`Ample`Car Parking in`front`of Thalaghattapura Metro`Station Call:9880594643

**AVAILABLE OFFICE** Space. 1500 Sqft. Office Space @ 10th main 6th Sector HSR Layout. Contact - 9886145328

RENT: COMMERCIAL Space_Ground 1200`Sft, 1st_Floor 1200`Sft. Opposite Trio_World School Kodigehalli Main`Road Sahakaranagar Bengalore. 9845628564, 94492335457.

**TO LET** 2000 sft on Ground Floor Facing SV Main Road, next to LIDO Mall, Bangalore. Suitable for Showrooms/ Supermarkets/ MRP/ Restaurants, etc Contact: 7022106263

**OFFICE SPACE** For Rent16,000 sqft HBR layout 4th Block Facing Ring Road 8861817913 / 9008025761

#### Flats

Residential Property for Sale at Attractive Price
Company Owned Flat For Immediate Sale in Well Developed Prime Location
**In Somerset Apartments, 18, M. G. Road, BANGALORE-560001 (Karnataka)**
**Saleable built up area 1275 sq.ft.**
Contact Immediately
Gandhi & Associates
9833248915/9867899999

#### Industrial And Factory

AVAILABLE OF Industrial_Shed_of 95000`sqft_at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

#### House

R.T.NAGAR RENT Renovated, E/F, Independent House, Ground and First floor, Each 3 BHK, 1500 sqft. Veg preferred. 9740090464.

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

## AUTOMOTIVE

### Four Wheelers Selling

#### Tata

**FOR** SALE Company owned yellow board Tata Ace BS-III vehicle with closed container. The vehicle will be sold to the highest bidder, and sealed tenders must be submitted on or before 10th December 2024. Contact No: +91-8147264722

## PERSONAL

### Change of Name

**DOCUMENT LOST**

I, Balamurugan K R Residing at # 955 Kamakshi Nilayam, Church Street, Bangalore North, Bangalore_560075 have lost my **Original Sale Deed Document No. KRI-1-10207/2004-05**
**While in transit. Finder Please Contact: 9620324064**

I, FARAAZ_R_S S/o.Sayeed Rahaman R/o#14 8th Main Road 4th Cross,LIC Colony Jayanagar 3rd Block East, Bangalore 560011 have`changed my minor Daughter's Name from SARA_FARAAZ to SARA_FATHIMA S_F vide`affidavit dated:30.11.2024 before Notary Mohammed Hussain.K Bangalore

**CHANGE OF NAME**

I, **Arati Pattar,** Residing at Jeya Crystal, No.101, 2nd Floor, Sector-C, BTM Dollars Scheme, Near Kanti Sweets, Basavanagara, Bengaluru-560037, have changed my name to **ARATI S PATTAR** vide affidavit dated 30/11/2024 before Notary Bhagya Kumari N, Bengaluru. Henceforth I shall be called as **ARATI S PATTAR** only

**I, ROSY** R/at #53, Ashok Road, St.Thomas Post, Bengaluru-84, declare that both the names Rosy & Clara Roshline pertains to me only, affidavit dated 11/11/2024, notary S.I.Balaguru, Bengaluru. Henceforth I shall be called ROSY only.

**NAME CORRECTION**

I, **Dhanraj,** R/at No.526/2, 14th Cross, Shastrinagar, Padmanabhanagar, Bengaluru South, Bengaluru-560028, declare that in School Records of my son **Dhruv** my wife's name is mentioned as **Sujatha** instead of **ANNAPURNABAI** vide affidavit dated 26.11.2024, before 2nd Addl. Chief Judicial Magistrate, Bengaluru.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ADDRESS MAKER

# THE ANNUAL ADDRESS FEST

ಪ್ರೀಮಿಯಂ ವಿಲ್ಲಾ ಪ್ಲಾಟ್ಸ್ & ಅಪಾರ್ಟ್‌ಮೆಂಟ್ಸ್

ಅಡ್ರೆಸ್ ಮೇಕರ್ಸ್ ವತಿಯಿಂದ ವರ್ಷದಲ್ಲಿ ಹಿಂದೆಂದೂ ಸಿಗದ
ಅತ್ಯುತ್ತಮ ಡೀಲ್ ಗಳನ್ನು ತಮ್ಮದಾಗಿಸಿಕೊಳ್ಳಲು ಕೆಲವೇ ದಿನಗಳು ಬಾಕಿ !

ನಮ್ಮ ಇತ್ತೀಚಿನ ಅನಾವರಣಗಳ ಮೇಲೆ
**₹6 ಲಕ್ಷದಿಂದ ₹22 ಲಕ್ಷದವರೆಗಿನ* ಪ್ರಯೋಜನಗಳನ್ನು ಪಡೆಯಿರಿ.**



The Imperial Address
ಪ್ರೀಮಿಯಂ ವಿಲ್ಲಾ ಪ್ಲಾಟ್ಸ್
712 ಯೂನಿಟ್ಸ್ | ₹63 ಲಕ್ಷ* ದಿಂದ ಆರಂಭ
ಎಲೆಕ್ಟ್ರಾನಿಕ್ ಸಿಟಿ ಸಮೀಪ



Artemis Address
ಪ್ರೀಮಿಯಂ ವಿಲ್ಲಾ ಪ್ಲಾಟ್ಸ್
401 ಯೂನಿಟ್ಸ್ | ₹42 ಲಕ್ಷ* ದಿಂದ ಆರಂಭ
ನೆಲಮಂಗಲ ರಸ್ತೆ



The Akshara Valley Address
ಪ್ರೀಮಿಯಂ ವಿಲ್ಲಾ ಪ್ಲಾಟ್ಸ್
378 ಯೂನಿಟ್ಸ್ | ₹98 ಲಕ್ಷ* ದಿಂದ ಆರಂಭ
ಮೈಸೂರು ರಸ್ತೆ



The Grand Strand Address
ಪ್ರೀಮಿಯಂ ಅಪಾರ್ಟ್‌ಮೆಂಟ್ಸ್
140 ಯೂನಿಟ್ಸ್ | ₹1.68 ಕೋಟಿ* ಯಿಂದ ಆರಂಭ
ಐಟಿಪಿಎಲ್ ರಸ್ತೆ, ವೈಟ್‌ಫೀಲ್ಡ್

**ಈ ಕೊಡುಗೆ 1ನೇ ಡಿಸೆಂಬರ್ 2024ರವರೆಗೆ ಮಾತ್ರ.**

*T&C Apply.



RERA REGISTRATION : The Akshara Valley Address : PRM/KA/RERA/1251/310/PR/250822/005190 | The Imperial Address : Phase I - PRM/KA/RERA/1251/308/PR/200811/003536 Phase II - PRM/KA/RERA/1251/308/PR/200811/003537 | Phase III - PRM/KA/RERA/1251/308/PR/131022/005318 | Phase IV - PRM/KA/RERA/1251/308/PR/160224/006633 Artemis Address : PRM/KA/RERA/1250/307/PR/271023/006363 | The Grand Strand Address : PRM/KA/RERA/1251/446/PR/270623/006020

SCAN FOR MORE DETAILS

www.addressmaker.in

**8088774433**

# 130 ಗ್ರಾಂ ಚಿನ್ನಾಭರಣ ವಶ, ಮೂವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದ್ವಿಚಕ್ರ ವಾಹನ ಮತ್ತು ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಮೂವರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದು, 11 ಲಕ್ಷ ಮೌಲ್ಯದ 130 ಗ್ರಾಂ ಆಭರಣ ಮತ್ತು ಮೂರು ಬೈಕ್ ವಶಕ್ಕೆ ಪಡೆದಿದ್ದಾರೆ.

ಜರಗನಹಳ್ಳಿಯ ದೀಪಕ್ (23), ಬನ್ನೇರುಘಟ್ಟ ಮುಖ್ಯರಸ್ತೆಯ ಶಾನು ಭೋಗನಹಳ್ಳಿಯ ಜೈದೀಪು ಅಲಿಯಾಸ್ ಜಂಗ್ಲಿ(24) ಹಾಗೂ ವಾಜರಹಳ್ಳಿಯ ಅದ್ವೈತ್ ಗೌಡ (23) ಬಂಧಿತರು.

**ಒಡಿಶಾದ ಸರಗಳ್ಳರ ಬಂಧನ:** ಮಹಿಳೆ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದ ಒಡಿಶಾದ ಇಬ್ಬರು ಆರೋಪಿಗಳನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ದೇಬಶಿಶ್ ದಾಸ್ (35) ಮತ್ತು ಮಧುಸೂದನ್ ಪಣಿಗ್ರಿ (20) ಅವರಿಂದ ಸುಮಾರು ₹5 ಲಕ್ಷ ಮೌಲ್ಯದ 60 ಗ್ರಾಂ ತೂಕದ ಮಾಂಗಲ್ಯ ಸರ ಮತ್ತು ಕೃತ್ಯಕ್ಕೆ ಬಳಸಿದ್ದ ಬೈಕ್ ವಶಪಡಿಸಿಕೊಳ್ಳಲಾಗಿದೆ.

# ಕಡಿಮೆ ದರದಲ್ಲಿ ಸುಸಜ್ಜಿತ ಕ್ರೀಡಾಸೌಲಭ್ಯ

## ಕಾಫಿಬೋರ್ಡ್ ಬಡಾವಣೆಯಲ್ಲಿ ಒಳಾಂಗಣ ಕ್ರೀಡಾಂಗಣ ಉದ್ಘಾಟಿಸಿದ ಸಚಿವ ಕೃಷ್ಣಬೈರೇಗೌಡ

ಪ್ರಜಾವಾಣಿ ವಾರ್ತೆ

**ಯಲಹಂಕ:** ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಕೆಂಪಾಪುರದ ಕಾಫಿಬೋರ್ಡ್ ಬಡಾವಣೆಯಲ್ಲಿ ಬಿಬಿಎಂಪಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣವನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ, ಈಜುಕೊಳದಲ್ಲಿ ಈಜುವ ಮೂಲಕ ಉದ್ಘಾಟಿಸಿದರು.

ಕ್ರೀಡಾಂಗಣದ ಉದ್ಘಾಟನಾ ಸಮಾರಂಭದ ಪ್ರಯುಕ್ತ ಕೆಬಿಜಿ ಸ್ವಯಂ ಸೇವಕರ ತಂಡದಿಂದ ಆಯೋಜಿಸಿರುವ ಎರಡು ದಿನಗಳ ಅಂತರ ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವಕ್ಕೂ ಅವರು ಶನಿವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಒಳಾಂಗಣ ಕ್ರೀಡಾಂಗಣದಲ್ಲಿ ಒಂದೇ ಸೂರಿನಡಿ ಈಜುಕೊಳ, ಜಿಮ್, ಟೇಕ್ವಾಂಡೊ, ಯೋಗ, ಏರೋಬಿಕ್ಸ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್ ಮತ್ತಿತರ ಕ್ರೀಡೆಗಳ ತರಬೇತಿಗೆ ಆಧುನಿಕ ಸೌಲಭ್ಯ ಕಲ್ಪಿಸಲಾಗಿದೆ ಎಂದರು.



ಕೆಂಪಾಪುರದ ಕಾಫಿಬೋರ್ಡ್ ಬಡಾವಣೆಯಲ್ಲಿ ಬಿಬಿಎಂಪಿ ವತಿಯಿಂದ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣವನ್ನು ಉದ್ಘಾಟಿಸಿದ ಸಚಿವ ಕೃಷ್ಣಬೈರೇಗೌಡ, ಟೇಬಲ್ ಟೆನ್ನಿಸ್ ಆಡಿದರು

‘ಖಾಸಗಿ ಕ್ರೀಡಾ ತಾಣಗಳಲ್ಲಿ ಸಾಕಷ್ಟು ಹಣ ವ್ಯಯಿಸಬೇಕಾಗಿದ್ದು, ಇಲ್ಲಿ ಕೈಗೆಟಕುವ ದರದಲ್ಲಿ ಸಾರ್ವಜನಿಕರಿಗೆ ಕ್ರೀಡೆಗಳ ಅಭ್ಯಾಸಕ್ಕೆ ಗುಣಮಟ್ಟದ ಸೌಲಭ್ಯಗಳನ್ನು ಒದಗಿಸಲಾಗಿದೆ’ ಎಂದರು.

‘ಇದೇ ಮಾದರಿಯಲ್ಲಿ ವಿದ್ಯಾರಣ್ಯಪುರ, ಸಹಕಾರನಗರ ಹಾಗೂ ನವರತ್ನ ಅಗ್ರಹಾರದಲ್ಲಿಯೂ ಒಳಾಂಗಣ ಕ್ರೀಡಾಂಗಣ ನಿರ್ಮಿಸಲಾಗಿದೆ. ಜಕ್ಕೂರು ಸಮೀಪದಲ್ಲಿ 5ನೇ ಕ್ರೀಡಾಂಗಣ ಸಿದ್ಧವಾಗುತ್ತಿದೆ. ಯುವಜನರು, ಹಿರಿಯರು ಆರೋಗ್ಯವಾಗಿರಬೇಕಾದರೆ ದೈಹಿಕವಾಗಿ ಸದೃಢರಾಗಬೇಕಾಗಿದ್ದು, ಕ್ರೀಡಾಂಗಣ ಸೌಲಭ್ಯವನ್ನು ಉಪಯೋಗಿಸಬೇಕು’ ಎಂದು ಆಶಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣ ಬೈರೇಗೌಡ, ಕಾಂಗ್ರೆಸ್ ಮುಖಂಡರಾದ ಎನ್.ಎನ್. ಶ್ರೀನಿವಾಸಯ್ಯ, ಎಂ.ಜಯಗೋಪಾಲ ಗೌಡ, ವಿ.ವಿ.ಪಾರ್ತಿಬರಾಜನ್, ವಿ.ಹರಿ, ಆರ್.ಎಂ. ಶ್ರೀನಿವಾಸ್, ಡಿ.ಬಿ.ಸುರೇಶ್ ಗೌಡ, ಕೆ.ಆರ್.ರಾಜು, ಎಚ್.ಎ. ಶಿವಕುಮಾರ್. ಕೆ.ದಿಲೀಪ್‌ಕುಮಾರ್, ಕೆಂಪಾಪುರ ರಮೇಶ್, ಕಾರ್ತಿಕ್ ರಾಜ್ ಮತ್ತಿತರರು ಉಪಸ್ಥಿತರಿದ್ದರು.

### 400 ಅಪಾರ್ಟ್‌ಮೆಂಟ್‌ಗಳ ನಿವಾಸಿಗಳು ಭಾಗಿ

ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವದಲ್ಲಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ 400 ಅಪಾರ್ಟ್‌ಮೆಂಟ್‌ಗಳ ಎರಡು ಸಾವಿರ ನಿವಾಸಿಗಳು ಕ್ರೀಡಾ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಕೆಂಪಾಪುರದ ಕ್ರೀಡಾಂಗಣ, ವಿದ್ಯಾರಣ್ಯಪುರ ಮತ್ತು ಸಹಕಾರ ನಗರದ ಒಳಾಂಗಣ ಕ್ರೀಡಾಂಗಣ ಹಾಗೂ ವಿವಿಧ ಮೈದಾನಗಳಲ್ಲಿ ಕ್ರೀಡೆಗಳು ನಡೆಯಲಿವೆ. ಕ್ರಿಕೆಟ್, ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಈಜು, ಫುಟ್‌ಬಾಲ್, ಬ್ಯಾಸ್ಕೆಟ್ ಬಾಲ್, ಕೇರಮ್, ಹಗ್ಗ-ಜಗ್ಗಾಟ ಸ್ಪರ್ಧೆ ಏರ್ಪಡಿಸಲಾಗಿದೆ’ ಎಂದು ತಿಳಿಸಿದರು.

# ಸುದ್ದಿ 2 ನಿಮಿಷ

## ಮಧ್ಯವರ್ತಿಗಳಿಗೆ ಕಡಿವಾಣ ದಲಿತ ಸಂಘಟನೆಗಳ ಆಗ್ರಹ

**ಬೆಂಗಳೂರು:** ‘ಸಮಾಜ ಕಲ್ಯಾಣ ಇಲಾಖೆಯಲ್ಲಿ ಮಧ್ಯವರ್ತಿಗಳ ಹಾವಳಿ ಮಿತಿ ಮೀರಿದೆ. ದಲಿತ ಮುಖಂಡನ ಸೋಗಿನಲ್ಲಿ ಇಲಾಖೆಯ ಒಳಗೆ ಈ ಮಧ್ಯವರ್ತಿಗಳು ಮೆರೆಯುತ್ತಿದ್ದು, ಈ ಹಾವಳಿಗೆ ತಕ್ಷಣ ಕಡಿವಾಣ ಹಾಕಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಲಿತ ಸಂಘಟನೆಗಳ ಮುಖಂಡರು ಮನವಿ ಸಲ್ಲಿಸಿದ್ದಾರೆ.

‘ಹಿರಿಯ ಅಧಿಕಾರಿಗಳೇ ಮಧ್ಯವರ್ತಿಗಳಿಗೆ ಮಣೆ ಹಾಕುತ್ತಿದ್ದಾರೆ. ವಿವಿಧ ಯೋಜನೆಗಳ ನೆರವು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪುತ್ತಿಲ್ಲ. ಈ ವ್ಯವಸ್ಥೆ ಮುಂದುವರಿದರೆ ಮಧ್ಯವರ್ತಿಗಳ ಹಾವಳಿ ತಪ್ಪಿಸಿ, ಸಮಾಜ ಕಲ್ಯಾಣ ಇಲಾಖೆ ಉಳಿಸಿ’ ಎಂಬ ಅಭಿಯಾನದೊಂದಿಗೆ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಲಿದೆ’ ಎಂದೂ ಈ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

‘ಹಿರಿಯ ಅಧಿಕಾರಿಗಳ ಕಚೇರಿಯಲ್ಲಿ ಕುಳಿತು, ಯೋಜನೆಗಳನ್ನು ಮಂಜೂರು ಮಾಡಿಸಿಕೊಳ್ಳುತ್ತಿದ್ದಾರೆ. ಎಗ್ಗಿಲ್ಲದೆ ಮೆರೆಯುತ್ತಿರುವ ಮಧ್ಯವರ್ತಿಗಳಿಗೆ ಕಡಿವಾಣ ಹಾಕಲೇಬೇಕು’ ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಕರ್ನಾಟಕ ನವಜಾಗೃತಿ ವೇದಿಕೆಯ ಅಧ್ಯಕ್ಷ ಅನಂತ ರಾಯಪ್ಪ, ಆದಿಜಾಂಬವ ಸಂಘದ ಅಧ್ಯಕ್ಷ ಸಿ. ಸಿದ್ದರಾಜು, ಸಮತಾ ಸೈನಿಕ ದಳದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ದಲಿತ ಸಂಘರ್ಷ ಸಮಿತಿ (ಸಮತಾವಾದ) ಅಧ್ಯಕ್ಷ ಎಚ್. ಮಾರಪ್ಪ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಭೀಮವಾದ) ಮಾವಳ್ಳಿ ಶಂಕರ್, ವಿವಿಧ ಸಂಘಟನೆಗಳ ಪ್ರಮುಖರಾದ ಬಿ.ಜಿ. ವೆಂಕಟರಾಜು, ಸಿ.ಜಿ. ಶ್ರೀನಿವಾಸ್, ಆರ್. ಮೋಹನ್ ರಾಜ್ ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

## ‘ಟೆಸ್ಕೊದಿಂದ 18,000 ಉದ್ಯೋಗ’



**ಬೆಂಗಳೂರು:** ಬ್ರಿಟನ್‌ನ ಪ್ರತಿಷ್ಠಿತ ಸೂಪರ್ ಮಾರ್ಕೆಟ್ ಕಂಪನಿ ಟೆಸ್ಕೊ, ಬೆಂಗಳೂರಿನಲ್ಲಿ ವಹಿವಾಟು ವಿಸ್ತರಣೆ ಮತ್ತು ಹೊಸಕೋಟೆಯಲ್ಲಿ ದೊಡ್ಡ ವಿತರಣಾ ಕೇಂದ್ರ ಸ್ಥಾಪನೆಗೆ ಸಿದ್ಧತೆ ನಡೆಸಿದೆ. 18,000ಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ತಿಳಿಸಿದ್ದಾರೆ.

ಜಾಗತಿಕ ಹೂಡಿಕೆ ಸಮಾವೇಶ ಪೂರ್ವಸಿದ್ಧತೆಯ ಭಾಗವಾಗಿ ಬ್ರಿಟನ್ ಪ್ರವಾಸದಲ್ಲಿರುವ ಅವರು, ಅಲ್ಲಿನ ಉದ್ಯಮಿಗಳ ಜತೆಗೆ ನಡೆದ ಮಾತುಕತೆಯ ನಂತರ ಈ ಮಾಹಿತಿ ನೀಡಿದ್ದಾರೆ.

‘ಟೆಸ್ಕೊ ಕಂಪನಿ ಬೆಂಗಳೂರಿನಲ್ಲಿ ಈಗಾಗಲೇ ಸಣ್ಣ ಘಟಕ ಹೊಂದಿದೆ. ಅದನ್ನು ವಿಸ್ತರಿಸಲು ಮುಂದಾಗಿದ್ದು, ಬೆಂಗಳೂರಿನಲ್ಲೇ 1,500 ನೇಮಕಾತಿ ನಡೆಯಲಿದೆ. ಹೊಸಕೋಟೆಯ ವಿತರಣಾ ಕೇಂದ್ರದಲ್ಲಿ 16,500 ಉದ್ಯೋಗ ಸೃಷ್ಟಿಯಾಗಲಿವೆ’ ಎಂದಿದ್ದಾರೆ.

**ವೈಮಾನಿಕ ಸಂಸ್ಥೆಗಳೊಂದಿಗೆ ಮಾತುಕತೆ:** ಈ ಭೇಟಿಯ ವೇಳೆ ಸಚಿವ ಎಂ.ಬಿ.ಪಾಟೀಲ ಅವರು ರೋಲ್ಸ್ ರಾಯ್ಸ್, ಮೆಗೆಲ್ಲನ್ ಏರೋಸ್ಪೇಸ್ ಕಂಪನಿಗಳ ಪ್ರತಿನಿಧಿಗಳ ಜತೆಗೆ ಚರ್ಚಿಸಿದರು.

ಕರ್ನಾಟಕದಲ್ಲಿ ವೈಮಾಂತರಿಕ್ಷ ಕ್ಷೇತ್ರದಲ್ಲಿ ಹೂಡಿಕೆ ಅವಕಾಶಗಳು ಮತ್ತು ಅನುಕೂಲಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಹೂಡಿಕೆ ಅವಕಾಶಗಳ ಬಗ್ಗೆ ಪಿಯರ್ಸನ್ ಕಂಪನಿಯ ಅಧಿಕಾರಿಗಳಿಗೆ ವಿವರಿಸಿದರು ಎಂದು ಪ್ರಕಟಣೆ ತಿಳಿಸಿದೆ.

## ಸುದ್ದಿವಾಹಿನಿ ವರದಿಗಾರನ ಮೇಲೆ ಹಲ್ಲೆ, ದೂರು

**ಬೆಂಗಳೂರು:** ಮಾತನಾಡುವ ನೆಪದಲ್ಲಿ ಸ್ಥಳೀಯ ಸುದ್ದಿ ವಾಹಿನಿಯ ವರದಿಗಾರನನ್ನು ಕರೆಸಿದ್ದ ವ್ಯಕ್ತಿ, ಮಾರಕಾಸ್ತ್ರದಿಂದ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಂಬೇಡ್ಕರ್ ಬಡಾವಣೆ ಎಳ್ಳುಕುಂಟೆ 3ನೇ ಸೆಕ್ಟರ್ ನಿವಾಸಿ ರವಿ (34) ಹಲ್ಲೆಗೊಳಗಾಗಿದ್ದು, ಸದ್ಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರವಿ ನೀಡಿದ ದೂರಿನ ಮೇರೆಗೆ ಮಂಜುನಾಥ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

# ಮುನಿರತ್ನ ವಿರುದ್ಧ 590 ಪುಟಗಳ ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಜಾತಿನಿಂದನೆ, ಜೀವ ಬೆದರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ವಿಶೇಷ ತನಿಖಾ ತಂಡವು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ 590 ಪುಟಗಳ ಆರೋಪಪಟ್ಟಿ ಸಲ್ಲಿಸಿದೆ.

ಗುತ್ತಿಗೆದಾರ ವೇಲುನಾಯ್ಕರ್ ನೀಡಿದ್ದ ದೂರಿನ ಅನ್ವಯ ಸೆಪ್ಟೆಂಬರ್ 13ರಂದು ಮುನಿರತ್ನ ವಿರುದ್ಧ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಬಳಿಕ ಸರ್ಕಾರ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಿ ಆದೇಶಿಸಿತ್ತು.

ತನಿಖೆ ನಡೆಸಿದ ಸಿಐಡಿಯ ಎಸ್‌ಐಟಿ ತಂಡ 53 ಸಾಕ್ಷಿಗಳ ವಿಚಾರಣೆ ನಡೆಸಿ, ಆರೋಪಿ ವಿರುದ್ಧ 157 ದಾಖಲೆಗಳನ್ನು ಒಳಗೊಂಡ 590 ಪುಟಗಳ ಆರೋಪ ಪಟ್ಟಿ ಸಲ್ಲಿಸಿದೆ. ಮೂವರು ಪ್ರತ್ಯಕ್ಷದರ್ಶಿ ಸಾಕ್ಷಿದಾರರು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದಾರೆ.



ಮುನಿರತ್ನ

ಜಾತಿನಿಂದನೆ ಮಾಡಿರುವ ಬಗ್ಗೆ ದೂರುದಾರ ವೇಲುನಾಯ್ಕರ್ ಸಲ್ಲಿಸಿದ್ದ ಆಡಿಯೊ ಮಾದರಿ ಹಾಗೂ ಮುನಿರತ್ನ ಅವರ ಧ್ವನಿ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ತಜ್ಞರಿಂದ ವರದಿ ಪಡೆಯಲಾಗಿದೆ. ಆರೋಪಿಯ ಧ್ವನಿ ಮಾದರಿ ಹಾಗೂ ಫೋನ್ ಸಂಭಾಷಣೆ ಆಡಿಯೊದಲ್ಲಿರುವ ಧ್ವನಿಗೆ ಹೋಲಿಕೆಯಾಗಿರುವುದು ಎಫ್ ಎಸ್ ಎಲ್ ತಜ್ಞರ ವರದಿಯಿಂದ ದೃಢಪಟ್ಟಿದೆ.

ಸಂಗ್ರಹಿಸಿದ ಎಲ್ಲ ದಾಖಲೆಗಳು, ಸಾಕ್ಷಿದಾರರ ಹೇಳಿಕೆಗಳು ಹಾಗೂ ವೈಜ್ಞಾನಿಕ ಸಾಕ್ಷ್ಯಾಧಾರಗಳಿಂದ ಮುನಿರತ್ನ ಅವರು ಜಾತಿ ನಿಂದನೆ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿರುವ ಬಗ್ಗೆ ಮತ್ತು ಜಾತಿ ಜಾತಿಗಳ ನಡುವೆ ವೈಷಮ್ಯ ಉಂಟುಮಾಡಿರುವ ಬಗ್ಗೆ ಆರೋಪ ಸಾಬೀತಾಗಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

# ಹಾಪ್‌ಕಾಮ್ಸ್ ಅಧ್ಯಕ್ಷ, ಉಪಾಧ್ಯಕ್ಷ ಸೇರಿ ಹತ್ತು ಜನ ಅನರ್ಹ

ಪ್ರಜಾವಾಣಿ ವಾರ್ತೆ

**ಆನೇಕಲ್:** ಅಧಿಕಾರ ದುರುಪಯೋಗ ಹಾಗೂ ಸ್ವಜನ ಪಕ್ಷಪಾತದ ಹಿನ್ನೆಲೆಯಲ್ಲಿ ಬೆಂಗಳೂರಿನ ಲಾಲ್‌ಬಾಗ್ ಬಳಿಯ ಹಾಪ್‌ಕಾಮ್ಸ್ ಅಧ್ಯಕ್ಷೆ, ಉಪಾಧ್ಯಕ್ಷ ಹಾಗೂ ಎಂಟು ನಿರ್ದೇಶಕರನ್ನು ರಾಜ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಅನರ್ಹಗೊಳಿಸಿದ್ದಾರೆ.

ಹಾಪ್‌ಕಾಮ್ಸ್ ಅಧ್ಯಕ್ಷೆ ಎಚ್. ಕೆ.ನಾಗವೇಣಿ, ಉಪಾಧ್ಯಕ್ಷ ಎ.ಎಸ್. ಚಂದ್ರೇಗೌಡ ಹಾಗೂ ಎನ್.ದೇವರಾಜು, ಕೆ.ಎನ್. ವಸಂತಕುಮಾರ್, ಸೊಣ್ಣಪ್ಪ, ಎಂ.ಎಸ್. ಪ್ರಕಾಶ್, ಜಿ.ಆರ್. ಶ್ರೀನಿವಾಸನ್, ಸಂಪಂಗಿರಾಮಯ್ಯ, ಗೋಪಾಲಕೃಷ್ಣ ಬಿ., ಮುನೇಗೌಡ ಅನರ್ಹಗೊಂಡ ನಿರ್ದೇಶಕರು.

ಷೇರು ವರ್ಗಾವಣೆ, ನಿಯಮ ಬಾಹಿರವಾಗಿ ಸದಸ್ಯರ ನೇಮಕ, ಅಧಿಕಾರ ದುರ್ಬಳಕೆ ಮಾಡಿಕೊಂಡು ಸಂಬಂಧಿಕರನ್ನು ಸದಸ್ಯರಾಗಿ ನೇಮಿಸಿದ ಆರೋಪ ಸಾಬೀತಾದ್ದರಿಂದ ಅನರ್ಹಗೊಳಿಸಲಾಗಿದೆ ಎಂದು ಸಹಕಾರ ಸಂಘಗಳ ಜಂಟಿ ನಿಬಂಧಕ ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಸಿ(8)(ಬಿ)(ಸಿ) ಮತ್ತು (ಡಿ) ಅನ್ವಯ ಐದು ವರ್ಷ ಯಾವುದೇ ಸಹಕಾರ ಸಂಘದ ನಿರ್ದೇಶಕರಾಗದಂತೆ ಅನರ್ಹಗೊಳಿಸಿದೆ.

‘ಅಲ್ಲದೆ, ಸದಸ್ಯತ್ವ ಅರ್ಜಿ ಜೊತೆ ನಿಯಮಾನುಸಾರ ಪಡೆಯಬೇಕಾದ ಪಹಣಿ ಮತ್ತು ಇತರೆ ದಾಖಲೆ ಪಡೆಯದ ಅಂದಿನ ಅಧ್ಯಕ್ಷರು ಸಂಬಂಧಿಕರನ್ನು ಸದಸ್ಯರಾಗಿ ನೇಮಿಸಿರುವುದು ವಿಚಾರಣೆಯಲ್ಲಿ ಸಾಬೀತು ಆಗಿದೆ. ಸಹಕಾರ ಸಂಘಗಳ ಕಾಯ್ದೆ 1959 ಕಲಂ 29-ಸಿ(8)(ಬಿ)ರ ಸ್ಪಷ್ಟ ಉಲ್ಲಂಘನೆ ಆಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಜಮೀರ್ ಪುತ್ರ ನಟ ಝೈದ್ ಖಾನ್, ‘ಕಲ್ಟ್’ ಚಿತ್ರ ನಿರ್ದೇಶಕ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕಲ್ಟ್’ ಸಿನಿಮಾದ ಡ್ರೋನ್ ತಂತ್ರಜ್ಞ ಸಂತೋಷ್ ಆತ್ಮಹತ್ಯೆಗೆ ಯತ್ನಿಸಿದ್ದು, ಈ ಸಂಬಂಧ ಸಚಿವ ಜಮೀರ್ ಅಹಮದ್ ಖಾನ್ ಅವರ ಪುತ್ರ, ನಟ ಝೈದ್ ಖಾನ್ ಹಾಗೂ ಚಿತ್ರದ ನಿರ್ದೇಶಕ ಅನಿಲ್ ವಿರುದ್ಧ ದೂರು ದಾಖಲಿಸಿದ್ದಾರೆ.



ಸಂತೋಷ್

ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿರುವ ಮಾಗಡಿ ರಸ್ತೆ ಠಾಣೆ ಪೊಲೀಸರು, ಡಿಸೆಂಬರ್ 3ರಂದು ವಿಚಾರಣೆಗೆ ಬರುವಂತೆ ನಟ ಝೈದ್, ನಿರ್ದೇಶಕ ಅನಿಲ್ ಕುಮಾರ್, ಪ್ರೊಡಕ್ಷನ್ ಮ್ಯಾನೇಜರ್ ಅನಿಲ್, ಕ್ಯಾಮೆರಾಮನ್ ಜಗದೀಶ್ ಅವರಿಗೆ ಸೂಚನೆ ನೀಡಿದ್ದಾರೆ.

ಆದರೆ, ಚಿತ್ರದುರ್ಗದಲ್ಲಿ ಚಿತ್ರೀಕರಣ ನಡೆಯುತ್ತಿರುವ ಕಾರಣ ಒಂದೆರಡು ದಿನ ತಡವಾಗಿ ಬರಬಹುದು. ವಿಚಾರಣೆಯ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗು ವುದು ಎಂದು ಹೇಳಿದ್ದಾರೆ.

‘ಕಲ್ಟ್’ ಸಿನಿಮಾದಲ್ಲಿ ಡ್ರೋನ್ ಚಿತ್ರೀಕರಣದ ಉಸ್ತುವಾರಿ ವಹಿಸಿಕೊಂಡಿದ್ದೆ. ನ.25ರಂದು ಚಿತ್ರದುರ್ಗದಲ್ಲಿ ಶೂಟಿಂಗ್ ನಡೆಯುತ್ತಿತ್ತು. ದಿನಕ್ಕೆ ₹25 ಸಾವಿರ ನಿಗದಿ ಮಾಡಲಾಗಿತ್ತು. ಈ ಸ್ಥಳದಲ್ಲಿ ಡ್ರೋನ್ ಮೂಲಕ ಚಿತ್ರೀಕರಣ ಅಸಾಧ್ಯ. ಡ್ರೋನ್‌ಗೆ ಹಾನಿಯಾಗುತ್ತದೆ ಎಂದರೂ ಚಿತ್ರೀಕರಣ ಮಾಡಲು ನಿರ್ದೇಶಕ ಒತ್ತಡ ಹೇರಿದ್ದರು. ಚಿತ್ರೀಕರಣದ ವೇಳೆ ವಿಂಡ್ ಫ್ಯಾನ್ ತಗುಲಿ ಡ್ರೋನ್ ತುಂಡಾಯಿತು. ಚಿತ್ರತಂಡ ನಷ್ಟ ತುಂಬಿ ಕೊಡಲಿಲ್ಲ’ ಎಂದು ಸಂತೋಷ್ ದೂರಿನಲ್ಲಿ ಆರೋಪಿಸಿದ್ದಾರೆ.

‘ಪರಿಹಾರ ನೀಡುವಂತೆ ಕೇಳಿದ್ದಕ್ಕೆ ಝೈದ್ ಖಾನ್ ಅವರು ಖಾಲಿ ಹಾಳೆಮೇಲೆ ಸಹಿ ಹಾಕಿಸಿಕೊಂಡು, ಆಧಾರ್ ಕಾರ್ಡ್ ನಂಬರ್ ಪಡೆದು, ₹1.5 ಲಕ್ಷ ಬೆಲೆಯ ಮೆಮೊರಿ ಕಾರ್ಡ್ ಕಿತ್ತುಕೊಂಡರು. ಡ್ರೋನ್ ತುಂಡಾಗಿರುವ ಕಾರಣ ₹24 ಲಕ್ಷ ನಷ್ಟವಾಗಿದೆ. ಇದನ್ನು ಭರಿಸುವಂತೆ ನಿರ್ದೇಶಕ, ಮ್ಯಾನೇಜರ್, ಕ್ಯಾಮೆರಾಮನ್ ಅವರನ್ನು ಸಂಪರ್ಕಿಸಿದರೂ ಯಾರೂ ಸ್ಪಂದಿಸಲಿಲ್ಲ. ಇದರಿಂದ ಮನನೊಂದು ಆತ್ಮಹತ್ಯೆಗೆ ಯತ್ನಿಸಿದೆ’ ಎಂದು ಹೇಳಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ನಟ ಝೈದ್ ಖಾನ್ ಅವರಿಗೆ ಕರೆ ಮಾಡಿದಾಗ ಅವರು ಸ್ವೀಕರಿಸಲಿಲ್ಲ. ಸಂತೋಷ್ ಚೇತರಿಸಿಕೊಂಡಿದ್ದು, ಮನೆಗೆ ತೆರಳಿದ್ದಾರೆ.

AVR
ಸ್ವರ್ಣ ಮಹಲ್
ಜ್ಯುವೆಲ್ಲರ್ಸ್
ಪರಿಶುದ್ಧತೆಯೇ ನಮ್ಮ ಪರಂಪರೆ

# AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್

CIN: U36911TZ2009PLC015427
ನೋಂದಾಯಿತ ಕಚೇರಿ : 251-A, ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ, ತಮಿಳುನಾಡು – 636 004.
ಫೋನ್: 0427–2333307 ಇ–ಮೇಲ್–accountsavrswarnamahal.com
ವೆಬ್ ಸೈಟ್: www.avrswarnamahal.com

## ಸ್ಥಿರ ಠೇವಣಿಗಳನ್ನು ಆಹ್ವಾನಿಸುತ್ತಿದ್ದೇವೆ

| ಫಿಕ್ಸೆಡ್ ಡೆಪಾಸಿಟ್ ಸ್ಕೀಮ್‌ಗಳು | | | | | | |
|---|---|---|---|---|---|---|
| ಸ್ಕೀಮ್ 'ಎ' (ಸಂಚಿತವಲ್ಲದ) | | ಸ್ಕೀಮ್ 'ಬಿ' (ಸಂಚಿತ) | | | | |
| ಅವಧಿ | ವಾರ್ಷಿಕ ಬಡ್ಡಿಯ ದರ (%) ತ್ರೈಮಾಸಿಕವಾಗಿ ಪಾವತಿಸಬೇಕು | ಅವಧಿ | ವಾರ್ಷಿಕ ಬಡ್ಡಿಯ ದರ (%) ಸಂಯೋಜಿತ ತ್ರೈಮಾಸಿಕ | ಠೇವಣಿಯ ಕನಿಷ್ಠ ಮೊತ್ತ (ರೂ.) | ಮೆಚ್ಯೂರಿಟಿ ಮೇಲೆ ಪಾವತಿಸಬೇಕಾದ ಮೊತ್ತ (ರೂ.) | ಪರಿಣಾಮಕಾರಿ ವಾರ್ಷಿಕ ಇಳುವರಿ (%) |
| 1 ವರ್ಷ | 8.00 | 1 ವರ್ಷ | 8.00 | 10,000 | 10824 | 8.24% |
| 2 ವರ್ಷಗಳು | 8.50 | 2 ವರ್ಷಗಳು | 8.50 | 10,000 | 11832 | 9.16% |
| 3 ವರ್ಷಗಳು | 9.00 | 3 ವರ್ಷಗಳು | 9.00 | 10,000 | 13060 | 10.20% |

ಸ್ಕೀಮ್ 'ಎ' ಮತ್ತು ಸ್ಕೀಮ್ 'ಬಿ' ಗಾಗಿ ಕನಿಷ್ಠ ರೂ.10,000/- ಗೆ ಒಳಪಟ್ಟು ರೂ.1,000/- ಗುಣಾಂಕಗಳಲ್ಲಿ ಠೇವಣಿಗಳನ್ನು ಸ್ವೀಕರಿಸಲಾಗುತ್ತದೆ / ನವೀಕರಿಸಲಾಗುತ್ತದೆ.

### ನಮೂನೆ DPT -1

**ಸುತ್ತೋಲೆ ಅಥವಾ ಜಾಹಿರಾತು ರೂಪದ ಠೇವಣಿ ಹೂಡಿಕೆಯ ಸುತ್ತೋಲೆ**

ಕಂಪನಿಗಳ (ಠೇವಣಿ ಸ್ವೀಕಾರ) ನಿಯಮಗಳು, 2014 ರ ಸೆಕ್ಷನ್ 73 (2) (ಎ) ಮತ್ತು ಸೆಕ್ಷನ್ 76 ಮತ್ತು ನಿಯಮ 4 (1) ಮತ್ತು 4 (2) ಗೆ ಅನುಸಾರವಾಗಿ ಸುತ್ತೋಲೆ ಅಥವಾ ಜಾಹೀರಾತು ರೂಪದ ಸುತ್ತೋಲೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ:

1. **ಸಾಮಾನ್ಯ ಮಾಹಿತಿ:**

**ಎ. ಕಂಪನಿಯ ಹೆಸರು, ವಿಳಾಸ, ವೆಬ್ಸೈಟ್ ಮತ್ತು ಇತರ ಸಂಪರ್ಕ ವಿವರಗಳು:**

ಹೆಸರು : AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್
CIN : U36911TZ2009PLC015427
ವಿಳಾಸ : 251–ಎ, ಓಮಲೂರು ರಸ್ತೆ, ಸ್ವರ್ಣಪುರಿ, ಸೇಲಂ–636004, ತಮಿಳುನಾಡು
ವೆಬ್ ಸೈಟ್ : www.avrswarnamahal.com
ದೂರವಾಣಿ : +91 427 2333307
ಇ–ಮೇಲ್ : csavrswarnamahal.com

**ಬಿ. ಕಂಪನಿಯ ಸಂಯೋಜನೆಯ ದಿನಾಂಕ**: 24 ನೇ ಆಗಸ್ಟ್ 2009

**ಸಿ. (i) ಕಂಪನಿಯು ನಡೆಸುವ ವ್ಯವಹಾರ:**

ಆಭರಣಕಾರರು, ಅಕ್ಕಸಾಲಿಗ, ಬೆಳ್ಳಿಯ ಮಾರಾಟ ಮತ್ತು ವಿತರಕರು ಬೆಲೆಬಾಳುವ ಲೋಹಗಳು, ಸದ್ಗುಣ ವಸ್ತುಗಳು, ನಾಣ್ಯಗಳು, ಅಮೂಲ್ಯ ಮತ್ತು ಅರೆ–ಅಮೂಲ್ಯ ಲೋಹಗಳು, ಗಟ್ಟಿಗಳು, ವಜ್ರಗಳು, ಅಮೂಲ್ಯ ಮತ್ತು ಅರೆ–ಅಮೂಲ್ಯ ಕಲ್ಲುಗಳು, ರತ್ನಗಳು, ರತ್ನಗಳು, ರತ್ನಗಳು ಮತ್ತು ಎಲ್ಲಾ ರೀತಿಯ ಆಭರಣಗಳು, ಆಭರಣ ಉತ್ಪನ್ನಗಳು, ಸದ್ಗುಣ ವಸ್ತುಗಳು, ನಾಣ್ಯಗಳು, ಗಡಿಯಾರಗಳು, ಕಟ್ಲರಿ, ಕ್ಯೂರಿಯೋಗಳು, ಆಭರಣಗಳು, ಪಾತ್ರೆಗಳ ಆಮದುದಾರರು ಮತ್ತು ರಫ್ತುದಾರರು ಮತ್ತು ವ್ಯಾಪಾರಿಗಳ ವ್ಯವಹಾರವನ್ನು ಮುಂದುವರಿಸುವುದು. ಪ್ಲಾಟಿನಂ, ಬೆಳ್ಳಿ ಅಥವಾ ಅದರ ಯಾವುದೇ ಸಂಯೋಜನೆಗಳಿಂದ ಅಥವಾ ಇತರ ಯಾವುದೇ ಲೋಹ ಅಥವಾ ಮಿಶ್ರಲೋಹದೊಂದಿಗೆ ಅವುಗಳ ಯಾವುದೇ ಸಂಯೋಜನೆಯಿಂದ ತಯಾರಿಸಲಾಗಿದೆ.

**(ii) ಕಂಪನಿಯ ಅಂಗಸಂಸ್ಥೆಗಳು ಮತ್ತು ಘಟಕಗಳು/ ಶಾಖೆಗಳು**

1. **ಅಂಗಸಂಸ್ಥೆಗಳು: ಇಲ್ಲ**
2. **ಘಟಕಗಳು / ಶಾಖೆಗಳು:**

| | |
|---|---|
| 1 | 251– ಎ, ಓಮಲೂರು ಮುಖ್ಯ ರಸ್ತೆ, ಸ್ವರ್ಣಪುರಿ, ಸೇಲಂ – 636004 |
| 2 | 24/18, ಎಸ್ ಎನ್ ಕೆ ಕಾಂಪ್ಲೆಕ್ಸ್, ಸ್ಕ್ವೇರ್ ಮಾರ್ಕೆಟ್, ಮೆಟ್ಟೂರ್ ಡ್ಯಾಮ್ – 636 401 |
| 3 | 17, 18, 19, ಸೇಲಂ ಮುಖ್ಯ ರಸ್ತೆ, ಕಳ್ಳಕುರಿಚಿ – 606 202 |
| 4 | 351, ಬೆಂಗಳೂರು ಮುಖ್ಯ ರಸ್ತೆ, ಕೃಷ್ಣಗಿರಿ–635 001 |
| 5 | 744/1 – ಬಿ, ಸೇಲಂ ಬೆಂಗಳೂರು ಬೈಪಾಸ್ ರಸ್ತೆ. ಹೊಸೂರು – 635 109 |
| 6 | 128, ಕಾರ್ ಸ್ಟ್ರೀಟ್, ತಿರುವಣ್ಣಾಮಲೈ– 606 601 |
| 7 | 194, ಬಜಾರ್ ಸ್ಟ್ರೀಟ್, ಸೇಲಂ – 636 001 |
| 8 | ಹಳೆಯ ಸಂಖ್ಯೆ: 110, ಹೊಸ ಸಂಖ್ಯೆ: 156, ಅಣ್ಣಾಸಲೈ, ಪಾಂಡಿಚ್ಚೇರಿ – 605 001 |
| 9 | 1–ಈ ನಾಲ್ಕು ರಸ್ತೆಗಳ ಬಳಿ, ಧರ್ಮಪುರಿ – 636 701 |
| 10 | ನಂ. 102, ಆರ್‌ಕೆವಿ ರಸ್ತೆ, ಈರೋಡ್ – 638 001 |
| 11 | 31, ಚೈತನ್ಯ ಪ್ಲಾಟಿನಂ, 33 ನೇ ಬಿ ಕ್ರಾಸ್, 4 ನೇ ಟಿ ಬ್ಲಾಕ್, ಜಯ ನಗರ, ಬೆಂಗಳೂರು – 560 041 |
| 12 | ಸಂಖ್ಯೆ 41 . ಡಿಕನ್ಸನ್ ರಸ್ತೆ, ಬೆಂಗಳೂರು – 560 042. |
| 13 | ನಂ.17/6/157, ನಂಗವಳ್ಳಿ ಮುಖ್ಯರಸ್ತೆ, ತಾರಾಮಂಗಲಂ – 636 502 ಸೇಲಂ. |
| 14 | ನಂ. 1092 – 1096/1, ಕಡಲೂರು ಮುಖ್ಯ ರಸ್ತೆ, ಆತ್ತೂರು – 636 102. |
| 15 | 123–ಬಿ, ಪಳನಿಸ್ವಾಮಿ ರಸ್ತೆ, ತಿರುಪ್ಪತ್ತೂರು – 635 601. |
| 16 | 1 – ಎ/40, ಕಚ್ಚೇರಿ ಸ್ಟ್ರೀಟ್, ರಾಜಾಜಿ ಸ್ಟ್ರೀಟ್, ರಾಸಿಪುರಂ – 637 408. |
| 17 | ಡಿ.ನಂ.11/135, 11/135–1, ಕಡವೀಧಿ, ತಿರುಪತ್ತೂರು ಮೈನ್ ರಸ್ತೆ, ಹರೂರು – 636 903. |
| 18 | ಪ್ಲಾಟ್ ನಂ. 2054 – ಎ, ಡೋರ್ ನಂ.45, ಎಲ್–ಬ್ಲಾಕ್, ಐಐ ಅವೆನ್ಯೂ, ಅಣ್ಣಾನಗರ ಪಶ್ಚಿಮ, ಚೆನ್ನೈ – 600 040 |
| 19 | 1ನೇ ಮಹಡಿ, ಪ್ಲಾಟ್ ಸಂಖ್ಯೆ 299/301 / ಫ್ಲಾಟ್ ಸಂಖ್ಯೆ 7, ಜೋಹರ್ ಪ್ಯಾಲೇಸ್, ಕಲ್ಬಾದೇವಿ ರಸ್ತೆ, ವಿಠ್ಠಲ್ ವಾಡಿ, ಭುಲೇಶ್ವರ, ಮುಂಬೈ, ಮಹಾರಾಷ್ಟ್ರ – 400 002 |
| 20 | 76, ವೆಂಕಟೇಶಪುರಂ, ಶಂಕರ್ ನಗರ, ಸೇಲಂ – 636 007 |
| 21 | AVR ಸ್ವರ್ಣಮಹಲ್ ಜ್ಯುವೆಲ್ಲರಿ ಹತ್ತಿರ, 244, ಬಜಾರ್ ಸ್ಟ್ರೀಟ್, ಸೇಲಂ, ತಮಿಳುನಾಡು – 636 001 |
| 22 | ಸಿಟಿಬ್ಯಾಂಕ್, 8ನೇ ಮಹಡಿ, 148, ಅಕ್ರೋಪೊಲಿಸ್, ಡಾ॥ ರಾಧಾಕೃಷ್ಣನ್ ಸಾಲೈ, ಮೈಲಾಪೂರ್, ಚೆನ್ನೈ, ತಮಿಳುನಾಡು – 600 004. |
| 23 | 533, 2ನೇ ಮೆಯಿನ್ ರೋಡ್, ಮಲ್ಲೇಶ್ವರಂ ಈಸ್ಟ್, ಬೆಂಗಳೂರು, ಬೆಂಗಳೂರು ಅರ್ಬನ್, ಕರ್ನಾಟಕ – 560 003. |
| 24 | 507, 2ನೇ ಮೆಯಿನ್ ರೋಡ್, ಮಲ್ಲೇಶ್ವರಂ ಈಸ್ಟ್, ಬೆಂಗಳೂರು, ಬೆಂಗಳೂರು ಅರ್ಬನ್, ಕರ್ನಾಟಕ – 560 003. |
| 25 | ಎರಡನೇ ಮಹಡಿ, 172/1, ಶಾಪ್ ನಂ. ಎಸ್‌ಎಫ್ 02, ವೇಗಾ ಸಿಟಿ, ಬಿ ಜಿ ರೋಡ್, ಶ್ರೀನಿವಾಸ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು, ಬೆಂಗಳೂರು ಅರ್ಬನ್‌ಕರ್ನಾಟಕ – 560 076 |
| 26 | ಎರಡನೇ ಮಹಡಿ, ಸ್ಟೋರ್ ನಂ. ಎಸ್‌ಎಫ್ 209, ಗರುಡಾ ಮಾಲ್ ಮಗ್ರತ್ ರೋಡ್, ಬೆಂಗಳೂರು, ಬೆಂಗಳೂರು ಅರ್ಬನ್, ಕರ್ನಾಟಕ – 560 025. |
| 27 | ಎರಡನೇ ಮಹಡಿ, ಯುನಿಟ್ ನಂ. ಎಸ್–22, ಹಳೆಯ ನಂ. 66, ಹೊಸ ನಂ. 142, ಫೋನಿಕ್ಸ್ ಮಾರ್ಕೆಟ್ ಸಿಟಿ, ವೇಳಚ್ಚೇರಿ ಮೆಯಿನ್ ರೋಡ್, ವೇಳಚ್ಚೇರಿ, ಚೆನ್ನೈ, ತಮಿಳುನಾಡು – 600 042. |
| 28 | ಶಾಪ್ ನಂ. 09, ಅಪ್ಪರ್ ಗ್ರೌಂಡ್‌ಫ್ಲೋರ್, 13/1ಎ, ದಿ ಮೆರಿನಾ ಮಾಲ್, ಹಳೆಯ ಮಹಾಬಲಿಪುರಂ ರೋಡ್, ಎಗತ್ತೂರ್, ಚೆನ್ನೈ, ಚೆಂಗಲ್‌ಪಟ್ಟು, ತಮಿಳುನಾಡು – 603 103 |
| 29 | 25, ಎವಿ/11, ನೈನಾಂಪಟ್ಟಿರೋಡ್, ಸರ್ಕಾರ ಹಾಸ್ಪಿಟಲ್, ಎಡಪ್ಪಾಡಿ, ಎಡಪ್ಪಾಡಿ ರೋಡ್, ಸೇಲಂ – 637 101. |
| 30 | 57, ಪುರಸೈವಾಕ್ಕಂ ಹೈ ರೋಡ್, ಚೆನ್ನೈ, ತಮಿಳುನಾಡು – 600 007 |

**ಡಿ. ಕಂಪನಿಯ ನಿರ್ವಹಣೆಯ ಸಂಕ್ಷಿಪ್ತ ವಿವರಗಳು:**

ನಿರ್ದೇಶಕರ ಮಂಡಳಿಯ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟು ಕಂಪನಿಯನ್ನು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಜಂಟಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ವೃತ್ತಿಪರ ವ್ಯವಸ್ಥಾಪಕರ ತಂಡವು ನಿರ್ವಹಿಸುತ್ತದೆ.ಚ

**ಇ. ನಿರ್ದೇಶಕರ ಹೆಸರುಗಳು, ವಿಳಾಸಗಳು, ಡಿಐಎನ್ ಮತ್ತು ಉದ್ಯೋಗಗಳು**

| ಕ್ರ.ಸಂ. | ಹೆಸರು ಮತ್ತು ವಿಳಾಸ | DIN | ಉದ್ಯೋಗ |
|---|---|---|---|
| 1. | ಶ್ರೀ ಎ.ಬಿ. ಸುದರ್ಶನಂ, ನಂ–2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ ಸೇಲಂ – 636 007 | 02739946 | ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ |
| 2. | ಶ್ರೀ ಎ.ಬಿ.ಎಸ್. ಸಂಜೀವ್, ನಂ.2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ ಸೇಲಂ – 636 007 | 02736931 | ವ್ಯವಸ್ಥಾಪಕ ನಿರ್ದೇಶಕ |
| 3. | ಶ್ರೀಮತಿ ಚಂದ್ರಲೇಕಾ, ನಂ–2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ ಸೇಲಂ – 636 007 | 02739936 | ಪೂರ್ಣ ಸಮಯದ ನಿರ್ದೇಶಕ |
| 4. | ಶ್ರೀಮತಿ ಸೌಮ್ಯ ಸಂಜಯ್, ನಂ–2, ಗಾಂಧಿ ರಸ್ತೆ, ಎಲ್‌ಐಸಿ ಕಚೇರಿ ಎದುರು, ರಾಮಕೃಷ್ಣ ರಸ್ತೆ, ಹಸ್ತಂಪಟ್ಟಿ ಸೇಲಂ – 636 007 | 02729683 | ಪೂರ್ಣ ಸಮಯದ ನಿರ್ದೇಶಕ |
| 5. | ಶ್ರೀ. ಎ.ವಿ.ಆರ್. ಸಿದ್ಧಾಂತ್ ನಂ. 2, ಗಾಂಧಿ ರೋಡ್, ಎಲ್‌ಐಸಿ ಆಫೀಸ್ ಎದುರು, ರಾಮಕೃಷ್ಣರೋಡ್, ಹಸ್ತಿನಾಪುರಂ, ಸೇಲಂ – 636 007 | 10364592 | ಪೂರ್ಣ ಸಮಯದ ನಿರ್ದೇಶಕ |
| 6. | ಶ್ರೀ. ಎ.ವಿ.ಆರ್. ಶ್ರೀ ಸ್ಮರನ್ ನಂ. 2, ಗಾಂಧಿ ರೋಡ್, ಎಲ್‌ಐಸಿ ಆಫೀಸ್ ಎದುರು, ರಾಮಕೃಷ್ಣರೋಡ್, ಹಸ್ತಿನಾಪುರಂ, ಸೇಲಂ – 636 007 | 10711597 | ಪೂರ್ಣ ಸಮಯದ ನಿರ್ದೇಶಕ |
| 7. | ಶ್ರೀ. ನಟರಾಜ್ ದಿನೇಶ್ ಎಚ್ ನಂ. 102–ಇ, ತೀರ್ಥಗಿರಿ ರಸ್ತೆ, ವಿಜಯರಾಘವಪುರಂ, ಸೇಲಂ – 636 001 | 10013116 | ಕಂಪನಿಯ ಕಾರ್ಯದರ್ಶಿ ಅಭ್ಯಾಸದಲ್ಲಿದ್ದಾರೆ |
| 8. | ಶ್ರೀ. ಆದಿತ್ಯ ರವಿಶಂಕರ್ ನಂ. 05, 2ನೇ ಕ್ರಾಸ್, ಮರವನೇರಿ, ಸೇಲಂ – 636 007 | 10061503 | ಕಂಪನಿಯ ಕಾರ್ಯದರ್ಶಿ ಅಭ್ಯಾಸದಲ್ಲಿದ್ದಾರೆ |
| 9. | ಶ್ರೀಮತಿ ಕೆ.ಎಂ. ಕೋಕಿಲಾ ರಾಣಿ 171/53, ಪಳನಿಯಪ್ಪಕಾಲನೀ, ಅನ್ನದಾನಪಟ್ಟಿ, ಸೇಲಂ – 636 002 | 10364593 | ಕಂಪನಿಯ ಕಾರ್ಯದರ್ಶಿ ಅಭ್ಯಾಸದಲ್ಲಿದ್ದಾರೆ |

**ಎಫ್. ಅಪಾಯದ ಅಂಶಗಳ ನಿರ್ವಹಣೆಯ ಗ್ರಹಿಕೆ:**

a) ಉದ್ಯಮದ ಸಂಘಟಿತ/ಅಸಂಘಟಿತ ವಲಯಗಳೆರಡರಲ್ಲೂ ಕಂಪನಿಯು ಸ್ಪರ್ಧಾತ್ಮಕ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ.
b) ಚಿನ್ನದ ಬೆಲೆಯ ಏರಿಳಿತ ಮತ್ತು ಅಂಚುಗಳ ಮೇಲೆ ಅದರ ವ್ಯತಿರಿಕ್ತ ಪರಿಣಾಮ.
c) ಅಭಿರುಚಿ ಮತ್ತು ಫ್ಯಾಷನ್ ಆದ್ಯತೆಗಳಲ್ಲಿನ ಬದಲಾವಣೆಯಿಂದಾಗಿ ಉದ್ಯಮದಲ್ಲಿ ಅಂತರ್ಗತ ಮಿತಿ.

**ಜಿ. ಒಳಗೊಂಡಿರುವ ಮೊತ್ತ, ಡೀಫಾಲ್ಟ್ ಅವಧಿ ಸೇರಿದಂತೆ ಡೀಫಾಲ್ಟ್ ವಿವರಗಳು ಮತ್ತು ಪ್ರಸ್ತುತ ಸ್ಥಿತಿ, ಮರುಪಾವತಿಯಲ್ಲಿ-**

| | | |
|---|---|---|
| i) | ಶಾಸನಬದ್ಧ ಬಾಕಿಗಳು | ಶೂನ್ಯ |
| ii) | ಸಾಲಪತ್ರಗಳು ಮತ್ತು ಅದರ ಮೇಲಿನ ಬಡ್ಡಿ | ಶೂನ್ಯ |
| iii) | ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯಿಂದ ಸಾಲ ಮತ್ತು ಅದರ ಮೇಲಿನ ಬಡ್ಡಿ. | ಶೂನ್ಯ |

2. **ಠೇವಣಿ ಯೋಜನೆಯ ವಿಶೇಷತೆಗಳು:**

ಎ. ಮಂಡಳಿಯ ನಿರ್ಣಯದ ಅಂಗೀಕಾರದ ದಿನಾಂಕ : 09.12.2022
ಬಿ. ಅಂತಹ ಠೇವಣಿಗಳ ಆಹ್ವಾನವನ್ನು ಅಧಿಕೃತಗೊಳಿಸುವ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಅಂಗೀಕರಿಸಿದ ದಿನಾಂಕ : 24.09.2022
ಸಿ. ಠೇವಣಿಗಳ ಪ್ರಕಾರ ಅಂದರೆ ಸುರಕ್ಷಿತ ಅಥವಾ ಅಸುರಕ್ಷಿತ : ಅಸುರಕ್ಷಿತ
ಡಿ.

| ಕ್ರ.ಸಂ. | ವಿವರಗಳು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಕಾಯ್ದೆ ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಪ್ರಕಾರ ಕಂಪನಿಯು ಠೇವಣಿಗಳ ಮೂಲಕ ಸಂಗ್ರಹಿಸಬಹುದಾದ ಮೊತ್ತ; ಪಾವತಿಸಿದ ಬಂಡವಾಳದ ಒಟ್ಟು 10%, ಉಚಿತ ಮೀಸಲು ಮತ್ತು ಸೆಕ್ಯುರಿಟೀಸ್ ಪ್ರೀಮಿಯಂ ಖಾತೆ ಅದರ ಸದಸ್ಯರಿಂದ; ಪಾವತಿಸಿದ ಬಂಡವಾಳದ ಒಟ್ಟು 25%, ಉಚಿತ ಮೀಸಲು ಮತ್ತು ಸೆಕ್ಯುರಿಟೀಸ್ ಪ್ರೀಮಿಯಂ ಖಾತೆಯು ಸಾರ್ವಜನಿಕರಿಂದ; | 3,680.35<br>9,200.87 |
| 2 | ಹಿಂದಿನ ಹಣಕಾಸು ವರ್ಷದ ಕೊನೆಯ ದಿನದಂದು ಠೇವಣಿಗಳ ಒಟ್ಟು ಮೊತ್ತ; | 814.80 |
| 3 | ಸುತ್ತೋಲೆ ಅಥವಾ ಜಾಹೀರಾತನ್ನು ಹೊರಡಿಸಿದ ದಿನಾಂಕದಂದು ಠೇವಣಿಗಳ ಒಟ್ಟು ಮೊತ್ತ; | 928.48 |
| 4 | ಹೆಚ್ಚಿಸಲು ಉದ್ದೇಶಿಸಿರುವ ಠೇವಣಿಗಳ ಮೊತ್ತ; | 5,000.00 |
| 5 | ಮುಂದಿನ ಹನ್ನೆರಡು ತಿಂಗಳೊಳಗೆ ಮರುಪಾವತಿಸಬಹುದಾದ ಠೇವಣಿಗಳ ಮೊತ್ತ; (FY 2022-23) | 82.15 |

**e. ಠೇವಣಿಗಳನ್ನು ಸಂಗ್ರಹಿಸುವ ನಿಯಮಗಳು:**

1. ಅವಧಿ: ಠೇವಣಿಗಳನ್ನು 1 ವರ್ಷ, 2 ವರ್ಷ ಮತ್ತು 3 ವರ್ಷಗಳ ಅವಧಿಗೆ ಸ್ವೀಕರಿಸಲು ಪ್ರಸ್ತಾಪಿಸಲಾಗಿದೆ.
2. ಬಡ್ಡಿದರ:

| ಸ್ಕೀಮ್ 'ಎ' | | |
|---|---|---|
| ಒಂದು ವರ್ಷ | ಎರಡು ವರ್ಷಗಳು | ಮೂರು ವರ್ಷಗಳು |
| 8.00% | 8.50% | 9.00% |

ಅನ್ವಯವಾಗುವ ಸರಳ ಬಡ್ಡಿದರ ಮತ್ತು ತ್ರೈಮಾಸಿಕವಾಗಿ ಪಾವತಿಸಲಾಗುತ್ತದೆ.

| ಸ್ಕೀಮ್ 'ಬಿ' | | |
|---|---|---|
| ಒಂದು ವರ್ಷ | ಎರಡು ವರ್ಷಗಳು | ಮೂರು ವರ್ಷಗಳು |
| 8.24% | 9.16% | 10.2% |

ಬಡ್ಡಿಯನ್ನು ತ್ರೈಮಾಸಿಕವಾಗಿ ಸಂಯೋಜಿಸಲಾಗುತ್ತದೆ ಮತ್ತು ಮುಕ್ತಾಯದ ಸಮಯದಲ್ಲಿ ಪಾವತಿಸಲಾಗುತ್ತದೆ.

3. **ಪಾವತಿ ಮತ್ತು ಮರುಪಾವತಿ ವಿಧಾನ:**

| | | |
|---|---|---|
| 1 | ಪಾವತಿ ವಿಧಾನ | Cheque/Demand Draft/NEFT/RTGS /UPI |
| 2 | ಮರುಪಾವತಿಯ ವಿಧಾನ | Cheque/Demand Draft/NEFT/RTGS /UPI |

f. ಯೋಜನೆಯನ್ನು ತೆರೆಯುವ ದಿನಾಂಕ ಮತ್ತು ಸುತ್ತೋಲೆ ಅಥವಾ ಜಾಹೀರಾತು ಮಾನ್ಯವಾಗಿರುವ ಅವಧಿಯನ್ನು ನಮೂದಿಸುವ ಪ್ರಸ್ತಾವಿತ ಸಮಯದ ವೇಳಾಪಟ್ಟಿ; ಕಂಪನಿಗಳ ರಿಜಿಸ್ಟ್ರಾರ್ ಗೆ ಸಲ್ಲಿಸಿದ ದಿನಾಂಕದಿಂದ 30 ದಿನಗಳ ನಂತರ ಯೋಜನೆಯನ್ನು ತೆರೆಯಲಾಗುತ್ತದೆ. 2024–2025ರ ಹಣಕಾಸು ವರ್ಷದ ಉಳಿದ ಅವಧಿಯಲ್ಲಿ ಚಂದಾದಾರಿಕೆಗಳನ್ನು ಸ್ವೀಕರಿಸುವುದನ್ನು ಮುಂದುವರಿಸಲು ಈ ಸುತ್ತೋಲೆಯನ್ನು ಹೊರಡಿಸಲಾಗುತ್ತಿದೆ. ಈ ಸುತ್ತೋಲೆಯು 30/09/2023 ರವರೆಗೆ ಅಥವಾ 2025 ರಲ್ಲಿ ಕಂಪನಿಯ ಎಜಿಎಂನ ಟೈ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಾನ್ಯವಾಗಿರುತ್ತದೆ.

g. ಠೇವಣಿಗಳನ್ನು ಹೆಚ್ಚಿಸಲು ಕಾರಣಗಳು ಅಥವಾ ಉದ್ದೇಶಗಳು; ಕಂಪನಿಯ ದುಡಿಯುವ ಬಂಡವಾಳದ ಅವಶ್ಯಕತೆಗಳನ್ನು ಸುಲಭಗೊಳಿಸುವುದು.

**h. ಕ್ರೆಡಿಟ್ ರೇಟಿಂಗ್ ಪಡೆಯಲಾಗಿದೆ:**

I. ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳ ಹೆಸರು : ICRA ಲಿಮಿಟೆಡ್
II. ಪಡೆದ ರೇಟಿಂಗ್ : A-
III. ಪಡೆದ ರೇಟಿಂಗ್ ನ ಅರ್ಥ : ಸ್ಥಿರ
IV. ರೇಟಿಂಗ್ ಪಡೆದ ದಿನಾಂಕ : 20.10.2022

j. ಅಂತಹ ಠೇವಣಿಗಳಲ್ಲಿ ನಿರ್ದೇಶಕರು, ಪ್ರವರ್ತಕರು ಅಥವಾ ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಗಳ ಯಾವುದೇ ಹಣಕಾಸಿನ ಅಥವಾ ಇತರ ವಸ್ತು ಆಸಕ್ತಿ ಮತ್ತು ಅಂತಹ ಆಸಕ್ತಿಯ ಪರಿಣಾಮವು ಇತರ ವ್ಯಕ್ತಿಗಳ ಹಿತಾಸಕ್ತಿಗಳಿಗಿಂತ ಭಿನ್ನವಾಗಿದೆ: ನಿರ್ದೇಶಕರು, ಪ್ರವರ್ತಕರು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ ಯಾವುದೇ ಠೇವಣಿ ಇಟ್ಟಿದ್ದರೆ ಅಥವಾ ಅಂತಹ ಯಾವುದೇ ವ್ಯಕ್ತಿಯು ಯಾವುದೇ ಠೇವಣಿ ಇಟ್ಟಿದ್ದರೆ, ಅನ್ವಯವಾಗುವ ಬಡ್ಡಿದರವು ಚಾಲ್ತಿಯಲ್ಲಿರುವ ಯೋಜನೆಯ ಪ್ರಕಾರ ಇರುತ್ತದೆ.

i. ಅಂತಹ ಠೇವಣಿಗಳನ್ನು ಭದ್ರಪಡಿಸಿಕೊಳ್ಳಲು ರಚಿಸಲಾದ / ರಚಿಸಬೇಕಾದ ಶುಲ್ಕದ ಸಂಕ್ಷಿಪ್ತ ವಿವರಗಳು, ಯಾವುದಾದರೂ ಇದ್ದರೆ: ಅನ್ವಯಿಸುವುದಿಲ್ಲ

3. **ಬಾಕಿ ಇರುವ ಯಾವುದೇ ಠೇವಣಿಗಳ ವಿವರಗಳು:** (ಲಕ್ಷ ರೂ.ಗಳಲ್ಲಿ)

| | | |
|---|---|---|
| a. | 31.03.2022 ರಂತೆ ಬಾಕಿ ಇರುವ ಮೊತ್ತ | 814.80 |
| b. | ಸ್ವೀಕಾರ ದಿನಾಂಕ | 31/03/2024 |
| c. | ಸ್ವೀಕರಿಸಲಾದ ಒಟ್ಟು ಮೊತ್ತ | 814.80 |
| d. | ಬಡ್ಡಿದರ | 1 ವರ್ಷಕ್ಕೆ – 8.00%<br>2 ವರ್ಷಕ್ಕೆ – 8.50%<br>3 ವರ್ಷಕ್ಕೆ – 9.00% |
| e. | 31.03.2022 ರಂತೆ ಠೇವಣಿದಾರರ ಒಟ್ಟು ಸಂಖ್ಯೆ | 309 |
| f. | ಠೇವಣಿಗಳ ಮರುಪಾವತಿ ಮತ್ತು ಅದರ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ, ಠೇವಣಿದಾರರ ಸಂಖ್ಯೆ, ಮೊತ್ತ ಮತ್ತು ಡೀಫಾಲ್ಟ್ ಅವಧಿ ಸೇರಿದಂತೆ ಯಾವುದೇ ಡೀಫಾಲ್ಟ್ ಇದ್ದರೆ. | ಇಲ್ಲ |
| g. | ಠೇವಣಿದಾರರಿಂದ ಯಾವುದೇ ಮನ್ನಾ, ಠೇವಣಿಗಳ ಮೇಲೆ ಗಳಿಸಿದ ಬಡ್ಡಿ | ಇಲ್ಲ |

4. **ಕಂಪನಿಯ ಆರ್ಥಿಕ ಸ್ಥಿತಿ:**

a. ಕಂಪನಿಯ ಲಾಭಗಳು, ತೆರಿಗೆಗೆ ನಿಬಂಧನೆಯನ್ನು ಮಾಡುವ ಮೊದಲು ಮತ್ತು ನಂತರ, ಸುತ್ತೋಲೆ ಅಥವಾ ಜಾಹೀರಾತಿನ ಬಿಡುಗಡೆಯ ದಿನಾಂಕದ ಮೊದಲು ಮೂರು ಹಣಕಾಸು ವರ್ಷಗಳು:

| ವರ್ಷ | ತೆರಿಗೆಯ ಮುನ್ನ ಲಾಭ (ರೂ. ಲಕ್ಷಗಳಲ್ಲಿ) | ತೆರಿಗೆಯ ನಂತರದ ಲಾಭ (ರೂ. ಲಕ್ಷಗಳಲ್ಲಿ) |
|---|---|---|
| 2021-22 | 5454.60 | 4011.99 |
| 2022-23 | 7399.81 | 5378.37 |
| 2023-24 | 6344.80 | 4516.12 |

b. ಸದರಿ ಮೂರು ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯು ಘೋಷಿಸಿದ ಲಾಭಾಂಶಗಳು; ಕಳೆದ ಮೂರು ವರ್ಷಗಳ ಬಡ್ಡಿ ವ್ಯಾಪ್ತಿಯ ಅನುಪಾತ (ತೆರಿಗೆಯ ನಂತರದ ನಗದು ಲಾಭ ಮತ್ತು ಪಾವತಿಸಿದ ಬಡ್ಡಿ / ಪಾವತಿಸಿದ ಬಡ್ಡಿ);

| ವರ್ಷ | 2021-22 | 2022-23 | 2023-24 |
|---|---|---|---|
| ಘೋಷಿಸಿದ ಲಾಭಾಂಶ | 0% | 0% | 50% |
| ಬಡ್ಡಿ ವ್ಯಾಪ್ತಿಯ ಅನುಪಾತ | 4.35 | 4.44 | 3.45 |

c. ಸುತ್ತೋಲೆ ಅಥವಾ ಜಾಹೀರಾತನ್ನು ನೀಡುವ ದಿನಾಂಕಕ್ಕೆ ಮುಂಚಿತವಾಗಿ ಲೆಕ್ಕಪರಿಶೋಧಿತ ಮೂರು ಬ್ಯಾಲೆನ್ಸ್ ಶೀಟ್ ಗಳಲ್ಲಿರುವಂತೆ ಕಂಪನಿಯ ಆರ್ಥಿಕ ಸ್ಥಿತಿಯ ಸಾರಾಂಶ:

(ರೂ. ಲಕ್ಷಗಳಲ್ಲಿ)

| ಹೊಣೆಗಾರಿಕೆಗಳು | ಮಾರ್ಚ್ 31, 2024 ರಂತೆ | ಮಾರ್ಚ್ 31, 2023 ರಂತೆ | ಮಾರ್ಚ್ 31, 2022 ರಂತೆ | ಸ್ವತ್ತುಗಳು | ಮಾರ್ಚ್ 31, 2024 ರಂತೆ | ಮಾರ್ಚ್ 31, 2023 ರಂತೆ | ಮಾರ್ಚ್ 31, 2022ರಂತೆ |
|---|---|---|---|---|---|---|---|
| ಈಕ್ವಿಟಿ ಷೇರು ಬಂಡವಾಳ | 748.24 | 748.24 | 748.24 | ಚಾಲ್ತಿಯಲ್ಲದ ಸ್ವತ್ತುಗಳು | 23108.90 | 20866.04 | 13995.10 |
| ಮೀಸಲು ಮತ್ತು ಹೆಚ್ಚುವರಿ | 36055.24 | 31919.06 | 26829.99 | ಪ್ರಸ್ತುತ ಸ್ವತ್ತುಗಳು | 81272.82 | 72642.54 | 60371.87 |
| ಪ್ರಸ್ತುತವಲ್ಲದ ಹೊಣೆಗಾರಿಕೆಗಳು | 9725.19 | 10595.77 | 4943.96 | | | | |
| ಪ್ರಸ್ತುತ ಹೊಣೆಗಾರಿಕೆಗಳು | 57853.05 | 50245.51 | 41844.78 | | | | |
| ಒಟ್ಟು | 104381.72 | 93508.58 | 74366.97 | ಒಟ್ಟು | 104381.72 | 93508.58 | 74366.97 |

d. ಸುತ್ತೋಲೆ ಅಥವಾ ಜಾಹೀರಾತನ್ನು ಹೊರಡಿಸುವ ದಿನಾಂಕಕ್ಕೆ ಮುಂಚಿತವಾಗಿ ಮೂರು ವರ್ಷಗಳ ಲೆಕ್ಕಪರಿಶೋಧಿತ ನಗದು ಹರಿವಿನ ಹೇಳಿಕೆ:

(ರೂ. ಲಕ್ಷಗಳಲ್ಲಿ)

| ವಿವರಗಳು | 31.03.2024 | 31.03.2023 | 31.03.2022 |
|---|---|---|---|
| ಕಾರ್ಯಾಚರಣೆಯ ಚಟುವಟಿಕೆಗಳಿಂದ ಹಣದ ಹರಿವು | 471.43 | 5362.49 | 71.72 |
| ಹೂಡಿಕೆ ಚಟುವಟಿಕೆಗಳಿಂದ ಹಣದ ಹರಿವು | -3464.24 | -2034.91 | -4029.78 |
| ಹಣಕಾಸು ಚಟುವಟಿಕೆಗಳಿಂದ ಹಣದ ಹರಿವು | 4708.91 | -2609-97 | 1231.52 |
| ನಗದು ಮತ್ತು ನಗದು ಸಮಾನಗಳಲ್ಲಿ ನಿವ್ವಳ ಹೆಚ್ಚಳ/(ಕಡಿಮೆ) – | 1716.09 | 717.60 | -2726.55 |

e. ಕಳೆದ ಮೂರು ವರ್ಷಗಳಲ್ಲಿ ಅಕೌಂಟಿಂಗ್ ನೀತಿಗಳಲ್ಲಿನ ಯಾವುದೇ ಬದಲಾವಣೆ ಮತ್ತು ಕಂಪನಿಯ ಲಾಭ ಮತ್ತು ಮೀಸಲುಗಳ ಮೇಲೆ ಅವುಗಳ ಪರಿಣಾಮ: ಕಂಪನಿಯ ಹಣಕಾಸು ಹೇಳಿಕೆಗಳನ್ನು ಭಾರತೀಯ ಅಕೌಂಟಿಂಗ್ ಮಾನದಂಡಗಳಿಗೆ ಅನುಗುಣವಾಗಿ ತಯಾರಿಸಲಾಗುತ್ತದೆ. ("Ind AS") ಕಂಪನಿಗಳ (ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್) ನಿಯಮಗಳು 2015 ರ ಅಡಿಯಲ್ಲಿ ಅಧಿಸೂಚಿಸಲಾಗಿದೆ ಮತ್ತು ಕಂಪನಿಗಳ ಕಾಯ್ದೆ2013 ರ ಸೆಕ್ಷನ್ 133 ನೊಂದಿಗೆ ಓದಲಾಗಿದೆ.

5. **ನಿರ್ದೇಶಕರ ಘೋಷಣೆ-**

a. ಕಾಯ್ದೆಯ ಪ್ರಾರಂಭದ ಮೊದಲು ಅಥವಾ ನಂತರ ಸ್ವೀಕರಿಸಲಾದ ಠೇವಣಿಗಳ ಮರುಪಾವತಿಯಲ್ಲಿ ಅಥವಾ ಅಂತಹ ಠೇವಣಿಗಳ ಮೇಲಿನ ಬಡ್ಡಿಯನ್ನು ಪಾವತಿಸುವಲ್ಲಿ ಕಂಪನಿಯು ವಿಫಲವಾಗಿಲ್ಲ ಮತ್ತು ಡೀಫಾಲ್ಟ್ ಸಂಭವಿಸಿದಾಗ, ಕಂಪನಿಯು ಡೀಫಾಲ್ಟ್ ಅನ್ನು ಸರಿದೂಗಿಸುತ್ತದೆ ಮತ್ತು ಡೀಫಾಲ್ಟ್ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿ ಮುಗಿದಿದೆ.

b. ಕಂಪನಿಯ ವ್ಯವಹಾರಗಳು ಮತ್ತು ನಿರೀಕ್ಷೆಗಳಿಗೆ ಸಂಬಂಧಿಸಿದಂತೆ ನಿರ್ದೇಶಕರ ಮಂಡಳಿಯು ತಮ್ಮನ್ನು ಸಂಪೂರ್ಣವಾಗಿ ತೃಪ್ತಿಪಡಿಸಿಕೊಂಡಿದೆ ಮತ್ತು ಕಂಪನಿಯ ಅಂದಾಜು ಭವಿಷ್ಯದ ಹಣಕಾಸಿನ ಸ್ಥಿತಿಗೆ ಸಂಬಂಧಿಸಿದಂತೆ ಅವರು ಅಭಿಪ್ರಾಯಪಡುತ್ತಾರೆ. ಕಂಪನಿಯು ತನ್ನ ಬಾಧ್ಯತೆಗಳನ್ನು ಯಾವಾಗ ಪಾವತಿಸಬೇಕೋ ಆಗ ಪೂರೈಸಲು ಸಾಧ್ಯವಾಗುತ್ತದೆ ಮತ್ತು ಸುತ್ತೋಲೆ ಅಥವಾ ಜಾಹೀರಾತನ್ನು ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ಕಂಪನಿಯು ದಿವಾಳಿಯಾಗುವುದಿಲ್ಲ;

c. ಕಂಪನಿಯು ಕಾಯ್ದೆಯ ಪೂರ್ವದರ್ಶಿತ್ವಗಳನ್ನು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳನ್ನು ಅನುಸರಿಸಿದೆ;

d. ಕಾಯ್ದೆ ಮತ್ತು ನಿಯಮಗಳ ಅನುಸರಣೆಯು ಠೇವಣಿಗಳ ಮರುಪಾವತಿಯನ್ನು ಕೇಂದ್ರ ಸರ್ಕಾರವು ಖಾತರಿಪಡಿಸುತ್ತದೆ ಎಂದು ಸೂಚಿಸುವುದಿಲ್ಲ;

e. ಕಾಯ್ದೆ ಪ್ರಾರಂಭವಾಗುವ ಮೊದಲು ಕಂಪನಿಯು ಸ್ವೀಕರಿಸಿದ ಠೇವಣಿಗಳನ್ನು ಮರುಪಾವತಿಸಲಾಗಿದೆ ಅಥವಾ ಠೇವಣಿಗಳ ಸ್ವೀಕಾರ ನಿಯಮಗಳು, 2014 ರ ನಿಯಮ 19 ರ ಪ್ರಕಾರ ನಿಗದಿತ ದಿನಾಂಕದೊಳಗೆ ಬಡ್ಡಿಯೊಂದಿಗೆ ಮರುಪಾವತಿಸಬೇಕು;

f. ಕ್ರೆಡಿಟ್ ರೇಟಿಂಗ್ ನಲ್ಲಿ ಯಾವುದೇ ಪ್ರತಿಕೂಲ ಬದಲಾವಣೆಯ ಸಂದರ್ಭದಲ್ಲಿ, ಠೇವಣಿದಾರರಿಗೆ ಯಾವುದೇ ದಂಡವಿಲ್ಲದೆ ಠೇವಣಿಗಳನ್ನು ಹಿಂಪಡೆಯಲು ಅವಕಾಶ ನೀಡಲಾಗುವುದು;

g. ಠೇವಣಿಗಳನ್ನು ಸುತ್ತೋಲೆ ಅಥವಾ ಸುತ್ತೋಲೆಯಲ್ಲಿ ಜಾಹೀರಾತಿನ ರೂಪದಲ್ಲಿ ಸೂಚಿಸಲಾದ ಉದ್ದೇಶಗಳಿಗಾಗಿ ಮಾತ್ರ ಬಳಸಬೇಕು;

h. ಕಂಪನಿಯು ಸ್ವೀಕರಿಸುವ ಠೇವಣಿಗಳು (ಸುರಕ್ಷಿತ ಠೇವಣಿಗಳನ್ನು ಹೊರತುಪಡಿಸಿ, ಒಟ್ಟು ಮೊತ್ತವನ್ನು ಸೂಚಿಸಬೇಕಾದವು) ಅಸುರಕ್ಷಿತವಾಗಿರುತ್ತವೆ ಮತ್ತು ಕಂಪನಿಯ ಇತರ ಅಸುರಕ್ಷಿತ ಹೊಣೆಗಾರಿಕೆಗಳೊಂದಿಗೆ ಶ್ರೇಣಿಯನ್ನು ಹೊಂದಿರುತ್ತವೆ.

ಮಂಡಳಿಯ ಆದೇಶದಂತೆ
**AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್**
**ಶ್ರೀ ಎ.ಬಿ.ಎಸ್.ಸಂಜಯ್ – ವ್ಯವಸ್ಥಾಪಕ ನಿರ್ದೇಶಕ**

ಸ್ಥಳ: ಸೇಲಂ
ದಿನಾಂಕ : 22.12.2024

### ಸ್ವತಂತ್ರ ಆಡಿಟರ್ (ಲೆಕ್ಕ ಪರಿಶೋಧಕರ) ಪ್ರಮಾಣಪತ್ರ

ನಿರ್ದೇಶಕರ ಮಂಡಳಿ (ಬೋರ್ಡ್ ಆಫ್ ಡೈರೆಕ್ಟರ್ಸ್),
AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್,
251–ಎ, ಓಮಲೂರ್ ರಸ್ತೆ, ಸ್ವರ್ಣಪುರಿ,
ಸೇಲಂ 636 004.

ಆತ್ಮೀಯರೇ,

ಠೇವಣಿಗಳನ್ನು ಆಹ್ವಾನಿಸುವ ಜಾಹೀರಾತು ರೂಪದಲ್ಲಿ ಸುತ್ತೋಲೆ ಅಥವಾ ಸುತ್ತೋಲೆಗೆ (ಫಾರ್ಮ್ DPT 1) ಮತ್ತು ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 73 (ಕಾಯಿದೆ) ಕ್ಕೆ ಸಂಬಂಧಿಸಿದಂತೆ ಕಂಪನಿಗಳ ನಿಯಮ 4 (ಠೇವಣಿಗಳ ಸ್ವೀಕೃತಿ) ನಿಯಮಗಳು, 2018 (ನಿಯಮಗಳು) ರ ಅಗತ್ಯತೆಗಳಿಗೆ ಅನುಗುಣವಾಗಿ ಸ್ವತಂತ್ರ ಲೆಕ್ಕ ಪರಿಶೋಧಕರ ಪ್ರಮಾಣಪತ್ರ

1. ದಿನಾಂಕ ಸೆಪ್ಟಂಬರ್ 30, 2023 ರ ನಮ್ಮ ಒಪ್ಪಂದ ಪತ್ರದ (ಎಂಗೇಜ್‌ಮೆಂಟ್ ಲೆಟರ್) ನಿಯಮಗಳಿಗೆ ಅನುಸಾರವಾಗಿ ಈ ವರದಿಯನ್ನು ನೀಡಲಾಗಿದೆ.
2. AVR ಸ್ವರ್ಣಮಹಲ್ ಜ್ಯುವೆಲ್ಲರಿ ಲಿಮಿಟೆಡ್ (ಕಂಪನಿ) ನ ಶಾಸನಬದ್ಧ ಲೆಕ್ಕಪರಿಶೋಧಕರಾದ ನಾವು, ಶ್ರೀನಿವಾಸನ್ ಮತ್ತು ಪದ್ಮನಾಭನ್, ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳ ಮರುಪಾವತಿಯಲ್ಲಿ ಕಂಪನಿಯು ಡೀಫಾಲ್ಟ್ ಮಾಡಿಲ್ಲ ಎಂದು ಪ್ರಮಾಣೀಕರಿಸಲು ವಿನಂತಿಸಲ್ಪಟ್ಟಿದ್ದೇವೆ.

**ಆಡಳಿತದ ಜವಾಬ್ದಾರಿ**

3. ಎಲ್ಲಾ ಲೆಕ್ಕಪತ್ರ ನಿರ್ವಹಣೆ ಮತ್ತು ಅದರ ವಿಷಯಗಳನ್ನು ಬೆಂಬಲಿಸುವ ಇತರ ದಾಖಲೆಗಳ ರಚನೆ ಮತ್ತು ನಿರ್ವಹಣೆ ಸೇರಿದಂತೆ ಜೊತೆಯಲ್ಲಿರುವ ಫಾರ್ಮ್ DPT 1 ರ ತಯಾರಿಕೆಗೆ ಕಂಪನಿಯ ಆಡಳಿತವು ಜವಾಬ್ದಾರವಾಗಿದೆ. ಹೇಳಿಕೆಯ ತಯಾರಿಕೆ ಮತ್ತು ಪ್ರಸ್ತುತಿಗೆ ಸಂಬಂಧಿಸಿದ ಆಂತರಿಕ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಹಾಗೂ ತಯಾರಿಕೆಯ ಸರಿಯಾದ ಆಧಾರವನ್ನು ಅನ್ವಯಿಸುವುದು ಮತ್ತು ಸಂದರ್ಭಗಳಲ್ಲಿ ಸಮಂಜಸವಾದ ಅಂದಾಜುಗಳನ್ನು ಮಾಡುವುದನ್ನು ಈ ಜವಾಬ್ದಾರಿಯು ಒಳಗೊಂಡಿರುತ್ತದೆ.
4. ಕಂಪನಿಯು ರೂಪಿಸಿದ ಯೋಜನೆಯ ಪ್ರಕಾರ ಅಂತಹ ಠೇವಣಿಗಳು ಬಾಕಿಯಿರುವಾಗ, ಠೇವಣಿಗಳನ್ನು ಮರುಪಾವತಿಸಲು/ಹಿಂಪಡೆಯಲು ಕಂಪನಿಯ ಆಡಳಿತವು ಜವಾಬ್ದಾರವಾಗಿರುತ್ತದೆ. ಅಲ್ಲದೆ, ಠೇವಣಿಗಳನ್ನು ಆಹ್ವಾನಿಸುವ ಜಾಹೀರಾತುಗಳ ರೂಪದಲ್ಲಿ 1 ಸುತ್ತೋಲೆ ಅಥವಾ ಸುತ್ತೋಲೆ (ಫಾರ್ಮ್ DPT 1) ಮತ್ತು ಕಾಯಿದೆಯ ಸೆಕ್ಷನ್ 73 ಕ್ಕೆ ಸಂಬಂಧಿಸಿದ ನಿಯಮಗಳ ಅಗತ್ಯತೆಗಳಿಗೆ ಕಂಪನಿಯ ಅನುಸರಣೆ ಆಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಂಪನಿಯ ಆಡಳಿತವು ಜವಾಬ್ದಾರವಾಗಿದೆ.

**ಆಡಿಟರ್ ರವರ ಜವಾಬ್ದಾರಿ**

5. ಕಂಪನಿಯು ನಿರ್ವಹಿಸಿರುವ ಖಾತೆಗಳ ಆಡಿಟ್ ಮಾಡಿದ ಪುಸ್ತಕಗಳು ಮತ್ತು ಇತರ ಸಂಬಂಧಿತ ದಾಖಲೆಗಳು ಮತ್ತು ದಾಖಲೆಗಳ ಪ್ರಕಾರ ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳ ಮರುಪಾವತಿಯಲ್ಲಿ ಕಂಪನಿಯು ಡೀಫಾಲ್ಟ್ ಮಾಡಿಲ್ಲ ಎಂಬ ಸಮಂಜಸವಾದ ಭರವಸೆಯನ್ನು ನೀಡುವುದು ನಮ್ಮ ಜವಾಬ್ದಾರಿಯಾಗಿದೆ.
6. ಆಡಳಿತದ ವಿನಂತಿಯ ಪ್ರಕಾರ, ಈ ಪ್ರಮಾಣೀಕರಣದ ಉದ್ದೇಶಕ್ಕಾಗಿ ನಾವು ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳಿಗಾಗಿ ನಮ್ಮ ಪರಿಶೀಲನೆಯನ್ನು ನಿರ್ಬಂಧಿಸಿದ್ದೇವೆ. ಆದ್ದರಿಂದ, ಹಿಂದಿನ ವರ್ಷಗಳಲ್ಲಿ ಯಾವುದಾದರೂ ಡೀಫಾಲ್ಟ್‌ಗಳ ಅನುಸರಣೆಯ ಬಗ್ಗೆ ನಾವು ಪ್ರತಿಕ್ರಿಯಿಸುವುದಿಲ್ಲ. ನಮ್ಮ ಪರೀಕ್ಷೆಯ ಭಾಗವಾಗಿ ಈ ಕೆಳಗಿನ ಕಾರ್ಯ ವಿಧಾನಗಳನ್ನು ನಾವು ನಿರ್ವಹಿಸಿದ್ದೇವೆ:

ಎ) ಮಾರ್ಚ್ 31, 2024 ರಂತೆ ಕಂಪನಿಯು ನಿರ್ವಹಿಸುವ ಸ್ವತಂತ್ರ ಹಣಕಾಸು ಹೇಳಿಕೆಗಳು, ಖಾತೆಗಳ ಪುಸ್ತಕಗಳು, ಠೇವಣಿಗಳ ನೋಂದಣಿ ಮತ್ತು ಇತರ ಸಂಬಂಧಿತ ದಾಖಲೆಗಳಿಗೆ ಬಾಕಿ ಉಳಿದಿರುವ ಮೊತ್ತಗಳನ್ನು ಪತ್ತೆ ಹಚ್ಚಲಾಗಿದೆ.

ಬಿ) ಇಲ್ಲಿ ಒಳಗೊಂಡಿರುವ ಮಾಹಿತಿಯ ನಿಖರತೆಯನ್ನು ನಿರ್ಧರಿಸಲು ನಾವು ಮಾದರಿ ಆಧಾರದ ಮೇಲೆ ಠೇವಣಿಗಳ ನೋಂದಣಿ ಮತ್ತು ಇತರ ಸಂಬಂಧಿತ ದಾಖಲೆಗಳಲ್ಲಿ ಸೇರಿಸಲಾದ ವಿವರಗಳನ್ನು ಪರೀಕ್ಷಿಸಿದ್ದೇವೆ.

ಸಿ) ಠೇವಣಿಗಳ ಅವಧಿ ಮೀರಿದೆಯೇ ಎಂಬುದನ್ನು ನಿರ್ಧರಿಸಲು ನಾವು ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳ ವಯಸ್ಸಾಗುವಿಕೆಯನ್ನು ಪರೀಕ್ಷಿಸಿದ್ದೇವೆ.

7. ಮಾರ್ಚ್ 31, 2024 ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಹಣಕಾಸು ಹೇಳಿಕೆಗಳನ್ನು ನಾವು ಆಡಿಟ್ ಮಾಡಿದ್ದೇವೆ. ಲೆಕ್ಕಪರಿಶೋಧನೆಯ ಮಾನದಂಡಗಳು ಮತ್ತು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿದ ಇತರ ಅನ್ವಯವಾಗುವ ಅಧಿಕೃತ ಘೋಷಣೆಗಳಿಗೆ ಅನುಗುಣವಾಗಿ, ಈ ಹಣಕಾಸು ಹೇಳಿಕೆಗಳ ಬಗ್ಗೆ ನಮ್ಮ ಆಡಿಟ್ ಅನ್ನು ನಡೆಸಲಾಗಿದೆ. ಹಣಕಾಸಿನ ಹೇಳಿಕೆಗಳು ವಸ್ತು ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ಸಮಂಜಸವಾದ ಭರವಸೆಯನ್ನು ಪಡೆಯಲು ನಾವು ಆಡಿಟ್ ಬಗ್ಗೆ ಯೋಜನೆ ಮಾಡಬೇಕು ಮತ್ತು ನಿರ್ವಹಿಸಬೇಕು ಎಂದು ಆ ಮಾನದಂಡಗಳು ಬಯಸುತ್ತವೆ.
8. ನಾವು ಕಂಪನಿಯ ಆಡಳಿತದಿಂದ ಸೂಕ್ತ ಪ್ರಾತಿನಿಧ್ಯಗಳನ್ನು ಪಡೆದುಕೊಂಡಿದ್ದೇವೆ.

**ಅಭಿಪ್ರಾಯ**

9. ಮೇಲಿನಂತೆ ನಮ್ಮ ಪರೀಕ್ಷೆಯ ಆಧಾರದ ಮೇಲೆ ಮತ್ತು ಕಂಪನಿಯ ಆಡಳಿತದಿಂದ ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ, ಮಾರ್ಚ್ 31, 2024 ರಂತೆ ಬಾಕಿ ಇರುವ ಠೇವಣಿಗಳ ಮರುಪಾವತಿಯಲ್ಲಿ ಕಂಪನಿಯು ಡೀಫಾಲ್ಟ್ ಮಾಡಿಲ್ಲ ಎಂದು ನಾವು ಅಭಿಪ್ರಾಯ ಪಟ್ಟಿದ್ದೇವೆ.

ಬಳಕೆಯ ಮೇಲಿನ ನಿರ್ಬಂಧ

10. ಕಂಪನಿಯ ರಿಜಿಸ್ಟ್ರಾರ್‌ಗೆ ಈ ಪ್ರಮಾಣಪತ್ರವನ್ನು ಸಲ್ಲಿಸಲು ಕಂಪನಿಯನ್ನು ಸಕ್ರಿಯಗೊಳಿಸುವ ಉದ್ದೇಶಕ್ಕಾಗಿ ಮಾತ್ರ ನಿಮ್ಮ ನಿರ್ದಿಷ್ಟ ಕೋರಿಕೆಯ ಮೇರೆಗೆ ಈ ಪ್ರಮಾಣಪತ್ರವನ್ನು ನೀಡಲಾಗಿದೆ. ಈ ಪ್ರಮಾಣಪತ್ರವನ್ನು ನಮ್ಮ ಪೂರ್ವ ಲಿಖಿತ ಒಪ್ಪಿಗೆಯಿಲ್ಲದೆ ಯಾವುದೇ ಉದ್ದೇಶಕ್ಕಾಗಿ ಬಳಸಬಾರದು, ಕೋಟ್ ಮಾಡಬಾರದು ಅಥವಾ ಉಲ್ಲೇಖಿಸಬಾರದು. ಅಂತೆಯೇ, ಯಾವುದೇ ಇತರ ಉದ್ದೇಶಕ್ಕಾಗಿ ಅಥವಾ ಈ ಪ್ರಮಾಣಪತ್ರವನ್ನು ಯಾವುದೇ ವ್ಯಕ್ತಿಗೆ ಅಥವಾ ನಮ್ಮ ಪೂರ್ವಾನುಮತಿಯಿಲ್ಲದೆ ಲಿಖಿತವಾಗಿ ಯಾರ ಕೈಗೆ ಸಿಗಬಹುದು ಎಂಬುದಕ್ಕಾಗಿ ನಾವು ಯಾವುದೇ ಹೊಣೆಗಾರಿಕೆ ಅಥವಾ ಕರ್ತವ್ಯವನ್ನು ಸ್ವೀಕರಿಸುವುದಿಲ್ಲ ಅಥವಾ ತೆಗೆದುಕೊಳ್ಳುವುದಿಲ್ಲ.

**ಶ್ರೀನಿವಾಸನ್ ಮತ್ತು ಪದ್ಮನಾಭನ್ ಅವರಿಗಾಗಿ**
**ಚಾರ್ಟರ್ಡ್ ಅಕೌಂಟೆಂಟ್ಸ್**
FRN: 004021S

**ಕೆ. ಎಂ. ಪದ್ಮನಾಭನ್**
ಪಾಲುದಾರ
MRN 026594
UDIN: 24026S94BKCLZW4982
ದಿನಾಂಕ: ಅಕ್ಟೋಬರ್ 22, 2024

ಗೊಂದಲ ಪರಿಹಾರಕ್ಕೆ ಶಾ, ನಡ್ಡಾಗೆ ಸಂಸದರ ಮನವಿ • ವರಿಷ್ಠರಿಗೆ ಮಾಹಿತಿ ನೀಡಿದ ವಿಜಯೇಂದ್ರ

# ವರಿಷ್ಠರ ಅಂಗಳ ತಲುಪಿದ ಬಿಜೆಪಿ ಬಣ ಕಿತ್ತಾಟ

ಪ್ರಜಾವಾಣಿ ವಾರ್ತೆ



**ನವದೆಹಲಿ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬಣ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣಗಳ ನಡುವಿನ ಕಿತ್ತಾಟ ವರಿಷ್ಠರ ಅಂಗಳಕ್ಕೆ ತಲುಪಿದೆ.

ಬಣಗಳ ಕಿತ್ತಾಟ ತಾರಕಕ್ಕೇರಿರುವ ನಡುವೆಯೇ ಶುಕ್ರವಾರ ರಾತ್ರಿ ರಾಷ್ಟ್ರ ರಾಜಧಾನಿಗೆ ಧಾವಿಸಿದ ವಿಜಯೇಂದ್ರ ಅವರು ಶನಿವಾರ ಬೆಳಿಗ್ಗೆ ಪಕ್ಷದ ವರಿಷ್ಠ ನಾಯಕರನ್ನು ಭೇಟಿ ಮಾಡಿ ಭಿನ್ನಮತೀಯ ನಾಯಕರ ವಿರುದ್ಧ ದೂರಿತ್ತರು.

‘ಕಾಂಗ್ರೆಸ್ ಸರ್ಕಾರದ ಮುಡಾ ಹಗರಣ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಭ್ರಷ್ಟಾಚಾರಗಳ ವಿರುದ್ಧ ದೊಡ್ಡಮಟ್ಟದ ಹೋರಾಟ ನಡೆಸಲಾಗಿದೆ. ಸಂಘಟನೆಗೆ ಚುರುಕು ನೀಡಲಾಗಿದೆ. ಅದೇ ಹೊತ್ತಿನಲ್ಲಿ, ಯತ್ನಾಳ ಬಣದ ನಾಯಕರು ಪ್ರತ್ಯೇಕ ಹೋರಾಟಗಳನ್ನು ನಡೆಸಿ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ.



ನಮ್ಮ ಕುಟುಂಬದ ವಿರುದ್ಧ ನಿತ್ಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇಂತಹ ಚಟುವಟಿಕೆ ಗಳಿಗೆ ಕಡಿವಾಣ ಹಾಕಬೇಕು’ ಎಂದು ವರಿಷ್ಠರಲ್ಲಿ ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ.

‘ಪಕ್ಷದ ನಾಯಕರ ವಿರುದ್ಧ ಹೇಳಿಕೆ ನೀಡುತ್ತಿದ್ದ ಕಾರಣಕ್ಕೆ ಯತ್ನಾಳ ಅವರನ್ನು 2–3 ಸಲ ಕರೆಸಿ ಮಾತುಕತೆ ನಡೆಸಲಾಗಿದೆ. ಪಕ್ಷದ ರಾಜ್ಯ ನಾಯಕರು ಎಲ್ಲ ಒಗ್ಗಟ್ಟಾಗಿ ಪಕ್ಷದ ವೇದಿಕೆಯಲ್ಲೇ ಹೋರಾಟ ನಡೆಸುವಂತೆ ಸೂಚಿಸಲಾಗಿದೆ. ಅವರನ್ನು ಇನ್ನೊಮ್ಮೆ ಕರೆಸಿ ಮಾತನಾಡುತ್ತೇವೆ’ ಎಂದು ವರಿಷ್ಠರು ಭರವಸೆ ನೀಡಿದರು.

ಯತ್ನಾಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಪಕ್ಷ ಸಂಘಟನೆ ಮಾಡುವುದು ಕಷ್ಟವಾಗಲಿದೆ ಎಂದು ವಿಜಯೇಂದ್ರ ಅವರು ವರಿಷ್ಠರ ಗಮನಕ್ಕೆ ತಂದರು. ‘ಎರಡೂ ಬಣಗಳ ಮುಖಂಡರು ಕಿತ್ತಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇಂತಹ ಚಟುವಟಿಕೆಗಳ ಕಡಿವಾಣಕ್ಕೆ ಕ್ರಮ ಕೈಗೊಳ್ಳುತ್ತೇವೆ’ ಎಂದೂ ವರಿಷ್ಠರು ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

**ಸಂಸದರ ನಿಯೋಗದಿಂದ ಶಾ, ನಡ್ಡಾ ಭೇಟಿ:** ಸಂಸದರಾದ ಬಿ.ವೈ. ವಿಜಯೇಂದ್ರ, ಜಗದೀಶ ಶೆಟ್ಟರ್, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ನೇತೃತ್ವದಲ್ಲಿ ರಾಜ್ಯದ ಬಿಜೆಪಿ ಸಂಸದರು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ಪಕ್ಷದ ರಾಜ್ಯ ಘಟಕದಲ್ಲಿನ ಗೊಂದಲಗಳನ್ನು ಬಗೆಹರಿಸುವಂತೆ ಮನವಿ ಮಾಡಿದರು. ‘ಕಳೆದ ಕೆಲವು ದಿನಗಳಿಂದ ಎರಡೂ ಬಣಗಳ ನಡುವಿನ ಜಟಾಪಟಿ ತೀವ್ರಗೊಂಡಿದೆ. ಇದಕ್ಕೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಪಕ್ಷಕ್ಕೆ ಭಾರಿ ಹೊಡೆತ ಬೀಳಲಿದೆ. ಎರಡೂ ಬಣದ ನಾಯಕರನ್ನು ಕರೆಸಿ ನಿರ್ದೇಶನಗಳನ್ನು ನೀಡಬೇಕು’ ಎಂದು ಅವರು ಆಗ್ರಹಿಸಿದರು.

‘ರಾಜ್ಯದಲ್ಲಿ ಪಕ್ಷದ ಬೆಳವಣಿಗೆಯಲ್ಲಿ ಅನೇಕ ನಾಯಕರ ಶ್ರಮ ಇದೆ. ಸಾವಿರಾರು ಕಾರ್ಯಕರ್ತರ ಪರಿಶ್ರಮ ಇದೆ. ಈಗಿನ ಬೆಳವಣಿಗೆಗಳಿಂದ ಅವರೆಲ್ಲ ನೊಂದಿದ್ದಾರೆ. ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ಬದಲು ನಮ್ಮ ನಾಯಕರು ತಾವೇ ಕಚ್ಚಾಟದಲ್ಲಿ ತೊಡಗಿದ್ದಾರೆ. ಪಕ್ಷದ ವರಿಷ್ಠರು ಕೂಡಲೇ ಮಧ್ಯಪ್ರವೇಶ ಮಾಡಬೇಕು’ ಎಂದು ಒತ್ತಾಯಿಸಿದರು.

‘ಪಕ್ಷಕ್ಕೆ ಮುಜುಗರ ಉಂಟಾಗುವಂತಹ ಹೇಳಿಕೆ ನೀಡದಂತೆ ಯತ್ನಾಳ ಅವರಿಗೆ ಈ ಹಿಂದೆ ಸೂಚನೆ ನೀಡಲಾಗಿತ್ತು. ಆದರೆ, ಹೇಳಿಕೆ ನೀಡುತ್ತಲೇ ಇದ್ದಾರೆ. ಶೀಘ್ರದಲ್ಲಿ ಅವರನ್ನು ದೆಹಲಿಗೆ ಕರೆಸಿಕೊಂಡು ಚರ್ಚೆ ನಡೆಸುತ್ತೇವೆ’ ಎಂದು ಶಾ ಹಾಗೂ ನಡ್ಡಾ ಭರವಸೆ ನೀಡಿದರು.

## ‘ನನ್ನನ್ನು ಬದಲಿಸುವ ಭ್ರಮೆ ಬಿಡಿ’



**ಬೆಂಗಳೂರು:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಪಕ್ಷವು ತಮ್ಮನ್ನು ಬದಲಿಸುವುದಿಲ್ಲ ಎಂದು ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ದೆಹಲಿಯಿಂದ ವಾಪಸ್ ಆದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನನ್ನನ್ನು ಬದಲಾವಣೆ ಮಾಡಬಹುದು ಎಂಬ ಭ್ರಮೆಯಲ್ಲಿ ಇರುವವರಿಗೆ ಒಳ್ಳೆಯ ಸುದ್ದಿ ಬರಲು ಸಾಧ್ಯವೇ ಇಲ್ಲ’ ಎಂದರು.

‘ಯತ್ನಾಳರನ್ನು ಉಚ್ಚಾಟನೆ ಮಾಡುವಂತೆ ದೂರು ಕೊಡುತ್ತಿಲ್ಲ; ವರಿಷ್ಠರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ದಿನನಿತ್ಯ ಬೀದಿಯಲ್ಲಿ ಮಾತನಾಡುತ್ತಿದ್ದು, ಪತ್ರಿಕೆಗಳಲ್ಲೂ ಬರುತ್ತಿದೆ. ಅವೆಲ್ಲ ಬಹಳ ದಿನ ಮುಂದುವರೆಯುವುದಿಲ್ಲ. ವರಿಷ್ಠರು ಅವರದೇ ಆದ ರೀತಿಯಲ್ಲಿ ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ’ ಎಂದರು.

‘ನನ್ನ ಕೆಲಸದ ಬಗ್ಗೆ ವರಿಷ್ಠರಿಗೆ ಸಮಾಧಾನ ಇದೆ. ಯಡಿಯೂರಪ್ಪ ಅವರ ಮಗನಾಗಿರುವುದೇ ಅಪರಾಧ ಎಂಬ ರೀತಿಯಲ್ಲಿ ಮಾತನಾಡುತ್ತಿರುವವರಿಗೆ ಮುಂದಿನ ದಿನಗಳಲ್ಲಿ ಉತ್ತರ ಕೊಡುತ್ತೇನೆ’ ಎಂದರು.

## ಸುದ್ದಿ 2 ನಿಮಿಷ

### ‘ಯತ್ನಾಳಗೆ ಇತಿಹಾಸದ ಅರಿವಿಲ್ಲ’

**ಬೀದರ್:** ‘ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಕುರಿತು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಆಡಿರುವ ಮಾತುಗಳು ಖಂಡನಾರ್ಹ. ಯತ್ನಾಳರದ್ದು ಇತಿಹಾಸದ ಅರಿವಿಲ್ಲದ ಮಾತಾಗಿದೆ’ ಎಂದು ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದ್ದಾರೆ.

‘ಬಸವಣ್ಣನ ಜನ್ಮಭೂಮಿಯಲ್ಲಿ ಹುಟ್ಟಿರುವ ಯತ್ನಾಳ ಅವರು ಬಸವಣ್ಣನವರ ಕುರಿತು ಇಂಥ ಮಾತುಗಳು ಆಡಿರುವುದು ಅವರಿಗೆ ಶೋಭೆ ತರುವಂಥದ್ದಲ್ಲ. ಬಸವಣ್ಣನವರ ತತ್ವಗಳನ್ನು ಜಗತ್ತೇ ಅನುಸರಿಸುತ್ತಿರುವ ಸಂದರ್ಭದಲ್ಲಿ ಯತ್ನಾಳ ಅವರಿಗೆ ಬಸವಣ್ಣನವರ ಚರಿತ್ರೆ, ಸಿದ್ಧಾಂತಗಳು ಸರಿಯಾಗಿ ಗೊತ್ತಿಲ್ಲದಿರುವುದು ವಿಷಾದನೀಯ ಸಂಗತಿ’ ಎಂದು ತಿಳಿಸಿದ್ದಾರೆ.



‘ಯತ್ನಾಳ ಅವರು ಬಸವ ಪ್ರಜ್ಞೆಯನ್ನು ಬೆಳೆಸಿಕೊಂಡು ಬಸವಣ್ಣನವರ ನಿಜವಾದ ಚರಿತ್ರೆಯ ಅಧ್ಯಯನ ಮಾಡಬೇಕು. ಬಸವಣ್ಣನವರ ಕುರಿತು ಇಲ್ಲಸಲ್ಲದ ಮಾತುಗಳನ್ನು ಆಡಿ ಜನರ ಭಾವನೆಗೆ ಧಕ್ಕೆ ಉಂಟು ಮಾಡಬಾರದು’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೀದರ್‌ನಲ್ಲಿ ನವೆಂಬರ್ 25ರಂದು ನಡೆದ ವಕ್ಫ್ ವಿರೋಧಿ ಪ್ರತಿಭಟನಾ ಸಭೆಯಲ್ಲಿ ಯತ್ನಾಳ ಅವರು, ‘ಬಸವಣ್ಣನವರಂತೆ ಹೊಳ್ಯಾಗ ಜಿಗಿಬೇಕು, ಇಲ್ಲವಾದರೆ ಸಾಬ್ರು ಆಗಿ’ ಎಂದು ನೀಡಿದ ಹೇಳಿಕೆಗೆ ವಿರೋಧ ವ್ಯಕ್ತವಾಗುತ್ತಿದೆ.

### ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಹೈಕಮಾಂಡ್ ನಿರ್ಧಾರ: ಸತೀಶ

**ಬೆಳಗಾವಿ:** ‘ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ (ಕೆಪಿಸಿಸಿ) ಅಧ್ಯಕ್ಷರ ಬದಲಾವಣೆ ಹೈಕಮಾಂಡ್ ನಿರ್ಧರಿಸುತ್ತದೆ. ಕೆಪಿಸಿಸಿಗೆ ಪೂರ್ಣಪ್ರಮಾಣದ ಅಧ್ಯಕ್ಷ ಬೇಕು. ಮತ ಸೆಳೆಯುವವರು ಅಧ್ಯಕ್ಷರಾದರೆ ಮಾತ್ರ 2028ರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯ’ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆ ನಡೆದಿದೆ. ದೆಹಲಿಗೆ ಹೋಗಿ ಬಂದ ಬಳಿಕ ಈ ಬಗ್ಗೆ ಸುಳಿವು ಸಿಗಬಹುದು. ಚಳಿಗಾಲದ ಅಧಿವೇಶನದ ನಂತರ ದೆಹಲಿಗೆ ಹೋಗುವೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೆಪಿಸಿಸಿ ಅಧ್ಯಕ್ಷರಾಗುವುದು ಸಾಮಾನ್ಯವಲ್ಲ. ಹೈಕಮಾಂಡ್ ಸೂಚನೆ ಬಂದ ಬಳಿಕ ಇದರ ಬಗ್ಗೆ ಚರ್ಚಿಸಬೇಕು. ಚರ್ಚೆಯ ನೇತೃತ್ವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಹಿಸಬೇಕು. ಅಧ್ಯಕ್ಷರ ಸ್ಥಾನಕ್ಕೆ ನಾಲ್ಕಾರು ಜನ ಸ್ಪರ್ಧೆಯಲ್ಲಿದ್ದಾರೆ’ ಎಂದರು.

ಮೈಸೂರಿನಲ್ಲಿ ವಿಜಯೇಂದ್ರ ಬೆಂಬಲಿತ ಮಾಜಿ ಸಚಿವರು–ಶಾಸಕರ ಚರ್ಚೆ • ಮುರುಡೇಶ್ವರದಲ್ಲಿ ಮುಂದಿನ ಸಭೆ

# ‘ಯತ್ನಾಳ ಉಚ್ಚಾಟಿಸಿ ಪಕ್ಷವನ್ನು ಉಳಿಸಿ’

ಪ್ರಜಾವಾಣಿ ವಾರ್ತೆ

**ಮೈಸೂರು:** ಇಲ್ಲಿನ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಶನಿವಾರ ಪೂಜೆ ಸಲ್ಲಿಸುವ ಮೂಲಕ ಶಕ್ತಿ ಪ್ರದರ್ಶಿಸಿದ ಬಿಜೆಪಿಯ ಮಾಜಿ ಸಚಿವರು–ಮಾಜಿ ಶಾಸಕರ ತಂಡವು, ‘ಶಿಷ್ಟ ರಕ್ಷೆ–ದುಷ್ಟ ಸಂಹಾರವಾಗಲೇಬೇಕು’ ಎನ್ನುವ ಮೂಲಕ, ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಒತ್ತಾಯಿಸಿದೆ.

38 ಮುಖಂಡರಿದ್ದ ತಂಡವು ನಗರದ ಹೋಟೆಲ್‌ನಲ್ಲಿ ಸಭೆ ನಡೆಸಿ, ಯತ್ನಾಳರ ವಿರುದ್ಧದ ಹೋರಾಟಕ್ಕೆ ಅಣಿಯಾಗಲು ನಿರ್ಧರಿಸಿತು. ‘ನಮ್ಮದು ಯಾವುದೇ ಬಣವಲ್ಲ. ಬಿಜೆಪಿಗೆ ಯಡಿಯೂರಪ್ಪ–ವಿಜಯೇಂದ್ರ ಒಂದು ಶಕ್ತಿ. ಯತ್ನಾಳರದ್ದು ಗುಂಪು ಮಾತ್ರ. ಪಕ್ಷ ನಮಗೆ ತಾಯಿಯಂತೆ. ಎದುರಾಳಿಗಳ ಜೊತೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಪಕ್ಷಕ್ಕೆ ದ್ರೋಹ ಬಗೆಯುತ್ತಿರುವವರು ಹೊರಹೋಗಲೇಬೇಕು’ ಎಂದು ಆಗ್ರಹಿಸಿತು.

ಸದ್ಯದಲ್ಲೇ ಮುರುಡೇಶ್ವರದಲ್ಲಿ ಸಮಾನ ಮನಸ್ಕರ ಸಭೆ ಹಾಗೂ ನಂತರ ದಾವಣಗೆರೆಯಲ್ಲಿ 3–4 ಲಕ್ಷ ಕಾರ್ಯಕರ್ತರ ಸಮ್ಮುಖದಲ್ಲಿ ಬೃಹತ್ ಸಮಾವೇಶ ಆಯೋಜಿಸುವ ನಿರ್ಣಯವನ್ನೂ ಕೈಗೊಂಡಿತು. ನಂತರ, ಸುದ್ದಿಗೋಷ್ಠಿ ನಡೆಸಿದ ಬಿಜೆಪಿ ಮುಖಂಡರು ಯತ್ನಾಳ ವಿರುದ್ಧ ಹರಿಹಾಯ್ದರು.



ಮೈಸೂರಿನಲ್ಲಿ ಶನಿವಾರ ಬಿಜೆಪಿ ಮುಖಂಡರ ತಂಡವು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿತು. ಹರತಾಳು ಹಾಲಪ್ಪ, ವಿರೂಪಾಕ್ಷಪ್ಪ ಬಳ್ಳಾರಿ, ಎಂ.ಪಿ. ರೇಣುಕಾಚಾರ್ಯ, ಎಲ್ ನಾಗೇಂದ್ರ, ಬಿ.ಸಿ. ಪಾಟೀಲ, ಎಂ.ಡಿ. ಲಕ್ಷ್ಮಿನಾರಾಯಣ, ಕರುಣಾಕರ ರೆಡ್ಡಿ, ರೂಪಾಲಿ ನಾಯ್ಕ ಜೊತೆಗಿದ್ದರು – ಪ್ರಜಾವಾಣಿ ಚಿತ್ರ

ಬಿಜೆಪಿ ಮುಖಂಡ ಎಂ.ಪಿ. ರೇಣುಕಾಚಾರ್ಯ, ‘ಯತ್ನಾಳ ಕಾಂಗ್ರೆಸ್ ಜೊತೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಮುಡಾ ಪಾದಯಾತ್ರೆಗೂ ಬರಲಿಲ್ಲ. ಈಗ ಸಿದ್ದರಾಮಯ್ಯ ಅವರನ್ನು ಪಕ್ಷಾತೀತವಾಗಿ ಬೆಂಬಲಿಸುವುದಾಗಿ ಘೋಷಿಸಿದ್ದಾರೆ’ ಎಂದು ದೂರಿದರು.

‘ಯಡಿಯೂರಪ್ಪ ಅವರನ್ನು ಇಂತಹ ಶಕುನಿಗಳು, ಮೀರ್ ಸಾಧಕರು ಕಾಡುತ್ತಲೇ ಇದ್ದಾರೆ. ವಿಜಯೇಂದ್ರ ಅವರನ್ನು ರಾಜ್ಯ ಅಧ್ಯಕ್ಷರನ್ನಾಗಿಸಿದ್ದು ಪಕ್ಷದ ಹೈಕಮಾಂಡ್. ಹೀಗಾಗಿ, ಅವರಿಗೆ ಬೈಯ್ದರೆ ಹೈಕಮಾಂಡ್‌ಗೇ ಬೈಯ್ದಂತೆ. ಹಿಂದುತ್ವದ ಮುಖವಾಡ ಧರಿಸಿರುವ ಯತ್ನಾಳರ ಹರಕು ಬಾಯಿಯಿಂದ ಪಕ್ಷಕ್ಕೆ ಚುನಾವಣೆಯಲ್ಲಿ ಸೋಲಾಯಿತು’ ಎಂದು ಕಿಡಿಕಾರಿದರು.

**ಛೀಮಾರಿ ಹಾಕಿ:** ‘ವಿಶ್ವಗುರು ಬಸವಣ್ಣನವರನ್ನು ಅವಮಾನಿಸಿರುವ ಯತ್ನಾಳರಿಗೆ ಮಠಾಧೀಶರು ಛೀಮಾರಿ ಹಾಕಬೇಕು. ಪಕ್ಷದಿಂದ ಉಚ್ಚಾಟಿಸುವಂತೆ ಒತ್ತಾಯಿಸಬೇಕು. ಯತ್ನಾಳ ವಿರುದ್ಧ ಮಾತನಾಡಿದ್ದಕ್ಕೆ ನಿನ್ನೆಯಿಂದ ಬೆದರಿಕೆಗಳು ಬರುತ್ತಿವೆ. ನಾನು ಯಾವುದಕ್ಕೂ ಹೆದರುವುದಿಲ್ಲ’ ಎಂದರು.

ಬಿ.ಸಿ. ಪಾಟೀಲ ಮಾತನಾಡಿ, ‘ಪಕ್ಷದಲ್ಲಿ ಆಂತರಿಕ ದುಷ್ಟಶಕ್ತಿಗಳ ಕಾಟ ಶುರುವಾಗಿದೆ. ದುಷ್ಟರನ್ನು ಸಂಹರಿಸುವಂತೆ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸಿದ್ದೇವೆ. ಯತ್ನಾಳರಿಗೆ ಪ್ರಚಾರದ ಹುಚ್ಚು ಹಿಡಿದಿದ್ದು, ಪಕ್ಷದ ಬಗ್ಗೆ ಕಳಕಳಿ ಇಲ್ಲ. ಅವರನ್ನು ಹೈಕಮಾಂಡ್ ಉಚ್ಚಾಟಿಸುವುದು ಖಚಿತ’ ಎಂದರು.

## ‘ಡಿ.2ರಂದು ದೆಹಲಿಗೆ ತೆರಳಿ ವರದಿ ಸಲ್ಲಿಸುವೆ’

**ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ):** ‘ಡಿಸೆಂಬರ್ 2 ರಂದು ನಾನು, ಪ್ರತಾಪ್ ಸಿಂಹ, ಜಿ. ಎಂ. ಸಿದ್ದೇಶ್ವರ, ಕುಮಾರ ಬಂಗಾರಪ್ಪ, ಶಾಸಕ ಚಂದ್ರಪ್ಪ ಮತ್ತು ಹರೀಶ ಸೇರಿ ದೆಹಲಿಗೆ ತೆರಳಿ ವಕ್ಫ್ ಕುರಿತು ಒಂದು ಮಧ್ಯಂತರ ವರದಿ ಸಲ್ಲಿಸುತ್ತೇವೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

‘ನಮ್ಮಲ್ಲಿ ಯಾವುದೇ ಬಣವಿಲ್ಲ. ನಾವು ಕೂಡಾ ಭಾರತೀಯ ಜನತಾ ಪಕ್ಷದ ಮೂಲಕವೇ ಹೋರಾಟ ನಡೆಸಿದ್ದೇವೆ.ನಮ್ಮ ಹೋರಾಟಕ್ಕೆ ಬಹಳಷ್ಟು ಸಂಸದರು, ಶಾಸಕರು ಮತ್ತು ಅನೇಕ ಮುಖಂಡರು ಬೆಂಬಲ ನೀಡಿದ್ದಾರೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಹೋರಾಟಕ್ಕೆ ಭಾಗವಾಗಿ ಈಗಾಗಲೇ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರ ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಕರ್ನಾಟಕ ಇತರ ಭಾಗಗಳಿಗೂ ಭೇಟಿ ನೀಡುತ್ತೇವೆ. ನಮ್ಮ ಹೋರಾಟ ವಕ್ಫ್ ವಿರುದ್ಧ ಇದೆಯೇ ಹೊರತು ಯಾವುದೇ ಪಕ್ಷದ ವಿರುದ್ಧ ಅಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

ಬಸವಣ್ಣನವರ ಕುರಿತು ನೀಡಿದ ಹೇಳಿಕೆಯ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ಕುರಿತು ಸಮಗ್ರ ಚರ್ಚೆಯಾಗಬೇಕು. ಮುಚ್ಚಿಟ್ಟ ವಿಷಯದ ಕುರಿತು ಚರ್ಚೆ ನಡೆಯಬೇಕು. ಬಾಬಾಸಾಹೇಬ ಅಂಬೇಡ್ಕರ್ ವಿಷಯ ಕುರಿತು ದೇಶದಲ್ಲಿ ಚರ್ಚೆ ಆಗಿದೆಯೇ? ಅಂಬೇಡ್ಕರ್ ಅವರ ಅಂತ್ಯಕ್ರಿಯೆಗೆ ದೆಹಲಿಯಲ್ಲಿ ನೂರು ಅಡಿ ಸ್ಥಳ ನೀಡಲಾರದವರು ನಮಗೆ ಹೇಳುವ ನೈತಿಕತೆಯೇ ಇಲ್ಲ. ಅಂದು ಅಂಬೇಡ್ಕರ್ ಅವರಿಗೆ ಭಾರತ ರತ್ನ ಕೊಡಲಿಲ್ಲ. ಮೊರಾರ್ಜಿ ದೇಸಾಯಿ ಸರ್ಕಾರ ಅವರಿಗ ಭಾರತ ರತ್ನ ನೀಡಿತು’ ಎಂದರು.

‘ಸನಾತನಿಗಳನ್ನು ನಾವು ಓಲೈಸುತ್ತಿಲ್ಲ. ಸನಾತನ ಧರ್ಮ ನಮ್ಮ ದೇಶದ ಸಂಸ್ಕೃತಿ. ಸನಾತನ ಬಿಟ್ಟು ನಾವು ಯಾರು ಇಲ್ಲ. ನಮ್ಮ ಭೂಮಿಯಲ್ಲೇ ಸನಾತನವಿದೆ. ನಾವು ಬಸವಣ್ಣನವರ ಪರ ಇದ್ದೇವೆ. ನಾವು ಬಸವಣ್ಣನವರ ವಿಚಾರಗಳಲ್ಲಿ ಇದ್ದೇವೆ. ಬಾಬಾಸಾಹೇಬ್ ಅಂಬೇಡ್ಕರ್ ನಮ್ಮ ಆದರ್ಶ ಪುರುಷ’ ಎಂದು ಯತ್ನಾಳ ತಿಳಿಸಿದರು. ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತು ಕುಮಾರ ಬಂಗಾರಪ್ಪ ಇದ್ದರು.

## ಗೊಂದಲ ಸೃಷ್ಟಿಕರ್ತರಿಗೆ ಹಾಸನ ಸಮಾವೇಶದಲ್ಲಿ ಉತ್ತರ: ಎಚ್ಕೆ



ಎಚ್‌.ಕೆ.ಪಾಟೀಲ

**ಹುಬ್ಬಳ್ಳಿ:** ‘ವಕ್ಫ್ ವಿರುದ್ಧ ಸುಳ್ಳು ಪ್ರಚಾರ ಮಾಡುವುದರ ಜೊತೆಗೆ ಸಂವಿಧಾನ ತಿದ್ದುಪಡಿ ಹೇಳಿಕೆ ಮೂಲಕ ದೇಶದಲ್ಲಿ ಗೊಂದಲ ಸೃಷ್ಟಿಸುತ್ತಿರುವವರಿಗೆ ಹಾಸನ ಸಮಾವೇಶದಲ್ಲಿ ಸೂಕ್ತ ಉತ್ತರ ನೀಡಲಾಗುವುದು’ ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ ಹೇಳಿದರು.

‘ಹಾಸನ ಸಮಾವೇಶದ ಕುರಿತು ಬಂದಿರುವ ಅನಾಮಧೇಯ ಪತ್ರದಲ್ಲಿನ ವಿಷಯವನ್ನು ನಾನು ಒಪ್ಪುವುದಿಲ್ಲ. ಕಾಂಗ್ರೆಸ್ ವತಿಯಿಂದ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಗುವುದು. ಪಕ್ಷದಲ್ಲಿ ಮೂಲ ಕಾಂಗ್ರೆಸ್‌ನವರು ಮತ್ತು ಹೊರಗಿನವರು ಎಂಬ ಭೇದ, ಸ್ವಪ್ರತಿಷ್ಠೆ ಇಲ್ಲ. ಸರ್ಕಾರವನ್ನು ಅಭದ್ರಗೊಳಿಸಲು ಯಾರಾದರೂ ಯತ್ನಿಸಿದರೆ, ಅದಕ್ಕೆ ಎಲ್ಲರೂ ಸೇರಿ ತಕ್ಕ ಉತ್ತರ ನೀಡುತ್ತೇವೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಪರ ಮಾತನಾಡಿದ್ದಾರೆ ಎಂಬ ಕಾರಣಕ್ಕೆ ಬಿಜೆಪಿಯವರು ಯತ್ನಾಳ ವಿರುದ್ಧ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ಇದು ಸರಿಯಲ್ಲ’ ಎಂದು ಹೇಳಿದರು.

‘ಸಿದ್ದರಾಮಯ್ಯ ಅವರು ಐದು ವರ್ಷ ಅಧಿಕಾರದಲ್ಲಿ ಇರುತ್ತಾರೋ, ಇಲ್ವೊ ಗೊತ್ತಿಲ್ಲ’ ಎಂಬ ಶಾಸಕ ಬಿ.ಆರ್.ಪಾಟೀಲ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಅವರು ಪ್ರಬುದ್ಧ ರಾಜಕಾರಣಿ. ಅವರ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ’ ಎಂದರು.

## ಸಮಾವೇಶ: ಸಭೆ ಕರೆದ ಡಿಕೆಶಿ

**ಬೆಂಗಳೂರು:** ಹಾಸನದಲ್ಲಿ ಡಿ. 5ರಂದು ನಡೆಯಲಿರುವ ಪಕ್ಷದ ಸಮಾವೇಶದ ಕುರಿತು ಚರ್ಚಿಸಲು ಮೈಸೂರು ಭಾಗದ ಜಿಲ್ಲೆಗಳ ಕಾಂಗ್ರೆಸ್ ಮುಖಂಡರ ಸಭೆ ಭಾನುವಾರ (ಡಿ. 1) ಕೆಪಿಸಿಸಿ ಕಚೇರಿಯಲ್ಲಿ ನಡೆಯಲಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11 ಗಂಟೆಗೆ ಈ ಸಭೆ ನಡೆಯಲಿದೆ. ಕೆಪಿಸಿಸಿ ಕಾರ್ಯಾಧ್ಯಕ್ಷರು, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಉಸ್ತುವಾರಿ ಸಚಿವರು, ಸಚಿವರು, ಸಂಸದರು, ಶಾಸಕರು, 2024ರ ಲೋಕಸಭೆ ಮತ್ತು 2023ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು, ಜಿಲ್ಲಾ ಘಟಕಗಳ ಅಧ್ಯಕ್ಷರು, ಕೆಪಿಸಿಸಿ ಉಸ್ತುವಾರಿ ಪದಾಧಿಕಾರಿಗಳು ಮತ್ತು ಪಕ್ಷದ ಮುಂಚೂಣಿ ಘಟಕಗಳ ಅಧ್ಯಕ್ಷರನ್ನು ಈ ಸಭೆಗೆ ಆಹ್ವಾನಿಸಲಾಗಿದೆ.

## ಗುರಪ್ಪ ನಾಯ್ಡು ಉಚ್ಚಾಟನೆ

**ಬೆಂಗಳೂರು:** ಲೈಂಗಿಕ ಕಿರುಕುಳ ಪ್ರಕರಣದ ಆರೋಪ ಎದುರಿಸುತ್ತಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ. ಗುರಪ್ಪ ನಾಯ್ಡು ಅವರನ್ನು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಅವಧಿಗೆ ಉಚ್ಚಾಟಿಸಲಾಗಿದೆ.

ಲೈಂಗಿಕ ಕಿರುಕುಳ ಮತ್ತು ಮಹಿಳೆಯೊಬ್ಬರ ಗೌರವಕ್ಕೆ ಧಕ್ಕೆ ತಂದ ಆರೋಪದಡಿ ಗುರಪ್ಪ ನಾಯ್ಡು ವಿರುದ್ಧ ಚೆನ್ನಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಾಯ್ಡು ಅವರನ್ನು ಉಚ್ಚಾಟಿಸಿರುವ ಕುರಿತಂತೆ ಕೆಪಿಸಿಸಿ ಶಿಸ್ತು ಕ್ರಮ ಸಮಿತಿ ಅಧ್ಯಕ್ಷ ಕೆ. ರೆಹಮಾನ್ ಖಾನ್ ಅವರು ಪ್ರಕಟಣೆ ಹೊರಡಿಸಿದ್ದಾರೆ.

# ವಕ್ಫ್ ಹೋರಾಟಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

**ವಿಜಯಪುರ:** ಬೀದರ್‌ನಿಂದ ಚಾಮರಾಜನಗರವರೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ನಡೆದಿರುವ ವಕ್ಫ್ ವಿರೋಧಿ ಜನಜಾಗೃತಿ ಜಾಥಾಕ್ಕೆ ಯತ್ನಾಳ ಅವರ ಸ್ವಕ್ಷೇತ್ರ ವಿಜಯಪುರದಲ್ಲೇ ತೀವ್ರ ವಿರೋಧ ವ್ಯಕ್ತವಾಗಿದೆ.

‘ಯತ್ನಾಳ ನಡೆಸುತ್ತಿರುವುದು ವಕ್ಫ್ ವಿರೋಧಿ ಜಾಥಾ ಅಲ್ಲ. ಕಾಂಗ್ರೆಸ್‌ನಿಂದ ಸುಪಾರಿ ಪಡೆದು ಬಿಜೆಪಿ ಮುಗಿಸಲು ಮಾಡುತ್ತಿರುವ ಜಾಥಾ. ವಿಜಯಪುರ ಜಿಲ್ಲೆ ಪ್ರವೇಶಿಸಿದರೆ, ತಡೆಯುತ್ತೇವೆ’ ಎಂದು ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಸುರೇಶ ಬಿರಾದಾರ ಮತ್ತು ರಾಜ್ಯ ಎಸ್.ಸಿ. ಮೋರ್ಚಾ ಉಪಾಧ್ಯಕ್ಷ ಗೋಪಾಲ ಘಟಕಾಂಬಳೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಕಾಂಗ್ರೆಸ್ ಏಜೆಂಟ್ ಆಗಿ ಬಿಜೆಪಿಯನ್ನು ದುರ್ಬಲಗೊಳಿಸುವ ಕಾರ್ಯದಲ್ಲಿ ತೊಡಗಿರುವ ಯತ್ನಾಳ ಅವರನ್ನು ಬಿಜೆಪಿ ವರಿಷ್ಠರು ತಕ್ಷಣ ಪಕ್ಷದಿಂದ ವಜಾ ಮಾಡಬೇಕು’ ಎಂದು ಅವರು ಆಗ್ರಹಿಸಿದರು.

**ಎಂ.ಬಿ.ಪಾಟೀಲ ಭಿಕ್ಷೆ:** ‘ಕಾಂಗ್ರೆಸ್ ಭಿಕ್ಷೆಯಿಂದ ವಿಜಯೇಂದ್ರ ಶಿಕಾರಿಪುರ ಶಾಸಕರಾಗಿದ್ದಾರೆ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಯನ್ನು ಪ್ರಸ್ತಾಪಿಸಿ ಪದೇ ಪದೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನು ಅವಮಾನಿಸುತ್ತಿರುವ ಯತ್ನಾಳ ಅವರು ವಿಜಯಪುರದಲ್ಲಿ ಸಚಿವ ಎಂ.ಬಿ.ಪಾಟೀಲ ನೀಡಿರುವ ಭಿಕ್ಷೆಯಿಂದ ಶಾಸಕರಾಗಿದ್ದಾರೆ ಎಂಬುದನ್ನು ಮರೆಯಬಾರದು’ ಎಂದರು.



ಯತ್ನಾಳ ಎಂದೂ ಪಕ್ಷ ನಿಷ್ಠ ಅಲ್ಲ. ಪಂಚಮಸಾಲಿ ಸಮಾಜದ ಹೆಸರಲ್ಲಿ ಬಿಜೆಪಿ ಹೈಕಮಾಂಡ್‌ಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಪಕ್ಷಕ್ಕೆ ಯತ್ನಾಳ ಅಗತ್ಯವಿಲ್ಲ

**ಸುರೇಶ ಬಿರಾದಾರ**

ರಾಜ್ಯ ಕಾರ್ಯಕಾರಣಿ ಸದಸ್ಯ, ಬಿಜೆಪಿ



ಯತ್ನಾಳ ಹಿಂದೂ ಹುಲಿ ಅಲ್ಲ, ಈದ್ಗಾ ಹುಲಿ, ಸರ್ಕಸ್ ಹುಲಿ. ಅವರಿಂದ ಪಕ್ಷಕ್ಕೆ ಯಾವ ಕೊಡುಗೆ ಇಲ್ಲ, ಬಿಜೆಪಿ ಅಧಿಕಾರಕ್ಕೆ ಬರಲು ಮೊದಲು ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು

**ಗೋಪಾಲ ಘಟಕಾಂಬಳೆ**

ಉಪಾಧ್ಯಕ್ಷ, ರಾಜ್ಯ ಬಿಜೆಪಿ ಎಸ್.ಸಿ.ಮೋರ್ಚಾ

‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ವಕ್ಫ್ ವಿರೋಧಿ ಹೋರಾಟದ ಲಾಭ ಪಡೆಯಲು ಯತ್ನಾಳ ಹವಣಿಸುತ್ತಿದ್ದಾರೆ. ಹೋರಾಟ ರಾಜಕೀಯಕರಣ ಮಾಡುತ್ತಿದ್ದಾರೆ. ಕಾಂಗ್ರೆಸ್ ದೂಷಿಸುವ ಬದಲು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿ ಬಿಜೆಪಿ ನಾಯಕರ ವಿರುದ್ಧ ವಂಶವಾದ, ಭ್ರಷ್ಟಾಚಾರದ ಆರೋಪ ಮಾಡಿ, ಟೀಕಾ ಪ್ರಹಾರ ನಡೆಸುತ್ತಿರುವುದು ಖಂಡನೀಯ’ ಎಂದು ಹೇಳಿದರು.

‘ತಮ್ಮ ರಾಜಕೀಯ ಅನುಕೂಲಕ್ಕೆ ಯತ್ನಾಳ ಒಮ್ಮೆ ಹಿಂದುತ್ವ, ಇನ್ನೊಮ್ಮೆ ಪಂಚಮಸಾಲಿ ಹೋರಾಟ ಮಾಡುತ್ತಾರೆ. ಸಮಯ ಬಂದಾಗ ಮಸೀದಿಗೆ ಹೋಗಿ ಟೊಪ್ಪಿ ಹಾಕುತ್ತಾರೆ. ಈ ಹಿಂದೆ ಪ್ರಧಾನಿ ಮೋದಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿ.ಎಲ್.ಸಂತೋಷ, ಜಗದೀಶ ಶೆಟ್ಟರ್, ಯಡಿಯೂರಪ್ಪ ಅವರನ್ನು ಬಿಡದೇ ಟೀಕಿಸಿದ್ದಾರೆ. ಹೊಂದಾಣಿಕೆ ರಾಜಕಾರಣದ ಬಗ್ಗೆ ಡೋಂಗಿ ಮಾತನಾಡುವ ಯತ್ನಾಳ ವಿಜಯಪುರದಲ್ಲಿ ಕಾಂಗ್ರೆಸ್ ನಾಯಕರ ಜೊತೆ ಹೊಂದಾಣಿಕೆ ಮಾಡಿಕೊಂಡಿರುವುದು ಎಲ್ಲರಿಗೂ ತಿಳಿದಿದೆ’ ಎಂದು ಆರೋಪಿಸಿದರು.



## ಬದುಕಿಗೆ ಬಣ್ಣ...

ಕಲಬುರಗಿಯ ಶರಣ ಬಸವೇಶ್ವರ ಜಾತ್ರಾ ಮೈದಾನದಲ್ಲಿ ಮಣ್ಣಿನ ಕರಕುಶಲ ವಸ್ತುಗಳು ಹಾಗೂ ಕಲಾಕೃತಿಗಳಿಗೆ ಒಡಿಶಾದ ಕಲಾವಿದ ಶನಿವಾರ ಬಣ್ಣ ಹಚ್ಚಿ ಅಂತಿಮ ಸ್ಪರ್ಶ ನೀಡಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

# ಮುನಿರತ್ನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೊಲೆ ಯತ್ನ, ಸುಪಾರಿ ಮತ್ತು ಮಹಿಳೆಯ ಮಾನಹಾನಿ ಆರೋಪದಡಿ ಶಾಸಕ ಮುನಿರತ್ನ ಅವರ ವಿರುದ್ಧ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಬಿಬಿಎಂಪಿ ಮಾಜಿ ಸದಸ್ಯೆ ಮಂಜುಳಾ ಅವರ ಪತಿ ನಾರಾಯಣಸ್ವಾಮಿ ನೀಡಿದ ದೂರಿನ ಮೇರೆಗೆ ಮುನಿರತ್ನ, ಸುನಂದಮ್ಮ, ವೆಂಕಟೇಶ್, ಲಕ್ಷ್ಮಮ್ಮ, ಜಯಮ್ಮ, ಲತಾ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಎಸ್‌ಐಟಿ ಅಧಿಕಾರಿಗಳು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ ದಿನವೇ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

‘ಪತ್ನಿ ಜತೆ ಮನೆ ದೇವರು ಕದಿರಿ ನರಸಿಂಹಸ್ವಾಮಿ ದೇವರ ದರ್ಶನಕ್ಕೆ ತೆರಳಿದ್ದ ಸಂದರ್ಭದಲ್ಲಿ ದಾರಿ ಮಧ್ಯೆ ನಮ್ಮನ್ನು ಹತ್ಯೆ ಮಾಡಲು ಮುನಿರತ್ನ ಸಂಚು ರೂಪಿಸಿದ್ದರು. ನಮ್ಮ ಕಾರು ಹಿಂಬಾಲಿಸಿ ಹಂತಕರಿಗೆ ಮಾಹಿತಿ ನೀಡಲು ಅಂದಿನ ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ್ ಸಿದ್ದೇಗೌಡ ಅವರನ್ನು ನಿಯೋಜಿಸಿದ್ದರು. ಇನ್‌ಸ್ಪೆಕ್ಟರ್ ಐಯ್ಯಣ್ಣ ರೆಡ್ಡಿ ಅವರು ನನ್ನ ಪ್ರವಾಸದ ಮಾಹಿತಿ ಅನ್ನು ಸಂತೋಷ್‌ಗೆ ನೀಡಿದ್ದರು. ಈ ವಿಚಾರವಾಗಿ ಸಂತೋಷ್ ತಂದೆ ಸಿದ್ದೇಗೌಡ ಅವರು ಮುನಿರತ್ನ ಜತೆ ಜಗಳವಾಡಿದ್ದರು, ಇಂತಹ ಕೃತ್ಯಗಳಿಗೆ ಮಗನನ್ನು ಬಳಸಿಕೊಳ್ಳಬೇಡಿ ಎಂದು ಹೇಳಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.



ಮುನಿರತ್ನ

’2013ರ ಡಿಸೆಂಬರ್ ತಿಂಗಳಲ್ಲಿ ನಾನು ಯಾವುದೇ ಗಲಾಟೆ ಮಾಡದಿದ್ದರೂ ವ್ಯಾಜ್ಯ ಬಿಡಿಸಲು ಠಾಣೆಗೆ ಹೋದ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಮುನಿರತ್ನ ಜೈಲಿಗೆ ಕಳುಹಿಸಿದ್ದರು. ಶಾಸಕರ ಸೂಚನೆಯಂತೆ ಪೊಲೀಸ್ ಸಿಬ್ಬಂದಿ ನನ್ನನ್ನು ಥಳಿಸಿ, ವಿವಸ್ತ್ರಗೊಳಿಸಿ ಚಿತ್ರ ಹಿಂಸೆ ನೀಡಿದರು. ಹಾಗಾಗಿ ಈ ಸುಳ್ಳು ಪ್ರಕರಣದ ಬಗ್ಗೆ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದ್ದಾರೆ. ‘ರಮೇಶ ಜಾರಕಿಹೊಳಿ ಲೈಂಗಿಕ ಹಗರಣದ ತನಿಖೆ ನಡೆಸುತ್ತಿದ್ದ ಎಸ್‌ಐಟಿ ಅಧಿಕಾರಿಗಳು ನನ್ನ ಸ್ನೇಹಿತ ಅರುಣ್ ಅವರನ್ನು ಅಕ್ರಮವಾಗಿ ಬಂಧಿಸಿ, ನನ್ನ ಮತ್ತು ಪತ್ನಿಗೆ ಸಂಬಂಧಿಸಿದ ಅಶ್ಲೀಲ ವಿಡಿಯೊಗಳನ್ನು ಮುನಿರತ್ನ ಅವರಿಗೆ ನೀಡುವಂತೆ ಒತ್ತಾಯಿಸಿದ್ದರು. ಇಲ್ಲವಾದರೆ ಈ ಹಗರಣದಲ್ಲಿ ಸಿಲುಕಿಸುವುದಾಗಿ ಬೆದರಿಕೆ ಹಾಕಿದ್ದರು’ ಎಂದು ಆರೋಪಿಸಿದ್ದಾರೆ.

## ‘ಗೌಡರ ಮಕ್ಕಳು ರಣಧೀರರು’

ಪ್ರಜಾವಾಣಿ ವಾರ್ತೆ

**ಚನ್ನಪಟ್ಟಣ (ರಾಮನಗರ):** ‘ನಾವು ರಣಹೇಡಿಗಳಲ್ಲ, ರಣಧೀರರು. ದೇವೇಗೌಡರ ಕುಟುಂಬ ಯಾವಾಗಲೂ ರಣಧೀರರ ರೀತಿ ಹೋರಾಟ ಮಾಡುತ್ತದೆ. ಕಾರ್ಯಕರ್ತರಿಗಾಗಿ ನಿಖಿಲ್ ರಣಧೀರನಾಗಿ ಹೋರಾಡಿ ತಲೆ ಕೊಟ್ಟಿದ್ದಾನೆ. ನಮ್ಮ ಪಕ್ಷವನ್ನು ಮುಗಿಸಲು ಮತ್ತು ರಾಮನಗರ ಜಿಲ್ಲೆಯಿಂದ ಖಾಲಿ ಮಾಡಿಸಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಹಾಗೂ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ತಾಲ್ಲೂಕಿನ ಕೂಡ್ಲೂರಿನ ರೆಸಾರ್ಟ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮತದಾರರ ಕೃತಜ್ಞತಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಒಕ್ಕಲಿಗ ಸಮುದಾಯದ ನಮ್ಮೊಂದಿಗಿದ್ದು, ನಮ್ಮ ಪಕ್ಷವನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮ ಪಕ್ಷ ಉಳಿದಿರುವುದೇ ಒಕ್ಕಲಿಗ ಸಮಾಜದಿಂದ’ ಎಂದು ಹೇಳಿದರು.

‘ಮಂಡ್ಯದಲ್ಲಿ ನಾನು ಗೆಲ್ಲಲು ಒಕ್ಕಲಿಗರೇ ಕಾರಣ. ದೇವೇಗೌಡರಿಗೆ ರಾಜಕೀಯ ಶಕ್ತಿ ನೀಡಿ ಮುಖ್ಯಮಂತ್ರಿ ಮತ್ತು ಪ್ರಧಾನಿ ಹುದ್ದೇಗೇರಿಸಿದ್ದು ಒಕ್ಕಲಿಗ ಸಮುದಾಯ’ ಎಂದರು.

ರಾಜ್ಯದಲ್ಲಿ 100 ಕಾಂಗ್ರೆಸ್ ಭವನ • ರಾಹುಲ್ ಸೂಚನೆ ಪಾಲಿಸಲು ನಿರಾಸಕ್ತಿ

# ಸ್ಪಂದಿಸದ ಸಚಿವರು: ವರದಿ ಕೇಳಿದ ವರಿಷ್ಠರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಎಐಸಿಸಿ ಅಧಿವೇಶನಕ್ಕೆ 100 ವರ್ಷ ತುಂಬಿದ ನೆನಪಿಗಾಗಿ ರಾಜ್ಯದ 100 ಕಡೆ ಕಾಂಗ್ರೆಸ್ ಭವನ ನಿರ್ಮಿಸಬೇಕೆಂಬ ರಾಹುಲ್ ಗಾಂಧಿ ಸೂಚನೆಗೆ ಸ್ಪಂದಿಸದ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಪಕ್ಷದ ಶಾಸಕರ ಪಟ್ಟಿಯನ್ನು ವಾರದೊಳಗೆ ನೀಡುವಂತೆ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಪಕ್ಷ ಸಂಘಟನೆಯ ದೃಷ್ಟಿಯಿಂದ ಎಲ್ಲ 31 ಜಿಲ್ಲೆಗಳ ವ್ಯಾಪ್ತಿಯಲ್ಲಿ ಜಿಲ್ಲಾಮಟ್ಟ ಅಥವಾ ವಿಧಾನಸಭೆ ಕ್ಷೇತ್ರವಾರು ಸೇರಿ ಒಟ್ಟು 100 ಕಾಂಗ್ರೆಸ್ ಕಚೇರಿಗಳಿಗೆ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳುವಂತೆ ಸಚಿವರು ಮತ್ತು ಶಾಸಕರಿಗೆ ಎಐಸಿಸಿ ಮತ್ತು ಕೆಪಿಸಿಸಿ ಎರಡು ತಿಂಗಳ ಹಿಂದೆಯೇ ಸೂಚನೆ ನೀಡಿತ್ತು. ಆದರೆ, ಕೆಲವು ಉಸ್ತುವಾರಿ ಸಚಿವರು ಮತ್ತು ಶಾಸಕರು ಈ ವಿಚಾರದಲ್ಲಿ ನಿರಾಸಕ್ತಿ ಹೊಂದಿರುವುದನ್ನು ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಪಕ್ಷವನ್ನು ತಳಮಟ್ಟದಿಂದ ಪುನರ್ ಸಂಘಟಿಸಿ ಬಲಿಷ್ಠಗೊಳಿಸುವ ಉದ್ದೇಶದಿಂದ ಕಾಂಗ್ರೆಸ್ ಕಚೇರಿಗಳನ್ನು ಆರಂಭಿಸಲು ರಾಹುಲ್ ಗಾಂಧಿ ಸೂಚನೆ ನೀಡಿದ್ದರು. ಅದಕ್ಕೆ ಪೂರಕವಾಗಿ ಎಐಸಿಸಿಯಿಂದಲೂ ನಿರ್ದೇಶನ ಬಂದಿತ್ತು. ಈ ವಿಚಾರದಲ್ಲಿ ಜಿಲ್ಲಾಮಟ್ಟದಲ್ಲಿ ಉಸ್ತುವಾರಿ ಸಚಿವರು, ತಾಲ್ಲೂಕು ಮಟ್ಟದಲ್ಲಿ ಶಾಸಕರು ಮುತುವರ್ಜಿ ವಹಿಸಬೇಕು. ಸ್ವಂತ ಜಾಗ ಇಲ್ಲದೇ ಇದ್ದರೆ, ನಿವೇಶನ ಮಂಜೂರು ಮಾಡಿಸಿಕೊಂಡು ಕಟ್ಟಡ ನಿರ್ಮಿಸಬೇಕು ಎಂದು ಸೂಚನೆ ನೀಡಲಾಗಿತ್ತು. ಆದರೆ, ಕೆಲವು ಸಚಿವರು ಈ ವಿಚಾರದಲ್ಲಿ ಆಸಕ್ತಿ ತೋರಿಸದೇ ಇರುವುದು ವರಿಷ್ಠರ ಗಮನಕ್ಕೆ ಬಂದಿದೆ ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ರಾಜ್ಯ ನಾಯಕರ ಜೊತೆ ಮಲ್ಲಿಕಾರ್ಜುನ ಖರ್ಗೆ ಅವರು ಈಗಾಗಲೇ ಚರ್ಚೆ ನಡೆಸಿದ್ದಾರೆ. ಅಲ್ಲದೆ, ವಿಭಾಗವಾರು ಪಕ್ಷದ ಉಸ್ತುವಾರಿ ವಹಿಸಿರುವ ನಾಲ್ವರು ಎಐಸಿಸಿ ಕಾರ್ಯದರ್ಶಿಗಳ ಜೊತೆಯಲ್ಲೂ ಸಮಾಲೋಚನೆ ನಡೆಸಿದ್ದಾರೆ. ಅಧಿಕಾರ, ಸ್ಥಾನಮಾನ ಅನುಭವಿಸುತ್ತಿರುವ ಸಚಿವರು, ಶಾಸಕರು ಪಕ್ಷ ಸಂಘಟನೆ, ಬೆಳವಣಿಗೆಗೆ ನೀಡುವ ಕೊಡುಗೆಗಳ ಬಗ್ಗೆಯೂ ವಿಚಾರ ವಿನಿಮಯ ನಡೆಸಿದ್ದಾರೆ. ಈ ವೇಳೆ ಖರ್ಗೆ, ರಾಜ್ಯದಾದ್ಯಂತ ಪಕ್ಷದ ಕಚೇರಿ ನಿರ್ಮಿಸಬೇಕೆಂಬ ರಾಹುಲ್ ಗಾಂಧಿಯವರ ಅಭಿಲಾಷೆಗೆ ಪೂರಕವಾಗಿ ಯಾವ ಸಚಿವರು ಮತ್ತು ಶಾಸಕರು ಸ್ಪಂದಿಸುತ್ತಿಲ್ಲವೆಂಬ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವಂತೆ ಸೂಚನೆ ನೀಡಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಬೆಳಗಾವಿ ಎಐಸಿಸಿ ಅಧಿವೇಶನದ ಶತಮಾನೋತ್ಸವ ಸಂಭ್ರಮವನ್ನು ಮೆಲುಕು ಹಾಕುವ ಸಲುವಾಗಿ 2024ರ ಅ.2ರಿಂದ 2025ರ ಅ.2ರವರೆಗೆ ಶತಮಾನೋತ್ಸವ ಆಚರಣೆಯನ್ನು ಕಾಂಗ್ರೆಸ್ ಹಮ್ಮಿಕೊಂಡಿದೆ.

### ಹಾಸನ ಸಮಾವೇಶದ ಮೇಲೂ ನಿಗಾ



ಹಾಸನದಲ್ಲಿ ಡಿ. 5ರಂದು ಕಾಂಗ್ರೆಸ್ ಸಮಾವೇಶ ನಡೆಯಲಿದೆ. ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾವೇಶದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದ್ದಾರೆ. ಆದರೆ, ಕೆಲವು ಸಚಿವರು, ಶಾಸಕರು ಈ ಸಮಾವೇಶವನ್ನು ಸಾಮೂಹಿಕವಾಗಿ, ಪಕ್ಷ ಸಂಘಟನೆ ದೃಷ್ಟಿಯಿಂದ ನೋಡುವ ಬದಲು ವೈಯಕ್ತಿಕ ಪ್ರತಿಷ್ಠೆ, ಹಿತಾಸಕ್ತಿಗೆ ಒತ್ತು ನೀಡುತ್ತಿರುವ ಬಗ್ಗೆ ವರಿಷ್ಠರಿಗೆ ಮಾಹಿತಿ ರವಾನೆಯಾಗಿದೆ. ಹೀಗಾಗಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಮಾವೇಶ ಆಯೋಜಿಸುವಂತೆ ರಾಜ್ಯ ನಾಯಕರಿಗೆ ವರಿಷ್ಠರು ಈಗಾಗಲೇ ಸೂಚನೆ ನೀಡಿದ್ದಾರೆ. ಆ ಬೆನ್ನಲ್ಲೆ, ಈ ಸಮಾವೇಶ ಸಂಘಟನೆ, ಪಕ್ಷ ಮತ್ತು ಸರ್ಕಾರದ ವರ್ಚಸ್ಸಿನ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆಯೂ ರಹಸ್ಯ ವರದಿ ಪಡೆಯಲು ವರಿಷ್ಠರು ಮುಂದಾಗಿದ್ದಾರೆ ಎಂದೂ ಗೊತ್ತಾಗಿದೆ.

ಕ್ಷೀರಭಾಗ್ಯ ಯೋಜನೆ: ಹಾಲಿನ ಪುಡಿ ಅಕ್ರಮ ಮಾರಾಟ ಪ್ರಕರಣ

# 127 ಮುಖ್ಯ ಶಿಕ್ಷಕರಿಗೆ ನೋಟಿಸ್

• ಬಸವರಾಜ ಹವಾಲ್ದಾರ

**ಬಾಗಲಕೋಟೆ:** ಶಾಲಾ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯಡಿ ನೀಡಿದ್ದ ಹಾಲಿನ ಪುಡಿ ಅಕ್ರಮ ಮಾರಾಟಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಮೂರು ತಾಲ್ಲೂಕುಗಳ 127 ಮುಖ್ಯ ಶಿಕ್ಷಕರಿಗೆ ವಿವರಣೆ ಕೋರಿ ಪೊಲೀಸ್ ಇಲಾಖೆ ನೋಟಿಸ್ ಜಾರಿ ಮಾಡಿದೆ.

ತಾಲ್ಲೂಕಿನ ಸೂಳಿಕೇರಿಯ ಗೋದಾಮಿನಲ್ಲಿ ಅಕ್ಟೋಬರ್ ತಿಂಗಳಿನಲ್ಲಿ ವಶಪಡಿಸಿಕೊಂಡಿದ್ದ 44.7 ಕ್ವಿಂಟಲ್ ಹಾಲಿನ ಪುಡಿ ಪ್ರಕರಣದ ಆರೋಪಿಯು ತಾನು ಯಾವ, ಯಾವ ಶಾಲೆಗಳಿಂದ ಹಾಲಿನ ಪುಡಿ ಖರೀದಿಸುತ್ತಿದ್ದೆ ಎಂದು ನೀಡಿದ ಹೇಳಿಕೆಯನ್ನು ಆಧರಿಸಿ ಶಾಲೆಗಳಿಗೆ ನೋಟಿಸ್ ನೀಡಿ, ತನಿಖೆ ತೀವ್ರಗೊಳಿಸಲಾಗಿದೆ.

ಬಾಗಲಕೋಟೆ ಸಿಇಎನ್ ಠಾಣೆ ಪೊಲೀಸರು ಅಕ್ಟೋಬರ್ 4 ರಂದು ರಾತ್ರಿ ದಾಳಿ ನಡೆಸಿದಾಗ ₹18 ಲಕ್ಷ ಮೌಲ್ಯದ ಹಾಲಿನ ಪುಡಿ, 3.25 ಕ್ವಿಂಟಲ್ ರಾಗಿ ಹಿಟ್ಟು, 50 ಲೀಟರ್ ಅಡುಗೆ ಎಣ್ಣೆಯೊಂದಿಗೆ ಆರೋಪಿ ಸಿದ್ದಪ್ಪ ಉಕ್ಕಲಿಯನ್ನು ಬಂಧಿಸಿದ್ದರು.

ಜಿಲ್ಲೆಯ ಕೆಲ ತಾಲ್ಲೂಕುಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವ ಗುತ್ತಿಗೆದಾರನಿಂದ ಸಿದ್ದಪ್ಪ ಉಪ ಗುತ್ತಿಗೆ ಪಡೆದಿದ್ದರು. ಹಾಲಿನ ಪುಡಿ ವಿತರಣೆಗೆ ಹೋದಾಗಲೇ ಕೆ.ಜಿಗಟ್ಟಲೆ ಹಾಲಿನ ಪುಡಿಯನ್ನು ಅಲ್ಲಿಯೇ ಖರೀದಿಸಿ ವಾಪಸ್ ತರುತ್ತಿದ್ದರು.

'ವಿಚಾರಣೆ ವೇಳೆ ಆರೋಪಿ ಯಾವ, ಯಾವ ಶಾಲೆಗಳಿಂದ ಹಾಲಿನ ಪುಡಿ ಖರೀದಿ ಮಾಡುತ್ತಿದ್ದೆ ಎಂಬುದನ್ನು ತಿಳಿಸಿದ್ದು, ಆ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೀರಭಾಗ್ಯ ಯೋಜನೆಯ ಸಂಪೂರ್ಣ ವಿವರಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠ ಅಮರನಾಥ ರೆಡ್ಡಿ ತಿಳಿಸಿದರು.

**ಕೆ.ಜಿಗೆ ₹100 ಖರೀದಿ:** ಶಾಲೆಗಳಿಂದ ಹಾಲಿನ ಪುಡಿಯನ್ನು ಪ್ರತಿ ಕೆ.ಜಿಗೆ ₹100 ರಂತೆ ಖರೀದಿ ಮಾಡುತ್ತಿದ್ದೆ ಎಂದು ಆರೋಪಿ ತಿಳಿಸಿದ್ದಾರೆ. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ₹350ರಿಂದ ₹400ವರೆಗೆ ಇದ್ದು, ಅವರು ಅದನ್ನು ಮಹಾರಾಷ್ಟ್ರದಲ್ಲಿ ₹200 ರಿಂದ 250ರವರೆಗೆ ಮಾರಾಟ ಮಾಡುತ್ತಿದ್ದರು.

**ಮುಖ್ಯಾಂಶಗಳು**

- ಪ್ರತಿ ಕೆಜಿಗೆ ₹100 ಪಾವತಿ
- ಹಾಲು ಕುಡಿಯದ ಮಕ್ಕಳೂ ಲೆಕ್ಕಕ್ಕೆ
- ಶಾಲೆಗಳಿಂದಲೇ ನೇರ ಖರೀದಿ

**127ರ ಪೈಕಿ 27 ಶಾಲೆಗಳ ಮುಖ್ಯ ಶಿಕ್ಷಕರು ಹಾಜರಾಗಿ ಸ್ಟಾಕ್ ಬುಕ್ ಸಲ್ಲಿಕೆ ಮಾಡಿದ್ದಾರೆ. ಉಳಿದವರೂ ನೀಡಿದ ನಂತರ ಪರಿಶೀಲಿಸಿ, ಕ್ರಮಕೈಗೊಳ್ಳಲಾಗುವುದು**

**ಅಮರನಾಥ ರೆಡ್ಡಿ,** ಜಿಲ್ಲಾ ಪೊಲೀಸ್ ವರಿಷ್ಠ, ಬಾಗಲಕೋಟೆ

**ನೀರು ಹಾಲು, ಪುಡಿ ಉಳಿಕೆ**

ಶಾಲೆಗೆ ಬರುವ ಮಕ್ಕಳಲ್ಲಿ ಹಲವರು ಹಾಲು ಕುಡಿಯುವುದಿಲ್ಲ. ಆದರೆ, ಹಾಲು ಕುಡಿಯುವ ಮಕ್ಕಳ ಸಂಖ್ಯೆಯನ್ನು ನಮೂದಿಸುವಾಗ ಹಾಜರಾದ ಎಲ್ಲ ಮಕ್ಕಳ ಸಂಖ್ಯೆಯನ್ನು ತೋರಿಸಲಾಗುತ್ತದೆ. ಜೊತೆಗೆ, ಪ್ರತಿ ಮಗುವಿಗೆ ನೀಡುವ ಹಾಲು ತಯಾರಿಕೆಗೆ ಬಳಸಬೇಕಿರುವ ಹಾಲಿನ ಪುಡಿ ಪ್ರಮಾಣವನ್ನೂ ಕಡಿಮೆಗೊಳಿಸಿ, ನೀರು ಹಾಲು ನೀಡಲಾಗುತ್ತದೆ. ಇದರಿಂದ ನಿತ್ಯವೂ ಪುಡಿ ಹೆಚ್ಚುವರಿಯಾಗಿ ಉಳಿಯುತ್ತದೆ ಎನ್ನಲಾಗಿದೆ.

# ಕಂಡಾಯ ಹೊತ್ತ ದಲಿತ ನೀಲಗಾರರು


## ಕೊಳ್ಳೇಗಾಲ: ಸಿದ್ದಯ್ಯನಪುರದ ಕುರುಬನ ಕಟ್ಟೆಯಲ್ಲಿ ಸಮಾನತೆಯ ಸಂದೇಶ

ಪ್ರಜಾವಾಣಿ ವಾರ್ತೆ

**ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ):** ತಾಲ್ಲೂಕಿನ ಸಿದ್ದಯ್ಯನಪುರದಲ್ಲಿ ದಲಿತ ನೀಲಗಾರರು ಮೊದಲ ಬಾರಿಗೆ ಕಂಡಾಯ ಹೊರುವ ಮೂಲಕ ಸಮಾನತೆಯ ಸಂದೇಶ ಸಾರಿದರು. ಇದೇ ಕಾರಣಕ್ಕೆ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಪ್ರತಿ ಮನೆಯಲ್ಲೂ ಸಿಹಿ ತಿಂಡಿ ತಿನಿಸುಗಳನ್ನು ಮಾಡಿ ಕಂಡಾಯದ ಹಬ್ಬವನ್ನು ಆಚರಿಸಿದರು.

'ಕುರುಬರು, ನಾಯಕರು ಮತ್ತು ಲಿಂಗಾಯತ ಸಮುದಾಯದವರಷ್ಟೇ ಕಂಡಾಯ ಹೊರುತ್ತಿದ್ದರು. ದಲಿತರು ಕಂಡಾಯ ಹೊರುವ ಪದ್ಧತಿ ಇರಲಿಲ್ಲ. ಈ ಕುರಿತು ಹಲವು ಬಾರಿ ದಲಿತ ಮುಖಂಡರು, ಜನಪ್ರತಿನಿಧಿಗಳು ಚರ್ಚಿಸಿದ್ದರು. ಅಕ್ಟೋಬರ್‌ನಲ್ಲಿ ಮತ್ತೆ ಕುರುಬನ ಕಟ್ಟೆಯಲ್ಲಿ ಸಭೆ ಸೇರಿ, ಧರ್ಮಾಧಿಕಾರಿ ವರುಣರಾಜೇ ಅರಸ್ ಸಮ್ಮುಖದಲ್ಲಿ ಚರ್ಚಿಸಿದರು. ದಲಿತ ನೀಲಗಾರರಿಗೂ ಕುರುಬನ ಕಟ್ಟೆ, ಕಂಡಾಯಗಳನ್ನು ಹೊರಲು ಅವಕಾಶ ಕಲ್ಪಿಸಿ ಎಂದು ಪಟ್ಟು ಹಿಡಿದರು. ಅದಕ್ಕೆ ಸಮ್ಮತಿಯೂ ಸಿಕ್ಕಿತು' ಎಂದು ಮುಖಂಡರು ತಿಳಿಸಿದರು.

ಸಿದ್ದಯ್ಯನಪುರ ಗ್ರಾಮ ಪಂಚಾಯಿತಿ ಸದಸ್ಯ ಮುರಳೀಧರ ಅವರ ಮನೆಗೆ ಕುರುಬನಕಟ್ಟೆ ಕಂಡಾಯಗಳನ್ನು ಕಳುಹಿಸಲಾಯಿತು. ಗ್ರಾಮದ ಸಮೀಪದಲ್ಲಿರುವ ಬ್ರಹ್ಮೇಶ್ವರ ದೇವಸ್ಥಾನದಲ್ಲಿ ಕಂಡಾಯಗಳನ್ನು ಶುಕ್ರವಾರ ಹೂವುಗಳಿಂದ ಅಲಂಕರಿಸಿ, ವಾದ್ಯಗೋಷ್ಠಿ ಗಳೊಂದಿಗೆ ಗ್ರಾಮದ ಸಿದ್ದಪ್ಪಾಜಿ ದೇವಸ್ಥಾನಕ್ಕೆ ತರಲಾಯಿತು. ಬಳಿಕ ಗ್ರಾಮದ ದಲಿತ ನೀಲಗಾರರು ಕಂಡಾಯಗಳನ್ನು ಹೊತ್ತು ಬೀದಿಗಳಲ್ಲಿ ತೆರಳಿದರು.ಮಹಿಳೆಯರು ಮನೆಮನೆಗೂ ಹಣ್ಣು, ಕಾಯಿ ಸಲ್ಲಿಸಿ ಪೂಜೆ ಮಾಡಿಸಿದರು.



ಕೊಳ್ಳೇಗಾಲ ತಾಲ್ಲೂಕಿನ ಸಿದ್ದಯ್ಯನಪುರದಲ್ಲಿ ದಲಿತ ನೀಲಗಾರರು ಕಂಡಾಯ ಹೊರುವ ಮೂಲಕ ಸಮಾನತೆಯ ಸಂದೇಶ ಸಾರಿದರು

**ನಿಧನ ವಾರ್ತೆ**

## ಜಾತವೇದ ಶಿವಾಚಾರ್ಯ

**ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ):** ಕೂಡಲಸಂಗಮ ಸಾರಂಗಮಠದ ಅಭಿನವ ಜಾತವೇದ ಶಿವಾಚಾರ್ಯ ಸ್ವಾಮೀಜಿ (44) ಶನಿವಾರ ಲಿಂಗೈಕ್ಯರಾದರು. 2006ರಿಂದ ಸಾರಂಗಮಠದ ಪೀಠಾಧಿಪತಿ ಆಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದರು.



'ಸ್ವಾಮೀಜಿ ಅವರ ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ 11ಕ್ಕೆ ಸಾರಂಗಮಠದ ಆವರಣದಲ್ಲಿ ಉಜ್ಜಯನಿ ಸದ್ಧರ್ಮ ಪೀಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿಯವರ ನೇತೃತ್ವದಲ್ಲಿ ವಿವಿಧ ಮಠಾಧೀಶರು ಮತ್ತು ಭಕ್ತರ ಸಮ್ಮುಖದಲ್ಲಿ ನಡೆಯಲಿದೆ' ಎಂದು ಮಠದ ಆಡಳಿತಾಧಿಕಾರಿ ತಿಳಿಸಿದ್ದಾರೆ.

## ಮಲ್ಲಣ್ಣ ನಾಗರಾಳ

**ಹುನಗುಂದ (ಬಾಗಲಕೋಟೆ ಜಿಲ್ಲೆ):** ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಕೃಷಿ ತಜ್ಞ ಮಲ್ಲಣ್ಣ ನಾಗರಾಳ (74) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ.



ಮಲ್ಲಣ್ಣ ಅವರು ದೇಶಿ ಪದ್ಧತಿಯಲ್ಲಿ ನೀರಿನ ನಿರ್ವಹಣೆ ಕುರಿತು ಪಾಂಡಿತ್ಯ ಹೊಂದಿದ್ದರು. ಹೊಲಗಳಲ್ಲಿ ಒಡ್ಡು, ಗುಂಡಾವರ್ತಿ, ಕೃಷಿ ಹೊಂಡ ಹಾಗೂ ಸಣ್ಣಕೆರೆಗಳನ್ನು ನಿರ್ಮಿಸುವ ಮೂಲಕ ಭೂಮಿಯಲ್ಲಿ ನೀರನ್ನು ಇಂಗಿಸುತ್ತಾ ಜಲ ಮರುಪೂರಣ ಮಾಡಿಕೊಳ್ಳುವ ಮೂಲಕ ಬರದಲ್ಲಿಯೂ ಕೂಡ ಬಂಪರ್ ಇಳುವರಿ ಪಡೆಯಬಹುದು ಎಂಬುದನ್ನು ತೋರಿಸಿ ಕೊಟ್ಟವರು ಮಲ್ಲಣ್ಣ.

ಕೃಷಿ ಮತ್ತು ಜಲಕ್ಕೆ ಸಂಬಂಧಿಸಿದಂತೆ ಜನಪದ ಶೈಲಿಯಲ್ಲಿ ಹಲವು ಗೀತೆಗಳನ್ನು ರಚಿಸಿದ್ದರು. ಮಲ್ಲಣ್ಣ ನಾಗರಾಳ ಅವರ ಕೃಷಿ ಮತ್ತು ಜಲ ಚಟುವಟಿಕೆಗಳನ್ನು ಗಮನಿಸಿ 2006ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಹಾಗೂ 2015ರಲ್ಲಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಇದರೊಂದಿಗೆ ಮಠ, ಮಂದಿರಗಳು ಹಾಗೂ ಸಂಘ ಸಂಸ್ಥೆಗಳ ಹಲವು ಪ್ರಶಸ್ತಿಗಳಿಗೆ ಪಾತ್ರರಾಗಿದ್ದರು.

# ಗರ್ಭಕೋಶಕ್ಕೆ ಕತ್ತರಿ ಬೇಕೇ?

• ರಶ್ಮಿ ಎಸ್.



**ಕೆಲವು ಘಟನೆಗಳನ್ನು ನೆನಪಿಸಿಕೊಳ್ಳಿ...** ಒಂದು ವರ್ಷದ ಹಿಂದೆ ಹಾವೇರಿ ಜಿಲ್ಲೆಯಲ್ಲಿ. ಹೊಟ್ಟೆನೋವೆಂದು ಬಂದ ಮಹಿಳೆಯರ ಗರ್ಭಕೋಶ ತೆಗೆಯಲಾಗಿತ್ತು. ಎರಡು ವರ್ಷಗಳ ಹಿಂದೆ, ವಿಜಯಪುರ, ಬೆಳಗಾವಿ ಜಿಲ್ಲೆಗಳಲ್ಲಿ ಕೂಲಿ ಕಾರ್ಮಿಕ ಮಹಿಳೆಯರಿಗೆ ಕೆಲಸ ನೀಡುವ ನೆಪದಲ್ಲಿ ಗರ್ಭಕೋಶ ತೆಗೆಯಲು ಹೇಳಲಾಗಿತ್ತು. ಅವರಲ್ಲಿ ಬಹುತೇಕ ಹೆಣ್ಣುಮಕ್ಕಳು ಗರ್ಭಾಶಯವನ್ನು ತೆಗೆಸಿಕೊಂಡಿದ್ದರು. ಕೆಲದಿನಗಳ ಹಿಂದೆ, ನಿತ್ಯ ಪೂಜೆ ಮಾಡಲು ಕಷ್ಟವಾಗುವುದೆಂದು ಮಕ್ಕಳಾದ ವಿವಾಹಿತೆಯರು ಗರ್ಭಕೋಶ ತೆಗೆಸಿಕೊಳ್ಳುತ್ತಿದ್ದಾರೆ ಎಂಬ ಪೋಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಸಹ ಹರಿದಾಡಿತ್ತು.

ಗರ್ಭಕೋಶದ ಕ್ಯಾನ್ಸರ್ ಆಗುವ ಸಾಧ್ಯತೆ ಇದ್ದುದರಿಂದ ತೆಗೆಯುವ ನಿರ್ಧಾರ ಕೈಗೊಳ್ಳಲಾಯಿತು ಎಂದು ಹೆಣ್ಣುಮಕ್ಕಳು ಹೇಳುತ್ತಾರೆ. ಆದರೆ ಇದು ಎಲ್ಲ ಸಂದರ್ಭದಲ್ಲಿಯೂ ಸತ್ಯವಲ್ಲ ಎಂಬದುನ್ನು ತಜ್ಞರು ಸ್ಪಷ್ಟಪಡಿಸಿದ್ದಾರೆ.

ಯೋನಿಸ್ರಾವವನ್ನು ಈಗಲೂ ಚರ್ಚಿಸದ ಮನೋಭಾವವೇ ಸಮಸ್ಯೆ ಉಲ್ಬಣಗೊಳ್ಳಲು ಮುಖ್ಯ ಕಾರಣವಾಗಿದೆ. ವೈದ್ಯರೊಂದಿಗೆ ಮುಚ್ಚುಮರೆಯಿಲ್ಲದೆ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರೆ ಕ್ಯಾನ್ಸರ್‌ನ ಮೊದಲ ಹಂತದಲ್ಲಿಯೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಬಹುದಾಗಿದೆ ಎಂಬುದು ತಜ್ಞರ ಕಾಳಜಿಯಾಗಿದೆ.

ಹುಬ್ಬಳ್ಳಿಯ ನವನಗರದ ಕರ್ನಾಟಕ ಕ್ಯಾನ್ಸರ್ ಥೆರಪಿ ರಿಸರ್ಚ್ ಇನ್‌ಸ್ಟಿಟ್ಯೂಟ್ (ಕೆಸಿಟಿಆರ್‌ಐ)ನ ಕನ್ಸಲ್ಟಂಟ್ ರೇಡಿಯೇಶನ್ ಅಂಕಾಲೊಜಿಸ್ಟ್ ಡಾ.ಸಾಯಿಕುಮಾರಿ ಆರ್.ಟಿ. ಅವರು ಮಹಿಳೆಯರ ಮುಂಜಾಗ್ರತೆಯೇ ಇದಕ್ಕೆ ಉತ್ತಮ ಪರಿಹಾರವಾಗಲಿದೆ ಎಂದು ಪ್ರತಿಪಾದಿಸುತ್ತಾರೆ.

ಗರ್ಭಕೋಶದ ಕ್ಯಾನ್ಸರ್ ಗರ್ಭಾಶಯದ ಒಳಪದರಿನಲ್ಲಿ (ಎಂಡೊಮೆಟ್ರಿಯಂನಲ್ಲಿ) ಕಾಣಿಸಿ ಕೊಳ್ಳುವ ಕ್ಯಾನ್ಸರ್ ಆಗಿದೆ. ಇದು ದೇಹದ ಇತರ ಭಾಗಗಳಿಗೆ ಹರಡಬಹುದಾದ ಸಾಮರ್ಥ್ಯವನ್ನು ಹೊಂದಿರುವ ಕೋಶಗಳ ಅಸಹಜ ಬೆಳವಣಿಗೆಯ ಪರಿಣಾಮವಾಗಿದೆ. ಸ್ನಾಯುಗಳಲ್ಲಿ ಪ್ರಾರಂಭವಾಗುವ ಗರ್ಭಾಶಯದ ಕ್ಯಾನ್ಸರ್‌ಗೆ ಗರ್ಭಾಶಯದ ಸಾರ್ಕೋಮಾ ಎಂದು ಕರೆಯಲಾಗುತ್ತದೆ.

ಮುಖ್ಯವಾಗಿ ಗರ್ಭಕೋಶದ ಕ್ಯಾನ್ಸರ್‌ಗೆ ಪ್ರಮುಖ ಕಾರಣ ಎಚ್‌ಪಿವಿ ವೈರಸ್ (ಹ್ಯೂಮನ್ ಪ್ಯಾಪಿಲೋಮಾ ವೈರಸ್). ಬಹುಸಂಗಾತಿಯೊಂದಿಗೆ ಲೈಂಗಿಕತೆ ಹೊಂದಿರುವವರಿಗೆ ಈ ಕ್ಯಾನ್ಸರ್ ಬಾಧಿಸುವ ಸಾಧ್ಯತೆಯಿದೆ. ಹೆಚ್ಚು ಮಕ್ಕಳಿಗೆ ಜನ್ಮನೀಡುವುದರಿಂದ ಹಾರ್ಮೋನ್‌ಗಳಲ್ಲಿ ಹೆಚ್ಚಿನ ವ್ಯತ್ಯಾಸವಾಗಿ ಗರ್ಭಕೋಶದ ಕ್ಯಾನ್ಸರ್ ಬಾಧಿಸಲೂಬಹುದು ಎಂದು ಸಾಯಿಕುಮಾರಿ ವಿವರಿಸುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಅತಿಯಾದ ರಕ್ತಸ್ರಾವವಾದಾಗ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದಾಖಲಾಗಿ ತೊಂದರೆಯ ಪೂರ್ವಾಪರ ವಿಚಾರಕ್ಕೆ ಮುಂದಾಗದೆ ಗರ್ಭಕೋಶ ಶಸ್ತ್ರಚಿಕಿತ್ಸೆಗೆ ಒಳಪಡುತ್ತಾರೆ. ಇಂಥ ನಿರ್ಧಾರಕ್ಕೆ ಮುನ್ನ ಒಂದಾದರೂ ಸ್ಕ್ಯಾನಿಂಗ್ ಅತ್ಯವಶ್ಯವಾಗಿರುತ್ತದೆ. ಸ್ಕ್ಯಾನಿಂಗ್‌ಗೆ ಒಳಪಡುವುದರಿಂದ ಗರ್ಭಕೋಶದಲ್ಲಿ ಗಂಟುಗಳಿದ್ದರೆ ತಿಳಿಯುತ್ತದೆ.

**ಗರ್ಭಕೋಶ ತೆಗೆಯಲೇಬೇಕೆಂಬ ಹಟ ಏಕೆ?**

ಸಾಮಾನ್ಯವಾಗಿ ಅತಿಯಾದ ರಕ್ತಸ್ರಾವಕ್ಕೆ ಕಾರಣ ಗುರುತಿಸಲಾಗದೆ ಮಹಿಳೆಯರು ಪರದಾಡುತ್ತಾರೆ. ನಿರಂತರವಾಗಿ ಹೆಚ್ಚಿನ ಸ್ರಾವಕ್ಕೆ ಒಳಗಾದಾಗ ನಿಶ್ಯಕ್ತಿಯಿಂದ ಬಳಲುತ್ತಾರೆ. ರೋಗನಿರೋಧಕ ಶಕ್ತಿ ಕಡಿಮೆಯಾಗುತ್ತದೆ. ಪ್ರತಿ ಸಲ ಸ್ರಾವವಾದಾಗಲೂ ಸೋಂಕಿಗೆ ಒಳಗಾಗುತ್ತಾರೆ. ಈ ಎಲ್ಲ ಬಳಲಿಕೆಯಿಂದ ಒಂದೇ ಸಲ ಮುಕ್ತಿ ಪಡೆಯಬಹುದು ಎಂದು ಭಾವಿಸಿ, ಗರ್ಭಕೋಶ ತೆಗೆಯಲು ಒತ್ತಾಯಿಸುತ್ತಾರೆ.

ಕೆಲವು ಕೂಲಿ ಕಾರ್ಮಿಕರೂ ತಮ್ಮ ದಿನಗೂಲಿಗೆ ಕತ್ತರಿ ಬೀಳುವ ಆತಂಕದಿಂದ ಗರ್ಭಕೋಶ ತೆಗೆಯಲು ಒತ್ತಾಯಿಸುತ್ತಾರೆ. ‘ಭಾಳ ತ್ರಾಸದರಿ. ತಡ್ಕೊಳ್ಳಾಕ ಆಗೂದಿಲ್ರಿ’ ಎಂಬ ಮಾತನ್ನೇ ಅವರು ಪುನುರಚ್ಚರಿಸುತ್ತಾರೆ.

ಹಾರ್ಮೋನುಗಳ ಏರುಪೇರು ಸರಿಪಡಿಸುವ ಚಿಕಿತ್ಸೆಗೆ ಒಳಪಡುವುದರ ಬದಲು, ಸಮಸ್ಯೆಯ ಮೂಲವನ್ನೇ ಕಿತ್ತು ಹಾಕಬೇಕು ಎಂಬ ಹಟಕ್ಕೆ ಬೀಳುತ್ತಾರೆ. ಇಂಥ ಮಧ್ಯವಯಸ್ಸಿನ ಮಹಿಳೆಯರಿಗೆ ದುಡಿಯುವ ಅನಿವಾರ್ಯ ಮತ್ತು ನೋವು ನಿರ್ವಹಣೆಯ ಬದಲು ನಿವಾರಣೆಯೇ ಮೂಲ ಉದ್ದೇಶವಾಗಿರುತ್ತದೆ. ಚಿಕಿತ್ಸಕ ದೃಷ್ಟಿಯಿಂದ ಅಗತ್ಯವಿಲ್ಲದಿದ್ದಲ್ಲಿ ಗರ್ಭಕೋಶ ತೆಗೆಯಲು ನಿರಾಕರಿಸಿದಾಗ, ಅವರು ಮತ್ತೆ ಇಲ್ಲಿ ಬರುವುದೇ ಇಲ್ಲ ಎಂದು ಧಾರವಾಡದ ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ ಆಫ್ ಇಂಡಿಯಾದ ವ್ಯವಸ್ಥಾಪಕರಾದ ಸುಜಾತಾ ಅನಿಶೆಟ್ಟರ ಅವರು ಸ್ಪಷ್ಟಪಡಿಸುತ್ತಾರೆ.

ಮಹಿಳೆಯ ಕೌಟುಂಬಿಕ ಕಾರಣಗಳು, ಪರಿಸರ, ದುಡಿಮೆ, ನೋವು, ಯಾತನೆ, ಆಯಾಸಗಳ ನಿವಾರಣೆಗೆ ಇದು ಸುಲಭೋಪಾಯವೆಂಬಂತೆ ಕಾಣುತ್ತದೆ. ಆ ಕಾರಣಕ್ಕಾಗಿಯೇ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅಂಥ ಮಹಿಳೆಯರು ಬಂದಾಗ ಪವರ್‌ಪಾಯಿಂಟ್ ಪ್ರಸೆಂಟೇಷನ್ ಮೂಲಕ ಜಾಗೃತಿ ನೀಡಲಾಗುತ್ತಿದೆ. ಸಮಾಲೋಚನೆಯ ಮೂಲಕ ಮೊದಲು ಚಿಕಿತ್ಸೆಗೆ ಒಳಪಡಲು ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದು ತಮ್ಮ ಪ್ರಯತ್ನಗಳ ಕುರಿತು ಬಿಚ್ಚಿಡುತ್ತಾರೆ.

**ಗಂಟುಗಳ ಬಗ್ಗೆ ನಿಗಾ ಇಡಿ:** ಸ್ಕ್ಯಾನಿಂಗ್ ಮಾಡಿದಾಗ ಗರ್ಭಕೋಶದಲ್ಲಿ ಗಂಟು ಕಂಡು ಬಂದಾಗ ಗರ್ಭಕೋಶ ತೆಗೆಸಬೇಕಾ ಎಂಬ ಆತಂಕದಿಂದ ಹಲವು ಮಹಿಳೆಯರು ಬರುತ್ತಾರೆ. ಗಂಟುಗಳಿದ್ದಾಗಲೂ ಅವುಗಳಿಂದ ಯಾವುದೇ ಆರೋಗ್ಯ ಸಮಸ್ಯೆ, ತ್ರಾಸು, ಸುಸ್ತು, ಸಂಕಟ ಕಂಡು ಬರದಿದ್ದಾಗ ಹೆದರಬೇಕಾಗಿಲ್ಲ. ವೈದ್ಯರು ಸೂಚಿಸಿದ ಔಷಧ ನಿಯಮಿತವಾಗಿ ಸೇವಿಸಬೇಕು. ವರ್ಷಕ್ಕೊಮ್ಮೆ ಸ್ಕ್ಯಾನಿಂಗ್ ಮಾಡಿಸಿ ಗಂಟುಗಳು ಬೆಳೆಯುತ್ತಿವೆಯೇ ಎಂಬ ಬಗ್ಗೆ ನಿಗಾ ವಹಿಸುವುದು ಅಗತ್ಯ ಎಂದು ಹುಬ್ಬಳ್ಳಿಯ ಸಿಟಿ ಕ್ಲಿನಿಕ್‌ನ ಹೆರಿಗೆ ಮತ್ತು ಸ್ತ್ರೀ ತಜ್ಞೆ ಡಾ.ವಿದ್ಯಾ ಜೋಷಿ ಅಭಿಪ್ರಾಯಪಟ್ಟರು.

ಗಂಟುಗಳು ತೀವ್ರವಾಗಿ ಬೆಳೆಯುತ್ತಿರುವುದು ಕಂಡು ಬಂದರೆ ಅಥವಾ ಗಂಟುಗಳು ಕ್ಯಾನ್ಸರ್‌ಗೆ ತಿರುಗುವ ಸಾಧ್ಯತೆಗಳು ಇದ್ದರೆ ಮಾತ್ರ ವೈದ್ಯರು ಗರ್ಭಕೋಶ ತೆಗೆಯಲು ಸೂಚಿಸುತ್ತಾರೆ. ಯುವತಿಯರ ಗರ್ಭಕೋಶದಲ್ಲಿ ಗಂಟುಗಳು ಕಂಡು ಬಂದರೂ ಅವುಗಳಿಂದ ಏನೂ ಆರೋಗ್ಯ ಸಮಸ್ಯೆ ಉಂಟಾಗದಿದ್ದರೆ ಗರ್ಭಕೋಶ ತೆಗೆಸಬೇಕಾದ ಅಗತ್ಯವೂ ಬರುವುದಿಲ್ಲ. ಅಂಡಾಶಯ ಹಾಗೆಯೇ ಇರಿಸಿ ಗರ್ಭಕೋಶ ತೆಗೆಯುವುದರಿಂದ ಹಾರ್ಮೋನ್ ಸಮತೋಲನ ತಪ್ಪುವ ಅಪಾಯವೂ ಇರುವುದಿಲ್ಲ. ಆರೋಗ್ಯದ ಮೇಲೆ ಹೆಚ್ಚು ದುಷ್ಪರಿಣಾಮ ಬೀರುವುದಿಲ್ಲ ಎಂದು ಅವರು ಸ್ಪಷ್ಟಪಡಿಸುತ್ತಾರೆ.

ವಿಪರೀತದ ರಕ್ತಸ್ರಾವ, ಎಂದರೆ ದಿನಕ್ಕೆ ನಾಲ್ಕಾರು ಸ್ಯಾನಿಟರಿ ಪ್ಯಾಡುಗಳನ್ನು ಬದಲಿಸುತ್ತಿದ್ದಲ್ಲಿ, ರಕ್ತದ ಕರಣೆಗಳು ಸ್ರಾವದಲ್ಲಿ ಕಂಡು ಬಂದರೆ ಅದಕ್ಕೆ ವಿಪರೀತದ ಸ್ರಾವ ಎಂದು ಕರೆಯಲಾಗುತ್ತದೆ. ಈ ಸ್ಥಿತಿ ಇದ್ದಲ್ಲಿ, ಹೆರಿಗೆ ನೋವಿನಂತೆ ತೀವ್ರವಾದ ನೋವು ಕಂಡು ಬಂದಲ್ಲಿ, ಸೂಕ್ತ ಚಿಕಿತ್ಸೆಗೂ ಸ್ಪಂದಿಸದೇ ಈ ನೋವು ಮುಂದುವರಿದಲ್ಲಿ ಮಾತ್ರ ತಜ್ಞರೊಂದಿಗೆ ಸಮಾಲೋಚಿಸಿ, ಗರ್ಭಕೋಶ ತೆಗೆಯುವ ನಿರ್ಧಾರ ಕೈಗೊಳ್ಳಬಹುದಾಗಿದೆ.

ಹೆಣ್ಣುಮಕ್ಕಳಲ್ಲಿ ಋತುಸ್ರಾವ ಮತ್ತು ಋತುಬಂಧದಲ್ಲಿ ಆಗುವ ವ್ಯತ್ಯಾಸಗಳಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಆಗುವ ಸಾಧ್ಯತೆಗಳಿರುತ್ತವೆ. ಇವುಗಳಿಂದ ಪಾರಾಗಲು ಗರ್ಭಕೋಶಕ್ಕೆ ಕತ್ತರಿ ಹಾಕುವತ್ತ ಹೆಚ್ಚು ಒಲವು ತೋರುತ್ತಾರೆ. ಗ್ರಾಮೀಣ ಭಾಗದಲ್ಲಿಯಂತೂ ಮಕ್ಕಳಾದ ಮೇಲೆ 'ಮಕ್ಕಳ ಚೀಲ'ದ್ದೇನು ಕೆಲಸ ಎಂಬ ತರ್ಕವನ್ನೂ ಒಡ್ಡುತ್ತಾರೆ. ಗ್ರಾಮೀಣ ಭಾಗದ ಮಹಿಳೆಯರು ಬಡಮಹಿಳೆಯರು ಋತು ಸ್ರಾವದ ಸಣ್ಣ ಪುಟ್ಟ ತೊಂದರೆಗಳನ್ನು ನಿಭಾಯಿಸದೆ ಮಕ್ಕಳಾದ ನಂತರ ಗರ್ಭಕೋಶ ಬೇಡವೆಂಬ ತೀರ್ಮಾನಕ್ಕೆ ಬರುತ್ತಾರೆ. ಅಂಥವರಿಗೆ ಅದೆಷ್ಟೋ ಸಲ ಮನ ಒಲಿಸಿ, ಹಾರ್ಮೋನುಗಳ ಏರುಪೇರಾಗುವ ಸ್ಥಿತಿಯನ್ನು ತಿಳಿಸಿ ಕಳುಹಿಸಲಾಗುತ್ತದೆ ಎಂದು ಸುಜಾತಾ ಅನಿಶೆಟ್ಟರ ತಿಳಿಸುತ್ತಾರೆ.

**ಗರ್ಭಕಂಠ ಕ್ಯಾನ್ಸರ್:** ಗರ್ಭಕಂಠವು ಗರ್ಭಾಶಯದ ಕೆಳಗಿನ ಭಾಗವಾಗಿದ್ದು, ಅದು ಯೋನಿಯೊಂದಿಗೆ ಸಂಪರ್ಕಿಸುತ್ತದೆ. ‘ಹ್ಯೂಮನ್ ಪ್ಯಾಪಿಲೋಮ ವೈರಸ್’ನ (ಎಚ್‌ಪಿವಿ) ವಿವಿಧ ತಳಿಗಳು ಗರ್ಭಕಂಠ ಕ್ಯಾನ್ಸರ್‌ಗೆ ಮುಖ್ಯ ಕಾರಣವಾಗಿವೆ. ಎಚ್‌ಪಿವಿ ಲೈಂಗಿಕ ಸಂಪರ್ಕದ ಮೂಲಕ ಹರಡುವ ಸಾಮಾನ್ಯ ವೈರಾಣುವಾಗಿದೆ. ಈ ಸೋಂಕು ಪದೇ ಪದೇ ಗರ್ಭಕಂಠವನ್ನು ಘಾಸಿ ಮಾಡುತ್ತಾ ಹೋದರೆ ಸಾಮಾನ್ಯ ಜೀವಕೋಶಗಳು ನಾಶವಾಗಿ, ಆ ಸ್ಥಾನದಲ್ಲಿ ಕ್ಯಾನ್ಸರ್ ಕೋಶಗಳು ಬೆಳೆಯುವ ಸಾಧ್ಯತೆಗಳು ಇರುತ್ತವೆ. ಗರ್ಭಕಂಠದಲ್ಲಿ ಆಗುವ ಬದಲಾವಣೆಯನ್ನು ತಪಾಸಣೆ ಮೂಲಕ ಮಾತ್ರ ಪತ್ತೆ ಮಾಡಲು ಸಾಧ್ಯ ಎನ್ನುತ್ತಾರೆ ಕ್ಯಾನ್ಸರ್ ತಜ್ಞರು.

**ಪ್ರಮುಖ ಕಾರಣಗಳು:** ಸಣ್ಣ ವಯಸ್ಸಿನಲ್ಲಿಯೇ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು, ರೋಗನಿರೋಧಕ ಶಕ್ತಿ ಇಳಿಕೆ, ಅಪೌಷ್ಟಿಕತೆ, ಅಶುಚಿತ್ವ, ಹೆಚ್ಚು ಬಾರಿ ಗರ್ಭಧರಿಸುವುದು, ಗರ್ಭನಿರೋಧಕಗಳ ಬಳಕೆ, ಧೂಮಪಾನ, ಮದ್ಯಪಾನ, ಮಾದಕ ದ್ರವ್ಯಗಳ ವ್ಯಸನ, ಸ್ಟೀರಾಯ್ಡ್ ಔಷಧಗಳ ಚಿಕಿತ್ಸೆ, ಎಚ್‌ಐವಿಯಂತಹ ಕಾಯಿಲೆ

**ಪ್ರಮುಖ ಲಕ್ಷಣಗಳು:** ಯೋನಿಯಲ್ಲಿ ರಕ್ತಸ್ರಾವ, ಸಂಭೋಗದ ಸಮಯದಲ್ಲಿ ನೋವು ಹಾಗೂ ಹೊಟ್ಟೆಯ ಕೆಳಭಾಗದಲ್ಲಿ ಅಸಹಜತೆ, ಬೆನ್ನಿನ ಕೆಳಭಾಗ ನೋವು, ನಿಶ್ಯಕ್ತಿ, ಯೋನಿ ಭಾಗದಲ್ಲಿ ತುರಿಕೆ ಹಾಗೂ ಉರಿ, ಕಾಲಿನ ಭಾಗದಲ್ಲಿ ಊತ ಇವೆಲ್ಲ ಕಂಡು ಬಂದಾಗ ಋತುಸ್ರಾವದ ಸಹಜ ಸಮಸ್ಯೆಗಳಿವು ಎಂದು ನಿರ್ಲಕ್ಷ್ಯ ಮಾಡಬಾರದು.

**ಗರ್ಭಕೋಶ ತೆಗೆಯುವುದು ಶಾಶ್ವತ ಪರಿಹಾರವೇ?**


ಚಿಕಿತ್ಸೆ ಲಭ್ಯ ಇರುವಾಗಲೂ, ಅಂಡಾಶಯ ಸಮೇತ ಗರ್ಭಕೋಶವನ್ನು ತೆಗೆದುಹಾಕುವುದರಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತವೆ. ಅಂಡಾಶಯ ಉಳಿಸಿದರೆ ಒಳಿತು. ಆದರೆ ಅದನ್ನೂ ತೆಗೆದರೆ ಹೃದ್ರೋಗ ಸಮಸ್ಯೆಗೆ ಒಳಗಾಗಬಹುದು. ಎಲುಬಿನ ಸಾಂದ್ರತೆ ಕಡಿಮೆಯಾಗಿ ಎಲುವು ಮುರಿತವುಂಟಾಗಲಿದೆ. ತಲೆ ಕೂದಲ ಬೆಳವಣಿಗೆ ಕುಂಠಿತವಾಗಲಿದೆ. ಚರ್ಮ ಒಣವಾಗಿ ಸುಕ್ಕುಗಟ್ಟಲಿದೆ ಇತ್ಯಾದಿ ಸಮಸ್ಯೆಗಳನ್ನು ಮಹಿಳೆ ಎದುರಿಸಬೇಕಾಗುತ್ತದೆ.

ವಿಪರೀತ ರಕ್ತಸ್ರಾವ, ಸಹಿಸಲಸಾಧ್ಯ ನೋವು, ಸುಸ್ತು, ಗರ್ಭಕೋಶದಲ್ಲಿ ಗಂಟುಗಳು ಕಂಡು ಬಂದ ಶೇ 95ರಷ್ಟು ಪ್ರಕರಣಗಳಲ್ಲೂ ಗರ್ಭಕೋಶ ತೆಗೆಸುವ ಅನಿವಾರ್ಯತೆ ಬರುವುದಿಲ್ಲ. ಈಚೆಗೆ ವೈದ್ಯಕೀಯ ಹಾಗೂ ಔಷಧ ಕ್ಷೇತ್ರಗಳಲ್ಲಿ ಆಗಿರುವ ಆವಿಷ್ಕಾರಗಳಿಂದಾಗಿ ಹಲವು ಉತ್ತಮ ಚಿಕಿತ್ಸೆ ಹಾಗೂ ಪರಿಹಾರ ಕ್ರಮಗಳು ಇವೆ. ಈ ಕಡೆಗೆ ಹೆಚ್ಚು ಗಮನವಹಿಸಬೇಕಾಗಿದೆ.

ಗರ್ಭಕೋಶ ತೆಗೆಸಲೇ ಬೇಕಾದಾಗಲೂ ಆತಂಕ ಪಡಬೇಕಿಲ್ಲ. ಶಸ್ತ್ರಚಿಕಿತ್ಸೆ ಆದ ನಂತರ ಮಲಗಿಯೇ ಇರಬೇಕಾದ ಅಗತ್ಯವಿಲ್ಲ. ನಿತ್ಯದ ಲಘು ಕೆಲಸಗಳನ್ನು ಮಾಡಬೇಕು. ದೇಹವನ್ನು ಚಟುವಟಿಕೆಯಿಂದ ಇಡಬೇಕು. ತೂಕ ಹೆಚ್ಚಳವಾಗದಂತೆ ಎಚ್ಚರಿಕೆ ವಹಿಸಬೇಕು.

**ಪೂರಕ ಮಾಹಿತಿ: ಸ್ಮಿತಾ ಶಿರೂರ, ಕೃಷ್ಣಿ ಶಿರೂರ**

## ಮಹಿಳೆಯರ ಆರೋಗ್ಯಕ್ಕೆ ಮೂರು ಸೂತ್ರ



ಗರ್ಭಕೋಶ ದೇಹದ ಅನಗತ್ಯ ಅಂಗವಲ್ಲ. ಅದು ಪ್ರಮುಖವಾದ ಅಂಗ. ಅನಿವಾರ್ಯ ಕಾರಣಗಳಿರದೇ ಇದ್ದಲ್ಲಿ ಅದು ನಿಮ್ಮ ದೇಹದ ಪ್ರಮುಖ ಅಂಗವಾಗಿದೆ. ಗರ್ಭಾಶಯದ ಸಮಸ್ಯೆಗಳಿಗೆ ಮುಖ್ಯವಾಗಿ ಹಾರ್ಮೋನ್‌ಗಳ ಅಸಮತೋಲನವೇ ಕಾರಣ. ಇವುಗಳನ್ನು ನಿಯಂತ್ರಣದಲ್ಲಿಡಲು ಮೂರು ಸೂತ್ರಗಳನ್ನು ಅನುಸರಿಸಿ.

- **ಉತ್ತಮ ಜೀವನಶೈಲಿ:** ನಡಿಗೆ, ವ್ಯಾಯಾಮ, ನಿದ್ರೆ, ವಿಶ್ರಾಂತಿ ಇವೆಲ್ಲವೂ ಹಿತಮಿತವಾಗಿರಬೇಕು. ಮನೆಗೆಲಸವನ್ನು ಎಂದಿಗೂ ವ್ಯಾಯಾಮವೆಂದು ಪರಿಗಣಿಸದಿರಿ. ದಿನ ನಿತ್ಯದ ನಡಿಗೆಯನ್ನೂ ನಡಿಗೆ ಎನ್ನದಿರಿ. ನಿರ್ದಿಷ್ಟವಾದ ದೂರವನ್ನು, ನಿರ್ದಿಷ್ಟ ಸಮಯದಲ್ಲಿ ಕ್ರಮಿಸಿಕೊಂಡು ನಡೆಯುವುದು ಅಭ್ಯಾಸ ಮಾಡಿಕೊಳ್ಳಿ. ಲಘು ವ್ಯಾಯಾಮ ಅಥವಾ ಸೂರ್ಯನಮಸ್ಕಾರ, ಯೋಗಗಳನ್ನು ಮಾಡುವುದೂ ನಿಮ್ಮ ಬದುಕಿನ ಒಂದು ಅಂಗವಾಗಿರಲಿ. ನಿತ್ಯ 6–8 ಗಂಟೆಗಳ ನಿದ್ದೆ ಅತ್ಯಗತ್ಯ. ಆಗಾಗ ದೇಹಕ್ಕೆ ವಿಶ್ರಾಂತಿ ನೀಡಲೇಬೇಕು.
- **ಆಹಾರ ಕ್ರಮ:** ಆರೋಗ್ಯಕರ ಆಹಾರ ಕ್ರಮದಲ್ಲಿ ಕರಿದ ಪದಾರ್ಥಗಳು ಕಡಿಮೆ ಇರಲಿ. ಪ್ರೊಟೀನುಗಳು ಹೇರಳವಾಗಿ ದೊರೆಯುವ ಮೊಳಕೆ ಕಾಳು, ಸೋಯಾ, ಪನೀರ್, ಗಿಣ್ಣ, ವಿಟಾಮಿನ್ ಹೇರಳವಾಗಿ ದೊರೆಯುವ ಸೊಪ್ಪು, ತರಕಾರಿ ಹಣ್ಣುಗಳು ಕಡ್ಡಾಯವಾಗಿ ನಿಮ್ಮ ಊಟದಲ್ಲಿರಲಿ.
- **ಮಾನಸಿಕ ಸ್ವಾಸ್ಥ್ಯ:** ಖಿನ್ನತೆ, ಒತ್ತಡಗಳಿರದಂತೆ, ನಿದ್ರಾಹೀನತೆ ಕಾಡದಂತೆ, ಹೆಚ್ಚು ಚಿಂತೆಗೆ ಒಳಗಾಗದಂತೆ ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಿ. ಮಾನಸೋಲ್ಲಾಸಕ್ಕೆ ಹಲವಾರು ಹವ್ಯಾಸಗಳನ್ನು ಬೆಳೆಸಿಕೊಳ್ಳಿ. ಧ್ಯಾನ ಮಾಡಿ. ಸಂಗೀತ ಕೇಳುವ, ಪುಸ್ತಕ ಓದುವ, ದೈನಂದಿನ ಬದುಕಿನ ಚಟುವಟಿಕೆಯನ್ನು ಹೊರತು ಪಡಿಸಿಯೂ ಒಂದೆರಡು ಹವ್ಯಾಸ ಬೆಳೆಸಿಕೊಳ್ಳಬೇಕು. ಮನಸು ಶಾಂತವಿದ್ದಷ್ಟೂ ನಮ್ಮ ಹಾರ್ಮೋನುಗಳು ಏರುಪೇರಾಗುವುದಿಲ್ಲ.

ಈ ಮೂರು ಸೂತ್ರಗಳಿದ್ದರೆ ಲವಲವಿಕೆಯಿಂದ ಬದುಕುವುದು ಸರಳವಾಗುತ್ತದೆ. ಅನಗತ್ಯದ ಶಸ್ತ್ರಚಿಕಿತ್ಸೆಗೆ ಒಳಗಾಗುವುದು ತಪ್ಪುತ್ತದೆ. ಹೆಣ್ತನದ ಪ್ರತೀಕವಾಗಿರುವ ಗರ್ಭಕೋಶಕ್ಕೆ ಅನಗತ್ಯವಾಗಿ ಕತ್ತರಿಹಾಕುವುದು ತಪ್ಪುತ್ತದೆ.



**ಡಾ. ವಿದ್ಯಾ ಜೋಷಿ**

## ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ ಇದೆ

ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಗರ್ಭಕಂಠದ ಕ್ಯಾನ್ಸರ್ ತಡೆಯಲು ‘ಹ್ಯೂಮನ್ ಪ್ಯಾಪಿಲೋಮ ವೈರಸ್’ (ಎಚ್‌ಪಿವಿ) ಲಸಿಕೆ ಸಹಕಾರಿಯಾಗಿದೆ.

ಈ ಲಸಿಕೆಯು ಕ್ಯಾನ್ಸರ್ ಕೋಶಗಳ ವಿರುದ್ಧ ನಿರೋಧಕ ಶಕ್ತಿ ವೃದ್ಧಿಸಲಿದೆ. ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ ಅನುಮೋದನೆ ನೀಡಿದೆ. ಈ ಲಸಿಕೆ ಎರಡು ಡೋಸ್‌ಗಳನ್ನು ಹೊಂದಿದ್ದು, ಮೊದಲ ಹಾಗೂ ಎರಡನೇ ಡೋಸ್ ನಡುವಿನ ಅಂತರ ಆರು ತಿಂಗಳು ಇರಲಿದೆ. ಕೇಂದ್ರ ಸರ್ಕಾರವೂ ಇದಕ್ಕೆ ಅನುಮೋದನೆ ನೀಡಿದ್ದು, ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ಒದಗಿಸಲಾಗುತ್ತಿದೆ. ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಕೆಲ ಖಾಸಗಿ ಶಾಲೆಗಳಲ್ಲಿ 9ರಿಂದ 15 ವರ್ಷದೊಳಗಿನ ಬಾಲಕಿಯರಿಗೆ ಎರಡು ಡೋಸ್ ಎಚ್‌ಪಿವಿ ಲಸಿಕೆ ಒದಗಿಸುತ್ತಿವೆ. ಈ ಲಸಿಕೆಯು ಸರ್ಕಾರಿ ವ್ಯವಸ್ಥೆಯಡಿ ಸದ್ಯ ದೊರೆಯುತ್ತಿಲ್ಲ.

9ರಿಂದ 15 ವರ್ಷದೊಳಗಿನವರಿಗೆ ಎರಡು ಡೋಸ್, 15ರಿಂದ 30 ವರ್ಷದೊಳಗಿನವರಿಗೆ ಮೂರು ಡೋಸ್‌ಗಳನ್ನು ವೈದ್ಯರು ಶಿಫಾರಸು ಮಾಡುತ್ತಾರೆ. ಈ ಲಸಿಕೆಯು ದುಬಾರಿಯಾಗಿದ್ದು, ಸದ್ಯ ಖಾಸಗಿ ವ್ಯವಸ್ಥೆಯಡಿ ಒಂದು ಡೋಸ್‌ಗೆ ₹ 10 ಸಾವಿರದವರೆಗೂ ಬೆಲೆ ನಿಗದಿಪಡಿಸಲಾಗಿದೆ. ‘ಸರ್ವಾರಿಕ್ಸ್’ ಮತ್ತು ‘ಗಾರ್ಡಾಸಿಲ್’ ಎಂಬ ಕಂಪನಿಗಳ ಲಸಿಕೆಗಳು ರಾಜ್ಯದಲ್ಲಿ ದೊರೆಯುತ್ತಿವೆ.

‘ಗರ್ಭಕಂಠ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ. ಲೈಂಗಿಕ ಸಂಬಂಧಗಳನ್ನು ಪ್ರಾರಂಭಿಸುವ ಮೊದಲು ಲಸಿಕೆ ನೀಡಿದಾಗ ಅದು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ. ಆದ್ದರಿಂದ 9ರಿಂದ 15 ವರ್ಷದೊಳಗಿನವರಿಗೆ ಲಸಿಕೆಗೆ ಕ್ರಮವಹಿಸಬೇಕಿದೆ. ಲಸಿಕೆ ಪಡೆದವರಲ್ಲಿ ಕೆಲವರಿಗೆ ಜ್ವರ, ತಲೆನೋವು, ಊತದಂತಹ ಸಾಮಾನ್ಯ ಅಡ್ಡ ಪರಿಣಾಮಗಳು ಮಾತ್ರ ಕಾಣಿಸಿಕೊಳ್ಳುತ್ತವೆ’



**ಡಾ.ಸಿ.ರಾಮಚಂದ್ರ,** ಮಾಜಿ ನಿರ್ದೇಶಕ, ಕಿದ್ವಾಯಿ ಗಂಥಿ ಕೇಂದ್ರ

## ಮುಂಜಾಗ್ರತೆಯೇ ಮೇಲು

ಅತಿ ರಕ್ತಸ್ರಾವ, ಬಿಳಿ ಮುಟ್ಟು, ಪೆಲ್ವಿಕ್ ನೋವು, ಅನಿಯಮಿತ ಋತುಚಕ್ರ ಇವೆಲ್ಲವೂ ಗರ್ಭಾಶಯ ಕ್ಯಾನ್ಸರ್‌ನ ಮುಖ್ಯ ಲಕ್ಷಣವೆನಿಸಿವೆ. ನಿರ್ಲಕ್ಷಿಸದೇ ವೈದ್ಯರಿಂದ ತಪಾಸಣೆಗೆ ಒಳಪಡಬೇಕು. ಪ್ರಾಥಮಿಕ ಹಂತದಲ್ಲಿ ನಿರ್ಲಕ್ಷಿಸಿ, ಮಿತಿ ಮೀರಿದಾಗ 3ನೇ ಹಂತದಲ್ಲಿ ವೈದ್ಯರ ಬಳಿ ಬರುವವರೇ ಹೆಚ್ಚು. ಗುಣವಾಗುವಿಕೆ ಸಂಭವ ಶೇ 75ರಿಂದ 80ರಷ್ಟಿರಲಿದೆ. ಮೊದಲ ಹಂತದಲ್ಲಾದರೆ ಸಂಪೂರ್ಣ ಗುಣಮುಖವಾಗಬಹುದು.

ಸ್ತನ ಕ್ಯಾನ್ಸರ್ ಚಿಕಿತ್ಸೆಗೆ ಒಳಪಡುವವರಿಗೆ ನೀಡಲಾಗುವ ಸುದೀರ್ಘ ಕಾಲದ (5 ಅಥವಾ ಅದಕ್ಕಿಂದ ಹೆಚ್ಚು ವರ್ಷ) ಹಾರ್ಮೋನ್ ಗುಳಿಗೆಗಳಿಂದ ಗರ್ಭಕೋಶದ ಕ್ಯಾನ್ಸರ್ ಅಪಾಯ ಹೆಚ್ಚುವುದು ಸಹಜ. ಇವು ಗರ್ಭಾಶಯದ ಒಳಪದರವನ್ನು ದಪ್ಪಗೊಳಿಸುತ್ತವೆ. ಅದು ಗರ್ಭಕೋಶದ ಕ್ಯಾನ್ಸರ್‌ಗೆ ದಾರಿಯಾಗಲಿದೆ. ಸ್ತನ ಕ್ಯಾನ್ಸರ್ ಸಂತ್ರಸ್ತೆಯರು ವರ್ಷಕ್ಕೊಮ್ಮೆ ಗರ್ಭಕೋಶದ ಒಳಪದರಿನ ನಿಗಾವಹಿಸಬೇಕು.

ಗರ್ಭಕೋಶದ ಕ್ಯಾನ್ಸರ್ ಗೆ ಮುಂಜಾಗ್ರತೆಯೇ ಮೇಲು. ಯೋನಿಗೆ ಸಂಬಂಧಿಸಿದ ಸಮಸ್ಯೆಗಳೆಂದು ನಾಚಿ, ಹಿಂಜರಿದು ಸುಮ್ಮನಾಗದೆ ವೈದ್ಯರ ಬಳಿ ಚರ್ಚಿಸುವುದು ಸೂಕ್ತ. ಸಮಸ್ಯೆ ಆರಂಭಿಕ ಹಂತದಲ್ಲಿದ್ದರೆ ಕಡಿಮೆ ಅವಧಿ, ಕಡಿಮೆ ಖರ್ಚಿನಲ್ಲಿ ಸಂಪೂರ್ಣವಾಗಿ ಗುಣಹೊಂದಬಹುದು.



**ಡಾ. ಸಾಯಿಕುಮಾರಿ ಆರ್.ಟಿ**

## ತಿರುಮಲದಲ್ಲಿ ರಾಜಕೀಯ, ದ್ವೇಷ ಭಾಷಣ ನಿಷೇಧ

ಪ್ರಜಾವಾಣಿ ವಾರ್ತೆ

**ಹೈದರಾಬಾದ್:** ತಿರುಮಲದ ಪಾವಿತ್ರ್ಯತೆ ಮತ್ತು ಆಧ್ಯಾತ್ಮಿಕ ಶಾಂತಿ ಕಾಪಾಡಲು ತಿರುಮಲದಲ್ಲಿ ರಾಜಕೀಯ ಹಾಗೂ ದ್ವೇಷದ ಭಾಷಣಗಳಿಗೆ ಟಿಟಿಡಿ ನಿಷೇಧ ಹೇರಿದೆ.

ಸದಾ ಗೋವಿಂದಾ ನಾಮಸ್ಮರಣೆ ಮೊಳಗುವ ಪವಿತ್ರ ತಿರುಮಲ ದೈವ-ಸ್ಥಾನದಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವು ವ್ಯಕ್ತಿಗಳು ಹಾಗೂ ರಾಜಕೀಯ ಮುಖಂಡರು ತಿರುಮಲ ದೇವಸ್ಥಾನದ ದರ್ಶನದ ನಂತರ ದೇವಸ್ಥಾನದ ಎದುರು ಮಾಧ್ಯಮಗಳ ಮುಂದೆ ರಾಜಕೀಯ ದ್ವೇಷದ ಹೇಳಿಕೆ ನೀಡಿ ಆಧ್ಯಾತ್ಮಿಕ ವಾತಾವರಣವನ್ನು ಕದಡುತ್ತಿ-ದ್ದಾರೆ. ಈ ಹಿನ್ನೆಲೆಯಲ್ಲಿ ನಿಷೇಧ ಹೇರುವ ನಿರ್ಧಾರ ತೆಗೆದುಕೊಳ್ಳಲಾಯಿತು ಎಂದು ಟಿಟಿಡಿ ಮಂಡಳಿ ಹೇಳಿದೆ.

ಟಿಟಿಡಿ ಕೂಡ ತನ್ನ ನಿರ್ಧಾರಕ್ಕೆ ಎಲ್ಲರೂ ಸಹಕರಿಸುವಂತೆ ಮನವಿ ಮಾಡಿದೆ. ಇದನ್ನು ಉಲ್ಲಂಘಿಸುವವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅದು ತಿಳಿಸಿದೆ.

**ಡಿ.3ರಂದು ದೇವರ ದರ್ಶನ:** ತಿರುಮಲದಲ್ಲಿ ಡಿ.3ರಂದು ಸ್ಥಳೀಯರಿಗೆ ವೆಂಕಟೇಶ್ವರ ಸ್ವಾಮಿ ದರ್ಶನ ವ್ಯವಸ್ಥೆ ಮಾಡಲು ಟಿಟಿಡಿ ಇದೇ ವೇಳೆ ನಿರ್ಧರಿಸಿದೆ.

ತಿರುಪತಿಯ ಮಹತಿ ಆಡಿಟೋರಿಯಂ ಮತ್ತು ತಿರುಮಲದ ಸಮುದಾಯ ಭವನದಲ್ಲಿ ಡಿ.2 ರಂದು ಬೆಳಿಗ್ಗೆ 5 ಗಂಟೆಗೆ ಟೋಕನ್ ವಿತರಿಸಲಾಗುವುದು.

ನವೆಂಬರ್ 18 ರಂದು ನಡೆದ ಟಿಟಿಡಿ ಟ್ರಸ್ಟಿಗಳ ಮಂಡಳಿಯು ತನ್ನ ಮೊದಲ ಸಭೆಯಲ್ಲಿ ಪ್ರತಿ ತಿಂಗಳ ಮೊದಲ ಮಂಗಳವಾರದಂದು ಸ್ಥಳೀಯರಿಗೆ ಶ್ರೀವಾರಿ ದರ್ಶನವನ್ನು ನೀಡಲು ನಿರ್ಧರಿಸಿತು. ಈ ಹಿನ್ನೆಲೆಯಲ್ಲಿ ಡಿಸೆಂಬರ್ 3ರಂದು ಸ್ಥಳೀಯರಿಗೆ ದರ್ಶನ ನೀಡಲು ಟಿಟಿಡಿ ವ್ಯವಸ್ಥೆ ಮಾಡುತ್ತಿದೆ.

## 104 ವರ್ಷದ ವ್ಯಕ್ತಿಗೆ ಮಧ್ಯಂತರ ಜಾಮೀನು

ಪ್ರಜಾವಾಣಿ ವಾರ್ತೆ

**ನವದೆಹಲಿ:** 1988ರಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನು-ಭವಿಸುತ್ತಿರುವ 104 ವರ್ಷ ವಯಸ್ಸಿನ ರಸಿಕ್ ಚಂದ್ರ ಮೊಂಡಲ್ ಎನ್ನುವ ವ್ಯಕ್ತಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇರುವ ವಿಭಾಗೀಯ ಪೀಠವು ಶುಕ್ರವಾರ ಜಾಮೀನು ನೀಡಿದೆ.

ವಯಸ್ಸಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳನ್ನು ಹೊರತುಪಡಿಸಿದರೆ ಮೊಂಡಲ್ ಸ್ಥಿರವಾಗಿ ಇದ್ದಾನೆ ಎಂದು ಪಶ್ಚಿಮ ಬಂಗಾಳ ಸರ್ಕಾರದ ಪರ ವಕೀಲರು ಪೀಠಕ್ಕೆ ತಿಳಿಸಿದರು. ಮೊಂಡಲ್‌ಗೆ ವಯಸ್ಸಾಗಿದೆ ಎಂಬುದನ್ನು ಪರಿಗಣಿಸಿದ ಪೀಠವು, ಆತನಿಗೆ ಮಧ್ಯಂತರ ಜಾಮೀನು ನೀಡಿತು.

1988ರಲ್ಲಿ ನಡೆದ ಕೊಲೆ ಪ್ರಕರಣ-ವೊಂದರಲ್ಲಿ ಮೊಂಡಲ್‌ಗೆ 1994ರಲ್ಲಿ ಶಿಕ್ಷೆ ವಿಧಿಸಲಾಗಿದೆ. ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ ಮೊಂಡಲ್ ಸಲ್ಲಿಸಿದ್ದ ಅರ್ಜಿಯನ್ನು ಕಲ್ಕತ್ತ ಹೈಕೋರ್ಟ್ 2018ರಲ್ಲಿ ವಜಾಗೊಳಿಸಿತ್ತು. ನಂತರ ಈತ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ. ಸುಪ್ರೀಂ ಕೋರ್ಟ್ ಕೂಡ ಈತನ ಅರ್ಜಿಯನ್ನು ವಜಾಗೊಳಿಸಿದೆ.

## ಗುಂಡಣ್ಣ




## 25 ವರ್ಷಗಳ ಹಿಂದೆ

ಬುಧವಾರ, 01-12-1999

- **ರಾಜಕೀಯ ಪರಿಹಾರಕ್ಕೆ ಸಿದ್ಧ: ಕೃಷ್ಣ**

**ಬೆಂಗಳೂರು, ನ.30–** ಕೃಷ್ಣಾ ಮೇಲ್ದಂಡೆಯ ಅಲಮಟ್ಟಿ ಜಲಾಶಯದ ಎತ್ತರಕ್ಕೆ ಸಂಬಂಧಿಸಿದಂತೆ ಎದ್ದಿರುವ ವಿವಾದವನ್ನು ಆಂಧ್ರಪ್ರದೇಶ ಜೊತೆ ಚರ್ಚಿಸಿ ರಾಜಕೀಯ ಪರಿಹಾರ ಕಂಡುಕೊಳ್ಳಲು ನಮ್ಮ ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ಹೇಳಿದರು.

ಈ ವಿವಾದವನ್ನು ರಾಜಕೀಯ ಪರಿಹಾರ ಅಥವಾ ನ್ಯಾಯಾಮಗದ ಚೌಕಟ್ಟಿನಲ್ಲಿ ಬಗೆಹರಿಸಿ ಕೊಳ್ಳಲು ಆಂಧ್ರಪ್ರದೇಶ ಸಿದ್ಧವಿದೆ ಎಂದು ಆ ರಾಜ್ಯದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಾಗ ಕೃಷ್ಣ ಅವರು ರಾಜ್ಯದ ನಿಲುವನ್ನು ಸ್ಪಷ್ಟಪಡಿಸಿದರು.

- **ಮತ್ತಷ್ಟು ಅನಗತ್ಯ ಹುದ್ದೆಗಳ ರದ್ದಿಗೆ ನಿರ್ಧಾರ**

**ಬೆಂಗಳೂರು, ನ.30–** ಆಡಳಿತ ವೆಚ್ಚವನ್ನು ಮಿತಿಗೊಳಿಸುವ ಉದ್ದೇಶದಿಂದ ವಿವಿಧ ಇಲಾಖೆಗಳಲ್ಲಿ ಅನಗತ್ಯವಾಗಿರುವ ಮತ್ತಷ್ಟು ಹುದ್ದೆಗಳನ್ನು ರದ್ದು ಮಾಡಲು ರಾಜ್ಯ ಸರ್ಕಾರ ಉದ್ದೇಶಿಸಿದೆ ಎಂದು ಹಣಕಾಸು ರಾಜ್ಯ ಸಚಿವ ಎಂ.ಶಿವಣ್ಣ ಇಲ್ಲಿ ಹೇಳಿದರು.

‘ಇದೇ ಉದ್ದೇಶದಿಂದ ಹಿಂದಿನ ಸರ್ಕಾರ ವಿವಿಧ ಇಲಾಖೆಗಳಲ್ಲಿ ಸುಮಾರು 20 ಸಾವಿರ ಹುದ್ದೆಗಳನ್ನು ರದ್ದು ಮಾಡುವ ಮೂಲಕ ಒಳ್ಳೆಯ ಕೆಲಸ ಮಾಡಿದೆ’ ಎಂದು ಸಚಿವರು ಹೇಳಿದರು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಡಿಸೆಂಬರ್ 1, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಕಾರ್ತಿಕ ಕೃಷ್ಣ ಅಮಾವಾಸ್ಯೆ ಗಂ. 11-51 ನಕ್ಷತ್ರ: ಅನುರಾಧ ಗಂ. 14-24 ಯೋಗ: ಸುಕರ್ಮ ಗಂ. 16-33 ಕರಣ: ನಾಗ ಗಂ. 11-51, ವೃಶ್ಚಿಕ ಮಾಸದ 15 ನೇ ದಿನ, ಮಳೆನಕ್ಷತ್ರ: ಅನುರಾಧ 4.

**ರಾಹುಕಾಲ:** ಸಾಯಂಕಾಲ 04-30 – 06-00

**ಸೂರ್ಯೋದಯ:** 06-42 ಸೂರ್ಯಾಸ್ತ: 05-58

**ಮುಸ್ಲಿಂ ದಿನಾಂಕ:** 27 ಜುಮಾದುಲ್ಲಾವಲ್,

**ದಿನ ವಿಶೇಷ:** ಅಡ್ವೆಂಟ್‌ನಲ್ಲಿ ಮೊದಲ ಭಾನುವಾರ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 1, 7

**ಮೇಷ:** ಚಲನಚಿತ್ರರಂಗದವರಿಗೆ ಖ್ಯಾತಿ, ಹೊಸ ಹೊಸ ಗೌರವಾನ್ವಿತ ಅವಕಾಶ ದೊರೆಯುವುದು. ಯಾರಲ್ಲಿಯೂ ಶತ್ರುತ್ವವನ್ನು ವೃದ್ಧಿಸಿಕೊಳ್ಳುವಂತಹ ಘಟನೆಗಳಿಗೆ ಆಸ್ಪದ ನೀಡದಿರಿ. ಸಾಂಸಾರಿಕ ಸಂತೋಷ ಹೆಚ್ಚಾಗುತ್ತದೆ.

**ವೃಷಭ:** ವೃತ್ತಿ ನೈಪುಣ್ಯತೆಯಿಂದಾಗಿ ಹೆಚ್ಚು ವರಮಾನ ಬರುವ ಕೆಲಸಕ್ಕೆ ಪ್ರಯತ್ನಿಸುವ ಸಲಹೆ ಬರುವುದು. ಹಿರಿಯರ ಆರೋಗ್ಯದಲ್ಲಿ ಚೇತರಿಕೆ ಕಂಡುಬರುವುದು. ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ.

**ಮಿಥುನ:** ನಿಮ್ಮ ಸದುದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿದೆ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಪ್ರಾಪ್ತಿಯಾಗುತ್ತದೆ.

**ಕರ್ಕಾಟಕ:** ಅಕ್ಕ-ಪಕ್ಕದಲ್ಲಾಗುವ ಸನ್ನಿವೇಶಗಳಿಂದ ಪ್ರಾಮಾಣಿಕತೆಗೆ ಅಥವಾ ಸ್ವಾಮಿ ನಿಷ್ಠೆಗೆ ಬೆಲೆ ಇಲ್ಲವೆಂದು ಕಾಣಿಸುವುದು, ಅದಕ್ಕಾಗಿ ಸ್ವಭಾವವನ್ನು ಬದಲಿಸಿಕೊಳ್ಳಬೇಡಿ. ಅನಗತ್ಯ ಚಿಂತೆಗಳನ್ನು ಮೈಮೇಲೆ ಎಳೆದುಕೊಳ್ಳಬೇಡಿ.

**ಸಿಂಹ:** ಚೋರ ಬಾಧೆ ಇರುವ ಕಾರಣದಿಂದಾಗಿ ಹಣ ಅಥವಾ ಬೆಲೆ ಬಾಳುವ ವಸ್ತುಗಳನ್ನು ಹಿಡಿದುಕೊಂಡು ಸಂಚರಿಸುವುದು ಸರಿಯಲ್ಲ. ನೂತನ ವಸ್ತು ಖರೀದಿಯ ಯೋಗವಿದೆ. ನಿಮ್ಮಿಚ್ಛೆಯಂತೆ ಕಾರ್ಯಗಳು ನಡೆಯಲಿವೆ.

**ಕನ್ಯಾ:** ದೈವಾನುಗ್ರಹದಿಂದ ಸಂತಾನ ಭಾಗ್ಯದ ಸುದ್ದಿ ಕೇಳುವಿರಿ, ಅದರ ಫಲವಾಗಿ ಮನೆಯಲ್ಲಿ ಸಂಭ್ರಮ ಸಡಗರದ ವಾತಾವರಣ ಸೃಷ್ಟಿಯಾಗಲಿದೆ. ಪ್ರೀತಿ ಪಾತ್ರರಿಂದ ತಾತ್ಕಾಲಿಕವಾಗಿ ದೂರವಾಗುವ ಸಂಭವವಿದೆ.

**ತುಲಾ:** ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ನಿಮ್ಮ ನೂತನ ಯೋಜನೆಗಳಿಗೆ ಹಣಕಾಸಿನ ಕೊರತೆ ಇರುವುದಿಲ್ಲ. ಉರಿಯು-ತ್ತಿರುವಂತಹಾ ಬೆಂಕಿಗೆ ಶತ್ರುಗಳು ತುಪ್ಪ ಸುರಿಯಬಹುದು.

**ವೃಶ್ಚಿಕ:** ಕಳೆದುಹೋದ ದಿನಗಳ ಕುರಿತು ಆತ್ಮಾವಲೋಕನ ಮಾಡಿಕೊಳ್ಳು-ವುದರಿಂದ ಅನೇಕ ಪ್ರಶ್ನೆಗಳಿಗೆ ಉತ್ತರ ಸಿಗಲಿದೆ. ಮನೆಯಲ್ಲಿ ನೆಮ್ಮದಿಯ ವಾತಾವರಣ ವೃದ್ಧಿಯಾಗಲಿದೆ. ಸಣ್ಣಮಟ್ಟಿನ ಪ್ರಯಾಣ ಸಂಭವಿಸಲಿದೆ.

**ಧನು:** ನಿಮ್ಮ ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ನೀವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುವುದು. ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಸಾಕಷ್ಟು ಅವಕಾಶಗಳು ಸಿಗುವುದು.

**ಮಕರ:** ರಾಜಕೀಯ ವರ್ಗದವರಿಗೆ ದಿನ ದಿನೇ ಜನಪ್ರಿಯತೆ ಹೆಚ್ಚುವುದರಿಂದ ಶತ್ರುಪೀಡೆಯಂತಹ ಸಮಸ್ಯೆ ಕಂಡುಬರಲಿದೆ. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ. ನಿಮಗೆ ಹರ್ಷದ ಸಮಯವಾಗಿದೆ.

**ಕುಂಭ:** ಕಟ್ಟಡಗಳನ್ನು ಬಾಡಿಗೆಗೆ ಕೊಡುವುದರಿಂದಾಗಿ ಆರ್ಥಿಕವಾಗಿ ಅಭಿವೃದ್ಧಿ ಕಂಡುಬರುವುದು. ಸಿಟ್ಟು, ಒರಟುತನ ಏಕಾಂಗಿತನಕ್ಕೆ ಮುಖ್ಯ ಕಾರಣವಾಗುವುದು. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು.

**ಮೀನ:** ಸಂತೋಷದ ಮನೋಭಾವದಲ್ಲಿರುವ ನೀವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಧೈರ್ಯದಿಂದ ಕಾರ್ಯ ಪ್ರವೃತ್ತರಾದಲ್ಲಿ ಇಷ್ಟಾರ್ಥ ಸಿದ್ಧಿಸಲಿದೆ. ದೈನಂದಿನ ಕೆಲಸದಲ್ಲಿ ಬದಲಾವಣೆ ಇರುವುದಿಲ್ಲ.

## ಪದಬಂಧ 5878


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಈ ವಿಧವಾಗಿ ಪ್ರಾರಂಭವಾಗಿರುವ ಕಲಹ (3)
2.ಮಾನಿನಿಯ ಮೇಲೇ ಈ ಸಂದೇಹ! (3)
4.ಎಲ್ಲವೂ ನಶ್ವರವೆಂದು ಹೇಳುತ್ತಿರುವ ಮನುಷ್ಯ (2)
5.ಮರಿಗೆ ನೀಡಿರುವ ವೇತನ (3)
6.ಪ್ರಾಣಾಯಾಮಮಾಡುವಾಗ ಸಾವುಂಟುಮಾಡಿದವನು (2)
9.ಜ್ವಾಲಾಮುಖಿಯಿಂದ ಹೊರಹೊಮ್ಮುವ ಧಾತುಗಳರಸ (4)
11.ಈತ ಸಾಕ್ಷಾತ್ಕಾರ ಹೊಂದಿದವನು (4)
12.ತಟಾಕದ ದಡ (2)
14.ಪದ್ಮರಾಗಕ್ಕೆ ಅಂಟಿರುವ ಹೂವಿನ ಧೂಳು (3)
15.ಸರೋವರದ ಹತ್ತಿರ ಬಿದ್ದಿರುವ ಮಾಲೆ (2)
16.ಭಾಗಲಬ್ಧ ಗೊತ್ತಿರದ ಜಿಪುಣ! (3)
17.ಹತು ವರ್ಷಗಳ ಅವದಿ (3)

**ಮೇಲಿಂದ ಕೆಳಕ್ಕೆ**

1.ವರ ಕೊನೆಗಿದ್ದಾಗಲೇ ಇದು ವಿಸ್ತಾರ! (3)
2.ಜರ್ಜರಿತ ವಸ್ತುಗಳನ್ನು ಮಾರುವ ಅಂಗಡಿ (3)
3.ನಿಶ್ಚಿತಾರ್ಥಕ್ಕೆ ಹೋಗಬೇಕೆನ್ನುವ ಗೊತ್ತುವಳಿ! (3)
4.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
5.ಏರು ತಗ್ಗಿಲ್ಲದಿರುವುದು (3)
7.ಮರದ ಹತ್ತಿರ ನೋವಿನಿಂದ ನರಳುವವನಿಗೆ ಚಿತ್ತವಿಕಲ್ಪ (5)
8.ಪುಸ್ತಕದ ಪುಟ (2)
10.ಧಾನ್ಯಗಳ ನುಚ್ಚು (2)
11.ಅಣುವನ್ನು ಹಿಡಿದವನು ಪ್ರೀತಿಪಾತ್ರನಾದವನು (3)
13.ಟವಲು ಹಿಡಿದಾತನ ಕೈಯಲ್ಲಿರುವ ಅಂಚೆ (3)
14.ಪದ ಹೇಳಿ ಗಿಟ್ಟಿಸಿಕೊಂಡಿರುವ ಮೆಡಲು (3)
15.ಈತ ಸರಿಸಮನಾದವನು (3)



**5877ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:** 1.ಮತ್ತು 4.ಜ್ಞಾನಿ 6.ಹಣೆಬರಹ 7.ಗಡವ 9.ಜಳಕ 10.ದಳ್ಳಾಳಿತನ 11.ವಿಧಾನ 12.ನಾಸ್ತಿಕ 14.ಪರಿಚಾರಕ 17.ನೆಪ 18.ಮಚ್ಚು

**ಮೇಲಿಂದ ಕೆಳಕ್ಕೆ:** 1.ಮಲರೋಗ 2.ಜಾಣೆ 3.ಕ್ಷೌರ 5.ನಿರರ್ಥಕ 6.ಹಯವದನ 8.ಗಳಿಕೆ 9.ಜನನಾಯಕ 11.ವಿಜ್ಞಾಪನೆ 13.ಕಲಗಚ್ಚು 15.ರಿಕ್ತ 16.ರಫ್ತು

## ಸುಡೊಕು 6263

| | | | | | | | | |
|---|---|---|---|---|---|---|---|---|
| | 7 | 9 | | 5 | | 2 | | 8 |
| 5 | | 4 | 1 | | 8 | | | |
| | 8 | | | 7 | | | 5 | |
| | 6 | | 9 | 3 | | 1 | | 2 |
| 2 | | 5 | | | | | 8 | |
| | 3 | | | 8 | 2 | 5 | | 6 |
| | | | 5 | | 6 | | 2 | |
| 3 | | 2 | | | | | 6 | |
| | 5 | | | 2 | | 4 | | 1 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

**6262 ಸುಡೊಕು**

| | | | | | | | | |
|---|---|---|---|---|---|---|---|---|
| 7 | 5 | 9 | 3 | 1 | 6 | 4 | 8 | 2 |
| 2 | 3 | 6 | 8 | 4 | 9 | 5 | 1 | 7 |
| 4 | 1 | 8 | 7 | 5 | 2 | 3 | 9 | 6 |
| 9 | 7 | 3 | 4 | 2 | 1 | 6 | 5 | 8 |
| 5 | 6 | 4 | 9 | 3 | 8 | 2 | 7 | 1 |
| 8 | 2 | 1 | 6 | 7 | 5 | 9 | 3 | 4 |
| 6 | 8 | 7 | 2 | 9 | 3 | 1 | 4 | 5 |
| 1 | 9 | 2 | 5 | 8 | 4 | 7 | 6 | 3 |
| 3 | 4 | 5 | 1 | 6 | 7 | 8 | 2 | 9 |

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

ಸ್ವಾಮೀಜಿ ವಿರುದ್ಧ ಕ್ರಮಕ್ಕೆ ಮುಂದಾದಾಗ ಅಶೋಕ ಎಲ್ಲಿ ಹೋಗಿದ್ದರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನೆ

# ‘ಜೆಡಿಎಸ್ ಸರ್ಕಾರದಲ್ಲಿ ಚುಂಚಶ್ರೀ ವಿರುದ್ಧ ಪ್ರಕರಣ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಆದಿ ಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮೀಜಿಯವರ ಮೇಲೆ ಜನತಾದಳ ಸರ್ಕಾರ ಪ್ರಕರಣ ದಾಖಲಿಸಿದ್ದಾಗ ಆರ್. ಅಶೋಕ ಎಲ್ಲಿ ಹೋಗಿದ್ದರು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗೆ ಪೊಲೀಸರು ನೋಟಿಸ್ ಜಾರಿ ಮಾಡಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ‘ಸ್ವಾಮೀಜಿಯವರು ಮಾತನಾಡಿರುವುದು ತಪ್ಪು. ಕಾನೂನಿನ ವಿಷಯದಲ್ಲಿ ಯಾರಿಗೂ ದಾಕ್ಷಿಣ್ಯ ಇಲ್ಲ. ಅವರು ಕ್ಷಮಾಪಣೆಯನ್ನೂ ಕೇಳಿದ್ದಾರೆ. ಆದರೆ, ಅಶೋಕ ಅವರು ಬೆಂಕಿ ಇಟ್ಟು ಅದರಲ್ಲಿ ಬೀಡಿ ಸೇದಲು ಹೊರಟಿದ್ದಾರೆ’ ಎಂದರು.

‘ಬಾಲಗಂಗಾಧರನಾಥ ಸ್ವಾಮೀಜಿ ತಪ್ಪು ಮಾಡದಿದ್ದರೂ ಅಂದಿನ ಅರಣ್ಯ ಸಚಿವ ಚೆನ್ನಿಗಪ್ಪ ಅವರಿಂದ ಪ್ರಕರಣ ದಾಖಲಿಸಿದ್ದರು. ಸ್ವಾಮೀಜಿ ಜಾಮೀನು ಪಡೆಯಲು ಹೋರಾಡುತ್ತಿದ್ದಾಗ ಅಶೋಕಣ್ಣ ಸೇರಿದಂತೆ ಉಳಿದವರೆಲ್ಲ ಎಲ್ಲಿದ್ದರು’ ಎಂದು ಪ್ರಶ್ನಿಸಿದರು.

ಶಿವಕುಮಾರ್ ಒಕ್ಕಲಿಗ ಸಮುದಾಯವನ್ನು ಬೇಕಾದಾಗ ಬಳಸಿಕೊಳ್ಳುತ್ತಾರೆ ಎಂದು ಅಶೋಕ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನಾನು ಸಮುದಾಯ ಬಳಸಿಕೊಳ್ಳಬೇಕಿಲ್ಲ, ಅದರಲ್ಲಿ ನಾನು ಹುಟ್ಟಿದ್ದೇನೆ. ಯಾರ ಹಕ್ಕಿನ ಬಗ್ಗೆಯೂ ಮಾತನಾಡುವುದು ಯಾರಿಗೂ ಸರಿಯಲ್ಲ’ ಎಂದರು.

## ವಿಚಾರಣೆಗೆ ಹೋಗಲಾಗಲ್ಲ



ಅನಾರೋಗ್ಯ ಕಾರಣದಿಂದಾಗಿ ಸೋಮವಾರ ವಿಚಾರಣೆಗೆ ಹೋಗಲು ಆಗುವುದಿಲ್ಲ. ಪೊಲೀಸರೇ ಬಂದು ವಿಚಾರಣೆ ಮಾಡುವುದಾಗಿ ಹೇಳಿದ್ದಾರೆ. ನನಗೆ ಕ್ಯಾನ್ಸರ್ ಇದೆ. ನಡೆಯಲು ಆಗುವುದಿಲ್ಲ

**ಕುಮಾರ ಚಂದ್ರಶೇಖರನಾಥ ಸ್ವಾಮೀಜಿ,** ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ

## ಸಚಿವನ ವಿರುದ್ಧ ಏನು ಕ್ರಮ

ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಿ, ನೋಟಿಸ್ ಕೊಟ್ಟಿರುವ ಸರ್ಕಾರ ನನ್ನ ಬಣ್ಣ ನಿಂದಿಸಿದ ಸಚಿವನ ವಿರುದ್ಧ ಏನು ಕ್ರಮ ಕೈಗೊಂಡಿದೆ? ಯಾಕೆ ಪ್ರಕರಣ ದಾಖಲಿಸಿ ನೋಟಿಸ್ ಕೊಟ್ಟಿಲ್ಲ? ಕಾಂಗ್ರೆಸ್ ಓಲೈಕೆ ರಾಜಕಾರಣ ಇದೇ ರೀತಿ ಮುಂದುವರಿದರೆ ರಾಜ್ಯದಲ್ಲಿ ಅರಾಜಕತೆ ಶುರುವಾಗುತ್ತದೆ

**ಎಚ್‌.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

## ಜೈಲಿಗೆ ಕಳುಹಿಸುತ್ತಿರಾ?

ಚುನಾವಣಾ ಸಮಯದಲ್ಲಿ ಸಾಧು, ಸಂತರ ಕಾಲಿಗೆ ಬೀಳುತ್ತಿರಿ. ಆದರೆ ಈಗ ಅವರ ಮೇಲೆಯೇ ಎಫ್‌ಐಆರ್ ಮಾಡಿಸುತ್ತೀರಿ. ಸ್ವಾಮೀಜಿಯನ್ನು ಜೈಲಿಗೆ ಕಳುಹಿಸುತ್ತಿರಾ?

**ಡಾ.ಕೆ.ಸುಧಾಕರ್,** ಬಿಜೆಪಿ ಸಂಸದ, ಚಿಕ್ಕಬಳ್ಳಾಪುರ

## ‘ಬಂಧನ ಪೊಲೀಸರಿಗೆ ಬಿಟ್ಟ ವಿಷಯ’

**ಮಂಗಳೂರು:** ‘ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಅವರನ್ನು ಬಂಧಿಸಬೇಕೇ ಬೇಡವೇ ಎಂಬುದನ್ನು ಪೊಲೀಸರು ನಿರ್ಧರಿಸುತ್ತಾರೆ’ ಎಂದು ಗೃಹಸಚಿವ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಸ್ವಾಮೀಜಿ ಹೇಳಿಕೆಗೆ ಸಂಬಂಧಿಸಿ ಕಾನೂನು ಚೌಕಟ್ಟಿನಲ್ಲಿ ಏನು ಮಾಡಬೇಕೋ ಅದನ್ನು ಮಾಡಲಾಗುವುದು. ಆ ಪ್ರಕ್ರಿಯೆಯನ್ನು ಪೊಲೀಸರು ನಿಭಾಯಿಸಲಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ಅದರ ಮುಂದೆ ಯಾರೂ ದೊಡ್ಡವರಲ್ಲ’ ಎಂದರು.

## ಸುವರ್ಣ ಸೌಧ 16ರಂದು ರೈತ ಸಂಘಗಳ ಮುತ್ತಿಗೆ

**ಹೊಸಪೇಟೆ (ವಿಜಯನಗರ):** ‘ರಾಜ್ಯದ ಎಲ್ಲ 21 ರೈತಸಂಘಗಳು ಒಗ್ಗೂಡಿ ಡಿಸೆಂಬರ್ 16ರಂದು ಬೆಳಗಾವಿಯ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲಿವೆ’ ಎಂದು ರೈತ ಮುಖಂಡರಾದ ಪಚ್ಚೆ ನಂಜುಂಡಸ್ವಾಮಿ ಹೇಳಿದರು.

‘ರೈತರಲ್ಲಿ ಭಾರಿ ಶಕ್ತಿಯಿದೆ. ಆದರೆ, ಎಲ್ಲರೂ ಚದುರಿದಂತೆ ಇರುವ ಕಾರಣ ಸರ್ಕಾರಕ್ಕೆ ಬಿಸಿ ಮುಟ್ಟುತ್ತಿಲ್ಲ. ರೈತ ನೇತಾರ ದಿ.ನಂಜುಂಡಸ್ವಾಮಿ ಅವರ ಕಾಲದಲ್ಲಿ ಕಡಿಮೆ ಅವಧಿಯಲ್ಲಿ ಸಾವಿರಾರು ರೈತರು ಬೆಂಗಳೂರಿನಲ್ಲಿ ಜಮಾಯಿಸಿ, ಹೋರಾಡಿದ್ದರು. ಅಂಥ ಒಗ್ಗಟ್ಟು ಮತ್ತೆ ತೋರಬೇಕಿದೆ’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ಆರೋಗ್ಯ ಇಲಾಖೆಯೇ ಅನಾರೋಗ್ಯದಲ್ಲಿದೆ; ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಿಡಿ

# ‘11 ತಿಂಗಳಲ್ಲಿ 111 ನವಜಾತ ಶಿಶುಗಳ ಸಾವು’

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ಮಧ್ಯ ಕರ್ನಾಟಕದಲ್ಲೇ ಜನವರಿಯಿಂದ 111 ನವಜಾತ ಶಿಶುಗಳು ಮೃತಪಟ್ಟಿವೆ. ಸಿಸೇರಿಯನ್ ಆದ 27 ತಾಯಂದಿರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಆರೋಗ್ಯ ಇಲಾಖೆಗೆ ಅನಾರೋಗ್ಯ ಬಡಿದಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆರೋಗ್ಯ ಇಲಾಖೆಯು ಭ್ರಷ್ಟಾಚಾರ, ಸ್ವಜನಪಕ್ಷಪಾತ, ನಿರ್ಲಕ್ಷ್ಯ, ದುರಹಂಕಾರದಿಂದ ತುಂಬಿ ತುಳುಕಿ ಇವತ್ತು ನಮ್ಮ ರಾಜ್ಯದ ಮಹಿಳೆಯರ ಮತ್ತು ಮಕ್ಕಳ ಸಾವಿಗೆ ಕಾರಣವಾಗುತ್ತಿದೆ’ ಎಂದರು.

ರಿಂಗರ್ ಲ್ಯಾಕ್ಟೇಟ್ ದ್ರಾವಣವನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಆದರೂ, ರಾಜ್ಯದಲ್ಲಿ ಸರಬರಾಜು ಆಗುತ್ತಿದೆ. ನಿಷೇಧಿತ ಔಷಧವನ್ನು ಮಹಿಳೆಯರಿಗೆ ನೀಡಲಾಗಿದೆ. ಪಶ್ಚಿಮ ಬಂಗಾ ಎಂಬ ಶೆಲ್ ಕಂಪನಿಯ ಮೂಲಕ ನಕಲಿ ಔಷಧ ಪೂರೈಕೆ ಮಾಡಲಾಗಿದೆ. ಸಿದ್ದರಾಮಯ್ಯ ಸರ್ಕಾರವು ಕೊಲೆಗಡುಕ ಸರ್ಕಾರ ಆಗಿದೆ ಎಂದು ಅವರು ಕಿಡಿಕಾರಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

‘ಲೋಕಾಯುಕ್ತದವರು ಆಸ್ಪತ್ರೆಗಳಿಗೆ ಭೇಟಿ ನೀಡಿ ಛೀಮಾರಿ ಹಾಕಿದ್ದಾರೆ. ಹಲವಾರು ತಜ್ಞರ ತಂಡಗಳು ಆಸ್ಪತ್ರೆಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ವರದಿ ಕೊಟ್ಟಿವೆ. ಆಸ್ಪತ್ರೆಗೆ ಹೋಗುವ ಸಾರ್ವಜನಿಕರು ಬದುಕಿ ವಾಪಸ್ ಬರುವುದಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಮುಖ್ಯಮಂತ್ರಿ ಹಾಗೂ ಸಚಿವರ ದುಡ್ಡಿನ ಆಸೆಗೆ ಬಡವರು ಬಲಿಯಾಗುತ್ತಿದ್ದಾರೆ. ಕೇಂದ್ರ ಜನೌಷಧಿ ಕೇಂದ್ರಗಳನ್ನು ಮುಚ್ಚುತ್ತೇವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಹೇಳಿಕೆ ನೀಡಿದ್ದಾರೆ. ಅವರು ದಂಧೆ ಮಾಡಲು ಹೊರಟಿದ್ದಾರೆ. ಇನ್ಯಾವುದೋ ಶೆಲ್ ಕಂಪನಿಗೆ ಟೆಂಡರ್ ಕೊಡಲು ಹೊರಟಿದ್ದಾರೆ’ ಎಂದು ಅವರು ದೂರಿದರು.

## ಬಳ್ಳಾರಿ: ಮೂವರು ಬಾಣಂತಿಯರಿಗೆ ಇಲಿ ಜ್ವರ

**ಬಳ್ಳಾರಿ:** ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಸಿಸೇರಿಯನ್‌ಗೆ ಒಳಗಾಗಿ, ಬಳ್ಳಾರಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ (ವಿಮ್ಸ್) ದಾಖಲಾಗಿದ್ದ ಐವರು ಬಾಣಂತಿಯರ ಪೈಕಿ ಮೂವರಿಗೆ ಇಲಿ ಜ್ವರ (ಲೆಪ್ಟೊಸ್ಪಿರೋಸಿಸ್) ಇದ್ದಿದ್ದು ಖಚಿತವಾಗಿದೆ.

‘ಬಾಣಂತಿಯರ ಪರೀಕ್ಷಾ ವರದಿಗಳು ಕೈಸೇರಿವೆ. ವಿಮ್ಸ್‌ಗೆ ದಾಖಲಾಗಿದ್ದ ಐವರು ಬಾಣಂತಿಯರ ಪೈಕಿ ಸುಮಲತಾ, ಮಹಾಲಕ್ಷ್ಮಿ ಮತ್ತು ಸುಮಯಾ ಎಂಬುವರಿಗೆ ಇಲಿ ಜ್ವರ ಇದ್ದಿದ್ದು ಖಚಿತವಾಗಿದೆ. ಸುಮಲತಾ ಮತ್ತು ಮಹಾಲಕ್ಷ್ಮಿ ಗುಣಮುಖರಾಗಿ, ಮನೆಗೆ ಮರಳಿದ್ದಾರೆ’ ಎಂದು ವಿಮ್ಸ್ ನಿರ್ದೇಶಕ ಡಾ. ಗಂಗಾಧರ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸುಮಯಾ ಅವರಿಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಮುಂದುವರೆದಿದೆ. ಅವರ ಸ್ಥಿತಿ ಮೊದಲಿಗಿಂತಲೂ ಈಗ ಬಹಳಷ್ಟು ಸುಧಾರಿಸಿದೆ. ಅವರ ಮೂತ್ರಪಿಂಡದಲ್ಲಿ ಇನ್ನೂ ಸಮಸ್ಯೆ ಇದೆ’ ಎಂದು ಅವರು ತಿಳಿಸಿದರು.

ಜಿಲ್ಲಾಸ್ಪತ್ರೆಯಲ್ಲಿ ನವೆಂಬರ್ 9 ರಿಂದ 11ರ ನಡುವಿನ ಅವಧಿಯಲ್ಲಿ ಸಿಸೇರಿಯನ್‌ಗೆ ಒಳಗಾಗಿದ್ದ 7 ಮಹಿಳೆಯರ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ಇವರಲ್ಲಿ ಇಬ್ಬರು ಜಿಲ್ಲಾಸ್ಪತ್ರೆಯಲ್ಲೇ ಮೃತಪಟ್ಟಿದ್ದರು. ಹೀಗಾಗಿ ಉಳಿದ ಐವರನ್ನು ವಿಮ್ಸ್‌ಗೆ ದಾಖಲಿಸಲಾಗಿತ್ತು. ಅಲ್ಲಿ ಇಬ್ಬರು ಕೊನೆಯುಸಿರೆಳೆದಿದ್ದರು.

**ಇಂದು ಆರ್.ಅಶೋಕ ಭೇಟಿ:** ಬಾಣಂತಿಯರ ಸಾವಿನ ಹಿನ್ನೆಲೆಯಲ್ಲಿ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಭಾನುವಾರ ವಿಮ್ಸ್‌ಗೆ ಭೇಟಿ ನೀಡುವರು. ಮಧ್ಯಾಹ್ನ 12 ರಿಂದ 1ಗಂಟೆ ಅವಧಿಯಲ್ಲಿ ವಿಮ್ಸ್‌ಗೆ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆಯುವರು.

# ಆರ್‌ಎಲ್ ದ್ರಾವಣ ಕಾರಣ: ಶಂಕೆ

ಪ್ರಯೋಗಾಲಯದ ವರದಿ ಬಳಿಕ ಕ್ರಮ: ಸಚಿವ ದಿನೇಶ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬಳ್ಳಾರಿಯ ಜಿಲ್ಲಾಸ್ಪತ್ರೆಯಲ್ಲಿ ಬಾಣಂತಿಯರ ಸಾವಿಗೆ ರಿಂಗರ್ ಲ್ಯಾಕ್ಟೇಟ್ ದ್ರಾವಣ ಕಾರಣವೆಂಬ ಅನುಮಾನವಿದೆ. ಈ ಕುರಿತು ಪ್ರಯೋಗಾಲಯದಿಂದ ವರದಿ ಬರಬೇಕಿದೆ. ಈಗಾಗಲೇ ಅನರೋಬಿಕ್ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಳ್ಳಾರಿ ಜಿಲ್ಲಾಸ್ಪತ್ರೆಯಲ್ಲಿ ಒಟ್ಟು 2,600 ಸರ್ಜರಿಗಳು ನಡೆದಿವೆ. ಸಾಕಷ್ಟು ಸಿಸೇರಿಯನ್‌ಗಳನ್ನು ಮಾಡಲಾಗಿದೆ. ಯಾರೊಬ್ಬರ ಸಾವು ಸಂಭವಿಸಿರಲಿಲ್ಲ. ಮೊದಲ ಬಾರಿಗೆ ನಾಲ್ವರು ಬಾಣಂತಿಯರು ಸಾವಿಗೀಡಾಗಿರುವುದು ಈ ದ್ರಾವಣದ ಮೇಲೆ ಅನುಮಾನ ಬರುವಂತೆ ಮಾಡಿದೆ’ ಎಂದರು.

‘ದ್ರಾವಣದ ಗುಣಮಟ್ಟ ಪರೀಕ್ಷೆಯ ವರದಿ ಬರಲು ಒಂಬತ್ತು ದಿನ ಬೇಕು. ವರದಿ ಬಂದ ನಂತರ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

‘ರಿಂಗರ್ ಲ್ಯಾಕ್ಟೇಟ್ ದ್ರಾವಣ ಪೂರೈಸಿದ ಕಂಪನಿಯನ್ನು ನಾವು ಕಪ್ಪುಪಟ್ಟಿಗೆ ಸೇರಿಸಿದ್ದೆವು. ಆದರೆ, ಕಂಪನಿಯವರು ಹೈಕೋರ್ಟ್ ಮೊರೆ ಹೋಗಿ ಕೇಂದ್ರ ಔಷಧ ಪ್ರಯೋಗಾಲಯದಿಂದ ಐವಿ ದ್ರಾವಣ ಬಳಕೆ ಮಾಡಬಹುದು ಎಂದು ದೃಢೀಕರಣ ವರದಿ ತಂದಿದ್ದರು. ಔಷಧ ನಿಯಂತ್ರಕರು 92 ಬ್ಯಾಚ್ ಪರೀಕ್ಷೆ ಮಾಡಿದ್ದರು. ಈ ಪೈಕಿ, 22 ಬ್ಯಾಚ್‌ಗಳ ದ್ರಾವಣವು ಗುಣಮಟ್ಟ ಹೊಂದಿಲ್ಲ ಎಂದು ವರದಿ ನೀಡಿದ್ದರು. ಕೇಂದ್ರ ಔಷಧ ಪ್ರಯೋಗಾಲಯದಿಂದ ಐವಿ ದ್ರಾವಣ ಬಳಕೆ ಮಾಡಬಹುದೆಂದು ವರದಿ ನೀಡಿದ್ದರೂ, ಔಷಧ ನಿಯಂತ್ರಕರ ವರದಿಯಲ್ಲಿ ಪತ್ತೆಯಾಗಿದ್ದ ಗುಣಮಟ್ಟ ಇಲ್ಲದ 22 ಬ್ಯಾಚ್‌ಗಳ ದ್ರಾವಣವನ್ನು ಆಸ್ಪತ್ರೆಗಳಿಗೆ ಪೂರೈಸಿಲ್ಲ. ಗುಣಮಟ್ಟ ಇದೆ ಎಂದು ಹೇಳಿದ್ದ ಕೆಲವು ಬ್ಯಾಚ್‌ಗಳನ್ನು ಮಾತ್ರ ಔಷಧಿ ಸರಬರಾಜು ನಿಗಮ ಆಸ್ಪತ್ರೆಗಳಿಗೆ ಪೂರೈಸಿತ್ತು’ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಬಳ್ಳಾರಿ ಪ್ರಕರಣದಲ್ಲಿ ವೈದ್ಯರ ತಪ್ಪಿಲ್ಲ ಎಂದು ತಜ್ಞರ ಸಮಿತಿ ವರದಿ ನೀಡಿದೆ’ ಎಂದರು.

## ಅವಧಿ ಮೀರಿದ ಔಷಧಿ ಪತ್ತೆ



ಬೆಳಗಾವಿಯ ಜಿಲ್ಲಾ ಔಷಧ ಉಗ್ರಾಣದ ಮೇಲೆ ಲೋಕಾಯುಕ್ತ ಡಿಎಸ್ಪಿ ಬಿ.ಎಸ್.ಪಾಟೀಲ, ಸಿಪಿಐ ನಿರಂಜನ ಪಾಟೀಲ ನೇತೃತ್ವದಲ್ಲಿ ಶನಿವಾರ ದಾಳಿ ನಡೆಸಲಾಯಿತು

**ಬೆಳಗಾವಿ:** ಇಲ್ಲಿನ ಜಿಲ್ಲಾ ಔಷಧಿ ಉಗ್ರಾಣದ ಮೇಲೆ ಶನಿವಾರ ದಾಳಿ ಮಾಡಿದ ಲೋಕಾಯುಕ್ತರ ತಂಡ, ಅವಧಿ ಮೀರಿದ ಮತ್ತು ಬಳಕೆಗೆ ಸೂಕ್ತವಲ್ಲದ ಔಷಧಿಗಳ ಡಬ್ಬಿಗಳನ್ನು ಪತ್ತೆ ಮಾಡಿದೆ.

‘ಬಳ್ಳಾರಿಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾಗಿದೆ ಎನ್ನಲಾದ ‘ಆರ್‌ಎಲ್‌ಎಸ್ ಐವಿ ಗ್ಲುಕೋಸ್’ನ ಸಾಕಷ್ಟು ಡಬ್ಬಿಗಳು ಪತ್ತೆಯಾಗಿವೆ. ಪಿಬಿಪಿ ಎಂಬ ಸಂಸ್ಥೆ ಇವುಗಳನ್ನು ಪೂರೈಸಿದೆ. ಅವು ಬಳಕೆಗೆ ಯೋಗ್ಯ ಇವೆ ಅಥವಾ ಇಲ್ಲವೇ ಎಂಬುದು ಖಾತ್ರಿ ಆಗಬೇಕಿದೆ. ಔಷಧಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಲೋಕಾಯುಕ್ತ ಎಸ್‌ಪಿ ಹನುಮಂತರಾಯ ತಿಳಿಸಿದರು.

‘ಅಪಾರ ಪ್ರಮಾಣದ ಔಷಧಿಗಳ ಬಳಕೆ ಅವಧಿ ಮುಗಿದು ಎರಡು ವರ್ಷವಾಗಿದೆ. ಅವುಗಳನ್ನು ನಾಶ ಮಾಡಬೇಕಿತ್ತು. ಆದರೆ, ಏಕೆ ಅವುಗಳನ್ನು ಇಟ್ಟುಕೊಳ್ಳಲಾಗಿದೆ ಎಂಬ ಬಗ್ಗೆ ವಿಚಾರಣೆ ನಡೆಯಬೇಕಿದೆ. ಇದೇ ಔಷಧಿಗಳನ್ನು ರೋಗಿಗಳಿಗೆ ನೀಡಲಾಗಿದೆಯೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ’ ಎಂದರು.

# ಕೆಡಿಪಿ ಸಭೆಯಲ್ಲಿ ಸಿ.ಎಂ ಕಾರ್ಯದರ್ಶಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯದರ್ಶಿಯೂ ಆಗಿರುವ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಬಿ.ಬಿ. ಕಾವೇರಿ ಅವರು ಶನಿವಾರ ಇಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ವೇಳೆ ಅಸ್ವಸ್ಥಗೊಂಡರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಚಿವ ಮಧು ಬಂಗಾರಪ್ಪ ನೇತೃತ್ವದಲ್ಲಿ ನಡೆದ ಸಭೆಯ ವೇಳೆ ಕಾವೇರಿ ಅವರು ಏಕಾಏಕಿ ಬಳಲಿಕೆಗೆ ಒಳಗಾದರು. ಸಭೆಯಲ್ಲಿದ್ದ ವಿಧಾನಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ತಕ್ಷಣ ಪ್ರಥಮ ಚಿಕಿತ್ಸೆ ನೀಡಿದರು.



ಬಿ.ಬಿ.ಕಾವೇರಿ

ಕೆಲಹೊತ್ತು ಸಭಾಂಗಣದ ಕೊಠಡಿಯಲ್ಲಿ ವಿಶ್ರಾಂತಿ ಪಡೆದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದುರ್ಗಿಗುಡಿಯ ಸರ್ಜಿ ಆಸ್ಪತ್ರೆಗೆ ದಾಖಲಿಸಲಾಯಿತು.

‘ಅಧಿಕರಕ್ತದೊತ್ತಡಹಾಗೂಸೋಂಕಿನಿಂದ ಕಾವೇರಿ ಅವರು ಬಳಲಿದ್ದರು. ಅಗತ್ಯ ಚಿಕಿತ್ಸೆ ನೀಡಲಾಗಿದೆ. ಚೇತರಿಸಿಕೊಂಡಿದ್ದಾರೆ’ ಎಂದು ಡಾ.ಧನಂಜಯ ಸರ್ಜಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

## ರಾಜ್ಯ ಔಷಧ ನಿಯಂತ್ರಕ ಅಮಾನತು

**ಒಂದನೇ ಪುಟದಿಂದ..**

‘ರಿಂಗರ್ ಲ್ಯಾಕ್ಟೇಟ್ ದ್ರಾವಣದಿಂದ ರಾಜ್ಯದ ಇತರ ಕಡೆಗಳಲ್ಲಿಯೂ ಸಮಸ್ಯೆ ಆಗಿದೆಯೇ ಎಂಬ ಬಗ್ಗೆ ತಕ್ಷಣ ಸಮಗ್ರ ವರದಿ ಪಡೆಯಬೇಕು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಮುಖ್ಯಮಂತ್ರಿ, ‘ಇನ್ನು ಮುಂದೆ ಈ ರೀತಿಯ ದುರ್ಘಟನೆಗಳು ನಡೆಯದಂತೆ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕು’ ಎಂದು ಸೂಚಿಸಿದರು.

ಔಷಧ ಮಾಫಿಯಾ ನಿಯಂತ್ರಣಕ್ಕೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯ ಇದೆ ಎನ್ನುವ ಅಭಿಪ್ರಾಯ ಸಭೆಯಲ್ಲಿ ಹಲವರಿಂದ ವ್ಯಕ್ತವಾದವು.

## ಸಂಕ್ಷಿಪ್ತ ಸುದ್ದಿ

### ₹ 25 ಸಾವಿರ ಲಂಚ ಭೂಮಾಪಕ ಬಂಧನ

**ಹಾವೇರಿ:** ಕೃಷಿ ಜಮೀನಿನ ನಕಾಶೆ ನೀಡಲು ₹ 25 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು, ₹ 15 ಸಾವಿರ ಲಂಚ ಪಡೆಯುತ್ತಿದ್ದ ಆರೋಪದಡಿ ಭೂಮಾಪಕ ಅಶೋಕ ಎಚ್.ಜಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.



ಅಶೋಕ

‘ಹಾವೇರಿ ತಾಲ್ಲೂಕಿನ ಕಳ್ಳಿಹಾಳ ಗ್ರಾಮದ ರೈತ ಮಂಜುನಾಥ ಕಡ್ಲಿ ಅವರು ತಮ್ಮ ಜಮೀನಿನ ಪಾಲುಪತ್ರಕ್ಕಾಗಿ (ವಾಟ್ನಿ) ಅರ್ಜಿ ಸಲ್ಲಿಸಿದ್ದರು. ಅದಕ್ಕೆ ಜಮೀನಿನ ನಕಾಶೆ ಬೇಕಿತ್ತು. ನಕಾಶೆ ನೀಡಲು ಕೋರಿ ಹಾವೇರಿ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಭೂಮಾಪಕ ಅಶೋಕ ಬಳಿ ಅರ್ಜಿ ಸಲ್ಲಿಸಿದ್ದರು. ನಕಾಶೆಗಾಗಿ ಅಶೋಕ ಎಚ್.ಜಿ ₹ 25 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ಮಂಜುನಾಥ ದೂರು ನೀಡಿದ್ದರು. ಶನಿವಾರ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು’ ಎಂದು ಲೋಕಾಯುಕ್ತ ಪೊಲೀಸ್ ಡಿವೈಎಸ್ಪಿ ಬಿ.ಪಿ. ಚಂದ್ರಶೇಖರ್ ತಿಳಿಸಿದರು.

### ₹3 ಕೋಟಿ ಮೌಲ್ಯದ ಮೊಬೈಲ್ ಕಳ್ಳತನ!

**ಚಿಕ್ಕಬಳ್ಳಾಪುರ:** ನೋಯ್ಡಾದಿಂದ ಬೆಂಗಳೂರಿಗೆ ಕಂಟೇನರ್‌ನಲ್ಲಿ ಸಾಗಿಸುತ್ತಿದ್ದ ಎಂ.ಐ ಕಂಪನಿಯ ಅಂದಾಜು ₹3 ಕೋಟಿ ಮೌಲ್ಯದ ಮೊಬೈಲ್ ಕಳ್ಳತನವಾಗಿವೆ. ಕಂಟೇನರ್‌ನಲ್ಲಿ ಒಟ್ಟು 6,660 ಮೊಬೈಲ್ ಸಾಗಿಸಲಾಗುತ್ತಿತ್ತು.

ನೋಯ್ಡಾದಿಂದ ಮೊಬೈಲ್ ಸಾಗಿಸುತ್ತಿದ್ದ ಕಂಟೇನರ್ ಅನ್ನು (ಎನ್‌ಎಲ್ 01 ಎಎಫ್ 2743) ಚಾಲಕ ರಾಹುಲ್ ಗುರುವಾರ ತಾಲ್ಲೂಕಿನ ರೆಡ್ಡಿಗೊಲ್ಲಾರಹಳ್ಳಿ ಗ್ರಾಮದ ಕ್ರಾಸ್ ಬಳಿ ನಿಲ್ಲಿಸಿ ನಾಪತ್ತೆ ಆಗಿದ್ದಾನೆ.

ನಿಗದಿತ ಸಮಯಕ್ಕೆ ಕಂಟೇನರ್ ಬೆಂಗಳೂರು ತಲುಪದ ಕಾರಣ ಕಂಪನಿ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ. ರೆಡ್ಡಿಗೊಲ್ಲಾರಹಳ್ಳಿ ಕ್ರಾಸ್ ಬಳಿ ಕಂಟೇನರ್ ನಿಂತಿರುವುದನ್ನು ಕಂಪನಿ ಸಿಬ್ಬಂದಿ ಜಿಪಿಎಸ್ ಮೂಲಕ ಪತ್ತೆ ಹಚ್ಚಿದ್ದಾರೆ. ತಕ್ಷಣ ಪೆರೇಸಂದ್ರ ಠಾಣೆಗೆ ಮಾಹಿತಿ ನೀಡಿದ ಕಂಪನಿ ವ್ಯವಸ್ಥಾಪಕರು ನಂತರ ದೂರು ದಾಖಲಿಸಿದ್ದಾರೆ.



ನೋಯ್ಡಾದಿಂದ ಬೆಂಗಳೂರಿಗೆ ಮೊಬೈಲ್ ಸಾಗಿಸುತ್ತಿದ್ದ ಕಂಟೇನರ್

‘ಕಂಟೇನರ್‌ನಲ್ಲಿದ್ದ ಶೇ 80ರಿಂದ 90ರಷ್ಟು ಮೊಬೈಲ್ ಕಳ್ಳತನವಾಗಿವೆ. ಕಂಟೇನರ್ ಅನ್ನು ಕಂಪನಿ ಸುಪರ್ದಿಗೆ ನೀಡಲಾಗಿದೆ. ಕಂಪನಿಯವರು ಚಾಲಕನ ಮೇಲೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದಾರೆ. ತನಿಖೆ ನಡೆಯುತ್ತಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ‘ಪ್ರಜಾವಾಣಿ’ಗೆ ತಿಳಿಸಿದರು.

# ದೀಪದ ಬೆಳಕಿನಲ್ಲಿ ಕಂಗೊಳಿಸಿದ ಧರ್ಮಸ್ಥಳ

ಪ್ರಜಾವಾಣಿ ವಾರ್ತೆ

**ಧರ್ಮಸ್ಥಳ (ದಕ್ಷಿಣ ಕನ್ನಡ):** ಸಾಲು ಸಾಲು ದೀಪಗಳ ಬೆಳಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳವು ಕಂಗೊಳಿಸುತ್ತಿದ್ದಂತೆಯೇ ಶ್ರೀ ಮಂಜುನಾಥ ಸ್ವಾಮಿಯ ಭಕ್ತರು ಈ ನಯನ ಮನೋಹರ ದೃಶ್ಯ ಕಣ್ತುಂಬಿಕೊಂಡರು.

ಶನಿವಾರ ರಾತ್ರಿ ನೆರವೇರಿದ ಲಕ್ಷದೀಪೋತ್ಸವದಲ್ಲಿ, ನಾಡಿನ ವಿವಿಧೆಡೆಯಿಂದ ಬಂದಿರುವ ಭಕ್ತರು ದೇವಸ್ಥಾನದ ಎದುರಿನ ಬೀದಿಯಲ್ಲಿ ಹಣತೆಗಳನ್ನು ಹೊತ್ತಿಸಿ, ಪೂಜೆ ಸಲ್ಲಿಸಿದರು.

ಈ ಜಾತ್ರೆಯ ಅಂಗವಾಗಿ ಕಲೆ, ಸಾಹಿತ್ಯ, ಸಾಂಸ್ಕೃತಿಕ ಲೋಕಗಳು ಕ್ಷೇತ್ರದಲ್ಲಿ ಮೇಳೈಸಿದ್ದವು. ಬಗೆ ಬಗೆಯ ಕಲೆ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳು ಭಕ್ತರು ಭಾವ ಪರವಶವಾಗುವಂತೆ ಮಾಡಿದವು.

**ಕಲಾವೈಭವ:** ನಾಡಿನ ಬೇರೆ ಬೇರೆ ಊರುಗಳಿಂದ ಬಂದಿದ್ದ ಡೊಳ್ಳು ಕುಣಿತ, ಕೋಲಾಟ, ಕೊಂಬು, ಕಹಳೆ, ಜಾಗಟೆ, ಶಂಖ, ಸಣ್ಣಾಟ, ವೀರಗಾಸೆ ಮೊದಲಾದ 4,330 ಜಾನಪದ ಕಲಾವಿದರು 1,002 ತಂಡಗಳಲ್ಲಿ ಅಹೋರಾತ್ರಿ ಕಲಾ ಸೇವೆ ನೀಡಿದರು. ವಿವಿಧ ಕಲಾ ತಂಡಗಳು ಧರ್ಮಸ್ಥಳದ ಬೀದಿ ಬೀದಿಗಳಲ್ಲಿ ಪ್ರದರ್ಶನ ನೀಡುತ್ತಿದ್ದಂತೆಯೇ ಮೋಹಕ ಕಲಾಲೋಕವೇ ಇಲ್ಲಿ ಮೈದಳೆದಿತ್ತು.

**ಭಕ್ತರಿಂದ ಅನ್ನದಾಸೋಹ:** ಧರ್ಮಸ್ಥಳದಲ್ಲಿ ಲಕ್ಷ ದೀಪೋತ್ಸವದಂದು ಕ್ಷೇತ್ರದ ವತಿಯಿಂದ ರಾತ್ರಿ ಅನ್ನದಾಸೋಹ ಇರುವುದಿಲ್ಲ. ಬೇರೆ ಬೇರೆ ಊರುಗಳಿಂದ ಬಂದ ಭಕ್ತರೇ ಬಗೆ ಬಗೆಯ ತಿಂಡಿ ತಿನಿಸುಗಳನ್ನು ಕ್ಷೇತ್ರದಲ್ಲಿ ತಯಾರಿಸಿ ಭಕ್ತರಿಗೆ ಉಚಿತವಾಗಿ ಕೊಡುವುದು ಇಲ್ಲಿ ವಾಡಿಕೆ.

ಸಂಜೆ 4 ರಿಂದ ಆರಂಭವಾದ ಈ ದಾಸೋಹದಲ್ಲಿ ಸಾವಿರಾರು ಸ್ವಯಂ ಸೇವಕರು ಸಮರ್ಪಣಾ ಭಾವದಿಂದ ತೊಡಗಿಸಿಕೊಂಡರು. ಅನ್ನ ಸಾಂಬಾರ್, ವಾಂಗಿ ಬಾತ್, ಟೊಮೆಟೊ ಬಾತ್, ರಾಗಿಮುದ್ದೆ, ರುಮಾಲ್ ರೋಟಿ, ಚಪಾತಿ, ಒಬ್ಬಟ್ಟು, ಪಾಯಸ ಮೊದಲಾದ ಸವಿಯೂಟ ಉಣಬಡಿಸಿದರು.

**ಸಾಹಿತ್ಯ ಸಮ್ಮೇಳನ:** ಇಲ್ಲಿನ ಅಮೃತ ವರ್ಷಿಣಿ ಸಭಾಂಗಣದಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ 92 ನೇ ಧರ್ಮಸ್ಥಳ ಸಾಹಿತ್ಯ ಸಮ್ಮೇಳನ ನಡೆಯಿತು. ವಿದ್ವಾಂಸ ಶತಾವಧಾನಿ ಆರ್. ಗಣೇಶ್ ಉದ್ಘಾಟಿಸಿದರು. ವಿದ್ವಾಂಸ ಪಾದೆಕಲ್ಲು ವಿಷ್ಣು ಭಟ್ಟ ಅಧ್ಯಕ್ಷತೆ ವಹಿಸಿದ್ದರು. ಕನ್ನಡದ ನಿವೃತ್ತ ಪ್ರಾಧ್ಯಾಪಕಿ ಬೆಂಗಳೂರಿನ ಪ್ರಮೀಳಾ ಮಾಧವ, ಮೈಸೂರಿನ ಬಿ.ವಿ. ವಸಂತಕುಮಾರ್, ಪ್ರೊ.ಮೊರಬದ ಮಲ್ಲಿಕಾರ್ಜುನ ಉಪನ್ಯಾಸ ನೀಡಿದರು.



ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿ ಲಕ್ಷದೀಪೋತ್ಸವದ ಅಂಗವಾಗಿ ಶನಿವಾರ ಅಪಾರ ಭಕ್ತರು ದರ್ಶನ ಪಡೆದರು. ದೇವಸ್ಥಾನಕ್ಕೆ ವಿಶೇಷ ಅಲಂಕಾರ ಮಾಡಲಾಗಿತ್ತು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

### ‘ಪೊಲೀಸ್ ವಸತಿಗೃಹ: ಕೇಂದ್ರಕ್ಕೆ ಮೊರೆ’

**ಮಂಗಳೂರು:** ರಾಜ್ಯದಲ್ಲಿ ಎಲ್ಲ ಪೊಲೀಸರಿಗೂ ವಸತಿ ಸೌಕರ್ಯ ಕಲ್ಪಿಸುವುದಕ್ಕಾಗಿ ₹ 5 ಸಾವಿರ ಕೋಟಿ ಅನುದಾನ ಮಂಜೂರು ಮಾಡುವಂತೆ ಕೇಂದ್ರ ಗೃಹಸಚಿವರನ್ನು ಕೋರಲಾಗಿದೆ ಎಂದು ರಾಜ್ಯದ ಗೃಹಸಚಿವ ಜಿ.ಪರಮೇಶ್ವರ ತಿಳಿಸಿದರು.

ನಗರದಲ್ಲಿ ಶನಿವಾರ ಮಂಗಳೂರು ನಗರ ಮತ್ತು ಜಿಲ್ಲಾ ಪೊಲೀಸ್ ಘಟಕದ ವಸತಿ ಗೃಹ ಸಮುಚ್ಚಯ, ಸುಬ್ರಹ್ಮಣ್ಯ ಮತ್ತು ಬಂಟ್ವಾಳ ಸಂಚಾರ ಪೊಲೀಸ್ ಠಾಣೆಗಳ ಕಟ್ಟಡ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪೊಲೀಸರು ಇದ್ದು ಶೇಕಡ 45ರಷ್ಟು ಮಂದಿಗೆ ಮನೆಗಳನ್ನು ಒದಗಿಸಲಾಗಿದೆ. ಈ ವರ್ಷ ₹ 500 ಕೋಟಿ ವೆಚ್ಚದಲ್ಲಿ 1600 ಮನೆಗಳ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು ಕೆಲವು ಪೂರ್ತಿಯಾಗಿವೆ. ಮುಂದಿನ ವರ್ಷವೂ ₹ 500 ಕೋಟಿ ಅಥವಾ ₹ 1000 ಕೋಟಿ ಒದಗಿಸಲಾಗುವುದು ಎಂದು ಅವರು ತಿಳಿಸಿದರು.

ಮಂಗಳೂರಿನಲ್ಲಿ ಗೃಹನಿರ್ಮಾಣ ಯೋಜನೆ ಆರಂಭವಾದಾಗ ಮನೆಯೊಂದರ ಯುನಿಟ್ ವೆಚ್ಚ ₹ 18 ಲಕ್ಷ ಇತ್ತು. ಈಗ ಅದು ₹ 27 ಲಕ್ಷಕ್ಕೆ ಏರಿದೆ. ಆದರೂ ಯೋಜನೆ ಮುಂದುವರಿಸಲಾಗಿದೆ ಎಂದು ಅವರು ಹೇಳಿದರು.

ನ.18ರಿಂದ ಸ್ಮಾರ್ಟ್ ಇಟಿಎಂ ಬಳಸುತ್ತಿರುವ ಕೆಎಸ್‌ಆರ್‌ಟಿಸಿಯ ಎಲ್ಲ ಬಸ್ ನಿರ್ವಾಹಕರು

# ಟಿಕೆಟ್: ಯುಪಿಐ ಬಳಸಿದ 20 ಸಾವಿರ ಪ್ರಯಾಣಿಕರು

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಯುಪಿಐ ಆಧಾರಿತ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿ ಟಿಕೆಟ್ ದರ ಪಾವತಿಸುವ ತಂತ್ರಜ್ಞಾನ (ಸ್ಮಾರ್ಟ್ ಇಟಿಎಂ) ಅಳವಡಿಕೆಯು ಕೆಎಸ್‌ಆರ್‌ಟಿಸಿಯ ಎಲ್ಲ ಬಸ್‌ಗಳಲ್ಲಿ ಅನುಷ್ಠಾನಗೊಂಡಿದೆ. ಪ್ರತಿದಿನ 20 ಸಾವಿರ ಪ್ರಯಾಣಿಕರು ಯುಪಿಐ ಮೂಲಕ ಟಿಕೆಟ್ ದರ ಪಾವತಿಸುತ್ತಿದ್ದಾರೆ.

ಆಂಡ್ರಾಯ್ಡ್ ತಂತ್ರಾಂಶ ಆಧಾರಿತ ಟಚ್ ಸ್ಕ್ರೀನ್, ವೈರ್‌ಲೆಸ್ ಸಂವಹನ ಮತ್ತು ವೇಗದ ಪ್ರಕ್ರಿಯೆ ವ್ಯವಸ್ಥೆಗಳಿರುವ ಈ ಸ್ಮಾರ್ಟ್ ಇಟಿಎಂಗಳನ್ನು ಪ್ರಾಯೋಗಿಕ ಹಂತವಾಗಿ ನ.6 ರಂದು ಕೆಎಸ್‌ಆರ್‌ಟಿಸಿ ಕೇಂದ್ರ ವಲಯದ ಐದು ಬಸ್‌ಗಳಿಗೆ ನೀಡಲಾಗಿತ್ತು. ಆ ಬಸ್‌ಗಳಲ್ಲಿ ಯಶಸ್ವಿಯಾದ ಬಳಿಕ ಉಳಿದ ಬಸ್‌ಗಳ ನಿರ್ವಾಹಕರಿಗೆ ಸ್ಮಾರ್ಟ್ ಇಟಿಎಂ ನೀಡುವ ಪ್ರಕ್ರಿಯೆ ನ.11ರಂದು ಆರಂಭವಾಗಿತ್ತು. ಒಂದು ವಾರದಲ್ಲಿ ಎಲ್ಲ ಬಸ್‌ಗಳ ನಿರ್ವಾಹಕರ ಕೈಗೆ ಸ್ಮಾರ್ಟ್ ಇಟಿಎಂ ಬಂದಿದೆ. ನ.18ರಿಂದ ಪೂರ್ಣ ಪ್ರಮಾಣದಲ್ಲಿ ಬಳಕೆ ಆರಂಭವಾಗಿದೆ.

ಡೈನಮಿಕ್ ಕ್ಯೂಆರ್ ಕೋಡ್ ಬಳಸಿ ಯುಪಿಐ ಆಧಾರಿತವಾಗಿ ಪಾವತಿ ಮಾಡಿ ಟಿಕೆಟ್ ಪಡೆಯುವವರಲ್ಲಿ ಸಾಮಾನ್ಯ ಬಸ್‌ಗಳ ಪ್ರಯಾಣಿಕರೇ ಹೆಚ್ಚಿದ್ದಾರೆ. ಪ್ರೀಮಿಯಂ ಬಸ್‌ಗಳಲ್ಲಿ ಮುಂಗಡವಾಗಿ ಕಾಯ್ದಿರಿಸಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಿರುವುದು ಒಂದು ಕಾರಣವಾದರೆ, ಒಟ್ಟು ಬಸ್‌ಗಳಲ್ಲಿ ಪ್ರೀಮಿಯಂ ಬಸ್‌ಗಳ ಪ್ರಮಾಣ ಶೇ 10ರಷ್ಟು ಮಾತ್ರ ಇದ್ದು, ಎಕ್ಸ್‌ಪ್ರೆಸ್ ಮತ್ತು ಸಾಮಾನ್ಯ ಬಸ್‌ಗಳೇ ಅಧಿಕ ಇರುವುದು ಇದಕ್ಕೆ ಇನ್ನೊಂದು ಕಾರಣ.



ಸ್ಮಾರ್ಟ್ ಇಟಿಎಂನೊಂದಿಗೆ ಕೆಎಸ್‌ಆರ್‌ಟಿಸಿ ನಿರ್ವಾಹಕ

‘ಮೊದಲ ದಿನ ಫೋನ್ ಪೇ, ಗೂಗಲ್ ಪೇ ಇನ್ನಿತರ ಯುಪಿಐ ಆಧಾರಿತ ಆ್ಯಪ್‌ಗಳ ಮೂಲಕ ₹ 727 ಪಾವತಿಯಾಗಿತ್ತು. ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಾ ಹೋಗಿದ್ದು, ಈಗ ಕೆಎಸ್‌ಆರ್‌ಟಿಸಿಗೆ ಪ್ರತಿದಿನ ಸರಾಸರಿ ₹ 30 ಲಕ್ಷ ವರಮಾನ ಈ ತಂತ್ರಜ್ಞಾನದ ಮೂಲಕ ಬರುತ್ತಿದೆ’ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘10,245 ಸ್ಮಾರ್ಟ್ ಇಟಿಎಂಗಳಿದ್ದು, ಕೆಎಸ್‌ಆರ್‌ಟಿಸಿಯಲ್ಲಿ 8,941 ಬಸ್‌ಗಳು ಚಾಲನೆಯಲ್ಲಿವೆ. ದೂರದ ಊರಿಗೆ, ಬೇರೆ ರಾಜ್ಯಗಳಿಗೆ ಸಂಚರಿಸುವ ಕೆಲವು ಬಸ್‌ಗಳಲ್ಲಿ ಇಬ್ಬರು ನಿರ್ವಾಹಕರಾಗಿ ಕಾರ್ಯನಿರ್ವಹಿಸುವುದರಿಂದ ಇಬ್ಬರಿಗೂ ಸ್ಮಾರ್ಟ್ ಇಟಿಎಂ ನೀಡಲಾಗಿದೆ. ಯಾವುದಾದರೂ ಇಟಿಎಂ ಕೆಟ್ಟು ಹೋದರೆ ಬದಲಿಯಾಗಿ ನೀಡಲೆಂದು 500ರಷ್ಟು ಇಟಿಎಂಗಳನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಉಳಿದ ಇಟಿಎಂಗಳನ್ನು ವಿತರಣೆ ಮಾಡಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಚಿಲ್ಲರೆ ಸಮಸ್ಯೆಗಾಗಿ ನಿರ್ವಾಹಕರು ಮತ್ತು ಪ್ರಯಾಣಿಕರ ಮಧ್ಯೆ ಆಗಾಗ ಉಂಟಾಗುತ್ತಿದ್ದ ಗೊಂದಲ, ಜಗಳಗಳಿಗೆ ಸ್ಮಾರ್ಟ್ ಇಟಿಎಂ ಕೊನೆಹಾಡಿದೆ. ಒಟ್ಟು ಪ್ರಯಾಣಿಕರಲ್ಲಿ ಶೇ 58ರಷ್ಟು ಮಹಿಳೆಯರು ಇರುವುದರಿಂದ ಅವರಿಗೆ ಉಚಿತ ಪ್ರಯಾಣವಿದೆ. ಶೇ 7ರಷ್ಟು ಪ್ರಯಾಣಿಕರು ವಿದ್ಯಾರ್ಥಿಗಳಾಗಿದ್ದು, ಅವರು ಪಾಸ್ ಪಡೆದು ಪ್ರಯಾಣಿಸುತ್ತಿದ್ದಾರೆ. ಇನ್ನೊಂದಷ್ಟು ಪ್ರಯಾಣಿಕರು ‘ಅವತಾರ್’ ಮೂಲಕ ಮೊದಲೇ ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡುತ್ತಿದ್ದಾರೆ. ಇವರನ್ನು ಬಿಟ್ಟು, ಪುರುಷ ಪ್ರಯಾಣಿಕರು ಯುಪಿಐ ಆಧಾರಿತ ಪಾವತಿಯನ್ನು ಬಳಸಲು ಆರಂಭಿಸಿದ್ದಾರೆ. ದಿನ ಕಳೆದಂತೆ ಈ ತಂತ್ರಜ್ಞಾನ ಬಳಸುವವರ ಸಂಖ್ಯೆ ಹೆಚ್ಚಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ಕೋಟಿ ರೂಪಾಯಿ ದಾಟಲಿದೆ

ಟಿಕೆಟ್ ಆಧಾರಿತ ವರಮಾನದಲ್ಲಿ ಸ್ಕ್ಯಾನ್ ಮಾಡಿ ಪಾವತಿಯಾಗುವ ಮೊತ್ತವು ಕೆಲವು ದಿನಗಳಲ್ಲಿ, ಪ್ರತಿನಿತ್ಯದ ಸಂಗ್ರಹ ಕೋಟಿ ರೂಪಾಯಿ ದಾಟಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಂಗಡಿ, ಹೋಟೆಲ್‌ಗಳಲ್ಲಿ ₹ 5, ₹ 10 ಮೊತ್ತವನ್ನು ಕೂಡ ಯುಪಿಐ ಆಧಾರಿತವಾಗಿ ಪಾವತಿಸುವುದು ಜನರಿಗೆ ಅಭ್ಯಾಸವಾಗಿ ಹೋಗಿದೆ. ಅದೇ ರೀತಿಯ ಪಾವತಿ ಬಸ್‌ಗಳಲ್ಲಿಯೂ ರೂಢಿಯಾಗಲಿದೆ. ಸ್ಮಾರ್ಟ್ ಇಟಿಎಂ ಇರುವುದರಿಂದ ಪ್ರಯಾಣಿಕರೂ ಜೇಬು ಅಥವಾ ಪರ್ಸ್‌ಗಳಲ್ಲಿ ಹಣ ಇಟ್ಟುಕೊಳ್ಳಬೇಕಿಲ್ಲ. ನಿರ್ವಾಹಕರಿಗೂ ಬ್ಯಾಗಲ್ಲಿ ಹಣ ಇಟ್ಟುಕೊಂಡು ಕಾಯುವ ಒತ್ತಡ ತಪ್ಪಲಿದೆ ಎಂದು ತಿಳಿಸಿದ್ದಾರೆ.

## ಅಂಕಿ ಅಂಶಗಳು

**34** ಲಕ್ಷ
ಕೆಎಸ್‌ಆರ್‌ಟಿಸಿಯಲ್ಲಿ ನಿತ್ಯ ಪ್ರಯಾಣಿಸುವವರ ಒಟ್ಟು ಸರಾಸರಿ ಪ್ರಮಾಣ

**19.72** ಲಕ್ಷ
ಶಕ್ತಿ ಯೋಜನೆಯಡಿ ಪ್ರಯಾಣಿಸುವ ಮಹಿಳೆಯರ ಪ್ರಮಾಣ

**2.5** ಲಕ್ಷ
ಬಸ್ ಪಾಸ್ ಮೂಲಕ ಪ್ರಯಾಣಿಸುವ ವಿದ್ಯಾರ್ಥಿಗಳ ಪ್ರಮಾಣ

**29,000**
‘ಅವತಾರ್’ ಮೂಲಕ ಮುಂಗಡವಾಗಿ ಟಿಕೆಟ್ ಕಾಯ್ದಿರಿಸುವವರ ಪ್ರಮಾಣ

### ದಕ್ಷಿಣ ಒಳನಾಡಿನ ಕೆಲವೆಡೆ ಇಂದು ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ದಕ್ಷಿಣ ಒಳನಾಡಿನ ಕೆಲವೆಡೆ ಭಾನುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಮೂರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದ್ದು, ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಚಾಮರಾಜನಗರ, ತುಮಕೂರು ಮತ್ತು ಕೊಡಗು ಜಿಲ್ಲೆಯ ಕೆಲ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಮೈಸೂರು ಹಾಗೂ ಕೊಡಗು ಜಿಲ್ಲೆಗೆ ಸೋಮವಾರ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಮಂಡ್ಯ, ರಾಮನಗರ ಹಾಗೂ ಚಾಮರಾಜನಗರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಮಂಗಳವಾರವೂ ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

**ಮುದ್ರೆಮನೆ ಕಾಫಿ** (50 ಕೆಜಿಗೆ)



| | |
|---|---|
| ಎಪಿ | ₹21250 |
| ಎಸಿ | ₹11600 |
| ಆರ್‌ಪಿ | ₹19500 |
| ಆರ್‌ಸಿ | ₹11440 |

**ಎನ್.ಆರ್.ಪುರ ರಬ್ಬರ್**




ಆರ್‌ಎಸ್‌ಎಸ್-4 ₹191
ಆರ್‌ಎಸ್‌ಎಸ್-5 ₹184
ಗುಡ್ ಲಾಟ್ ₹179
(ಪ್ರತಿ ಕೆ.ಜಿಗೆ)

**ರಾಮನಗರ ರೇಷ್ಮೆಗೂಡು**



ಮಿಶ್ರತಳಿ (ಸಿ.ಬಿ) ₹512-675
ದ್ವಿತಳಿ (ಬಿ.ವಿ) ₹461-775

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



ಬೆಂಗಳೂರು
100ಕ್ಕೆ ₹620
12 ಕ್ಕೆ ₹82
ಮೈಸೂರು
100ಕ್ಕೆ ₹622

# ಇಪಿಎಫ್‌ಒ ಕ್ಷಮಾದಾನ ಯೋಜನೆಗೆ ಶಿಫಾರಸು

ನವದೆಹಲಿ (ಪಿಟಿಐ): ಉದ್ಯೋಗಿಗಳ ಭವಿಷ್ಯ ನಿಧಿ ಪಾವತಿ ಮಾಡದಿರುವ ಉದ್ಯೋಗದಾತ ಸಂಸ್ಥೆಗಳಿಗೆ ದಂಡ ಪಾವತಿ ಇಲ್ಲದೆಯೇ ಬಾಕಿ ಮೊತ್ತ ಪಾವತಿಸಿ ಕ್ಷಮಾದಾನ ಪಡೆದುಕೊಳ್ಳುವ ಯೋಜನೆಯ ಅನುಷ್ಠಾನಕ್ಕೆ ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಮುಂದಾಗಿದೆ.

ಕೇಂದ್ರ ಕಾರ್ಮಿಕ ಸಚಿವ ಮನ್ಸುಕ್ ಮಾಂಡವೀಯ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಟ್ರಸ್ಟಿಗಳ ಕೇಂದ್ರೀಯ ಮಂಡಳಿ (ಸಿಬಿಟಿ) ಸಭೆಯು 'ಇಪಿಎಫ್‌ಒ ಕ್ಷಮಾದಾನ ಯೋಜನೆ-2024' ಜಾರಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಬಹಳಷ್ಟು ಕಂಪನಿಗಳು ಉದ್ಯೋಗಿಗಳ ಭವಿಷ್ಯ ನಿಧಿ ಮೊತ್ತವನ್ನು ಇಪಿಎಫ್‌ಒಗೆ ಪಾವತಿಸಿಲ್ಲ. ಇದರಿಂದ ಉದ್ಯೋಗಿಗಳಿಗೆ ತೊಂದರೆಯಾಗಿದೆ. ಅಂತಹ ಕಂಪನಿಗಳು ಅಥವಾ ಸಂಸ್ಥೆಗಳು ಸ್ವಯಂ ಪ್ರೇರಣೆಯಿಂದ ಬಾಕಿ ಮೊತ್ತ ಪಾವತಿಸಲು ಅನುವಾಗುವಂತೆ ಈ ಯೋಜನೆ ರೂಪಿಸಲಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಆನ್‌ಲೈನ್‌ನಲ್ಲಿ ಘೋಷಣೆ ಮಾಡಿಕೊಳ್ಳುವ ಮೂಲಕ ಕಂಪನಿಗಳು ಈ ಯೋಜನೆಯಡಿ ಪ್ರಯೋಜನ ಪಡೆಯಬಹುದಾಗಿದೆ. ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಒದಗಿಸುವ ಗುರಿಯನ್ನೂ ಈ ಯೋಜನೆಯು ಹೊಂದಿದೆ ಎಂದು ಹೇಳಿದೆ.

ಇಪಿಎಫ್ ಯೋಜನೆ 1952ಕ್ಕೆ ತಿದ್ದುಪಡಿ ತರಲು ಮಂಡಳಿಯು ಅನುಮೋದನೆ ನೀಡಿದೆ. ಇದರಡಿ ಉದ್ಯೋಗಿಗೆ ನಿವೃತ್ತಿಯ ಇಡುಗಂಟು ಪಾವತಿಯಾದ ದಿನದವರೆಗೂ ಬಡ್ಡಿ ಸೌಲಭ್ಯ ಸಿಗಲಿದೆ. ಇದರಿಂದ ಇಪಿಎಫ್‌ಒ ಸದಸ್ಯರಿಗೆ ಹೆಚ್ಚಿನ ಆರ್ಥಿಕ ಪ್ರಯೋಜನ ದೊರೆಯಲಿದೆ.

**ಇಡಿಎಲ್‌ಐ ವಿಸ್ತರಣೆ:** ಇಪಿಎಫ್ ಖಾತೆದಾರರಿಗೆ ನೀಡುವ ಉದ್ಯೋಗಿಯ ಠೇವಣಿ ಆಧರಿತ ವಿಮಾ (ಇಡಿಎಲ್‌ಐ) ಸೌಲಭ್ಯದ ವಿಸ್ತರಣೆಗೆ ಮಂಡಳಿಯು ಅನುಮೋದನೆ ನೀಡಿದೆ.

ಪ್ರಸಕ್ತ ವರ್ಷದ ಏಪ್ರಿಲ್ 28ರಿಂದ ಪೂರ್ವಾನ್ವಯವಾಗುವಂತೆ ಈ ಯೋಜನೆಯಡಿ ಸೌಲಭ್ಯ ದೊರೆಯಲಿದೆ. ಯೋಜನೆಯಡಿ ಕನಿಷ್ಠ ₹2.5 ಲಕ್ಷ ಹಾಗೂ ಗರಿಷ್ಠ ₹7 ಲಕ್ಷ ವಿಮಾ ಸೌಲಭ್ಯ ದೊರೆಯಲಿದೆ.

## ಚಿತ್ರದುರ್ಗ: ಇಳುವರಿ ಹೆಚ್ಚಳ • ಬೆಳೆಗಾರರಿಗೆ ಬಂಪರ್ ಬೆಲೆ

# ಮೆಕ್ಕೆಜೋಳ ದಾಖಲೆ ಆವಕ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಕಳೆದ ಒಂದು ತಿಂಗಳ ಅವಧಿಯಲ್ಲಿ ಇಲ್ಲಿನ ಎಪಿಎಂಸಿಗೆ 2.50 ಲಕ್ಷ ಕ್ವಿಂಟಲ್ ಮೆಕ್ಕೆಜೋಳ ಆವಕವಾಗಿದ್ದು, ದಾಖಲೆಯಾಗಿದೆ.

ಈ ಬಾರಿ ಉತ್ತಮವಾಗಿ ಮಳೆ ಸುರಿದಿತ್ತು. ಸಂಪ್ರದಾಯದಂತೆ ರೈತರು ಜುಲೈ, ಆಗಸ್ಟ್ ತಿಂಗಳಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿದ್ದರು. ಸಕಾಲದಲ್ಲಿ ಹದ ಮಳೆ ಸುರಿದ ಕಾರಣ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಇಳುವರಿ ಬಂದಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ 3,11,255 ಕ್ವಿಂಟಲ್ ಮೆಕ್ಕೆಜೋಳ ಆವಕವಾಗಿದೆ. ನವೆಂಬರ್ 1ರಿಂದ ನವೆಂಬರ್ 29ರವರೆಗೆ 2.50 ಲಕ್ಷ ಕ್ವಿಂಟಲ್ ಆವಕವಾಗಿದೆ. ಮಾರುಕಟ್ಟೆ ನಿರ್ಮಾಣಗೊಂಡ ನಂತರ ಇಷ್ಟೊಂದು ಪ್ರಮಾಣದ ಮೆಕ್ಕೆಜೋಳ ಆವಕ ಕಂಡಿರಲಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಜಿಲ್ಲೆಯಲ್ಲಿ ಈ ಬಾರಿ ರೈತರು 1.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿದ್ದರು. ಆವಕವಾಗಿರುವ ಒಟ್ಟು ಪ್ರಮಾಣದಲ್ಲಿ ಶೇ 80ರಷ್ಟು ಉತ್ಪನ್ನವನ್ನು ಚಿತ್ರದುರ್ಗ ತಾಲ್ಲೂಕು ಒಂದರಲ್ಲೇ ಬೆಳೆಯಲಾಗಿದೆ.

'ನವೆಂಬರ್ ಮೊದಲ ವಾರದಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಮೆಕ್ಕೆಜೋಳಕ್ಕೆ ಫಂಗಸ್ ಕಾಣಿಸಿಕೊಂಡಿತ್ತು. ಜೊತೆಗೆ ಕಳೆಯ (ಮುಳ್ಳುಸಜ್ಜೆ) ಕಾಟವೂ ಇತ್ತು. ಅದರ ನಡುವೆಯೂ ಈ ಬಾರಿ ನಾವು ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಇಳುವರಿ ಬಂದಿದೆ' ಎಂದು ರೈತ ರುದ್ರಸ್ವಾಮಿ ಚಿಕ್ಕಪ್ಪನಹಳ್ಳಿ ಹೇಳಿದರು.

**ಬಂಪರ್ ಬೆಲೆ:** ಕಳೆದ ವರ್ಷ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್ ಮೆಕ್ಕೆಜೋಳ ಗರಿಷ್ಠ ₹1,700ಕ್ಕೆ ಮಾರಾಟವಾಗಿತ್ತು.

ಕ್ವಿಂಟಲ್‌ಗೆ ₹2,400 ಬೆಂಬಲ ಬೆಲೆ ಅಡಿ ಮೆಕ್ಕೆಜೋಳ ಖರೀದಿಸುವಂತೆ ಪ್ರತಿ ವರ್ಷ ರೈತರು ಒತ್ತಾಯಿಸುತ್ತಿದ್ದರು. ಆದರೆ, ಈ ಬಾರಿ ಅಂತಹ ಯಾವುದೇ ಪ್ರತಿಭಟನೆ ನಡೆದಿಲ್ಲ.

ಈಗ ಗರಿಷ್ಠ ₹2,350 ಬೆಲೆ ಇದೆ. ಶೇ 13 ರಿಂದ 15ರವರೆಗಿನ ತೇವಾಂಶವುಳ್ಳ ಮೆಕ್ಕೆಜೋಳ ₹2,350 ಹಾಗೂ ಶೇ 15ರಿಂದ 19ರೊಳಗಿನ ತೇವಾಂಶದ ಮೆಕ್ಕೆಜೋಳ ₹2,250ಕ್ಕೆ ಮಾರಾಟವಾಗುತ್ತಿದೆ.

'ಶೇ 60ರಷ್ಟು ಮೆಕ್ಕೆಜೋಳ ಮಾತ್ರ ಮಾರುಕಟ್ಟೆಗೆ ಬಂದಿದೆ. ಉಳಿದ ಶೇ 40ರಷ್ಟನ್ನು ವರ್ತಕರು ರೈತರ ಮನೆ ಬಾಗಿಲಿಗೆ ತೆರಳಿ ಖರೀದಿ ಮಾಡುತ್ತಿದ್ದಾರೆ. ಜನವರಿವರೆಗೆ ಇನ್ನೂ 2 ಲಕ್ಷ ಕ್ವಿಂಟಲ್ ಮೆಕ್ಕೆಜೋಳ ಆವಕವಾಗುವ ನಿರೀಕ್ಷೆಯಿದೆ' ಎಂದು ಎಪಿಎಂಸಿ ಮಾರುಕಟ್ಟೆ ಕಾರ್ಯದರ್ಶಿ ಬಿ.ಎಲ್. ಕೃಷ್ಣಪ್ಪ ಹೇಳಿದರು.



ಚಿತ್ರದುರ್ಗದ ಎಪಿಎಂಸಿ ಮಾರುಕಟ್ಟೆಗೆ ಅಪಾರ ಪ್ರಮಾಣದ ಮೆಕ್ಕೆಜೋಳ ಆವಕವಾಗಿದೆ —ಪ್ರಜಾವಾಣಿ ಚಿತ್ರ: ಚಂದ್ರಪ್ಪ ವಿ.

| ವರ್ಷ | ಆವಕ (ಕ್ವಿಂಟಲ್‌ನಲ್ಲಿ) |
|---|---|
| 2021-22 | 1,91,389 |
| 2022-23 | 2,18,218 |
| 2023-24 (ಅಕ್ಟೋಬರ್‌ವರೆಗೆ) | 3,11,255 |
| ನವೆಂಬರ್‌ನಲ್ಲಿ | 2,50,000 |

### ಶೋಷಣೆ ತಪ್ಪಿಸಲು ಒತ್ತಾಯ

ಎಪಿಎಂಸಿಯಲ್ಲಿ ಹಮಾಲರು ಹಾಗೂ ವರ್ತಕರ ಶೋಷಣೆ ಹೆಚ್ಚಾಗಿದೆ. ಪ್ರತಿ ಚೀಲ ಮೆಕ್ಕೆಜೋಳಕ್ಕೆ ₹6 ಹಮಾಲಿ ಕೂಲಿ ಪಡೆಯುತ್ತಾರೆ. ನಂತರ ಹಮಾಲರು 'ಖರೀದಿ ಸ್ಯಾಂಪಲ್' ನೆಪದಲ್ಲಿ 50 ಕ್ವಿಂಟಲ್ ತೂಕ ಮಾಡಿದರೆ 60 ಕೆ.ಜಿ ಮೆಕ್ಕೆಜೋಳವನ್ನು ಪ್ರತ್ಯೇಕವಾಗಿ ವಸೂಲಿ ಮಾಡುತ್ತಾರೆ ಎಂದು ರೈತರು ದೂರಿದ್ದಾರೆ.

ಜೊತೆಗೆ ನಿಗದಿತ ಬೆಲೆಯಲ್ಲಿ ವರ್ತಕರು ಶೇ 2ರಿಂದ 4ರಷ್ಟು ಕಮಿಷನ್ ಪಡೆಯುತ್ತಾರೆ. ಚೀಲ ಪಡೆದ ರೈತರಿಗೆ ಬಾಡಿಗೆ ಹಾಗೂ ಬಡ್ಡಿಯನ್ನೂ ವಿಧಿಸುತ್ತಾರೆ. ಈ ಶೋಷಣೆ ತಪ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.



# ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ ಸೇರಿ ಪ್ರಮುಖ ಎಂಟು ಮೂಲಸೌಕರ್ಯ ವಲಯದ ಬೆಳವಣಿಗೆಯು ಅಕ್ಟೋಬರ್‌ನಲ್ಲಿ ಶೇ 3.1ಕ್ಕೆ ಕುಸಿದಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 12.7ರಷ್ಟು ಏರಿಕೆ ಕಂಡಿತ್ತು. ಈ ವಲಯಗಳು ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ 40.27ರಷ್ಟು ಕೊಡುಗೆ ನೀಡುತ್ತವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಅಕ್ಟೋಬರ್‌ನಲ್ಲಿ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲದ ಉತ್ಪಾದನೆಯು ಗಣನೀಯವಾಗಿ ಕುಸಿದಿದೆ. ಕಲ್ಲಿದ್ದಲು ಶೇ 7.8, ಉಕ್ಕು ಶೇ 0.4, ಸಿಮೆಂಟ್ ಶೇ 4.2 ಮತ್ತು ವಿದ್ಯುತ್ ಉತ್ಪಾದನೆಯು ಶೇ 0.6ರಷ್ಟು ಆಗಿದೆ.

ರಿಫೈನರಿ ಉತ್ಪನ್ನದ ಬೆಳವಣಿಗೆಯು ಶೇ 5.2ರಷ್ಟು ಏರಿಕೆಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಈ ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಶೇ 4.1ರಷ್ಟು ದಾಖಲಾಗಿದೆ.



## ಡಿಎಪಿ ಗೊಬ್ಬರ ಕೊರತೆ ಇಲ್ಲ: ಕೇಂದ್ರ ಹೇಳಿಕೆ

# ರಾಜ್ಯಗಳ ಬೇಡಿಕೆಗೆ ಸ್ಪಂದನೆ

ನವದೆಹಲಿ (ಪಿಟಿಐ): ರಾಜ್ಯಗಳ ಮಾಸಿಕವಾರು ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರದ ಪೂರೈಕೆಗೆ ಕ್ರಮ ವಹಿಸಲಾಗಿದೆ ಎಂದು ಕೇಂದ್ರ ಸರ್ಕಾರ, ಲೋಕಸಭೆಗೆ ತಿಳಿಸಿದೆ.

ಪ್ರತಿ ಬೆಳೆ ಋತು ಆರಂಭಕ್ಕೂ ಮೊದಲೇ ರಾಜ್ಯಗಳಿಂದ ತಿಂಗಳವಾರು ಬೇಡಿಕೆ ಪಟ್ಟಿಯನ್ನು ಸ್ವೀಕರಿಸಲಾಗುತ್ತದೆ. ಈ ಬೇಡಿಕೆಗೆ ಅನುಗುಣವಾಗಿ ಸಾಕಷ್ಟು ಪ್ರಮಾಣದಲ್ಲಿ ರಸಗೊಬ್ಬರ ಪೂರೈಸಲಾಗುತ್ತದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು, ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬೆಳೆ ಋತುವಿಗೆ ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ರಸಗೊಬ್ಬರ ಬೇಕಿದೆ ಎಂಬ ಬಗ್ಗೆ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯು ಅಂದಾಜಿಸುತ್ತದೆ. ಇದಕ್ಕೆ ಅನುಗುಣವಾಗಿ ಬೇಡಿಕೆ ಪಟ್ಟಿ ಸ್ವೀಕರಿಸಲಾಗುತ್ತದೆ ಎಂದು ಹೇಳಿದ್ದಾರೆ.

ರಾಜ್ಯಗಳಿಗೆ ರವಾನಿಸಿದ ರಸಗೊಬ್ಬರವನ್ನು ಸಂಯೋಜಿತ ರಸಗೊಬ್ಬರ ಮಾನಿಟರಿಂಗ್ ಸಿಸ್ಟಂ ಮೂಲಕ ಮೇಲ್ವಿಚಾರಣೆ ಮಾಡಲಾಗುತ್ತದೆ. ಪ್ರತಿ ವಾರ ಕೃಷಿ ಮತ್ತು ರಸಗೊಬ್ಬರ ಇಲಾಖೆಗಳು ಜಂಟಿಯಾಗಿ ವಿಡಿಯೊ ಕಾನ್ಫರೆನ್ಸ್ ಮೂಲಕ ರಾಜ್ಯಮಟ್ಟದ ಅಧಿಕಾರಿಗಳೊಟ್ಟಿಗೆ ಚರ್ಚಿಸಲಿವೆ. ರಸಗೊಬ್ಬರ ತಲುಪಿರುವುದು, ಬೇಡಿಕೆ ಇತ್ಯಾದಿ ಬಗ್ಗೆ ಮಾಹಿತಿ ಪಡೆಯಲಾಗುತ್ತದೆ ಎಂದು ವಿವರಿಸಿದ್ದಾರೆ.

ದೇಶದಲ್ಲಿ ರಸಗೊಬ್ಬರದ ಉತ್ಪಾದನೆ ಮತ್ತು ಬೇಡಿಕೆ ನಡುವಿನ ಕೊರತೆಯ ಅಂತರವನ್ನು ಆಮದು ಮೂಲಕ ಸರಿದೂಗಿಸಲಾಗುತ್ತದೆ. ಕೊರತೆಯಾಗುವ ರಸಗೊಬ್ಬರವನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಬೆಳೆ ಋತುವಿನ ಆರಂಭಕ್ಕೂ ಮೊದಲೇ ದೇಶೀಯವಾಗಿ ಎಷ್ಟು ಪ್ರಮಾಣದ ರಸಗೊಬ್ಬರ ಬೇಕಿದೆ ಎಂಬುದನ್ನು ಅಂತಿಮಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ.

ಈ ಬಾರಿಯ ಮುಂಗಾರು ಅವಧಿಗೆ 59.87 ಲಕ್ಷ ಟನ್ ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ಗೊಬ್ಬರದ ಬೇಡಿಕೆ ಬಗ್ಗೆ ಅಂದಾಜಿಸಲಾಗಿತ್ತು. ದೇಶೀಯವಾಗಿ 58.08 ಲಕ್ಷ ಟನ್ ದಾಸ್ತಾನು ಇತ್ತು. ಈ ಪೈಕಿ 46.12 ಲಕ್ಷ ಟನ್ ಮಾರಾಟವಾಗಿದೆ ಎಂದು ವಿವರಿಸಿದ್ದಾರೆ.

ಹಿಂಗಾರು ಅವಧಿಯಲ್ಲಿ ಅಕ್ಟೋಬರ್ 1ರಿಂದ ನವೆಂಬರ್ 24ರ ವರೆಗೆ 31.60 ಲಕ್ಷ ಟನ್ ಡಿಎಪಿ ಬೇಡಿಕೆಗೆ ಅಂದಾಜಿಸಲಾಗಿತ್ತು. 34.07 ಟನ್ ದಾಸ್ತಾನು ಇತ್ತು. ಈ ಪೈಕಿ 24.23 ಲಕ್ಷ ಟನ್ ಮಾರಾಟವಾಗಿದೆ. ಡಿಎಪಿಗೆ ಕೊರತೆ ಇಲ್ಲ ಎಂದು ಹೇಳಿದ್ದಾರೆ.

# ಜೊಮಾಟೊದಿಂದ ₹8,500 ಕೋಟಿ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಆಹಾರ ಪದಾರ್ಥ ಪೂರೈಸುವ ಜೊಮಾಟೊ ಕಂಪನಿಯು ಅರ್ಹ ಸಾಂಸ್ಥಿಕ ಹೂಡಿಕೆ (ಕ್ಯೂಐಪಿ) ಮೂಲಕ ₹8,500 ಕೋಟಿ ಬಂಡವಾಳ ಸಂಗ್ರಹಿಸಿದೆ.

ದೇಶೀಯ ಮ್ಯೂಚುವಲ್ ಫಂಡ್ ಸಂಸ್ಥೆಗಳಿಗೆ ಈಕ್ವಿಟಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ಈ ಬಂಡವಾಳ ಸಂಗ್ರಹಿಸಲಾಗಿದೆ ಎಂದು ಕಂಪನಿಯು, ಷೇರುಪೇಟೆಗೆ ತಿಳಿಸಿದೆ.

2021ರ ಜುಲೈನಲ್ಲಿ ಕಂಪನಿಯು ಷೇರುಪೇಟೆಯಲ್ಲಿ ಲಿಸ್ಟಿಂಗ್ ಆದ ಬಳಿಕ ಕ್ಯೂಐಪಿ ಮೂಲಕ ಸಂಗ್ರಹಿಸಿರುವ ಮೊದಲ ಬಂಡವಾಳ ಇದಾಗಿದೆ ಎಂದು ಹೇಳಿದೆ.

ಒಟ್ಟು 33.65 ಕೋಟಿ ಷೇರುಗಳ ಮಾರಾಟಕ್ಕೆ ಕಂಪನಿಯ ಆಡಳಿತ ಮಂಡಳಿಯು ಒಪ್ಪಿಗೆ ನೀಡಿತ್ತು. ಪ್ರತಿ ಷೇರಿಗೆ ₹252.62 ಬೆಲೆ ನಿಗದಿಪಡಿಸಲಾಗಿತ್ತು.

# ವಿಮಾ ಕಂತಿನ ಮೇಲೆ ಜಿಎಸ್‌ಟಿ: ವಾಪಸ್‌ಗೆ ಅಭಿಯಾನ

ಕೋಲ್ಕತ್ತ (ಪಿಟಿಐ): ಆರೋಗ್ಯ ಮತ್ತು ಜೀವ ವಿಮಾ ಕಂತುಗಳ ಮೇಲೆ ವಿಧಿಸುತ್ತಿರುವ ಸರಕು ಮತ್ತು ಸೇವಾ ತೆರಿಗೆಯನ್ನು ಕೇಂದ್ರ ಸರ್ಕಾರ (ಜಿಎಸ್‌ಟಿ) ಹಿಂಪಡೆಯಬೇಕು ಎಂದು ಅಖಿಲ ಭಾರತ ಜೀವ ವಿಮಾ ನೌಕರರ ಒಕ್ಕೂಟ (ಎಐಎನ್‌ಎಲ್‌ಐಇಎಫ್) ಆಗ್ರಹಿಸಿದೆ.

ಭಾರತೀಯ ವಿಮಾ ಕಂಪನಿಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ಪ್ರಮಾಣವು ಸದ್ಯ ಶೇ 74ರಷ್ಟಿದೆ. ಇದನ್ನು ಶೇ 100ರಷ್ಟಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಜಿಎಸ್‌ಟಿ ವಾಪಸ್ ಹಾಗೂ ಹಾಲಿ ಇರುವ ಎಫ್‌ಡಿಐ ಮಿತಿಯನ್ನೇ ಕಾಯ್ದುಕೊಳ್ಳುವಂತೆ ಆಗ್ರಹಿಸಿ ದೇಶದಾದ್ಯಂತ ಅಭಿಯಾನಕ್ಕೆ ಚಾಲನೆ ನೀಡಲಾಗುವುದು ಎಂದು ಒಕ್ಕೂಟವು ಶನಿವಾರ ತಿಳಿಸಿದೆ.

ಈ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಎಲ್ಲಾ ರಾಜಕೀಯ ಪಕ್ಷದ ಸಂಸದರ ಬೆಂಬಲ ಕೋರಲಾಗುವುದು ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಿ. ನರಸಿಂಹನ್ ತಿಳಿಸಿದ್ದಾರೆ.

ಹೊಸ ಕಾನೂನು ಸಂಹಿತೆಯನ್ನು ಹಿಂಪಡೆಯಬೇಕು. 2010ರ ನಂತರ ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ನೇಮಕವಾದವರಿಗೆ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿಮಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ ಹೆಚ್ಚಳಕ್ಕೆ ಮುಂದಾಗಿರುವ ಕೇಂದ್ರದ ನಿರ್ಧಾರ ಸರಿಯಲ್ಲ ಎಂದು ಹೇಳಿದ್ದಾರೆ.

# ಸುಂಕ ವಂಚನೆ ವೋಕ್ಸ್‌ವ್ಯಾಗನ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಕಸ್ಟಮ್ಸ್ ಸುಂಕ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಷೋಕಾಸ್ ನೋಟಿಸ್ ಸ್ವೀಕರಿಸಲಾಗಿದ್ದು, ಅಧಿಕಾರಿಗಳ ವಿಚಾರಣೆಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಜರ್ಮನಿಯ ವಾಹನಗಳ ತಯಾರಿಕಾ ಕಂಪನಿ ವೋಕ್ಸ್‌ವ್ಯಾಗನ್ ತಿಳಿಸಿದೆ.

ಆಮದು ಕಾರುಗಳಿಗೆ ಸಂಬಂಧಿಸಿದಂತೆ ₹11 ಸಾವಿರ ಕೋಟಿ ಕಸ್ಟಮ್ಸ್ ಸುಂಕ ವಂಚನೆ ಪ್ರಕರಣದ ಬಗ್ಗೆ ನೋಟಿಸ್ ಸ್ವೀಕರಿಸಲಾಗಿದೆ. ನೋಟಿಸ್ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಸ್ಕೋಡಾ ಆಟೊ ವೋಕ್ಸ್‌ವ್ಯಾಗನ್ ಇಂಡಿಯಾ ತಿಳಿಸಿದೆ.

ಕಂಪನಿಯು ಜಾಗತಿಕ ಹಾಗೂ ಸ್ಥಳೀಯ ಕಾನೂನು ಮತ್ತು ನಿಯಮಾವಳಿಗಳನ್ನು ಪಾಲಿಸಲಿದೆ ಎಂದು ಹೇಳಿದೆ.

## ಸಿರಿಯಾ: ಸಂಘರ್ಷದಲ್ಲಿ ಹಲವು ಸೈನಿಕರ ಸಾವು

# ಬಂಡುಕೋರರ ಹಿಡಿತಕ್ಕೆ ಅಲೆಪ್ಪೊ

ಅಮ್ಮಾನ್/ಬೈರೂತ್ (ರಾಯಿಟರ್ಸ್/ಎಎಫ್‌ಪಿ): ಸಿರಿಯಾದ ವಾಯವ್ಯ ಭಾಗದಲ್ಲಿ ಹಲವು ಸೈನಿಕರನ್ನು ಹತ್ಯೆ ಮಾಡಿರುವ ಬಂಡುಕೋರರು, ಅಲೆಪ್ಪೊ ನಗರವನ್ನು ತಮ್ಮ ಹಿಡಿತಕ್ಕೆ ಪಡೆದಿದ್ದಾರೆ ಎಂದು ಸೇನೆಯು ಶನಿವಾರ ತಿಳಿಸಿದೆ.

ವಾರದ ಆರಂಭದಲ್ಲಿ ಅಚ್ಚರಿಯ ದಾಳಿ ಪ್ರಾರಂಭಿಸಿದ್ದ ಹಯಾತ್ ತಹ್ರೀರ್ ಅಲ್- ಶಾಮ್ (ಎಚ್‌ಟಿಎಸ್) ಸಂಘಟನೆಯ ಬಂಡುಕೋರರು, ವಾರಾಂತ್ಯದೊಳಗೆ ಅಲೆಪ್ಪೊ ನಗರದ ಬಹುಭಾಗವನ್ನು ವಶಪಡಿಸಿಕೊಂಡಿದ್ದಾರೆ ಎಂದು ಹೇಳಿದೆ. ಬಂಡುಕೋರರ ಹಠಾತ್ ದಾಳಿಯಿಂದ ಜನರ ಜೀವ ಕಾಪಾಡಲು ಹಾಗೂ ದೇಶದ ರಕ್ಷಣೆಗಾಗಿ ಸೇನೆಯು ಪ್ರತಿ ದಾಳಿ ಆರಂಭಿಸಿದೆ.

**ರಷ್ಯಾದಿಂದ ದಾಳಿ:** ಅಲೆಪ್ಪೊ ಸೇರಿದಂತೆ ಅದರ ಉಪನಗರಗಳನ್ನು ಬಂಡುಕೋರರು ಶುಕ್ರವಾರ ವಶಪಡಿಸಿಕೊಂಡಿದ್ದು, ಈ ನೆಲೆಗಳ ಮೇಲೆ ರಷ್ಯಾ ಹಾಗೂ ಸಿರಿಯಾದ ಜೆಟ್‌ಗಳು ಶನಿವಾರ ಬಾಂಬ್ ದಾಳಿ ನಡೆಸಿವೆ. ಬಂಡುಕೋರರ ತಾಣಗಳನ್ನು ಗುರಿಯಾಗಿಸಿ ರಷ್ಯಾ ಸೇನೆ ವಾಯು ದಾಳಿ ನಡೆಸಿದ್ದು 2016ರ ಬಳಿಕ ಇದೇ ಮೊದಲು. ಬಂಡುಕೋರರು ನೆಲಸಿರುವ ಹಳ್ಳಿ ಮತ್ತು ಪಟ್ಟಣಗಳನ್ನು ಗುರಿಯಾಗಿಸಿಕೊಂಡೇ ಈ ದಾಳಿ ನಡೆದಿದೆ.

ವಾಯುದಾಳಿಯಲ್ಲಿ 16 ನಾಗರಿಕರು ಮೃತಪಟ್ಟಿದ್ದಾರೆ. ನಗರದ ಬಹುತೇಕ ಪ್ರದೇಶಗಳು, ಸರ್ಕಾರಿ ಕಚೇರಿಗಳು ಹಾಗೂ ಕಾರಾಗೃಹಗಳ ಮೇಲೆ ಎಚ್‌ಟಿಎಸ್ ಹಾಗೂ ಇದಕ್ಕೆ ಸಂಬಂಧಿಸಿದ ಸಂಘಟನೆಗಳು ಹಿಡಿತ ಸಾಧಿಸಿವೆ ಎಂದು ಬ್ರಿಟನ್ ಮೂಲದ ಸಿರಿಯನ್ ಮಾನವ ಹಕ್ಕುಗಳ ವೀಕ್ಷಣಾಲಯ ಹೇಳಿದೆ.



ಸಿರಿಯಾದ ಅಲೆಪ್ಪೊ ನಗರವನ್ನು ವಶಪಡಿಸಿಕೊಂಡಿರುವ ಶಸ್ತ್ರಸಜ್ಜಿತ ಬಂಡುಕೋರರು, ವಾಹನಗಳಲ್ಲಿ ಸಂಚರಿಸಿದರು ಎಎಫ್‌ಪಿ ಚಿತ್ರ

# ಬ್ರಿಟನ್: ಭಾರತ ಮೂಲದ ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಈಸ್ಟ್ ಮಿಡ್‌ಲ್ಯಾಂಡ್ಸ್ ಪ್ರದೇಶದಲ್ಲಿ ತನ್ನ ಪ್ರೇಯಸಿಯನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ಭಾರತೀಯ ಮೂಲದ ವ್ಯಕ್ತಿಗೆ ಬ್ರಿಟನ್‌ನ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ.

50 ವರ್ಷದ ರಾಜ್ ಸಿದ್ಪಾರ ಹಾಗೂ 44 ವರ್ಷದ ತರ್ನ್‌ಜೀತ್ ಚಗ್ಗರ್ ಅವರು ಐದು ತಿಂಗಳಿನಿಂದ ಸಹಜೀವನ ನಡೆಸುತ್ತಿದ್ದರು. ಅಕ್ಟೋಬರ್‌ನಲ್ಲಿ ರಾಜ್ ತನ್ನ ಮನೆಯಲ್ಲಿ ತರ್ನ್‌ಜೀತ್ ಅವರನ್ನು ಬರ್ಬರವಾಗಿ ಹತ್ಯೆ ಮಾಡಿದ್ದ. ರಾಜ್ ಮೇಲಿದ್ದ ಆರೋಪ ಕಳೆದ ವಾರ ಸಾಬೀತಾಗಿತ್ತು.

ಶುಕ್ರವಾರ ಲೆಸ್ಟರ್ ಕ್ರೌನ್ ನ್ಯಾಯಾಲಯದ ನ್ಯಾಯಾಧೀಶರು ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ನೀಡಿದರು. 21 ವರ್ಷ ಜೈಲು ಶಿಕ್ಷೆ ಅನುಭವಿಸಿದ ಬಳಿಕವೇ ಆತ ಪೆರೋಲ್ ಪಡೆಯಲು ಅರ್ಹನಾಗುತ್ತಾನೆ ಎಂದು ಲೆಸ್ಟರ್ ಪೊಲೀಸರು ಹೇಳಿದ್ದಾರೆ.

ಮಹಾರಾಷ್ಟ್ರ: ಮತ ಪ್ರಮಾಣದಲ್ಲಿ ವ್ಯತ್ಯಾಸ ಕುರಿತು ಚುನಾವಣಾ ಆಯೋಗಕ್ಕೆ 'ಕೈ' ಪತ್ರ

# ಚರ್ಚೆಗೆ ಬನ್ನಿ: ಕಾಂಗ್ರೆಸ್‌ಗೆ ಆಹ್ವಾನ

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ: ಮಹಾರಾಷ್ಟ್ರ ಚುನಾವಣೆ ಮುಗಿದಿದ್ದರೂ, ಮತದಾನ ಪ್ರಕ್ರಿಯೆ ವಿಚಾರವಾಗಿ ಕಾಂಗ್ರೆಸ್ ಮತ್ತು ಚುನಾವಣಾ ಆಯೋಗದ ನಡುವೆ ಜಟಾಪಟಿ ಮುಂದುವರಿದಿದೆ.

ಮಹಾರಾಷ್ಟ್ರದಲ್ಲಿ ನಡೆದ ಮತದಾನ ಪ್ರಕ್ರಿಯೆಯನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಚುನಾವಣಾ ಆಯೋಗ, ಪಕ್ಷ ಎತ್ತಿರುವ ಹಲವು ವಿಚಾರಗಳ ಕುರಿತು ಚರ್ಚೆ ನಡೆಸುವುದಕ್ಕಾಗಿ ಡಿ.3ರ ಸಂಜೆ ಬರುವಂತೆ ಕಾಂಗ್ರೆಸ್ ನಿಯೋಗಕ್ಕೆ ಶನಿವಾರ ಆಹ್ವಾನ ನೀಡಿದೆ.

ಮಹಾರಾಷ್ಟ್ರ ಚುನಾವಣೆಯಲ್ಲಿನ ಮತದಾನದ ಕುರಿತು ಕಾಂಗ್ರೆಸ್ ಪಕ್ಷ ಆಯೋಗಕ್ಕೆ ಶುಕ್ರವಾರ ಮನವಿ ಪತ್ರ ಸಲ್ಲಿಸಿ, ತನ್ನ ಆಕ್ಷೇಪ, ಕಳವಳ ವ್ಯಕ್ತಪಡಿಸಿತ್ತು. ಮನವಿ ಪತ್ರಕ್ಕೆ ಉತ್ತರ ನೀಡಿರುವ ಆಯೋಗ, ಕಾಂಗ್ರೆಸ್ ನಿಯೋಗಕ್ಕೆ ಈ ಆಹ್ವಾನ ನೀಡಿದೆ.

'ಮತದಾನಕ್ಕೆ ಸಂಬಂಧಿಸಿ ಸ್ಥಾಪಿತ ಪ್ರಕ್ರಿಯೆ ಅನುಸರಿಸಲಾಗಿದೆ. ಆದಾಗ್ಯೂ, ಕಾಂಗ್ರೆಸ್ ಪಕ್ಷ ವ್ಯಕ್ತಪಡಿಸಿರುವ 'ನ್ಯಾಯಯುತ ಆತಂಕ'ಗಳ ಕುರಿತು ಪರಿಶೀಲನೆ ನಡೆಸಲಾಗುವುದು' ಎಂದು ಆಯೋಗ ಹೇಳಿದೆ.

'ಮತದಾರರ ಪಟ್ಟಿಯಿಂದ ಹೆಸರುಗಳನ್ನು ಮನಬಂದಂತೆ ತೆಗೆದು ಹಾಕಲಾಗಿತ್ತು. ಆದಾಗ್ಯೂ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಮತದಾನ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದಿದೆ. ಅದರಲ್ಲೂ, ನ.20ರ ಸಂಜೆ 5ರಿಂದ ರಾತ್ರಿ 11.30ರ ವರೆಗೆ ಆಯೋಗ ಮಾಹಿತಿ ನೀಡಿದ ವೇಳೆ, ಮತಪ್ರಮಾಣದಲ್ಲಿ 'ವಿವರಿಸಲಾಗದ'ದಷ್ಟು ಹೆಚ್ಚಳ ಕಂಡುಬಂದಿದೆ' ಎಂದು ಕಾಂಗ್ರೆಸ್ ಮನವಿ ಪತ್ರದಲ್ಲಿ ವಿವರಿಸಿತ್ತು.


ಇದಕ್ಕೆ ಪ್ರತಿಕ್ರಿಯಿಸಿರುವ ಆಯೋಗ, 'ಡಿ.3ರ ಸಂಜೆ ಕಾಂಗ್ರೆಸ್ ನಿಯೋಗದ ಅಹವಾಲು ಆಲಿಸಿದ ನಂತರ, ವಿವರವಾದ ಉತ್ತರ ನೀಡಲಾಗುವುದು' ಎಂದು ಹೇಳಿದೆ.

'ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕಲಾಗಿತ್ತು, ನಂತರ ಹಲವರ ಹೆಸರುಗಳನ್ನು ಸೇರ್ಪಡೆ ಮಾಡಲಾಗಿದೆ ಎಂದು ಕಾಂಗ್ರೆಸ್ ದೂರಿದೆ. ಆದರೆ, ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳೊಂದಿಗೆ ನಿಕಟ ಸಮಾಲೋಚನೆ ಬಳಿಕವೇ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ, ಅಂತಿಮಗೊಳಿಸಲಾಗುತ್ತದೆ' ಎಂದು ಹೇಳಿದೆ.

'ಮತದಾರರ ಪಟ್ಟಿಯ ಕರಡು ಪ್ರತಿಯನ್ನು ಎಲ್ಲ ಪಕ್ಷಗಳಿಗೆ ನೀಡಲಾಗುತ್ತದೆ. ಪಟ್ಟಿ ಪರಿಶೀಲನೆಯ ಪ್ರತಿ ಹಂತದಲ್ಲಿಯೂ ಪಕ್ಷಗಳನ್ನು ತೊಡಗಿಸಿಕೊಳ್ಳಲಾಗುತ್ತದೆ' ಎಂದೂ ಹೇಳಿದೆ.

## 'ಕಾಂಗ್ರೆಸ್ ನಾಯಕರು ರಾಜೀನಾಮೆ ನೀಡಲಿ'

'ಚುನಾವಣಾ ಪ್ರಕ್ರಿಯೆ, ಇವಿಎಂಗಳ ವಿಶ್ವಾಸಾರ್ಹತೆ ಕುರಿತು ಕಾಂಗ್ರೆಸ್ ಪದೇಪದೇ ಪ್ರಶ್ನೆ ಕೇಳುತ್ತಿದೆ. ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್‌ನ ಚುನಾಯಿತ ಪ್ರತಿನಿಧಿಗಳು ಮೊದಲು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ, ಮತಪತ್ರಗಳ ಬಳಕೆ ಮತ್ತೆ ಶುರುವಾದ ಮೇಲಷ್ಟೆ ಚುನಾವಣೆಗೆ ಸ್ಪರ್ಧಿಸುವುದಾಗಿ ಘೋಷಿಸಲಿ' ಎಂದು ಬಿಜೆಪಿ ಶನಿವಾರ ಸವಾಲು ಹಾಕಿದೆ.



'ರಾಜೀನಾಮೆ ನೀಡಿದರೆ ಮಾತ್ರ ತಾವು ಪ್ರತಿಪಾದಿಸುತ್ತಿರುವ ವ್ಯವಸ್ಥೆಯಲ್ಲಿ ಕಾಂಗ್ರೆಸ್ ನಾಯಕರು ಹೊಂದಿರುವ ನಂಬಿಕೆಗೆ ಮಹತ್ವ ಬರುತ್ತದೆ. ಇವಿಎಂ ಕುರಿತು ಅವರು ಮಾಡುತ್ತಿರುವ ಆರೋಪಗಳಿಗೆ ಬೆಲೆ ಇರುತ್ತದೆ' ಎಂದು ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇವಿಎಂಗಳು ಹಾಗೂ ಇವುಗಳನ್ನು ಬಳಸಿ ನಡೆಸುವ ಚುನಾವಣೆ ಪ್ರಕ್ರಿಯೆಯಲ್ಲಿನ ಪಾರದರ್ಶಕತೆಯನ್ನು ಸುಪ್ರೀಂ ಕೋರ್ಟ್ ಹಲವಾರು ಸಂದರ್ಭಗಳಲ್ಲಿ ದೃಢೀಕರಿಸಿದೆ. ಕಾಂಗ್ರೆಸ್‌ನವರು ಈ ವಿಚಾರವಾಗಿ ಈಗಲೂ ಕೋರ್ಟ್ ಕದ ತಟ್ಟಬಹುದು' ಎಂದು ಹೇಳಿದರು.

'ಕಾಂಗ್ರೆಸ್‌ನ ಕೆಲ ಮುಖ್ಯಮಂತ್ರಿಗಳು, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇವಿಎಂಗಳನ್ನು ಒಳಗೊಂಡ ಚುನಾವಣಾ ಪ್ರಕ್ರಿಯೆ ಮೂಲಕವೇ ಗೆದ್ದು ಬಂದವರು. ಈ ನಾಯಕರು ಮೊದಲು ರಾಜೀನಾಮೆ ನೀಡಲಿ' ಎಂದರು.

'ಲೋಕಸಭಾ ಸದಸ್ಯೆಯಾಗಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪ್ರಮಾಣವಚನ ಸ್ವೀಕರಿಸಿದ ದಿನವೇ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇವಿಎಂಗಳ ಕುರಿತು ಪ್ರಶ್ನೆ ಎತ್ತಿದ್ದು ವಿಪರ್ಯಾಸ' ಎಂದು ಕುಟುಕಿದರು.

ಹೊರಗುತ್ತಿಗೆ ಸೇವೆಗೆ ಅಂಕ ನಿರಾಕರಣೆ

# 'ಸಾಮಾಜಿಕ ನ್ಯಾಯಕ್ಕೆ ವಿರುದ್ಧ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಇಲಾಖೆಯ ಹೊರಗುತ್ತಿಗೆ ಸಿಬ್ಬಂದಿಯ ಕೆಲಸದ ಅನುಭವವನ್ನು ಗುರುತಿಸಲು ನಿರಾಕರಿಸುವುದು ಸಮಾನತೆ ಮತ್ತು ಸಾಮಾಜಿಕ ನ್ಯಾಯ ತತ್ವಕ್ಕೆ ವಿರುದ್ಧ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಸಾಮಾಜಿಕ ನ್ಯಾಯ'ವು ದೇಶದ ಸಂವಿಧಾನದ ಉದ್ದಕ್ಕೂ ಗುಪ್ತಗಾಮಿನಿಯಾಗಿ ಹರಿಯುತ್ತಿದೆ. ಶಕ್ತಿವಂತರು ಹಾಗೂ ಶಕ್ತಿ ಇಲ್ಲದವರ ನಡುವೆ ಸಂಘರ್ಷ ಉಂಟಾದಾಗ ನ್ಯಾಯಾಲಯಗಳು ದುರ್ಬಲ ಮತ್ತು ಬಡ ವರ್ಗಗಳ ಪರವಾಗಿ ನಿಲ್ಲಬೇಕು ಎಂಬುದನ್ನು ಇದು ಹೇಳುತ್ತದೆ ಎಂದು ನ್ಯಾಯಮೂರ್ತಿಗಳಾದ ದೀಪಾಂಕರ್ ದತ್ತ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.



ಮೋನಿಕಾ ಎನ್ನುವವರಿಗೆ 0.5ರಷ್ಟು ಅಂಕ ನೀಡಿ, ಅವರನ್ನು ಗುಮಾಸ್ತ ಹುದ್ದೆಗೆ ನೇಮಕಾತಿಗೆ ಪರಿಗಣಿಸಬೇಕು ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಏಕಸದಸ್ಯ ಪೀಠ ಆದೇಶ ನೀಡಿತ್ತು. ಇದನ್ನು ವಿಭಾಗೀಯ ಪೀಠವು ಎತ್ತಿಹಿಡಿದಿತ್ತು. ವಿಭಾಗೀಯ ಪೀಠದ ಆದೇಶವನ್ನು ಹರಿಯಾಣದ 'ಚೌಧರಿ ಚರಣ್ ಸಿಂಗ್ ಹರಿಯಾಣ ಕೃಷಿ ವಿಶ್ವವಿದ್ಯಾಲಯ'ವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ವಿಶ್ವವಿದ್ಯಾಲಯ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಮಹಿಳಾ ಅಭ್ಯರ್ಥಿಯನ್ನು ಈ ಹಿಂದೆ ಹೊರಗುತ್ತಿಗೆ ನಿಯಮಗಳ ಅಡಿಯಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲಾಗಿತ್ತು, ಅವರನ್ನು ಕಾಯಂ ಆಧಾರದಲ್ಲಿ ನೇಮಕ ಮಾಡಿಕೊಂಡಿರಲಿಲ್ಲ, ಮಂಜೂರಾದ ಹುದ್ದೆಗೆ ಕೂಡ ಅವರನ್ನು ನೇಮಕ ಮಾಡಿಕೊಂಡಿರಲಿಲ್ಲ, ಅವರ ಕೆಲಸದ ಅನುಭವವನ್ನು ಮಂಜೂರಾದ ಹುದ್ದೆಯಲ್ಲಿನ ಕೆಲಸದ ಅನುಭವದ ಜೊತೆ ಹೋಲಿಸಲು ಆಗದು ಎಂದು ವಿಶ್ವವಿದ್ಯಾಲಯವು ಹೇಳಿತ್ತು.

ವ್ಯಕ್ತಿಯೊಬ್ಬರು ಮಂಜೂರಾದ ಹುದ್ದೆಯಲ್ಲಿ ಕೆಲಸ ಮಾಡಿಲ್ಲ, ಅವರು ಹೊರಗುತ್ತಿಗೆ ಏಜೆನ್ಸಿಯೊಂದರ ಮೂಲಕ ಕೆಲಸ ಮಾಡುತ್ತಿದ್ದರು ಎಂಬ ಕಾರಣಕ್ಕೆ ಅವರ ಅನುಭವಕ್ಕೆ ಅಂಕ ನೀಡಲು ನಿರಾಕರಿಸುವುದು ದುರ್ಬಲರಿಗೆ ಸಾಮಾಜಿಕ ನ್ಯಾಯವನ್ನು ಕೊಡಿಸುವ ಹಾಗೂ ಸಮಾನತೆಯನ್ನು ಖಾತರಿಪಡಿಸುವ ಸಾಂವಿಧಾನಿಕ ಹೊಣೆಗೆ ವಿರುದ್ಧ ಎಂದು ಶುಕ್ರವಾರ ನೀಡಿರುವ ತೀರ್ಪಿನಲ್ಲಿ ಪೀಠ ಸ್ಪಷ್ಟಪಡಿಸಿದೆ.

ಅರ್ಹ ಅಭ್ಯರ್ಥಿಗಳಲ್ಲಿ ಅನುಭವ ಹೊಂದಿರುವವರು ಹಾಗೂ ಇತರ ಮಾನದಂಡಗಳಿಗೆ ಅನುಗುಣವಾಗಿ ಸೂಕ್ತರು ಯಾರು ಎಂಬುದನ್ನು ಕಂಡುಕೊಳ್ಳುವುದು ಆಯ್ಕೆ ಪ್ರಕ್ರಿಯೆಯಲ್ಲಿ ಆದ್ಯತೆ ಪಡೆಯಬೇಕು. ಸೂಕ್ತ ಅಭ್ಯರ್ಥಿಗಳ ಪೈಕಿ ಹೆಚ್ಚು ಪ್ರತಿಭಾವಂತರನ್ನು ನೇಮಕ ಮಾಡಿಕೊಳ್ಳಬೇಕು ಎಂದು ಪೀಠವು ಹೇಳಿದೆ.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆಕ್ಷೇಪ

'ಈ ವಿಷಯ ಕುರಿತು ಸಮಗ್ರ ಮಾಹಿತಿ ಹೊಂದಿರುವ, ಜಂಟಿ ಕಾರ್ಯದರ್ಶಿಗಿಂತ ಕಡಿಮೆ ಇಲ್ಲದ ಶ್ರೇಣಿಯ ಸಚಿವಾಲಯದ ಅಧಿಕಾರಿ ಮುಂದಿನ ವಿಚಾರಣೆ ವೇಳೆ ಖುದ್ದಾಗಿ ಹಾಜರಿದ್ದು, ವಿವರಣೆ ನೀಡಬೇಕು'


## 'ನ್ಯಾಯಮಂಡಳಿ ಕಾರ್ಯಕ್ಕೆ ಅರಣ್ಯ ಸಚಿವಾಲಯದಿಂದ ಅಡಚಣೆ'

ನವದೆಹಲಿ: ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಕೆಲ ವಿಷಯಗಳ ಕುರಿತು ಸಮರ್ಪಕ ಉತ್ತರ ನೀಡದೇ ನ್ಯಾಯಮಂಡಳಿಯ ಕಾರ್ಯನಿರ್ವಹಣೆಗೆ 'ಭಾರಿ ಅಡಚಣೆ' ಉಂಟು ಮಾಡುತ್ತಿದೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಹೇಳಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಕಲ್ನಾರು (ಅಸ್ಬೆಸ್ಟಾಸ್) ಶೀಟುಗಳ ಬಳಕೆಯಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪರಿಣಾಮ ಉಂಟಾಗುತ್ತಿದೆ ಎಂಬ ವಿಚಾರವಾಗಿ ಸಚಿವಾಲಯ ಉತ್ತರ ನೀಡಿಲ್ಲ. ಹೀಗಾಗಿ, ನ್ಯಾಯಮಂಡಳಿ ಈ ಮಾತು ಹೇಳಿದೆ.

ಮಂಡಳಿಯ ಪ್ರಧಾನ ಪೀಠವು ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ಕಲ್ನಾರು ಬಳಕೆಯಿಂದ ಕೈಗಾರಿಕೆಗಳಲ್ಲಿನ ಕಾರ್ಮಿಕರ ಆರೋಗ್ಯದ ಮೇಲಾಗುವ ಪರಿಣಾಮ ಹಾಗೂ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳು ಬೇರೆಯಾಗಿವೆಯೇ ಎಂಬುದನ್ನು ಪರಿಶೀಲಿಸಬೇಕು. ಒಂದು ವೇಳೆ, ಪರಿಣಾಮಗಳು ಭಿನ್ನವಾಗಿದ್ದಲ್ಲಿ, ಈ ಕುರಿತು ಸಚಿವಾಲಯ ವೈಜ್ಞಾನಿಕ ಅಧ್ಯಯನ ಕೈಗೊಂಡು, ವರದಿ ಸಲ್ಲಿಸಬೇಕು ಎಂದು ನ್ಯಾಯಮಂಡಳಿ ಜುಲೈನಲ್ಲಿ ಸಚಿವಾಲಯಕ್ಕೆ ಸೂಚಿಸಿತ್ತು.



'ಈ ವಿಚಾರವಾಗಿ ಸಚಿವಾಲಯ ಸೆಪ್ಟೆಂಬರ್ 24ರಂದು ನೀಡಿರುವ ಪ್ರತಿಕ್ರಿಯೆಯಲ್ಲಿ, ವೈಜ್ಞಾನಿಕ ಅಧ್ಯಯನಕ್ಕೆ ಸಂಬಂಧಿಸಿ ತಾನು ಕೇಳಿದ ಪ್ರಶ್ನೆಗಳಿಗೆ ನಿರ್ದಿಷ್ಟ ಉತ್ತರ ಇಲ್ಲ' ಎಂದು ನ್ಯಾಯಮೂರ್ತಿ ಸುಧೀರ್ ಅಗರವಾಲ್ ಹಾಗೂ ತಜ್ಞ ಸದಸ್ಯ ಅಫ್ರೋಜ್ ಅಹ್ಮದ್ ಅವರು ಇದ್ದ ನ್ಯಾಯಮಂಡಳಿಯ ಪೀಠವು ನ.26ರಂದು ಹೊರಡಿಸಿದ್ದ ಆದೇಶದಲ್ಲಿ ತಿಳಿಸಿತ್ತು.

ವಿವಿಧ ಕ್ಷೇತ್ರಗಳ ತಜ್ಞರನ್ನು ಒಳಗೊಂಡ ಸಮಿತಿ ರಚಿಸಿ ಎರಡು ತಿಂಗಳ ಒಳಗಾಗಿ ವರದಿ ಸಲ್ಲಿಸುವಂತೆ, ಪೀಠವು ಸೆ.25ರಂದು ನೀಡಿದ್ದ ಆದೇಶದಲ್ಲಿ ತಿಳಿಸಿತ್ತು. ವಿಚಾರಣೆಯನ್ನು ಡಿ.17ಕ್ಕೆ ಮುಂದೂಡಿದೆ.

# ಬಾಂಗ್ಲಾದೇಶ: ವಕೀಲನ ಹತ್ಯೆ– 9 ಮಂದಿ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ಢಾಕಾ/ಕೋಲ್ಕತ್ತ: 'ವಕೀಲ ಸೈಫುಲ್ ಇಸ್ಲಾಂ ಅವರ ಹತ್ಯೆಗೆ ಸಂಬಂಧಿಸಿ ಚಟ್ಟೋಗ್ರಾಮದ ಒಂಬತ್ತು ಮಂದಿಯನ್ನು ಬಂಧಿಸಲಾಗಿದೆ' ಎಂದು ಬಾಂಗ್ಲಾದೇಶದ ಪೊಲೀಸರು ಶನಿವಾರ ತಿಳಿಸಿದ್ದಾರೆ.

'ಇಸ್ಲಾಂ ಅವರ ತಂದೆ ಜಮಾಲ್ ಉದ್ದೀನ್ ಅವರು ತಮ್ಮ ಮಗನ ಹತ್ಯೆಗೆ ಸಂಬಂಧಿಸಿ ಒಟ್ಟು 46 ಮಂದಿಯ ವಿರುದ್ಧ ಶುಕ್ರವಾರ ರಾತ್ರಿ ಪೊಲೀಸರಿಗೆ ದೂರು ನೀಡಿದ್ದಾರೆ' ಎಂದು 'ಬಿಡಿನ್ಯೂಸ್24.ಕಾಂ' ವರದಿ ಮಾಡಿದೆ.

ಹತ್ಯೆ ಮಂಗಳವಾರ ನಡೆದಿದ್ದರೂ ಇಸ್ಲಾಂ ಅವರ ತಂದೆ 3 ದಿನಗಳ ಬಳಿಕ ದೂರು ನೀಡಿದ್ದಾರೆ. ಇದಕ್ಕೂ ಮೊದಲೇ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿ ಕೊಂಡಿದ್ದ ಪೊಲೀಸರು ಬುಧವಾರ ಆರು ಮಂದಿಯನ್ನು ಬಂಧಿಸಿದ್ದರು.

'ದೂರಿನಲ್ಲಿ ಉಲ್ಲೇಖಿಸಿರುವ 46 ಜನರಲ್ಲಿ ಬಹುತೇಕರು ಸೀಬುಕ್ ಕಾಲೊನಿ ನಿವಾಸಿಗಳು. ಈ ಕಾಲೊನಿಯಲ್ಲಿ ಹಿಂದೂ ಸಮುದಾಯಕ್ಕೆ ಸೇರಿದ ಸ್ವಚ್ಛತಾ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಂಬತ್ತು ಮಂದಿಯನ್ನು ಬಂಧಿಸಲಾಗಿದ್ದು, ಉಳಿದವರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನ್ಯಾಯಾಲಯ ಸಂಕೀರ್ಣದಲ್ಲಿ ಅಳವಡಿಸಲಾಗಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾದ ದೃಶ್ಯಾವಳಿಗಳಿಂದಾಗಿ ಆರೋಪಿಗಳ ಗುರುತು ಪತ್ತೆಯಾಗಿದೆ. ಚಂದನ್ ದಾಸ್ ಎಂಬುವರು ಈ ಪ್ರಕರಣದ ಪ್ರಮುಖ ಆರೋಪಿ. ಚಂದನ್ ಅವರು ಚೂಪಾದ ಆಯುಧದಿಂದ ವಕೀಲ ಇಸ್ಲಾಂ ಅವರ ಮೇಲೆ ದಾಳಿ ನಡೆಸುತ್ತಿದ್ದ ದೃಶ್ಯಗಳು ದೊರೆತಿವೆ. ಘರ್ಷಣೆಯಲ್ಲಿ ತೊಡಗಿದ್ದ ಹೆಚ್ಚಿನವರು ಹೆಲ್ಮೆಟ್ ಧರಿಸಿದ್ದರು ಮತ್ತು ಕೈಯಲ್ಲಿ ಚೂಪಾದ ಆಯುಧಗಳನ್ನು ಹಿಡಿದಿದ್ದರು' ಎಂದರು.



ಬಾಂಗ್ಲಾದೇಶದಲ್ಲಿ ಚಿನ್ಮಯಿ ಕೃಷ್ಣದಾಸ್ ಅವರ ಬಂಧನವನ್ನು ವಿರೋಧಿಸಿ ವಿಶ್ವ ಹಿಂದೂ ಪರಿಷತ್ತಿನ ಸದಸ್ಯರು ಶನಿವಾರ ಹೈದರಾಬಾದ್‌ನಲ್ಲಿ ಪ್ರತಿಭಟನೆ ನಡೆಸಿದರು —ಎಎಫ್‌ಪಿ ಚಿತ್ರ

### ದೂರಿನಲ್ಲಿ ಏನಿದೆ?

'ಗಡ್ಡ ಇರುವ ಕಾರಣಕ್ಕಾಗಿಯೇ ಪ್ರತಿಭಟನಕಾರರು ನನ್ನ ಮಗನ ಮೇಲೆ ಆಯುಧಗಳನ್ನು ಬಳಸಿ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಇಸ್ಕಾನ್‌ನಿಂದ ಉಚ್ಚಾಟನೆಗೊಂಡಿರುವ ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರ ಪರ ಘೋಷಣೆಗಳನ್ನು ಕೂಗುತ್ತಾ ನನ್ನ ಮಗನ ಮೇಲೆ ದಾಳಿ ನಡೆಸಿದ್ದಾರೆ' ಎಂದು ಇಸ್ಲಾಂ ಅವರ ತಂದೆ ತಮ್ಮ ದೂರಿನಲ್ಲಿ ಹೇಳಿದ್ದಾರೆ' ಎಂದು 'ಢಾಕಾ ಟ್ರಿಬ್ಯೂನ್' ಪತ್ರಿಕೆ ವರದಿ ಮಾಡಿದೆ.

### 'ಬಾಂಗ್ಲಾದವರಿಗೆ ಚಿಕಿತ್ಸೆ ಇಲ್ಲ'

'ಬಾಂಗ್ಲಾದೇಶದ ರೋಗಿಗಳಿಗೆ ಚಿಕಿತ್ಸೆ ನೀಡುವುದಿಲ್ಲ' ಎಂದು ತ್ರಿಪುರಾದಲ್ಲಿರುವ 'ಐಎಲ್‌ಎಸ್ ಹಾಸ್ಪಿಟಲ್' ಎಂಬ ಖಾಸಗಿ ಆಸ್ಪತ್ರೆ ಹಾಗೂ ಕೋಲ್ಕತ್ತದ ಜೆಎನ್ ರಾಯ್ ಆಸ್ಪತ್ರೆ ಘೋಷಿಸಿವೆ. 'ಬಾಂಗ್ಲಾದೇಶದ ನಾಗರಿಕರು ನಮ್ಮ ತ್ರಿವರ್ಣ ಧ್ವಜಕ್ಕೆ ಅಪಮಾನ ಮಾಡುತ್ತಾರೆ. ಆ ದೇಶದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ. ಇದನ್ನು ವಿರೋಧಿಸಿ ಪ್ರತಿಭಟನಾತ್ಮಕವಾಗಿ ಚಿಕಿತ್ಸೆ ನಿರಾಕರಿಸಲಾಗಿದೆ' ಎಂದು ಈ ಎರಡು ಆಸ್ಪತ್ರೆಗಳು ಹೇಳಿವೆ.

ತ್ರಿಪುರಾದ ಈ ಆಸ್ಪತ್ರೆಯು ಬಾಂಗ್ಲಾದೇಶಕ್ಕೆ ಹತ್ತಿರದಲ್ಲಿರುವ ಕಾರಣ ಆ ದೇಶದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಗೆ ದಾಖಲಾಗುತ್ತಾರೆ. ಬಾಂಗ್ಲಾದೇಶದವರಿಗೆ ಚಿಕಿತ್ಸೆ ನೀಡಬಾರದು ಎಂದು ಒತ್ತಾಯಿಸಿ ಕೆಲವರು ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದ್ದರು.

### 3 ದೇವಸ್ಥಾನಗಳ ಮೇಲೆ ದಾಳಿ

ಚಟ್ಟೋಗ್ರಾಮದ ಹರೀಶ್ ಚಂದ್ರ ಮನ್ಸಿಫ್ ರಸ್ತೆಯಲ್ಲಿರುವ ಹಿಂದೂ ದೇವಾಲಯಗಳಾದ ಶಾಂತನೇಶ್ವರಿ ಮಾತಾ ಮಂದಿರ, ಶನಿ ದೇವಸ್ಥಾನ ಹಾಗೂ ಶಾಂತನೇಶ್ವರಿ ಕಾಳಿಬಾಳಿ ಮಂದಿರಗಳ ಮೇಲೆ ಶುಕ್ರವಾರ ಮಧ್ಯಾಹ್ನ ದಾಳಿ ನಡೆದಿದೆ.

'ದೇವಸ್ಥಾನಗಳಿಗೆ ಹೆಚ್ಚಿನ ಹಾನಿಯಾಗಿಲ್ಲ. ಶನಿ ದೇವಸ್ಥಾನಕ್ಕೆ ತುಸು ಹಾನಿಯಾಗಿದೆ. ಉಳಿದ ಎರಡು ದೇವಸ್ಥಾನಗಳ ಗೇಟುಗಳಿಗೆ ಹಾನಿಯಾಗಿದೆಯಷ್ಟೆ. ಎರಡೂ ಧರ್ಮಗಳ ಜನರು ಪರಸ್ಪರ ಇಟ್ಟಿಗೆಗಳನ್ನು ತೂರಿದ್ದಾರೆ. ಇದರಿಂದ ಘರ್ಷಣೆ ಹೆಚ್ಚಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

### 'ಇಸ್ಕಾನ್‌ನ ಇನ್ನಿಬ್ಬರ ಬಂಧನ'

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದಲ್ಲಿ ಇಸ್ಕಾನ್‌ನ ಇನ್ನೂ ಇಬ್ಬರು ಸನ್ಯಾಸಿಗಳನ್ನು ಬಂಧಿಸಲಾಗಿದೆ ಎಂದು ಕೋಲ್ಕತ್ತದ ಇಸ್ಕಾನ್ ವಕ್ತಾರ ರಾಧಾರಮಣ್ ದಾಸ್ ಶನಿವಾರ ಹೇಳಿದ್ದಾರೆ.

'ಕೆಟ್ಟ ಸುದ್ದಿಯೊಂದು ಬಂದಿದೆ: ಚಿನ್ಮಯಪ್ರಭು ಅವರಿಗೆ ಪ್ರಸಾದ ಕೊಂಡೊಯ್ದಿದ್ದ ಇಬ್ಬರನ್ನು ದೇವಸ್ಥಾನಕ್ಕೆ ವಾಪಸ್ ಬರುತ್ತಿದ್ದಾಗ ಬಂಧಿಸಲಾಗಿದೆ. ಚಿನ್ಮಯಪ್ರಭು ಅವರ ಕಾರ್ಯದರ್ಶಿ ನಾಪತ್ತೆ ಆಗಿದ್ದಾರೆ' ಎಂದು ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

'ಚಿನ್ಮಯ್ ದಾಸ್ ಅವರನ್ನು ಸೋಮವಾರ ಬಂಧಿಸಲಾಗಿದೆ. ಅವರಿಗೆ ಚಟ್ಟೋಗ್ರಾಮದ ನ್ಯಾಯಾಲಯವೊಂದು ಜಾಮೀನು ನಿರಾಕರಿಸಿದೆ. ಚಿನ್ಮಯ್ ದಾಸ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಆರ್‌ಎಸ್‌ಎಸ್ ಒತ್ತಾಯಿಸಿದೆ.

ಜಾಗತಿಕ ಅಭಿಪ್ರಾಯ ರೂಪಿಸಿ-ಆರ್‌ಎಸ್‌ಎಸ್: 'ಚಿನ್ಮಯಿ ಕೃಷ್ಣದಾಸ್ ಬ್ರಹ್ಮಚಾರಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು. ಜೊತೆಗೆ, ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ನಿಲ್ಲಬೇಕು. ಮಧ್ಯಂತರ ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಆರ್‌ಎಸ್‌ಎಸ್ ಶನಿವಾರ ಒತ್ತಾಯಿಸಿದೆ.

ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಈ ಬಗ್ಗೆ ಹೇಳಿಕೆ ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕಾರ

# ಡಿ.5ಕ್ಕೆ 'ಮಹಾ' ಸರ್ಕಾರ ರಚನೆ: ಬಿಜೆಪಿ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಮಹಾರಾಷ್ಟ್ರದಲ್ಲಿ 'ಮಹಾಯುತಿ' ಮೈತ್ರಿಕೂಟದ ಹೊಸ ಸರ್ಕಾರ ಡಿಸೆಂಬರ್ 5ರಂದು ರಚನೆಯಾಗಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ದೇವೇಂದ್ರ ಫಡಣವೀಸ್ ಅವರ ಹೆಸರು ಮುಂಚೂಣಿಯಲ್ಲಿದೆ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ. ಜತೆಗೆ ಅಜಿತ್ ಪವಾರ ನೇತೃತ್ವದ ಎನ್‌ಸಿಪಿ ಕೂಡ ಫಡಣವೀಸ್‌ಗೆ ಬೆಂಬಲ ಸೂಚಿಸಿದೆ.

ಅಧಿಕಾರ ಹಂಚಿಕೆ ಸೂತ್ರ ಮತ್ತು ಖಾತೆ ಹಂಚಿಕೆ ಬಗ್ಗೆ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಾದ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ನಡುವೆ ವಾರಾಂತ್ಯದಲ್ಲಿ ಮಾತುಕತೆ ಮುಂದುವರಿದಿರುವಾಗಲೇ ಬಿಜೆಪಿಯಿಂದ ಸರ್ಕಾರ ರಚನೆಯ ದಿನಾಂಕದ ಬಗ್ಗೆ ಹೇಳಿಕೆ ಹೊರಬಿದ್ದಿದೆ.

'ಕಾಯುವಿಕೆ ಕೊನೆಗೊಂಡಿದೆ. ಮಹಾಯುತಿ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭವು ಗುರುವಾರ ಸಂಜೆ 5 ಗಂಟೆಗೆ ಐತಿಹಾಸಿಕ ಆಜಾದ್ ಮೈದಾನದಲ್ಲಿ ನಡೆಯಲಿದೆ. ಪ್ರಧಾನಿ ಮೋದಿ ಅವರು ಪಾಲ್ಗೊಳ್ಳಲಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ಬಾವಂಕುಲೆ ತಿಳಿಸಿದ್ದಾರೆ.

**ಇಂದು ಸಭೆ ಸಾಧ್ಯತೆ:** ಮಹಾಯುತಿ ನಾಯಕರ ಸಭೆ ಭಾನುವಾರ ನಡೆಯುವ ಸಾಧ್ಯತೆಯಿದೆ ಎಂದು ಹಿಂದಿನ ವಿಧಾನಸಭೆಯಲ್ಲಿ ಸ್ಪೀಕರ್ ಆಗಿದ್ದ ಕೊಲಾಬಾ ಕ್ಷೇತ್ರದ ಬಿಜೆಪಿ ಶಾಸಕ ರಾಹುಲ್ ನಾರ್ವೇಕರ್ ಹೇಳಿದ್ದಾರೆ.

**ಡಿ.2–3ರಂದು ಬಿಜೆಪಿ ಶಾಸಕಾಂಗ ಸಭೆ:** ಡಿಸೆಂಬರ್ 2 ಅಥವಾ 3 ರಂದು ಬಿಜೆಪಿ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಸಭೆ ನಡೆಸಲಾಗುವುದು ಎಂದು ಬಿಜೆಪಿಯ ಮತ್ತೊಬ್ಬ ಹಿರಿಯ ನಾಯಕ ತಿಳಿಸಿದ್ದಾರೆ.

### 'ಮಹಾಯುತಿ'ಯಲ್ಲಿ ಒಡಕು?

> ಶಿಂದೆ ಅವರ 'ಕಾಮನ್ ಮ್ಯಾನ್' ವ್ಯಕ್ತಿತ್ವವು ಜನರಿಗೆ ಹೆಚ್ಚು ಇಷ್ಟವಾಗಿದೆ. ಕೆಲವೊಬ್ಬರು ಅವರನ್ನು 'ಗದ್ದಾರ್' ಎಂದರೂ ಚುನಾವಣೆಯ ನಂತರ ಅವರ ವರ್ಚಸ್ಸು ಹೆಚ್ಚಿದೆ
> **ಸಂಜಯ್ ಶಿರ್ಸಾಟ್**, ಶಿವಸೇನಾ ಶಾಸಕ

'ಮಹಾಯುತಿ' ಮಿತ್ರಪಕ್ಷಗಳಲ್ಲಿ ಬಿರುಕುಗಳು ಮೂಡಿರುವುದನ್ನು ಶಿರ್ಸಾಟ್ ಹೇಳಿಕೆಗಳು ಸೂಚಿಸಿವೆ.

ಶಿವಸೇನಾ ಮೂಲಗಳ ಪ್ರಕಾರ, ಪಕ್ಷವು ಗೃಹ ಖಾತೆಗೆ ಬೇಡಿಕೆ ಇಟ್ಟಿದೆ. ಸರ್ಕಾರ ರಚನೆಗೆ ಸಂಬಂಧಿಸಿದ ಮಾತುಕತೆಗಳಿಂದ ಅಸಮಾಧಾನಗೊಂಡೇ ಏಕನಾಥ ಶಿಂದೆ ಅವರು ತಮ್ಮ ಹುಟ್ಟೂರಾದ ಸಾತಾರಾ ಜಿಲ್ಲೆಯ ಡೇರ್ ಗ್ರಾಮಕ್ಕೆ ತೆರಳಿದ್ದಾರೆ.

'ಬಿಜೆಪಿಯು ಸಂಖ್ಯಾಬಲದಿಂದ ಮುಖ್ಯಮಂತ್ರಿ ಸ್ಥಾನ ಕೇಳುತ್ತಿದೆ. ಇದು ಶಿವಸೇನಾಗೆ ಅಸಮಾಧಾನ ತಂದಿದೆ. ಶಿಂದೆ ಅವರನ್ನು ಮಹಾಯುತಿ ಸರ್ಕಾರದ ಮುಖವನ್ನಾಗಿಸಿಕೊಂಡು ಬಿಜೆಪಿ ಖಂಡಿತವಾಗಿಯೂ ಲಾಭ ಗಳಿಸಿದೆ' ಎಂದು ಅವರು ಹೇಳಿದ್ದಾರೆ.

### ಶಿವಸೇನಾ, ಎನ್‌ಸಿಪಿಗೆ ಡಿಸಿಎಂ ಸ್ಥಾನ

ಹೊಸ ಸರ್ಕಾರ ಒಟ್ಟು 43 ಸಚಿವರನ್ನು ಹೊಂದಬಹುದಾಗಿದೆ. ಬಿಜೆಪಿ 21 ಸಚಿವ ಸ್ಥಾನ, ಶಿವಸೇನಾ ಮತ್ತು ಎನ್‌ಸಿಪಿ ಕ್ರಮವಾಗಿ 12 ಮತ್ತು 10 ಸಚಿವ ಸ್ಥಾನಗಳನ್ನು ಪಡೆಯುವ ನಿರೀಕ್ಷೆ ಇದೆ.

ಬಿಜೆಪಿ ಸಿ.ಎಂ ಸ್ಥಾನ ಪಡೆದರೆ, ಶಿವಸೇನಾ ಮತ್ತು ಎನ್‌ಸಿಪಿಯಿಂದ ತಲಾ ಒಬ್ಬರು ಉಪಮುಖ್ಯಮಂತ್ರಿ ಇರಲಿದ್ದಾರೆ ಎಂದು ಅಜಿತ್ ಪವಾರ್ ಹೇಳಿದ್ದಾರೆ. ಕಂದಾಯ, ಗೃಹ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಜಲ ಸಂಪನ್ಮೂಲಗಳು, ಇಂಧನದಂತಹ ನಿರ್ಣಾಯಕ ಖಾತೆಗಳನ್ನು ಪಡೆಯಲು ಮೂರೂ ಪಕ್ಷಗಳು ಕಸರತ್ತು ನಡೆಸುತ್ತಿವೆ.

# ತಮಿಳುನಾಡು: ಮಳೆ- ಸಂಕಷ್ಟದಲ್ಲಿ ಜನ



ಚೆನ್ನೈನಲ್ಲಿ ಶನಿವಾರ ಮಳೆ ನೀರು ನಿಂತಿದ್ದ ರಸ್ತೆಯಲ್ಲಿ ಜನ ಸಾಗಿದರು – ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ನಗರದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಫ್ಲೈಓವರ್‌ಗಳ ಮೇಲೆ ನೂರಾರು ಕಾರುಗಳ ನಿಲುಗಡೆ, ಮೊಣಕಾಲು ವರೆಗೆ ನಿಂತಿದ್ದ ನೀರಿನಲ್ಲಿ ಸಾಗಿ ಸುರಕ್ಷಿತ ತಾಣ ಅರಸುತ್ತಿದ್ದ ಜನರು, ಆಸ್ಪತ್ರೆಗಳಿಗೂ ನೀರು ನುಗ್ಗಿ ಪರದಾಡಿದ ವೈದ್ಯರು ಹಾಗೂ ರೋಗಿಗಳು....

ತಮಿಳುನಾಡು ಕರಾವಳಿಗೆ ಫೆಂಗಲ್ ಚಂಡಮಾರುತ ಶನಿವಾರ ಅಪ್ಪಳಿಸಿದ್ದರಿಂದ ನಗರವೂ ಸೇರಿದಂತೆ ಹಲವೆಡೆ ಭಾರಿ ಮಳೆಯಾಗಿದ್ದರಿಂದ ಕಂಡುಬಂದ ದೃಶ್ಯಗಳಿವು.

ನಗರದ ಹಲವೆಡೆ ತಗ್ಗು ಪ್ರದೇಶಗಳಲ್ಲಿ ಮಳೆ ನುಗ್ಗಿದ್ದರಿಂದ ಜನರನ್ನು ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಜನವಸತಿ ಅಧಿಕವಿರುವ ಪ್ರದೇಶಗಳಾದ ಮಾಂಬಲಮ್, ಕೋಡಂಬಾಕಂ, ಮಾದಿಪಕ್ಕಂ, ಕೀಳಕಟ್ಟಳೈ, ಅಶೋಕನಗರ, ನುಂಗಂಬಾಕಂ, ಆಳ್ವಾರ್‌ಪೇಟ್, ಪೆರಂಬೂರು ಹಾಗೂ ಪುರಸಾಯಿವಲ್ಕಮ್‌ಗಳಲ್ಲಿ ರಸ್ತೆ, ಮನೆಗಳಲ್ಲಿ ನೀರು ನಿಂತು ಹೆಚ್ಚು ತೊಂದರೆಯಾಗಿದೆ. ಜನರು ಮನೆಯಿಂದ ಹೊರಬರಲಾರದೇ ಸಂಕಷ್ಟ ಎದುರಿಸಿದರು ಎಂದು ಮೂಲಗಳು ಹೇಳಿವೆ.

'ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ಗುಂಡಿಗಳು ಕಾಣುತ್ತಿಲ್ಲ. ರಸ್ತೆಗಿಳಿಯಲು ಭಯವಾಗುತ್ತಿದೆ. ಹಲವು ವರ್ಷಗಳಿಂದ ಇಲ್ಲಿನ ಸ್ಥಿತಿ ಬದಲಾಗಿಲ್ಲ' ಎಂದು ಮಾದಿಪಕ್ಕಂ ನಿವಾಸಿ ಲಕ್ಷ್ಮಿ ಎಂಬುವವರು ಹೇಳಿದ್ದಾರೆ.

### ಪ್ರಮುಖ ಅಂಶಗಳು

- ಗಂಟೆಗೆ 70–100 ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಅಣ್ಣಾಸಾಲೈ ಸೇರಿದಂತೆ ಹಲವು ರಸ್ತೆಗಳಲ್ಲಿನ ಬ್ಯಾರಿಕೇಡ್‌ಗಳು ಹಾರಿಹೋಗಿದ್ದವು. ಶ್ರೀಪೆರಂಬದೂರಿನಲ್ಲಿ ಟ್ರಾಫಿಕ್ ಸಿಗ್ನಲ್ ದೀಪ ಬಿದ್ದಿತ್ತು
- ಸರ್ಕಾರದ ಎಚ್ಚರಿಕೆ ಹೊರತಾಗಿಯೂ ಸಮುದ್ರ ತೀರ, ಮಾಮಲ್ಲಪುರಂನ ವಿಶ್ವ ಪಾರಂಪರಿಕ ತಾಣಕ್ಕೆ ಜನರ ಭೇಟಿ
- ಚೆನ್ನೈನ ಕ್ರೋಮ್‌ಪೇಟೆಯಲ್ಲಿರುವ ಎರಡು ಸರ್ಕಾರಿ ಆಸ್ಪತ್ರೆಗಳಲ್ಲಿ ನೀರು ನಿಂತು ಸಮಸ್ಯೆ. ಮೊಣಕಾಲು ವರೆಗೆ ನೀರು ನಿಂತಿದ್ದರಿಂದ ವೈದ್ಯರು ಹಾಗೂ ರೋಗಿಗಳು ಪರದಾಡಿದರು
- ಮೆಟ್ರೊ ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ನೀರು ನಿಂತು ತೊಂದರೆಯಾಗಿದೆ. ಪಂಪ್‌ಸೆಟ್ ಬಳಸಿ ನೀರು ಹೊರಹಾಕಲಾಗುತ್ತಿದೆ

### 'ಜಲಕಾಯಗಳ ಸಂಖ್ಯೆ ಕುಸಿತದಿಂದ ಸಮಸ್ಯೆ'

'ಚೆನ್ನೈನಲ್ಲಿ ಜಲಕಾಯಗಳ ಸಂಖ್ಯೆಯಲ್ಲಿ ಸಾಕಷ್ಟು ಇಳಿಕೆಯಾಗಿರುವುದು ಪ್ರವಾಹ ಸ್ಥಿತಿ ಉಂಟಾಗಲು ಪ್ರಮುಖ ಕಾರಣ. 2015ರಲ್ಲಿ 119 ಜಲಕಾಯಗಳಿದ್ದವು. 2020ರ ವೇಳೆಗೆ ಇವುಗಳ ಸಂಖ್ಯೆ 64ಕ್ಕೆ ಕುಸಿಯಿತು. ಈ ವರ್ಷ ಇವುಗಳ ಸಂಖ್ಯೆ 62 ಇದ್ದಿರಬಹುದು'

**ನ ಜಿ.ಸುಂದರರಾಜನ್**, ' ಪೂವುಳಗಿನ್ ನನ್‌ಬರ್ಗಲ್'

### ಆಂಧ್ರ: ಕರಾವಳಿಯಲ್ಲಿ ಮಳೆ

ಹೈದರಾಬಾದ್: 'ಫೆಂಗಲ್ ಚಂಡಮಾರುತದ ಪರಿಣಾಮ, ರಾಜ್ಯದ ದಕ್ಷಿಣ ಕರಾವಳಿ ಹಾಗೂ ರಾಯಲಸೀಮಾ ಪ್ರದೇಶದಲ್ಲಿ ಭಾರಿ ಮಳೆ ಬೀಳುವ ಸಾಧ್ಯತೆ ಇದೆ' ಎಂದು ಆಂಧ್ರಪ್ರದೇಶ ವಿಪತ್ತು ನಿರ್ವಹಣಾ ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕ ರೋಣಂಕಿ ಕೂರ್ಮನಾಥ ಹೇಳಿದ್ದಾರೆ.

'ನೆಲ್ಲೂರು ಮತ್ತು ಪ್ರಕಾಶಂ ಜಿಲ್ಲೆಗಳು ಸೇರಿದಂತೆ ಕರಾವಳಿಯಲ್ಲಿ ಗಂಟೆಗೆ 70–90 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದೂ ತಿಳಿಸಿದ್ದಾರೆ. ನೆಲ್ಲೂರಿನ ತಗ್ಗುಪ್ರದೇಶಗಳಲ್ಲಿ ನೀರು ನಿಂತು, ಜನರು ಪರದಾಡಿದ್ದಾರೆ.

ತಿರುಮಲದಲ್ಲಿ ವೆಂಕಟೇಶ್ವರ ದೇವರ ದರ್ಶನಕ್ಕೆ ಬಂದಿದ್ದ ಭಕ್ತರು ತೊಂದರೆ ಅನುಭವಿಸಿದರು. ತಾವು ತಂಗಬೇಕಿದ್ದ ಸ್ಥಳಗಳನ್ನು ತಲುಪಲು, ದರ್ಶನ ನಂತರ ಲಡ್ಡು ಪ್ರಸಾದ ಪಡೆಯಲು ಭಕ್ತರಿಗೆ ಕಷ್ಟವಾಯಿತು.

ಸಂಕ್ಷಿಪ್ತ ಸುದ್ದಿ

### ಅಮೆರಿಕ: ದುಷ್ಕರ್ಮಿಗಳ ಗುಂಡೇಟಿಗೆ ತೆಲಂಗಾಣ ವಿದ್ಯಾರ್ಥಿ ಸಾವು

ಹೈದರಾಬಾದ್ (ಪಿಟಿಐ): ಅಮೆರಿಕದ ಗ್ಯಾಸ್ ಸ್ಟೇಷನ್‌ನಲ್ಲಿ ಕೆಲಸ ಮಾಡುತ್ತಿದ್ದ ತೆಲಂಗಾಣದ ಖಮ್ಮಂ ಜಿಲ್ಲೆಯ ವಿದ್ಯಾರ್ಥಿಯನ್ನು ದುಷ್ಕರ್ಮಿಗಳು ಶನಿವಾರ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಸಾಯಿ ತೇಜ ನೂಕರಾಪು (22) ಮೃತ ವಿದ್ಯಾರ್ಥಿ. ಷಿಕಾಗೊ ಬಳಿಯ ಗ್ಯಾಸ್ ಸ್ಟೇಷನ್‌ನಲ್ಲಿ ಭಾರತೀಯ ಕಾಲಮಾನ ಶನಿವಾರ ನಸುಕಿನಲ್ಲಿ ಕೆಲಸ ಮಾಡುತಿದ್ದ ಈತನ ಮೇಲೆ ದುಷ್ಕರ್ಮಿಗಳು ಗುಂಡು ಹಾರಿಸಿದ್ದಾರೆ ಎಂದು ಬಿಆರ್‌ಎಸ್ ಪಕ್ಷದ ಎಂಎಲ್‌ಸಿ ಮಧುಸೂದನ್ ತಾಥಾ ತಿಳಿಸಿದ್ದಾರೆ.

'ಅಗತ್ಯ ನೆರವು ನೀಡುವಂತೆ ತೆಲುಗು ಅಸೋಸಿಯೇಶನ್ ಆಫ್ ನಾರ್ತ್ ಅಮೆರಿಕ (ತಾನಾ) ಸದಸ್ಯರೊಂದಿಗೆ ಮಾತನಾಡಿದ್ದೇನೆ. ವಿದ್ಯಾರ್ಥಿಯ ಮೃತದೇಹ ಮುಂದಿನ ವಾರ ಭಾರತ ತಲುಪುವ ನಿರೀಕ್ಷೆಯಿದೆ' ಎಂದು ಅವರು ತಿಳಿಸಿದ್ದಾರೆ.

'ಭಾರತದಲ್ಲಿ ಬಿಬಿಎ ಮುಗಿಸಿ ಅಮೆರಿಕಕ್ಕೆ ತೆರಳಿದ್ದ ಸಾಯಿ ತೇಜ ಅವರು ಅಲ್ಲಿ ಎಂಬಿಎ ಓದುತ್ತಿದ್ದರು. ಅಲ್ಲಿ ಅರೆಕಾಲಿಕ ಕೆಲಸ ಮಾಡುತ್ತಿದ್ದರು. ತನ್ನ ಕೆಲಸ ಮುಗಿದ ಮೇಲೆ, ಸ್ನೇಹಿತನಿಗೆ ಸಹಾಯ ಮಾಡಲು ಕೆಲಸದ ಸ್ಥಳದಲ್ಲಿಯೇ ಇದ್ದಾಗ, ದುಷ್ಕರ್ಮಿಗಳು ಗುಂಡು ಹಾರಿಸಿರುವುದು ತಿಳಿದು ಬೇಸರವಾಗಿದೆ' ಎಂದು ಸಂಬಂಧಿಕರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

### ಕೇಜ್ರಿವಾಲ್ ಮೇಲೆ ದ್ರವ ಎರಚಿದ ವ್ಯಕ್ತಿ ವಶಕ್ಕೆ

ನವದೆಹಲಿ: ದಕ್ಷಿಣ ದೆಹಲಿಯ ಮಾಳವೀಯಾ ನಗರದಲ್ಲಿ ರ‍್ಯಾಲಿ ನಡೆಸುತ್ತಿದ್ದ ಎಎಪಿ ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರ ಮೇಲೆ ದ್ರವ ಎರಚಿದ ಆರೋಪದಲ್ಲಿ ವ್ಯಕ್ತಿಯೊಬ್ಬನನ್ನು ಶನಿವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೇಜ್ರಿವಾಲ್ ಅವರು ಭದ್ರತಾ ಸಿಬ್ಬಂದಿಯ ಹಿಂದಿದ್ದ ಜನರತ್ತ ಕೈಬೀಸುತ್ತಿದ್ದ ವೇಳೆ ಹತ್ತಿರ ಬಂದ ವ್ಯಕ್ತಿಯೊಬ್ಬ ಕೇಜ್ರಿವಾಲ್ ಮೇಲೆ ಆ ವ್ಯಕ್ತಿ ದ್ರವ ಎರಚಿದ್ದಾನೆ. ತಕ್ಷಣ ಭದ್ರತಾ ಸಿಬ್ಬಂದಿ ಆತನನ್ನು ತಡೆದರು. ಅದೇ ಪ್ರದೇಶದ ನಿವಾಸಿಯಾಗಿರುವ ಆ ವ್ಯಕ್ತಿಯನ್ನು ಸ್ಥಳೀಯ ಠಾಣೆಗೆ ಕರೆದೊಯ್ಯಲಾಯಿತು.

ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಎಎಪಿ, 'ಮಾಜಿ ಮುಖ್ಯಮಂತ್ರಿಗೆ ಸುರಕ್ಷತೆ ಇಲ್ಲವೆಂದರೆ ಜನಸಾಮಾನ್ಯರ ಗತಿ ಏನು'? ಎಂದು ಆಕ್ರೋಶ ವ್ಯಕ್ತಪಡಿಸಿದೆ.

### 4,002 ಹುದ್ದೆಗಳಿಗೆ 5.59 ಲಕ್ಷ ಅರ್ಜಿ!

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ 4,002 ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿದ್ದು, 5.59 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. 'ಡಿ. 1, 8 ಹಾಗೂ 22ರಂದು ನಡೆಯಲಿರುವ ಲಿಖಿತ ಪರೀಕ್ಷೆಗೆ 5,59,135 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

ದೇಶೀಯ ವಿಮಾನಯಾನ ಸಂಸ್ಥೆಗಳಲ್ಲಿ ಒಟ್ಟು 11,755 ಪೈಲಟ್‌ಗಳು

# ಪ್ರತಿ ಏಳರಲ್ಲಿ ಒಬ್ಬರು ಮಹಿಳಾ ಪೈಲಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಪ್ರಮುಖ ಆರು ವಿಮಾನಯಾನ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಪ್ರತಿ ಏಳು ಪೈಲಟ್‌ಗಳ ಪೈಕಿ ಒಬ್ಬರು ಮಹಿಳಾ ಪೈಲಟ್ ಆಗಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪೈಲಟ್‌ಗಳನ್ನು ಹೊಂದಿರುವ ವಿಮಾನಯಾನ ಸಂಸ್ಥೆಗಳ ಪಟ್ಟಿಯಲ್ಲಿ ಇಂಡಿಗೊ ಅಗ್ರಸ್ಥಾನದಲ್ಲಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಸಂಸತ್ತಿಗೆ ಮಾಹಿತಿ ನೀಡಿದೆ.

ದೇಶೀಯ ವಿಮಾನಯಾನ ಸಂಸ್ಥೆಗಳಲ್ಲಿ 236 ವಿದೇಶಿಗರೂ ಸೇರಿದಂತೆ ಒಟ್ಟು 11,755 ಪೈಲಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಪೈಕಿ 10,008 ಪುರುಷರಾಗಿದ್ದರೆ, 1,767 ಮಹಿಳೆಯರಾಗಿದ್ದಾರೆ. ಭಾರತದಲ್ಲಿ ಒಟ್ಟಾರೆ 26,536 ಪರವಾನಗಿ ಹೊಂದಿರುವ ಪೈಲಟ್‌ಗಳಿದ್ದಾರೆ ಎಂದು ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಅಂಕಿ ಅಂಶ ನೀಡಿದ್ದಾರೆ.

ದೇಶದಲ್ಲಿ ಶೇ 15ರಷ್ಟು ಮಹಿಳಾ ಪೈಲಟ್‌ಗಳಿದ್ದಾರೆ ಎಂದು ಅವರು ಹೇಳಿದ್ದಾರೆ. ಜಾಗತಿಕ ಮಟ್ಟದಲ್ಲಿ ಮಹಿಳಾ ಪೈಲಟ್‌ಗಳ ಸರಾಸರಿ ಶೇ 5ರಷ್ಟಿದೆ ಎಂದು ವರದಿ ಹೇಳುತ್ತದೆ.

ಇಂಡಿಗೊ ಅತಿ ಹೆಚ್ಚು ಪೈಲಟ್‌ಗಳನ್ನು ಹೊಂದಿರುವ ವಿಮಾನಯಾನ ಸಂಸ್ಥೆಯಾಗಿದೆ. ಇಲ್ಲಿ ಒಟ್ಟು 5,714 ಪೈಲಟ್‌ಗಳಿದ್ದು, ಇದರಲ್ಲಿ 4,383 ಪುರುಷರು, 791 ಮಹಿಳಾ ಪೈಲಟ್‌ಗಳಾಗಿದ್ದಾರೆ. ಅಲ್ಲದೆ 34 ವಿದೇಶಿ ಪೈಲಟ್‌ಗಳೂ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎನ್ನುತ್ತವೆ ಅಂಕಿ ಅಂಶಗಳು.

ಅಲಯನ್ಸ್ ಏರ್‌ನಲ್ಲಿ ಮಹಿಳಾ ಪೈಲಟ್‌ಗಳ ಅನುಪಾತ ಹೆಚ್ಚಿದೆ. ಇಲ್ಲಿನ 144 ಪೈಲಟ್‌ಗಳ ಪೈಕಿ 25 (ಶೇ 17.36) ಮಹಿಳೆಯರು. ಇಂಡಿಗೊದಲ್ಲಿ ಈ ಪ್ರಮಾಣ ಶೇ 15.28ರಷ್ಟಿದೆ.

ಏರ್ ಇಂಡಿಯಾ ಶೇ 15.62, ಸ್ಪೈಸ್‌ಜೆಟ್ ಶೇ 16.39, ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನಲ್ಲಿ ಶೇ 12.96, ಎಸ್‌ಎನ್‌ವಿ ವಿಮಾನಯಾನ ಸಂಸ್ಥೆಯಲ್ಲಿ ಶೇ 14.01ರಷ್ಟು ಮಹಿಳಾ ಪೈಲಟ್‌ಗಳಿದ್ದಾರೆ.

ವೇಗವಾಗಿ ಬೆಳೆಯುತ್ತಿರುವ ಭಾರತೀಯ ವಿಮಾನಯಾನ ಉದ್ಯಮಕ್ಕೆ ಮುಂದಿನ ಐದು ವರ್ಷಗಳಲ್ಲಿ ಗಣನೀಯ ಸಂಖ್ಯೆಯ ಪೈಲಟ್‌ಗಳ ಅಗತ್ಯವಿದೆ ಎಂದು ಮೊಹೋಲ್ ಹೇಳಿದ್ದಾರೆ.

**ಪೈಲಟ್‌ಗಳು ಎಲ್ಲಿ ಎಷ್ಟು**

| ವಿಮಾನಯಾನ ಸಂಸ್ಥೆ | ಭಾರತೀಯ ಮಹಿಳೆಯರು | ಭಾರತೀಯ ಪುರುಷರು | ವಿದೇಶಿಗರು | ಒಟ್ಟು | ಭಾರತೀಯ ಮಹಿಳಾ ಪೈಲಟ್‌ಗಳು (ಶೇ) |
|---|---|---|---|---|---|
| ಇಂಡಿಗೊ | 791 | 4,383 | 34 | 5,174 | 15.28 |
| ಏರ್ ಇಂಡಿಯಾ | 541 | 2,921 | 58 | 3,462 | 15.62 |
| ಅಲಯನ್ಸ್ ಏರ್ | 25 | 119 | 20 | 144 | 17.36 |
| ಸ್ಪೈಸ್‌ಜೆಟ್ | 61 | 311 | 0 | 372 | 16.39 |
| ಎಸ್‌ಎನ್‌ವಿ | 119 | 730 | 0 | 849 | 14.01 |
| ಏರ್ ಇಂಡಿಯಾ ಎಕ್ಸ್‌ಪ್ರೆಸ್ | 230 | 1,544 | 144 | 1,774 | 12.96 |
| ಒಟ್ಟು | 1,767 | 10,008 | 236 | 11,775 | 15 |

* ಮೂಲ: ಡಿಜಿಸಿಎ/ವಿಮಾನಯಾನ ಸಚಿವಾಲಯ ಲೋಕಸಭೆಗೆ ನೀಡಿದ ದತ್ತಾಂಶ

### ಸಂಭಲ್: ಹೊರಗಿನವರ ಪ್ರವೇಶ ನಿರ್ಬಂಧ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಲಖನೌ/ ಸಂಭಲ್: ಹಿಂಸಾಚಾರ ಪೀಡಿತ ಸಂಭಲ್‌ಗೆ ಹೊರಗಿನವರ ಪ್ರವೇಶವನ್ನು ಡಿಸೆಂಬರ್ 10ರವರೆಗೆ ನಿರ್ಬಂಧಿಸಿ ಅಲ್ಲಿನ ಜಿಲ್ಲಾಡಳಿತ ಆದೇಶಿಸಿದೆ.

ಶಾಂತಿ ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳುವ ಉದ್ದೇಶದಿಂದ ನಿರ್ಬಂಧವನ್ನು ವಿಸ್ತರಿಸಲಾಗಿದೆ ಎಂದು ಅದು ಹೇಳಿದೆ. ಈ ಹಿಂದೆ ವಿಧಿಸಲಾಗಿದ್ದ ನಿರ್ಬಂಧ ಶನಿವಾರಕ್ಕೆ ಕೊನೆಯಾಗಿತ್ತು.

ಸಮಾಜವಾದಿ ಪಕ್ಷದ ಪಕ್ಷದ ಮುಜಫ್ಫರ್‌ನಗರದ ಸಂಸದ ಹರೇಂದ್ರ ಮಲಿಕ್ ಅವರು ಕೈರಾನಾ ಮತ್ತು ಸಂಭಲ್ ಸಂಸದರ ಜತೆಗೆ ಸಂಭಲ್ ಪ್ರವೇಶಿಸುತ್ತಿದ್ದರು. ಆದರೆ, ಅವರನ್ನು ತಡೆಯಲಾಯಿತು.

'ನಮ್ಮನ್ನು ಹೀಗೇಕೆ ತಡೆಯಲಾಗುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ವಿರೋಧ ಪಕ್ಷದ ನಾಯಕರು ಮತ್ತು ಸಂಸದರನ್ನು ಅಲ್ಲಿಗೆ ಹೋಗಲು ಏಕೆ ಬಿಡುತ್ತಿಲ್ಲ' ಎಂದು ಮಲಿಕ್ ಪ್ರಶ್ನಿಸಿದರು.

ಪ್ರಜಾವಾಣಿ ಭಾನುವಾರದ ಪುರವಣಿ



ಭಾನುವಾರ, 1 ಡಿಸೆಂಬರ್ 2024












ಸಿಮ್ರಾನ್ ಗೌಂಡಲಕರ್



ರಾಜೇಶ ಶಿಂಧೆ



ರಾಘವೇಂದ್ರ ಅಣ್ವೇಕರ್

# ಈಜು ಕಲಿತರು ನೋವು ಮರೆತರು ಬದುಕಿನ ದಡ ಸೇರಿದರು

ಬೆಳಗಾವಿಯ ಉಮೇಶ ಕಲಘಟಗಿ ಅವರಿಂದ ಈಜು ತರಬೇತಿ ಪಡೆದ 9 ಅಂಗವಿಕಲರು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ 60 ಪದಕ ಗೆದ್ದಿದ್ದಾರೆ. ರಾಷ್ಟ್ರೀಯ ಟೂರ್ನಿಗಳಲ್ಲಿ 100ಕ್ಕೂ ಅಧಿಕ ಅಂಗವಿಕಲರು ಸಾವಿರಕ್ಕೂ ಹೆಚ್ಚು ಪದಕಗಳ ಗೌರವಕ್ಕೆ ಪಾತ್ರವಾಗಿದ್ದಾರೆ. ಇವರ ಯಶೋಗಾಥೆ **ಡಿ.3** ವಿಶ್ವ ಅಂಗವಿಕಲರ ದಿನದ ವಿಶೇಷ.

ಇಮಾಮ್‌ಹುಸೇನ್ ಗೂಡುನವರ

ಅದು 2009. ಹನ್ನೊಂದು ವರ್ಷದ ಆ ಬಾಲಕನನ್ನು ಸೇರಿಸಿಕೊಳ್ಳಲು ಶಾಲೆಗಳು ನಿರಾಕರಿಸಿದ್ದವು. ಅದೇ ಸಮಯಕ್ಕೆ ಬೆಳಗಾವಿಗೆ ಮುಖ್ಯಮಂತ್ರಿ ಬಂದಿದ್ದರು. ತಮ್ಮ ಮಗನ ಶಿಕ್ಷಣದ ಅಹವಾಲು ಹೊತ್ತು ಅವರ ಭೇಟಿಗೆ ತಾಯಿ ಮುಂದಾದರು. ಆದರೆ ಅವಕಾಶ ನೀಡಲಿಲ್ಲ. ಗಡಿಬಿಡಿಯಲ್ಲಿ ಮುಖ್ಯಮಂತ್ರಿ ಹೊರಟು ಹೋದರು. ಆಸೆಗಳ ಮೂಟೆ ಹೊತ್ತು ಬಂದಿದ್ದ ತಾಯಿ ತನ್ನ ಮಗನ ಬದುಕಿಗೆ ಕವಿಯಬಹುದಾದ ಕಾರ್ಮೋಡ ನೆನೆದು ಅಸಹಾಯಕರಾಗಿ ನಿಂತೇ ಇದ್ದರು.

ಅಷ್ಟಕ್ಕೂ ಆ ತಾಯಿಯ ಮಗನನ್ನು ಶಾಲೆಯವರು ಸೇರಿಸಿಕೊಳ್ಳದಿರಲು ಕಾರಣವೇನು ಗೊತ್ತೇ? ಆತನ ಶರೀರದಲ್ಲಿ 200ಕ್ಕೂ ಅಧಿಕ ಮೂಳೆಗಳ ಮುರಿತ!. ಸ್ವತಃ ಏಳಲು, ನಿಲ್ಲಲು, ನಡೆಯಲು ಬಿಡಿ, ಊಟ ಮಾಡಲೂ ಆಗದಂಥ ಸ್ಥಿತಿ. ಇಂಥ ಮಗನ ಭವಿಷ್ಯದ ಬಗೆಗೆ ಚಿಂತಿತರಾಗಿದ್ದ ತಾಯಿಗೆ ಮುಖ್ಯಮಂತ್ರಿ ಸಿಗಲಿಲ್ಲ. ಆದರೆ, ಅಲ್ಲೇ ಉಮೇಶ ಕಲಘಟಗಿ ಅವರ ಭೇಟಿಯಾಯಿತು. ಅವರೊಬ್ಬ ನುರಿತ ಈಜು ತರಬೇತುದಾರ.

‘ನಿಮ್ಮ ಮಗ ಅಂಗವಿಕಲನೇ, ಇದಕ್ಕೆ ಬೇಸರಪಟ್ಟುಕೊಳ್ಳಬೇಡಿ. ಪ್ರತಿದಿನ ಈಜುಕೊಳಕ್ಕೆ ಕಳುಹಿಸಿ. ನಾನು ಈಜು ಕಲಿಸುತ್ತೇನೆ’ ಎಂದು ಸಲಹೆ ನೀಡಿದರು. ಮಗ ಹುಟ್ಟಿನಿಂದಲೂ ಪರಾವಲಂಬಿ. ಕ್ಯಾಲ್ಸಿಯಂ ಕೊರತೆಯಿಂದ ಬಳಲುತ್ತಿದ್ದ ಆತನಿಗೆ ಯಾರಾದರೂ ಗಟ್ಟಿಯಾಗಿ ಕೈಹಿಡಿದು ಹಸ್ತಲಾಘವ ಮಾಡಿದರೂ ಮೂಳೆ ಮುರಿಯುವ ಸ್ಥಿತಿ. ಇಂಥ ಮಗನನ್ನು ಈಜಲು ಕಳುಹಿಸುವುದಾದರೂ ಹೇಗೆ ಎಂಬುದು ಪಾಲಕರ ಆತಂಕ.

ಆದರೆ, ಹೆತ್ತವರ ಆತಂಕ ದೂರಮಾಡಿ ಈಜು ಕಲಿಕೆ ಆರಂಭವಾಯಿತು. ಬದುಕಿಗೆ ಆವರಿಸಿದ್ದ ಕಾರ್ಮೋಡವೂ ಕರಗಿತು. ಅಭ್ಯಾಸ ಆರಂಭಿಸಿದ ಹದಿನೆಂಟನೇ ದಿನಕ್ಕೆ ಅವರು ಈಜು ಕಲಿತರು. ಕ್ರಮೇಣ ‘ಸ್ವಿಮ್ಮಿಂಗ್’ ಕರಗತ ಮಾಡಿಕೊಂಡರು. ಅದೇ ವರ್ಷ ಕೋಲ್ಕತ್ತದಲ್ಲಿ ನಡೆದ ರಾಷ್ಟ್ರಮಟ್ಟದ ಈಜು ಟೂರ್ನಿಯಲ್ಲಿ



ಮೋಯಿನ್ ಜುನ್ನೇದಿ

ಎರಡು ಚಿನ್ನದ ಪದಕ ಪಡೆದರು. ಆ ಕ್ಷಣದಿಂದಲೇ ನಿರಾಸೆ ಮತ್ತು ಸೋಲಿಗೆ ಎದುರಾಗಿ ಈಜುತ್ತಲೇ ಇದ್ದಾರೆ. ಇಂಥ ಅಪ್ರತಿಮ ಸಾಧಕನ ಹೆಸರು ಮೋಯಿನ್ ಜುನ್ನೇದಿ.

26 ವಯಸ್ಸಿನವರಾದ ಮೋಯಿನ್ ಪದವಿ ಮುಗಿಸಿದ್ದು, ಅಂತರರಾಷ್ಟ್ರೀಯ ಅಂಗವಿಕಲ ಈಜುಪಟುವಾಗಿ ಹೊರಹೊಮ್ಮಿದ್ದಾರೆ. ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಒಂದು ಪದಕ, ರಾಷ್ಟ್ರಮಟ್ಟದಲ್ಲಿ 22 ಪದಕ ಗೆದ್ದಿದ್ದಾರೆ. ಜತೆಗೆ, ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರಿಂದ ‘ವಂಡರ್ ಬಾಯ್ ಆಫ್ ಇಂಡಿಯಾ’ ಎಂಬ ಬಿರುದು ಪಡೆದ ಹೆಗ್ಗಳಿಕೆ.

‘ಈಜಿನಿಂದ ಇಷ್ಟೆಲ್ಲ ಗುರುತಿಸಿಕೊಂಡೆ. ಆರೋಗ್ಯವೂ ಸುಧಾರಿಸಿತು. ಆರಂಭದಲ್ಲಿ ಶಾಲೆಗೆ ಸೇರಿಸಿಕೊಳ್ಳಲು ನಿರಾಕರಿಸಿದವರೇ ಪ್ರವೇಶ ನೀಡಲು ಮುಗಿಬಿದ್ದರು. ಇನ್ನೇನಿದ್ದರೂ ಒಲಿಂಪಿಕ್‌ನಲ್ಲಿ ಭಾರತಕ್ಕೆ ಪದಕ ತಂದುಕೊಡುವುದೇ ನನ್ನ ಗುರಿ’ ಎನ್ನುತ್ತ, ಚಳಿಯಲ್ಲೂ ನೀರಿಗಿಳಿದು ಅಭ್ಯಾಸ ಆರಂಭಿಸಿದರು ಮೋಯಿನ್ ಜುನ್ನೇದಿ.

ರಾಘವೇಂದ್ರ ಅಣ್ವೇಕರ್ ಪೋಲಿಯೊಗೆ ಒಳಗಾಗಿ ಎರಡೂ ಕಾಲು ಕಳೆದುಕೊಂಡರು. ಮೊಣಕಾಲುಗಳ ಮೂಲಕವೇ ನಿತ್ಯದ ನಡಿಗೆ. 15 ವರ್ಷದ ಬಾಲಕನಿದ್ದಾಗ ಅವರಿಗೂ ಈಜು ಕಲಿಸಲು ಉಮೇಶ ಮುಂದಾದರು. ‘ಕಾಲುಗಳೇ ಇಲ್ಲದ



ಈಜಿನಲ್ಲಿ ಸಾಧನೆ ಮೆರೆದ ಅವಳಿ ಅಂಧ ಸಹೋದರರಾದ ಪೃಥ್ವಿ ಮತ್ತು ಪ್ರಜ್ವಲ್ ಚಿತ್ರಗಳು: ಏಕನಾಥ ಅಗಸಿಮನಿ

ಮಗ ನೀರಲ್ಲಿ ಮುಳುಗಿದರೆ ಹೇಗೆ’ ಎಂಬುದು ಪಾಲಕರ ಚಿಂತೆ. ಆದರೂ ಕೈಗಳಿಂದಲೇ ಪ್ರಯಾಸಪಟ್ಟು ಈಜು ಕಲಿತರು. ಈ ಮಧ್ಯೆ, ಮನೆಯಲ್ಲಿ ಆರ್ಥಿಕ ಸಂಕಷ್ಟ. ಓದಬೇಕೋ? ಈಜು ಕಲಿಯಬೇಕೋ? ಅಥವಾ ಪಾರ್ಟ್‌ಟೈಮ್ ಕೆಲಸ ಮಾಡಬೇಕೋ? ಎಂಬ ಸಾಲು ಸಾಲು ಪ್ರಶ್ನೆಗಳು.

ಇದರಿಂದ ಧೃತಿಗೆಡದ ರಾಘವೇಂದ್ರ ಕಲಿಕೆ ಮುಂದುವರಿಸಿದರು. ಈಜುಕೊಳಕ್ಕೆ ಧುಮುಕಿ ಅಭ್ಯಾಸ ಮಾಡಿದರು. ಜತೆಗೆ, ವಾರಕ್ಕೆ ₹200 ಕೂಲಿಗಾಗಿ ಮತ್ತೊಬ್ಬರ ಬಳಿ ಎಳನೀರು ಮಾರಿ ಕುಟುಂಬಕ್ಕೂ ನೆರವಾದರು. ಕೆಲವೇ ವರ್ಷಗಳಲ್ಲಿ ಇನ್ನೊಬ್ಬರಿಗೆ ಈಜು ಕಲಿಸುವಷ್ಟು ಪರಿಣತಿ ಗಳಿಸಿದರು. ಈಗ ಏಷ್ಯನ್ ಪದಕವೀರ ಆಗಿರುವ ಅವರು, ಈಜಿನಲ್ಲಿ 120ಕ್ಕೂ ಪದಕಗಳ ಬೇಟೆಯಾಡಿದ್ದಾರೆ. ಅದರಲ್ಲಿ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಸಿಕ್ಕ ಪದಕಗಳೇ 28!.

ಇವರಿಬ್ಬರೂ ಅಂಗವಿಕಲ ಈಜುಪಟುಗಳ ಉದಾಹರಣೆಯಷ್ಟೇ. ಇವರಂತೆ ಹಲವು ಅಂಗವಿಕಲರು ಉಮೇಶ ಕಲಘಟಗಿ ಅವರ ಬಳಿ ಪಳಗಿ, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಈಜು ಟೂರ್ನಿಗಳಲ್ಲಿ ಸಾಧನೆ ಮೆರೆಯುತ್ತಿದ್ದಾರೆ. ಎರಡೂ ಕಾಲುಗಳಿಲ್ಲದವರು, ಒಂದೇ ಕೈ ಹೊಂದಿರುವವರು, ಮಾತು ಬಾರದವರು, ಕಿವಿ ಕೇಳದವರು, ಬುದ್ಧಿಮಾಂದ್ಯರು, ಅಂಧರೂ ಇಂಥವರಲ್ಲಿ ಇದ್ದಾರೆ.

## ಬದುಕಿನ ಪಥವೇ ಬದಲಾಯಿತು

‘ನಾನು ಈಜು ಕಲಿಯದಿದ್ದರೆ ಗೂಡಂಗಡಿ ತೆರೆದು ಬಾಳಬಂಡಿ ದೂಡಬೇಕಾಗುತ್ತಿತ್ತು. ಆದರೆ, ಈಜಿನಿಂದ ಸ್ಥಾನಮಾನ ಸಿಕ್ಕಿತು. ಬದುಕಿನ ಪಥವೇ ಬದಲಾಯಿತು. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕ ಹುದ್ದೆಯನ್ನೂ ಪಡೆದೆ. ನನಗೆ ಅನ್ನ ದಯಪಾಲಿಸಿದ ಈಜಿಗೆ ಸದಾ ಕೃತಜ್ಞ’ ಎಂದು ರಾಘವೇಂದ್ರ ಅಣ್ವೇಕರ್ ಹೇಳುವಾಗ ಭಾವುಕರಾದರು.

ಕರ್ನಾಟಕ ರಾಜ್ಯೋತ್ಸವ, ಏಕಲವ್ಯದಂಥ ಪ್ರಶಸ್ತಿಗೂ ಭಾಜನರಾದ ಅವರು, ಬೆಳಗಾವಿಯಲ್ಲಿ ನಾಲ್ಕು ಚುನಾವಣೆಗಳಲ್ಲಿ ‘ಸ್ವೀಪ್’ ರಾಯಭಾರಿಯಾಗಿಯೂ ಕೆಲಸ ಮಾಡಿದ್ದಾರೆ.

## ಒಂದೇ ಕೈಯಲ್ಲಿ ಸ್ವಿಮ್ಮಿಂಗ್

‘ಆರನೇ ವಯಸ್ಸಿನಲ್ಲಿದ್ದಾಗ ಅಪಘಾತಕ್ಕೀಡಾಗಿ ಒಂದು ಕೈ ತುಂಡಾಯಿತು. ಒಂದು ದಿನ ಸ್ವಿಮ್ಮಿಂಗ್ ಪೂಲ್‌ಗೆ ಹೋದಾಗ, ‘ಈಜು ಕಲಿಯುತ್ತೀಯಾ’ ಎಂದು ತರಬೇತುದಾರ ಉಮೇಶ ಕೇಳಿದರು. ಆದರೆ, ಹೆತ್ತವರು ಕೂಲಿಕಾರರು. ತರಬೇತಿಗೆ ಭರಿಸಲು ಹಣ ಇರಲಿಲ್ಲ. ‘ನನಗೆ ಹಣ ಬೇಕಿಲ್ಲ, ನಿನ್ನಲ್ಲಿ ಛಲವಿದ್ದರೆ ಸಾಕು’ ಎಂದು ಹೇಳಿ, ನೀರಿಗೆ ತಳ್ಳಿಯೇ ಬಿಟ್ಟರು. ಒಂದೇ ಕೈಯಲ್ಲಿ ಈಜುವುದನ್ನು ಕಲಿಸಿದರು’ ಎಂದು ತಮ್ಮ ಕತೆ ಬಿಚ್ಚಿಟ್ಟರು ಶ್ರೀಧರ ಮಾಳಗಿ.

ಸೌದಿ ಅರೇಬಿಯಾ, ಜರ್ಮನಿ, ಇಂಡೋನೇಷ್ಯಾ, ಪೋಲ್ಯಾಂಡ್ ಮತ್ತಿತರ ದೇಶಗಳಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ 19 ಪದಕ ಗೆದ್ದಿರುವ ಅವರು, ರಾಷ್ಟ್ರೀಯ ಟೂರ್ನಿಗಳಲ್ಲೂ 52 ಪದಕಗಳನ್ನು ಬಾಚಿಕೊಂಡಿದ್ದಾರೆ. ಕ್ರೀಡಾ ಕೋಟಾದಡಿ ಕೇಂದ್ರ ಸರ್ಕಾರಿ ನೌಕರಿ ಸಿಕ್ಕಿದೆ. 2025ರ ಫೆಬ್ರುವರಿಯಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟೂರ್ನಿಗಾಗಿ ಬೆಂಗಳೂರಿನಲ್ಲಿ ತಯಾರಿ ನಡೆಸಿದ್ದಾರೆ.

‘ನನ್ನ ಎತ್ತರ ಮೂರೇ ಅಡಿ. ಶರೀರದ ಮೂಳೆಗಳಂತೂ ದುರ್ಬಲವಾಗಿದ್ದವು. ಕುಬ್ಜೆಯಾದ ನನ್ನನ್ನು ಕೆಲವರು ಗೇಲಿ ಮಾಡುತ್ತಿದ್ದರು. ಆದರೆ, ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಮೂರು, ರಾಷ್ಟ್ರಮಟ್ಟದಲ್ಲಿ 26 ಪದಕ ಗೆದ್ದ ನಂತರ ಎಲ್ಲರೂ ಗೌರವಿಸುತ್ತಿದ್ದಾರೆ. ಇದಕ್ಕಿಂತ ಖುಷಿ ಮತ್ತೇನು ಬೇಕು’ ಎಂದು ನಗೆಬೀರಿದರು 22ರ ಹರೆಯದ ಸಿಮ್ರಾನ್ ಗೌಂಡಲಕರ್.



ಇಂಗ್ಲಿಷ್ ಚಾನಲ್ ಕ್ರಾಸ್ ಮಾಡಿದ ಬೆಳಗಾವಿಯ ಅಂಗವಿಕಲ ಈಜುಪಟು ರಾಜೇಶ ಶಿಂಧೆ

> **ತಂಡದ ಪರಿಶ್ರಮದಿಂದಾಗಿ ಸಾಧನೆ ಮಾಡಲು ಸಾಧ್ಯವಾಗಿದೆ. ವಿವಿಧ ದೈಹಿಕ ನ್ಯೂನತೆ ಹೊಂದಿದವರು, ಅನಾಥರು, ಬುಡಕಟ್ಟು ಜನರ ಮಕ್ಕಳಿಗೆ ಉಚಿತವಾಗಿಯೇ ತರಬೇತಿ ಕೊಡುತ್ತೇವೆ. 23 ವರ್ಷಗಳಲ್ಲಿ 5 ಸಾವಿರಕ್ಕೂ ಅಧಿಕ ಮಕ್ಕಳಿಗೆ ಈಜು ಕಲಿಸಿದ್ದೇವೆ**
> **ಉಮೇಶ ಕಲಘಟಗಿ,** ಈಜು ತರಬೇತುದಾರ

‘ನನ್ನ ಅವಳಿ ಮಕ್ಕಳಾದ ಪೃಥ್ವಿ ಮತ್ತು ಪ್ರಜ್ವಲ್ ಹುಟ್ಟಿನಿಂದಲೇ ಅಂಧರು (ಎಸ್‌–12 ಕೆಟಗರಿ). ಮಕ್ಕಳ ಸ್ಥಿತಿ ನೋಡಿ ನಾನು, ಪತ್ನಿ ಮರಗುತ್ತಿದ್ದೆವು, ಅಸಹಾಯಕಾರಗಿದ್ದೆವು. ಆದರೆ, ಇವರಿಬ್ಬರೂ ರಾಷ್ಟ್ರೀಯ ಈಜು ಟೂರ್ನಿಗಳಲ್ಲಿ ಈಗ 24 ಪದಕ ಗೆದ್ದಿರುವುದು ನಮ್ಮ ನೋವನ್ನೆಲ್ಲ ಮರೆಸಿದೆ’ ಎಂದು ಪೊಲೀಸ್ ಹೆಡ್ ಕಾನ್‌ಸ್ಟೆಬಲ್ ಆಗಿರುವ ಯಲ್ಲಪ್ಪ ನಾರಳೇಕರ ಹೆಮ್ಮೆಯಿಂದಲೇ ಹೇಳಿದರು.

## ಇಂಗ್ಲಿಷ್ ಚಾನಲ್ ಈಜಿದರು!

ಪೋಲಿಯೊದಿಂದ ಒಂದು ಕಾಲಿನಲ್ಲಿ ಸ್ವಾಧೀನ ಕಳೆದುಕೊಂಡಿದ್ದ ರಾಜೇಶ ಶಿಂಧೆ, 2008ರ ಜುಲೈ 27ರಂದು ಇಂಗ್ಲೆಂಡ್‌ನಿಂದ ಫ್ರಾನ್ಸ್‌ವರೆಗಿನ ಇಂಗ್ಲಿಷ್ ಚಾನಲ್ ಅನ್ನು 14 ತಾಸು, 46 ನಿಮಿಷದಲ್ಲಿ ಈಜಿ ಗುರಿ ಮುಟ್ಟಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ 11 ಮತ್ತು ರಾಷ್ಟ್ರಮಟ್ಟದಲ್ಲಿ 60 ಪದಕ ಗೆದ್ದಿದ್ದಾರೆ.

‘ಸಾಮಾನ್ಯ ವ್ಯಕ್ತಿಗಳಿಗೂ ಇಂಗ್ಲಿಷ್ ಚಾನಲ್ ಕ್ರಾಸ್ ಮಾಡುವುದು ಕಷ್ಟ. ನೀರು ಬಹಳಷ್ಟು ತಂಪಿರುತ್ತದೆ. ಆದರೆ, ಸತತ ಅಭ್ಯಾಸದ ಮೂಲಕ ನಾನು ಗುರಿ ಮುಟ್ಟಿದೆ. ಇಂಗ್ಲಿಷ್ ಚಾನಲ್ ಕ್ರಾಸ್ ಮಾಡಿದ ದಕ್ಷಿಣ ಭಾರತದ ಮೊದಲ ಅಂಗವಿಕಲ ಈಜುಪಟು ನಾನು’ ಎಂದು ಸಂಭ್ರಮಿಸಿದರು ರಾಜೇಶ ಶಿಂಧೆ.

ಅಂಗವೈಕಲ್ಯ ದೇಹಕ್ಕೇ ಹೊರತು ಮನಸ್ಸಿಗಲ್ಲ. ಗುರಿ ಮುಟ್ಟಿಸಲು ಗುರುವಿದ್ದರೆ ಎಲ್ಲ ಊನಗಳನ್ನು ಮರೆತು ಸವಾಲುಗಳ ಸಾಗರದಲ್ಲಿ ಈಜಿ ಬದುಕಿನ ದಡ ಸೇರಬಹುದು. ಇದಕ್ಕೆ ಇಲ್ಲಿನ ಈಜುಪಟುಗಳೇ ಸಾಕ್ಷಿ.


## ಅಂಗವಿಕಲರಿಗಾಗಿ ಫೆಬ್ರುವರಿಯಲ್ಲಿ ಶಿಬಿರ

‘ಅಂಗವಿಕಲರಿಗಾಗಿ ಏನಾದರೂ ಮಾಡಬೇಕೆಂದು ಅನಿಸಿತು. 1993ರಲ್ಲಿ ನಾನೇ ಅಂಗವಿಕಲರ ಮನೆಮನೆಗೆ ಅಲೆದೆ. ಆದರೆ, ಸ್ಪಂದನೆ ಸಿಗಲಿಲ್ಲ. 2001ರಲ್ಲಿ ಮಕ್ಕಳಿಗೆ ಈಜು ಕಲಿಸುತ್ತಿದ್ದಾಗ, ಆರು ಅಂಗವಿಕಲರು ಈಜು ಕಲಿಯಲು ಉತ್ಸಾಹ ತೋರಿದರು. ಅವರು ಸಾಧನೆ ಮಾಡಿದ ನಂತರ, ಉಳಿದ ಅಂಗವಿಕಲರು ಬರಲು ಆರಂಭಿಸಿದರು. ಅಂಗವಿಕಲರಿಗಾಗಿಯೇ ಪ್ರತಿವರ್ಷ ಫೆಬ್ರುವರಿಯಲ್ಲಿ 21 ದಿನಗಳ ಕಾಲ ವಿಶೇಷ ತರಬೇತಿ ಶಿಬಿರ ನಡೆಸುತ್ತೇವೆ’ ಎಂದು ಉಮೇಶ ಕಲಘಟಗಿ ಹೇಳಿದರು.

ಮೊದಲು ರೋಟರಿ ಕಾರ್ಪೊರೇಷನ್ ಈಜುಕೊಳದಲ್ಲಿ (25 ಮೀಟರ್ ಉದ್ದ, 10 ಮೀಟರ್ ಅಗಲ) ಅಂಗವಿಕಲರಿಗೆ ಈಜು ತರಬೇತಿ ನೀಡಲಾಗುತ್ತಿತ್ತು. ಈಗ ಅದರೊಂದಿಗೆ ಕೆಎಲ್‌ಇ ಸಂಸ್ಥೆಯ ಸುವರ್ಣ ಜೆಎನ್‌ಎಂಸಿ ಈಜುಕೊಳದಲ್ಲೂ (50 ಮೀಟರ್ ಉದ್ದ, 25 ಮೀಟರ್ ಅಗಲ) ತರಬೇತಿ ನೀಡಲಾಗುತ್ತದೆ. ಇದಕ್ಕೆ ಸಂಘ–ಸಂಸ್ಥೆಯವರು, ದಾನಿಗಳು ನೆರವಾಗುತ್ತಿದ್ದಾರೆ.

# ಮುಳುಗುವ ಬದುಕಿಗೆ ತೇಲುವ ಸೇತುವೆ ಆಸರೆ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಚಿಕ್ಕಪಡಸಲಗಿ ಬಳಿ 1989ರಲ್ಲಿ ರೈತರೇ ತಮ್ಮ ಹಣದಲ್ಲಿ ಬ್ಯಾರೇಜ್ ನಿರ್ಮಿಸಿದ್ದರು. ರೈತರೇ ನಿರ್ಮಿಸಿದ ದೇಶದ ಮೊದಲ ಬ್ಯಾರೇಜ್. ಈಗ ಅದೇ ತಾಲ್ಲೂಕಿನ ಕಂಕಣವಾಡಿ ಗ್ರಾಮಸ್ಥರು ಆಲಮಟ್ಟಿ ಹಿನ್ನೀರಿನಲ್ಲಿ ತೇಲುವ ಸೇತುವೆ ನಿರ್ಮಿಸಿಕೊಂಡು ಉದಾಹರಣೆಯಾಗಿದ್ದಾರೆ.



ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕಣವಾಡಿ–ಗುಹೇಶ್ವರ ನಡುಗಡ್ಡೆ ನಡುವೆ ನಿರ್ಮಿಸಲಾಗಿರುವ ಸೇತುವೆ

ಬಸವರಾಜ ಹವಾಲ್ದಾರ

**ಏಳು** ಮಹಿಳೆಯರು ಗಂಗಾಳ (ಹರಿಗೋಲು)ದಲ್ಲಿ ಕೃಷ್ಣಾ ನದಿ ದಾಟುತ್ತಿದ್ದರು. ಅದು ಮುಳುಗಿತು. ಅದರೊಂದಿಗೆ ಅವರ ಬದುಕೂ ಮುಳುಗಿತು. ಈ ದುರಂತ ನಡೆದದ್ದು 1983ರಲ್ಲಿ. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಗುಹೇಶ್ವರ ನಡುಗಡ್ಡೆಯ ಈ ಮಹಿಳೆಯರು ಕಂಕಣವಾಡಿಯಿಂದ ನಡುಗಡ್ಡೆಗೆ ಹೋಗುವಾಗ ಗಂಗಾಳ ಮುಳುಗಿತ್ತು. ಈ ದುರಂತದ ನಂತರ ಎಚ್ಚೆತ್ತ ಶಾಸಕ ಜಿ.ಎಸ್.ಬಾಗಲಕೋಟ ಅವರು ಹುಟ್ಟು ಬಳಸಿ ಚಲಾಯಿಸುವ ತೆಪ್ಪ ಕೊಡಿಸಿದರು. ಆದರೆ, ಸಮಸ್ಯೆ ಅಲ್ಲಿಗೇ ಮುಗಿಯಲಿಲ್ಲ.

ನಡುಗಡ್ಡೆಯಲ್ಲಿರುವ ತೋಟದ ಮನೆಗಳಿಂದ ಕಂಕಣವಾಡಿಗೆ ಬರಲು, ಮಕ್ಕಳು ಶಾಲೆಗೆ ಹೋಗಲು, ಕಂಕಣವಾಡಿ ಗ್ರಾಮದವರು ಕಬ್ಬಿನ ತೋಟಕ್ಕೆ ಹೋಗಲು, ಕಬ್ಬು ಸಾಗಿಸಲು ಆಲಮಟ್ಟಿ ಹಿನ್ನೀರು ದಾಟಿಕೊಂಡು ಹೋಗಬೇಕಾದ ಸವಾಲನ್ನು ಎದುರಿಸುತ್ತಲೇ ಇದ್ದರು. ಹೀಗಾಗಿ ಹಿನ್ನೀರು ದಾಟಲು ಸೇತುವೆ ನಿರ್ಮಿಸಿಕೊಡುವಂತೆ ಶಾಸಕರಿಗೆ ಮನವಿ ಸಲ್ಲಿಸುತ್ತಲೇ ಇದ್ದರು. ಅವರು ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಿದರು. ‘ಆಲಮಟ್ಟಿಯ ಜಲಾಶಯದ ಗೇಟಿನ ಎತ್ತರವನ್ನು ಹೆಚ್ಚಿಸಿದಾಗ ನಡುಗಡ್ಡೆಯ ಶೇಕಡ 90ರಷ್ಟು ಮುಳುಗಡೆಯಾಗುತ್ತದೆ. ಆದ್ದರಿಂದ ಸೇತುವೆ ನಿರ್ಮಿಸಲು ಆಗುವುದಿಲ್ಲ’ ಎಂದು ಅಧಿಕಾರಿಗಳು ಉತ್ತರ ನೀಡಿದರು. ಸರ್ಕಾರ ಅದನ್ನೇ ಹೇಳಿ ಕೈ ತೊಳೆದುಕೊಂಡಿತು.

## ಮನಸ್ಸಿದ್ದರೆ ಮಾರ್ಗ

ಆನಂತರ ಗ್ರಾಮಸ್ಥರು ತಮ್ಮ ಸಮಸ್ಯೆಗೆ ತಾವೇ ಪರಿಹಾರ ಕಂಡುಕೊಳ್ಳಲು ಸಮಾಲೋಚನೆ ನಡೆಸಿದರು. ಎರಡು ಬೋಟುಗಳನ್ನು ಸೇರಿಸಿದರೆ ಕಬ್ಬು ಸಾಗಿಸಬಹುದು ಎಂದು ಯಾರೋ ಹೇಳಿದರು. ಬೋಟ್ ತರಲು ಗ್ರಾಮದ ಕೆಲವರು ಗುಜರಾತ್‌ಗೆ ಹೋದರು. ಆದರೆ, ಅಲ್ಲಿ ಬೇಕಾದ ಬೋಟ್ ಸಿಗಲಿಲ್ಲ. ಕೊನೆಗೆ ಸಮೀಪದ ಜಂಬಗಿಯಲ್ಲಿದ್ದ ಬೋಟ್ ತಂದು ಎರಡು ಬೋಟ್‌ಗಳನ್ನು ಜೋಡಿಸಿ ಅದರಲ್ಲಿ ಲೋಡ್ ಆದ ಟ್ರ್ಯಾಕ್ಟರ್ ಅನ್ನೇ ಸಾಗಿಸುವ ಪ್ರಯೋಗ ಮಾಡಿದರು. ಅದರಲ್ಲಿ ಯಶಸ್ವಿಯೂ ಆದರು. ಈಗ ಪ್ರತಿ ಟನ್ ಕಬ್ಬು ಸಾಗಾಟದ ವೆಚ್ಚ ₹200ಕ್ಕೆ ಇಳಿದಿದೆ.



ಜೋಡಿ ಬೋಟ್‌ಗಳ ಮೇಲೆ ಟ್ರ್ಯಾಕ್ಟರ್ ಸಹಿತ ಕಬ್ಬು ಸಾಗಣೆ ಚಿತ್ರಗಳು: ಆರ್.ಎಸ್. ಹೊನಗೌಡ

> **ನದಿ ತುಂಬಿ ಹರಿಯುವಾಗ ತೆಪ್ಪದಲ್ಲಿ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಸಾಗಬೇಕಾದ ಸ್ಥಿತಿ ಇತ್ತು. ನಡುಗಡ್ಡೆಯಲ್ಲಿರುವವರು ಸಂಜೆ ನಂತರ ಬಂದರೆ, ಕಂಕಣವಾಡಿ ಸಂಬಂಧಿಕರ ಅಥವಾ ದೇವಸ್ಥಾನದಲ್ಲಿ ಉಳಿದುಕೊಂಡು ಬೆಳಿಗ್ಗೆ ನಡುಗಡ್ಡೆಗೆ ಹೋಗಬೇಕಾಗುತ್ತಿತ್ತು**
> **ಸದಾಶಿವ ಕವಟಗಿ** ಗ್ರಾಮಸ್ಥ

ರೈತರೂ ನಾಲ್ಕು ಕಾಸು ಕಾಣುವಂತಾಗಿದೆ.

‘ಕಬ್ಬು ಸಾಗಿಸಲು ಹರಸಾಹಸ ಪಡಬೇಕಾಗಿತ್ತು. ಕಬ್ಬು ಕಡಿದು ಹಿನ್ನೀರಿನ ಒಂದು ಬದಿಗೆ ತಂದು, ಅಲ್ಲಿಂದ ಹೊತ್ತು ಬೋಟ್‌ಗೆ ಹಾಕಬೇಕಿತ್ತು. ಇನ್ನೊಂದು ದಡಕ್ಕೆ ತಂದು ಸುರಿದು, ನಂತರ ಮತ್ತೆ ಟ್ರ್ಯಾಕ್ಟರ್‌ಗೆ ಲೋಡ್ ಮಾಡಬೇಕಿತ್ತು. ಇದರಲ್ಲಿ ಬಹಳಷ್ಟು ಕಬ್ಬು ಹಾಳಾಗುತ್ತಿತ್ತು. ಒಂದು ಟನ್ ಕಬ್ಬು ಸಾಗಿಸಲು ₹700 ರಿಂದ ₹ 800 ಖರ್ಚು ಆಗುತ್ತಿತ್ತು. ಇದರಿಂದ ಕಬ್ಬು ಬೆಳೆದರೂ ಪ್ರಯೋಜನವಿಲ್ಲ ಎನ್ನುವ ಸ್ಥಿತಿ. ಕೆಲ ರೈತರ ಕಬ್ಬು ಸಾಗಿಸಲು ಆಗುತ್ತಲೇ ಇರಲಿಲ್ಲ. ಗಾಣಗಳಿಗೆ ನೀಡಬೇಕಾಗುತ್ತಿತ್ತು. ಕಡಿಮೆ ಬೆಲೆಗೆ ಕೊಟ್ಟು ನಷ್ಟ ಅನುಭವಿಸುತ್ತಿದ್ದೆವು’ ಎಂದು ಈಶ್ವರ ಕರಬಸಣ್ಣವರ ಆ ದಿನಗಳನ್ನು ನೆನಪಿಸಿಕೊಂಡರು.

ಕಬ್ಬು ಸಾಗಾಟ ಸುಗಮವಾಯಿತು. ಆದರೆ, ಜನರ ಸಂಚಾರದ ಪರದಾಟ ಮುಂದುವರಿದೇ ಇತ್ತು. ಗುಹೇಶ್ವರ ಜಾತ್ರೆ ಸಂದರ್ಭದಲ್ಲಿ ಹಿನ್ನೀರಿನಲ್ಲಿ ಬ್ಯಾರೆಲ್‌ಗಳ ಮೇಲೆ ಕಾರಂಜಿ (ತೆಪ್ಪ) ನಿರ್ಮಾಣ ಮಾಡಲಾಗುತ್ತಿತ್ತು. ಅದೇ ರೀತಿ ತೇಲುವ ಸೇತುವೆಯನ್ನು ನಿರ್ಮಾಣ ಮಾಡಿದರೆ ಹೇಗೆ ಎನ್ನುವ ಆಲೋಚನೆ ಗ್ರಾಮಸ್ಥರಿಗೆ ಬಂದಿತು. ಆದರೆ, ಅದಕ್ಕೆ ₹ 30 ಲಕ್ಷ ಬೇಕಿತ್ತು. ಅಷ್ಟು ಹಣ ಹೊಂದಿಸುವುದು ಹೇಗೆ ಎನ್ನುವ ಚಿಂತೆಯಲ್ಲಿದ್ದಾಗ, ಸೊಸೈಟಿಯಿಂದ ₹15 ಲಕ್ಷ ಸಾಲ ಪಡೆದು ಜೊತೆಗೆ ದೇವಸ್ಥಾನದಲ್ಲಿ ಸಂಗ್ರಹವಾದ ₹15 ಲಕ್ಷವನ್ನು ಸಾಲವನ್ನಾಗಿ ತೆಗೆದುಕೊಂಡು ಸೇತುವೆ ನಿರ್ಮಾಣಕ್ಕೆ ಗ್ರಾಮಸ್ಥರು ಮುಂದಾದರು.

## ತೇಲುವ ಸೇತುವೆ ಸಿದ್ಧ

ಬ್ಯಾರೆಲ್, ಕಬ್ಬಿಣದ ಆ್ಯಂಗಲ್ ಪಟ್ಟಿ, ಹಲಗೆಗಳನ್ನು ಬಳಸಿಕೊಂಡು 600 ಅಡಿ ಉದ್ದ, 8 ಅಡಿ ಅಗಲದ ತೇಲುವ ಸೇತುವೆ ನಿರ್ಮಾಣವಾಯಿತು! ಅದರ ಮೇಲೆ ದ್ವಿಚಕ್ರ ವಾಹನ, ಜನರು ಯಾವಾಗ ಬೇಕಾದರೂ ಸಂಚರಿಸಬಹುದು.

11 ನೇ ಪುಟಕ್ಕೆ...

# ಆಲೋಚನೆಗೆ ಹಚ್ಚುವ ಕರ್ನಲ್

ಕೆ.ಪಿ.ಲಕ್ಷ್ಮಣ್ ನಿರ್ದೇಶನದ 'ಕರ್ನಲ್‌ಗೆ ಯಾರೂ ಬರೆಯೋದಿಲ್ಲ' ನಾಟಕವು ಪಿಂಚಣಿಗಾಗಿ ಕಾಯುವ ಕರ್ನಲ್ ಒಬ್ಬರ ಕಥೆಯೊಂದಿಗೆ ಮುಕ್ಕಾಗದ ಜೀವನಪ್ರೀತಿಯನ್ನು ಸಾರುತ್ತದೆ.

ಭಾರತಿ ದೇವಿ.ಪಿ

ರಂಗಭೂಮಿ

ಇತ್ತೀಚೆಗೆ ರಂಗ ಶಂಕರದಲ್ಲಿ ಸಮುದಾಯ ತಂಡ ಪ್ರದರ್ಶಿಸಿದ ಕೆ.ಪಿ.ಲಕ್ಷ್ಮಣ್ ನಿರ್ದೇಶನದ ನಾಟಕ 'ಕರ್ನಲ್‌ಗೆ ಯಾರೂ ಬರೆಯೋದಿಲ್ಲ' ನಿಧಾನವಾಗಿ ಆವರಿಸಿಕೊಳ್ಳುವ ನಾಟಕ. ಇದು ಶ್ರೀನಿವಾಸ ವೈದ್ಯ ಅವರು ಅನುವಾದಿಸಿದ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್‌ನ 'ನೋ ವನ್ ರೈಟ್ಸ್ ಟು ಕರ್ನಲ್'ನ ಕನ್ನಡಾನುವಾದ. ದಕ್ಷಿಣ ಅಮೆರಿಕದ ಕೊಲಂಬಿಯಾದಲ್ಲಿ ಯುದ್ಧಾನಂತರ ಹಿಂದೆ ಭರವಸೆ ನೀಡಿದಂತೆ ಪಿಂಚಣಿಗಾಗಿ ಕಾಯುವ ಬಡ ಕರ್ನಲ್‌ನ ಕತೆ ಹೇಳುತ್ತಾ ಇದು ಮಾರ್ಷಿಯಲ್ ಲಾ ದ ಕರಾಳ ನೆರಳಲ್ಲಿ ನಲುಗುತ್ತಿರುವ ಜನರೊಳಗಿನ ಜೀವನ ಪ್ರೀತಿ, ಪ್ರತಿರೋಧದ ಕಿಡಿಯನ್ನು ಕಾಣಿಸುತ್ತಾ ಹೋಗುತ್ತದೆ.

ನಾಟಕ ತೆರೆದುಕೊಳ್ಳುವುದೇ ದಪ್ಪನೆಯ ಹಗ್ಗಕ್ಕೆ ಜೋತುಬಿದ್ದಂತೆ, ಹಗ್ಗದಿಂದ ಕಟ್ಟಿದಂತೆ ಕಾಣುವ ಜನರ ನಿಧಾನ ಚಲನೆಯ ಮೂಲಕ. ನಾಟಕದುದ್ದಕ್ಕೂ ಬೇರೆ ಬೇರೆ ಸನ್ನಿವೇಶಗಳಲ್ಲಿ ಹಗ್ಗ ಬೇರೆ ಬೇರೆ ರೀತಿಯಲ್ಲಿ ಬಳಕೆಯಾಗುತ್ತಾ ವಿಭಿನ್ನ ಅರ್ಥ ನೀಡುತ್ತಾ ಹೋಗುತ್ತದೆ.

ನಾಟಕದ ಆರಂಭದ ದೃಶ್ಯದಲ್ಲಿ ಊರಿನ ಸಂಗೀತಗಾರನೊಬ್ಬನ ಅಂತ್ಯಸಂಸ್ಕಾರಕ್ಕೆ ಕರ್ನಲ್ ಸಜ್ಜಾಗುವ ಹೊತ್ತಿನಲ್ಲಿ ಅದು ಎಷ್ಟೋ ವರ್ಷಗಳ ಬಳಿಕ ಊರಿನಲ್ಲಾದ ಮೊದಲ 'ಸಹಜ ಸಾವು' ಎಂಬ ಮಾತು ಬರುತ್ತದೆ. ಪ್ರಭುತ್ವ ವಿರೋಧಿ ದನಿಗಳನ್ನು ನಿರ್ದಯವಾಗಿ ಹೊಸಕಿಹಾಕುತ್ತಿರುವ ಕಾಲದಲ್ಲಿ ಇಲ್ಲಿ 'ಸಹಜ ಸಾವು' ಎಂಬುದು ಅಪರೂಪದ ವಿಷಯ. ಕರ್ನಲ್ ಮಗನೂ ಸೈನ್ಯದ ಗುಂಡಿನೇಟಿಗೆ ಬಲಿಯಾಗಿ ಸಾವನ್ನಪ್ಪಿದವನು. ಮಗನ ನೆನಪಿನಲ್ಲೇ ಕರ್ನಲ್ ಹಾಗೂ ಅವನ ಕಾಯಿಲೆಯಿಂದ ನರಳುವ ಮಡದಿ ಕೊರಗುತ್ತಾ ದಿನದ ಬದುಕು ನಡೆಸಲು ಹೆಣಗುತ್ತಿರುತ್ತಾರೆ. ಕಳೆದ ಹತ್ತಾರು ವರ್ಷಗಳಿಂದ ಕರ್ನಲ್ ಪಿಂಚಣಿ ಪತ್ರಕ್ಕಾಗಿ ಕಾಯುತ್ತಿರುವ ಕರ್ನಲ್‌ಗೆ ಕೊನೆಗೂ 'ಯಾರೂ ಬರೆಯುವುದೇ ಇಲ್ಲ'.

ಅರಾಜಕ ಸ್ಥಿತಿ ಹುಟ್ಟುಹಾಕಿದ ಅಸಹಾಯಕತೆ, ತಣ್ಣನೆಯ ಕ್ರೌರ್ಯ, ವಿಷಾದ, ಸ್ವಾರ್ಥದ ಜೊತೆಗೇ ಗುಪ್ತ ಪ್ರತಿರೋಧ, ಪಂದ್ಯದ ಉತ್ಸಾಹ ನಾಟಕದ ತುಂಬಾ ಕಾಣುತ್ತಾ ಹೋಗುತ್ತದೆ. ಅಸಹನೀಯ ಸಂದರ್ಭದಲ್ಲೂ ಮುಕ್ಕಾಗದ ಜೀವನಪ್ರೀತಿಯನ್ನು ನಾಟಕದ ಮೂಲಕ ಕಾಣಿಸುವಲ್ಲಿ ನಿರ್ದೇಶಕ ಹಾಗೂ ಕಲಾವಿದರು ಯಶಸ್ವಿಯಾಗಿದ್ದಾರೆ. ಕರ್ನಲ್ ಹಾಗೂ ಮಡದಿಯ ಮಾಸದ ಒಲವಿನ ಹೊಳಪು, ಕಳೆದು ಹೋದ ಮಗನ ಪ್ರೀತಿಯ ಹುಂಜವನ್ನು ಉಳಿಸಲು ನಡೆಸುವ ಪ್ರಯತ್ನ, ಊರವರು ಅದನ್ನು ಪಂದ್ಯಕ್ಕೆ ಬಿಡಲು ತೋರುವ ಹುರುಪು ರೂಪಕವಾಗಿ ಹಲವು ನೆಲೆಗಳಲ್ಲಿ ಅರ್ಥ ನೀಡುತ್ತವೆ. ಕೊನೆಯಲ್ಲಿ ನಾವಿನ್ನು ತಿನ್ನುವುದಾದರೂ ಏನು ಎಂಬ ಮಾತಿಗೆ ಕರ್ನಲ್ ನೀಡುವ ಉತ್ತರ 'ಹೇಲು', ನೇರ ಎದೆಗೆ ಬಡಿಯುತ್ತದೆ.

ಕೆ.ಪಿ.ಲಕ್ಷ್ಮಣ್ ನಮ್ಮ ಕಾಲದ ವೈರುಧ್ಯಗಳಿಗೆ ಎದುರಾಗುತ್ತಾ ನಮ್ಮನ್ನು ನಾವು ಕಾಣುವ ಮತ್ತು ಮರುಕಟ್ಟಿಕೊಳ್ಳುವ ಬಗೆಯಲ್ಲಿ ನೋಡುಗರನ್ನು ನಾಟಕದೊಂದಿಗೆ ಸಂವಾದಿಯಾಗಿ ಮಾಡುವ ಮಹತ್ವದ ನಿರ್ದೇಶಕರು. ಅವರ 'ದಕ್ಲಕಥಾ ದೇವಿ ಕಾವ್ಯ' ಹಾಗೂ 'ಬಾಬ್ ಮರ್ಲೆ ಫ್ರಂ ಕೋಡಿಹಳ್ಳಿ' ನಾಟಕಗಳು ದಟ್ಟ ಮತ್ತು ಶಾಕ್ ನೀಡುವ ಸಂಭಾಷಣೆ, ಹಾಡು, ನಾಟಕೀಯತೆಗಳೊಂದಿಗೆ ನಿರಂತರ ಪ್ರೇಕ್ಷಕರನ್ನು ಹಿಡಿದಿಡುತ್ತವೆ. ಕಥೆಯ ಹರಿವೇ ಒಂದು ಬಗೆಯ ಕಥನ ತಂತ್ರವನ್ನು ಅಪೇಕ್ಷಿಸುತ್ತದೆ. ಬಹುಶಃ ಹೀಗಾಗಿಯೇ ಈ ನಾಟಕದಲ್ಲಿ ಅವಕ್ಕಿಂತ ಬೇರೆಯಾಗಿ ನಿಧಾನವಾಗಿ, ನೋಡುಗರನ್ನು ಆಲೋಚನೆಗೆ ಹಚ್ಚುತ್ತಾ ಸಾಗುವ ಕಥನ ತಂತ್ರ ಕಾಣುತ್ತದೆ. ಆರಂಭದಲ್ಲಿ ಕಾಣುವ ಹಗ್ಗಕ್ಕೆ ಆತುಕೊಂಡ ನಟರ ನಿಧಾನ ಚಲನೆ, ನಾಟಕದ ಕೊನೆಯಲ್ಲಿ ಪುನರಾವರ್ತನೆಗೊಳ್ಳುವುದು ಬದಲಾಗದ ಬದುಕಿನ ಸ್ಥಿತಿಯನ್ನು ಸೂಚಿಸುತ್ತಿರಬಹುದೇ? ಎಂಬ ಬಗೆಯಲ್ಲಿ ನಮ್ಮನ್ನು ಕಾಡುತ್ತಾ ಮನಸ್ಸಿನಲ್ಲಿ ಉಳಿದುಬಿಡುತ್ತದೆ.

ಸಮುದಾಯ, ಬೆಂಗಳೂರು ತಂಡ ನಟಿಸಿದ ಈ ನಾಟಕ ಲ್ಯಾಟಿನ್ ಅಮೆರಿಕದ ಕತೆಯಾಗದೇ ನಮ್ಮ ಪ್ರಸ್ತುತ ಸ್ಥಿತಿಗೂ ಕನ್ನಡಿ ಹಿಡಿಯುತ್ತಾ ಚಿಂತನೆಗೆ ಹಚ್ಚುತ್ತದೆ. ಕಲಾವಿದರ ಸಾಧ್ಯತೆಗಳನ್ನು ಹೊರಗೆಳೆಯುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ನಾಟಕದ ಸನ್ನಿವೇಶಗಳಿಗೆ ಪೂರಕವಾದ ಹಾಡುಗಳು, ಗಿಟಾರ್, ಹಾರ್ಮೋನಿಯಂನ ಪಲುಕುಗಳು ಪರಿಣಾಮವನ್ನು ಹೆಚ್ಚಿಸಿವೆ. ಮಂಜು ನಾರಾಯಣ್ ಅವರ ಬೆಳಕಿನ ನಿರ್ವಹಣೆ ಉತ್ತಮ ಆವರಣ ನಿರ್ಮಿಸಿಕೊಟ್ಟಿತು. ನಾಟಕದ ಸೆಟ್ಟಿಂಗ್, ಹೆಚ್.ಕೆ.ಶ್ವೇತಾರಾಣಿಯವರ ವಸ್ತ್ರಾಲಂಕಾರ ಸನ್ನಿವೇಶವನ್ನು ನೈಜವಾಗಿ ಕಟ್ಟಿಕೊಟ್ಟಿವೆ. 'ಬಾರೆ ಬಾರೆನ್ನ ಸಖಿಯೇ' ಹಾಡು, ಬೇರೆ ಬೇರೆ ಸಂದರ್ಭಗಳ ಹಮ್ಮಿಂಗ್ ಹಾಗೆಯೇ ಕಿವಿಯಲ್ಲಿ ಅನುರಣಿಸುವಂತಿವೆ.

ತುಂಬಾ ನಿಧಾನವಾಗಿ ಸಾಗುವ ಈ ಕಾದಂಬರಿಯ ಒಳಗಿನ ವಿಷಾದ, ತಣ್ಣನೆಯ ಪ್ರತಿರೋಧವನ್ನು ರಂಗದ ಮೇಲೆ ತರುವುದು ಸವಾಲಿನ ಕೆಲಸ. ನಾಡಿಗಾಗಿ ದುಡಿದ ಯೋಧನೇ ಪರಿತ್ಯಕ್ತನಾಗಿ ಬದುಕು ನಡೆಸಲು ಕಷ್ಟಪಡುತ್ತಿರುವ ಈ ವೈರುಧ್ಯವನ್ನು ಮಾರ್ಕ್ವೆಜ್‌ನ ಕಥೆ ತುಂಬಾ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ವ್ಯಕ್ತಿಗಳ ಅಸಹಾಯಕ ಸ್ಥಿತಿಗೆ ಪ್ರಭುತ್ವ, ಕೆಲವರ ಸ್ವಾರ್ಥ ಹೊಣೆಯಾಗಿರುವ ಈ ವಾಸ್ತವ ನೋಡುಗರಿಗೆ ಇದೇ ತೀವ್ರತೆಯಲ್ಲಿ ತಟ್ಟುವುದಿಲ್ಲ.

ಕೆಲವೊಂದು ಸಂದರ್ಭಗಳಲ್ಲಿ ಪರಿಣಾಮಕ್ಕಾಗಿ ತಂದ ನಿಧಾನಗತಿ ನಾಟಕದ ತೀವ್ರತೆಯ ಮೇಲೆ ಪ್ರಭಾವ ಬೀರಿದಂತೆನಿಸಿತು. ಜೊತೆಗೆ ನೋಡುಗರಾಗಿ ನಾವೂ ಭಿನ್ನ ಭಿನ್ನ ಕಥನ ತಂತ್ರಗಳ ನಾಟಕಗಳನ್ನು ನೋಡುವುದಕ್ಕೆ ನಮ್ಮನ್ನು ಸಜ್ಜುಗೊಳಿಸಿಕೊಳ್ಳುವುದು ತುಂಬಾ ಮುಖ್ಯ ಎನಿಸುತ್ತದೆ. ❖





'ಕರ್ನಲ್‌ಗೆ ಯಾರೂ ಬರೆಯೋದಿಲ್ಲ' ನಾಟಕದ ದೃಶ್ಯ

## 'ಇಲ್ಲದಿರುವ ವ್ಯಕ್ತಿಯ ನಿಂದನೆ, ಆರೋಪ ಹೇಯ'

ಪ್ರತಿಕ್ರಿಯೆ

**ನ. 24ರ ಭಾನುವಾರದ** ಪುರವಣಿಯಲ್ಲಿ ನನ್ನ ತಂದೆ ಯು. ಆರ್. ಅನಂತಮೂರ್ತಿಯವರ ಬಗ್ಗೆ ತಾನು ಆರೋಪಗಳನ್ನು ಮಾಡಿಲ್ಲ ಎನ್ನುತ್ತಲೇ ನಟರಾಜ್ ಹುಳಿಯಾರರು ತಮ್ಮ ಮೂಲ ಲೇಖನದಲ್ಲಿಲ್ಲದ ವಿಷಯಗಳನ್ನು ಎತ್ತಿಕೊಂಡು ವಾಸ್ತವಾಂಶಗಳ ಆಧಾರವಿಲ್ಲದೇ ಮತ್ತಷ್ಟು ಆರೋಪಗಳನ್ನು ಮಾಡಿರುವುದರಿಂದ ಈ ಪ್ರತಿಕ್ರಿಯೆ.

ಸಂಸ್ಕಾರ ಕಾದಂಬರಿಯು 1996 ರ ಮೊದಲೇ ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದಗೊಂಡು ವಿಶ್ವಮಾನ್ಯ ವಿಮರ್ಶಕ/ ಲೇಖಕರಿಂದ ಪ್ರಶಂಸೆಗೆ ಒಳಪಟ್ಟಿತ್ತು. ಈ ಹಿನ್ನೆಲೆಯಲ್ಲಿ ಅದು ಸ್ವೀಡಿಶ್ ಭಾಷೆಗೆ ಅನುವಾದಗೊಳ್ಳಬೇಕೆಂಬ ಅಗತ್ಯ ನನ್ನ ತಂದೆಗೆ ಇರಲಿಲ್ಲ. ಈ ಕಾದಂಬರಿ ಈಗಲೂ ಚರ್ಚೆಯಲ್ಲಿದೆ. 2017 ರಲ್ಲಿ ಆಧುನಿಕ ಜಗತ್ತಿನ ಮಾಸ್ಟರ್‌ಪೀಸ್‌ಗಳಲ್ಲಿ (masterpieces of modern world literature) ಒಂದೆಂದು ಪರಿಗಣಿಸಿ 'ನ್ಯೂಯಾರ್ಕ್ ರಿವ್ಯೂ ಆಫ್ ಬುಕ್ಸ್' ಸಂಸ್ಕಾರವನ್ನು ಅಚಿಬೆಯವರ ಥಿಂಗ್ಸ್ ಫಾಲ್ ಅಪಾರ್ಟ್ ಜೊತೆ ಸಮೀಕರಿಸಿ ಸಂಸ್ಕಾರದ ವಿಶೇಷ ಆವೃತ್ತಿಯನ್ನು ಪ್ರಕಟಿಸಿದೆ.

ಸ್ವೀಡಿಶ್ ಭಾಷೆಗೆ ಅನುವಾದಿಸುವ ಕೃತಿಗಳನ್ನು ಆರಿಸುವ ಸಂಪೂರ್ಣ ಜವಾಬ್ದಾರಿಯು ಸ್ವೀಡಿಶ್ ಯೋಜನಾ ತಂಡದ್ದಾಗಿತ್ತು. ಈ ಯೋಜನೆಗೂ ಸ್ವೀಡಿಶ್ ಅಕಾಡೆಮಿಗೂ ಯಾವುದೇ ಸಂಬಂಧವಿಲ್ಲ. ಇದನ್ನು ಸ್ವೀಡನ್ನಿನಲ್ಲಿರುವ ಅನುವಾದ ಯೋಜನಾ ತಂಡದ ಪ್ರಮುಖರಲ್ಲೊಬ್ಬರು ದಾಖಲೆಗಳ ಮೂಲಕ ಖಚಿತಪಡಿಸಿದ್ದಾರೆ. ಯೋಜನೆಗೆ ಮೊದಲ ಅನುದಾನ ದೊರೆತಿದ್ದು 1999 ರ ಸೆಪ್ಟೆಂಬರ್ 30 ರಂದು. ಅನಂತಮೂರ್ತಿಯವರು ಫೆಬ್ರುವರಿ 1998 ರ ವರೆಗೆ ಮಾತ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು.

ಹುಳಿಯಾರರು ಆ ಕಾಲದಲ್ಲೇ ಅನುವಾದದ ವಿಷಯವನ್ನು ಸಾರ್ವಜನಿಕವಾಗಿ ಎತ್ತಿ ಉತ್ತರಗಳನ್ನು ಪಡೆಯಬಹುದಿತ್ತು. ನನ್ನ ತಂದೆಯವರೆಂದೂ ಸಾರ್ವಜನಿಕ ಚರ್ಚೆಗಾಗಲೀ, ವಾಗ್ವಾದಕ್ಕಾಗಲೀ ಹಿಂಜರಿದವರಲ್ಲ. ಸ್ವೀಡಿಶ್ ಲೇಖಕರ ಗುಣಮಟ್ಟದ ಬಗ್ಗೆ ಅಷ್ಟು ಬೇಸರವಿದ್ದರೆ ಆ ನಿಯೋಗದ ಜೊತೆ ಹುಳಿಯಾರರು ಪ್ರವಾಸ-ಸಂವಾದ ಮಾಡುವ ಬದಲು ಪ್ರತಿಭಟಿಸಬಹುದಿತ್ತು.

ಬದುಕಿರುವಾಗ ಒಡನಾಡಿ, ಅವರು ತೀರಿಕೊಂಡ ನಂತರ, ಸಮರ್ಥಿಸಿಕೊಳ್ಳಬೇಕಾದ ವ್ಯಕ್ತಿಯೇ ಇಲ್ಲದಿರುವಾಗ ವೈಯಕ್ತಿಕ ನಿಂದನೆ ಮತ್ತು ಆರೋಪ ಮಾಡುವುದು, ಹೇಯ ಮತ್ತು ಅನೈತಿಕವಾದುದು. ಈ ಚರ್ಚೆಯನ್ನು ನಾನು ಇನ್ನು ಮುಂದುವರಿಸುವುದಿಲ್ಲ.

ಪತ್ರದಲ್ಲಿ ತಾವು ವಿಮರ್ಶಕರಲ್ಲ ಎಂದಿರುವ ಹುಳಿಯಾರರು ತಮ್ಮ ವೆಬ್‌ಸೈಟಿನಲ್ಲಿ ತಾವು ವಿಮರ್ಶಕರೆಂದು ಘೋಷಿಸಿಕೊಂಡಿದ್ದಾರೆ. ಇದರಲ್ಲಿ ಯಾವುದು ಮುಖವಾಡವೆಂಬುದು ಗೊತ್ತಾಗುತ್ತಿಲ್ಲ.

**ಅನುರಾಧ ಅನಂತಮೂರ್ತಿ,** ಬೆಂಗಳೂರು



# ಮುಳುಗುವ ಬದುಕಿಗೆ ತೇಲುವ ಸೇತುವೆ ಆಸರೆ

ಕಬ್ಬು ಸಾಗಿಸುತ್ತಿರುವ ದೃಶ್ಯ

10ನೇ ಪುಟದಿಂದ...

ಇದರಿಂದಾಗಿ ಮಕ್ಕಳು ಸಮಯಕ್ಕೆ ಸರಿಯಾಗಿ ಶಾಲೆಗೆ ಹೋಗುತ್ತಿದ್ದಾರೆ. ಮಹಿಳೆಯರು ಸರಾಗವಾಗಿ ತೋಟಗಳಿಗೆ ಹೋಗಿ, ಬರುತ್ತಾರೆ. ಜಾನುವಾರುಗಳಿಗೆ ಮೇವು ತರುತ್ತಾರೆ. ಡೇರಿಗೆ ಹಾಲು ತರುತ್ತಿದ್ದಾರೆ.

ಕಬ್ಬು ಸಾಗಾಟಕ್ಕೆ ವಿಧಿಸುತ್ತಿದ್ದ ಶುಲ್ಕದಿಂದ ₹20 ಲಕ್ಷ ಸಂಗ್ರಹಿಸಲಾಗಿದೆ. ನಿರ್ವಹಣೆಗಾಗಿ ₹5 ಲಕ್ಷ ಖರ್ಚಾಗಿದೆ. ₹15 ಲಕ್ಷ ಸಾಲ ತೀರಿಸಲಾಗಿದೆ. ಉಳಿದ ಹಣ ತೀರಿಸಲು ಯೋಜಿಸಲಾಗಿದೆ. ಆ ನಂತರ ಪ್ರತಿ ಟನ್ ಕಬ್ಬಿಗೆ ₹50 ವಿಧಿಸಲು ನಿರ್ಧರಿಸಲಾಗಿದೆ. ಇದರಿಂದ ರೈತರ ಆದಾಯದಲ್ಲಿ ಮತ್ತಷ್ಟು ಹೆಚ್ಚಾಗಲಿದೆ.

'ತೇಲುವ ಸೇತುವೆ ನಿರ್ಮಾಣದಿಂದ ತಿರುಗಾಡಲು ಅನುಕೂಲವಾಗಿದೆ. ಕಬ್ಬು ಸಾಗಿಸಲು ದೊಡ್ಡ ಬೋಟ್ ವ್ಯವಸ್ಥೆ ಮಾಡಬೇಕು. ಎರಡು ದಶಕಗಳಿಂದ ತೊಂದರೆ ಎದುರಿಸುತ್ತಿದ್ದೇವೆ. ಪರಿಸ್ಥಿತಿ ಅರಿತು ಸರ್ಕಾರ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಮನಸ್ಸು ಮಾಡಬೇಕು' ಎನ್ನುತ್ತಾರೆ ರೈತ ಸದಾಶಿವ ಕಾಡಗೇರಿ.

ಸೇತುವೆ ಉದ್ಘಾಟನೆ ಸಂದರ್ಭದಲ್ಲಿ ಹಲವಾರು ಜನಪ್ರತಿನಿಧಿಗಳು ಬಂದಿದ್ದರು. ದೊಡ್ಡ ಬೋಟ್ ನೀಡುವಂತೆ ಕೇಳಿದ್ದೆವ. ಕೊಡಿಸುವುದಾಗಿ ಭರವಸೆ ನೀಡಿದ್ದರು. ಇಲ್ಲಿಯವರೆಗೆ ಯಾರೂ ಸ್ಪಂದಿಸಿಲ್ಲ. ಬೋಟ್ ಹಾಳಾದರೆ ಮತ್ತೆ ಸಮಸ್ಯೆ ಮೊದಲಿನಿಂದ ಆರಂಭವಾಗುತ್ತದೆ ಎನ್ನುತ್ತಾರೆ ಗ್ರಾಮಸ್ಥರು.

ಸರ್ಕಾರ ಕೈಚೆಲ್ಲಿದಾಗ ಕಂಕಣವಾಡಿ ಗ್ರಾಮಸ್ಥರು ತಾವೇ ಪರ್ಯಾಯ ದಾರಿ ಕಂಡುಕೊಂಡರು. ಇದು ಮಾದರಿ ಕೆಲಸ ಎನ್ನಲು ಅಡ್ಡಿಯಿಲ್ಲ.

### ವನವಾಸಕ್ಕೆ ಮುಕ್ತಿ

ಕಂಕಣವಾಡಿ ಗ್ರಾಮದವರ 500ಕ್ಕೂ ಹೆಚ್ಚು ಎಕರೆ ಆಲಮಟ್ಟಿ ಹಿನ್ನೀರಿನಲ್ಲಿ ನಡುಗಡ್ಡೆಯಾಗಿದೆ. ಅಲ್ಲಿ ಕಬ್ಬು, ಮತ್ತಿತರ ಬೆಳೆ ಬೆಳೆಯಲಾಗುತ್ತದೆ. 10 ಸಾವಿರ ಟನ್‌ನಷ್ಟು ಕಬ್ಬು ಉತ್ಪಾದನೆಯಾಗುತ್ತದೆ. ಜೊತೆಗೆ 250ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿದ್ದು, 25ಕ್ಕೂ ಹೆಚ್ಚು ಮಕ್ಕಳು ಶಾಲೆಗೆ ಹೋಗುತ್ತಾರೆ. 270ಕ್ಕೂ ಹೆಚ್ಚು ಎಮ್ಮೆಗಳಿದ್ದು, ದಿನಕ್ಕೆ 1,500 ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಜನರು ಹೋಗಿ-ಬರಲು, ಕೃಷಿ ಉತ್ಪನ್ನಗಳನ್ನು ಸಾಗಿಸುವುದು ಸವಾಲಾಗಿತ್ತು. ಜನರ ಸಂಚಾರಕ್ಕೆ ಒಂದು ಸಣ್ಣ ಬೋಟ್ ನೀಡಲಾಗಿತ್ತು. ಬೋಟ್ ಸಂಜೆ 6ಕ್ಕೆ ಸಂಚರಿಸುವುದು ನಿಲ್ಲಿಸಿ ಬಿಡುತ್ತಿತ್ತು. ನಡುಗಡ್ಡೆಯಲ್ಲಿರುವ ಜನರು ಎಲ್ಲಿಗೇ ಹೋಗಲಿ, ಸಂಜೆ 7ರ ವೇಳೆಗೆ ವಾಪಸ್ ಬಂದು ಬಿಡಬೇಕಾಗುತ್ತಿತ್ತು. ಅಲ್ಲಿರುವವರಿಗೆ ರಾತ್ರಿ ಏನಾದರೂ ಆದರೆ, ಬೆಳಗಿನವರೆಗೂ ಕಾಯಬೇಕಿತ್ತು.

### ಗುಹೇಶ್ವರ ನಡುಗಡ್ಡೆ ಆಗಿದ್ದು...

ಕೃಷ್ಣಾ ನದಿಯು ಇಲ್ಲಿ ಕವಲೊಡೆದು ಹರಿಯುತ್ತಿರುವುದರಿಂದ ಗುಹೇಶ್ವರ ನಡುಗಡ್ಡೆ ನಿರ್ಮಾಣವಾಗಿದೆ. ಆಲಮಟ್ಟಿ ಜಲಾಶಯ ನಿರ್ಮಾಣಕ್ಕೂ ಮುನ್ನ ಮಳೆಗಾಲದಲ್ಲಿ ನೀರು ಜೋರಾಗಿ ಹರಿಯುತ್ತಿತ್ತು. ಉಳಿದ ದಿನಗಳಲ್ಲಿ ಸಣ್ಣದಾಗಿ ಹರಿಯುತ್ತಿತ್ತು. ಜನರು ಅಲ್ಲಿದ್ದ ಸಣ್ಣ ಸೇತುವೆ ಮೇಲೆ ಸಂಚರಿಸುತ್ತಿದ್ದರು. 2004ರಲ್ಲಿ ಆಲಮಟ್ಟಿ ಜಲಾಶಯದಲ್ಲಿ ನೀರು ನಿಲ್ಲಿಸತೊಡಗಿದ ಮೇಲೆ ಹಿನ್ನೀರಿನ ಪ್ರಮಾಣ ಹೆಚ್ಚಾಗಿ ಜನರ ಸಂಚಾರ ಹಾಗೂ ಕಬ್ಬು ಸಾಗಾಟಕ್ಕೆ ತೊಂದರೆ ಶುರುವಾಯಿತು.



ಕಂಕಣವಾಡಿ ಗ್ರಾಮಸ್ಥರು

### ದೀಪಾವಳಿ ಕಥೆ ಸ್ಪರ್ಧೆ 2024
### ಮೆಚ್ಚುಗೆ ಪಡೆದ ಕಥೆ-ಲಾಂಬು



ಪ್ರಸಾದ ಶೆಣೈ ಆರ್ ಕೆ

ಉಡುಪಿ ಜಿಲ್ಲೆಯ ಕಾರ್ಕಳ ಹುಟ್ಟೂರು. ಕಾರ್ಕಳದಲ್ಲಿ ಉಪನ್ಯಾಸಕ. ಕನ್ನಡ ಕ್ರಿಯಾಶೀಲ ಬರವಣಿಗಾಗಿ ಟೋಟೋ ಪುರಸ್ಕಾರ ಲಭಿಸಿದೆ. 2014 ಪ್ರಜಾವಾಣಿ ವಿದ್ಯಾರ್ಥಿಯ ವಿಭಾಗದ ಕಥಾ ಸ್ಪರ್ಧೆ ಸೇರಿದಂತೆ ಹಲವು ಕಥಾ ಸ್ಪರ್ಧೆಗಳಲ್ಲಿ ಬಹುಮಾನ. 'ಲೂಲು ಟ್ರಾವೆಲ್ಸ್' ಪ್ರಕಟಿತ ಕಥಾ ಸಂಕಲನ. 'ಒಂದು ಕಾಡಿನ ಪುಷ್ಪಕ ವಿಮಾನ' ಪ್ರಕಟಿತ ಪರಿಸರ ಬರಹಗಳ ಕೃತಿ.

ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

### ದೀಪಾವಳಿ ಕವನ ಸ್ಪರ್ಧೆ 2024
### ಮೆಚ್ಚುಗೆ ಪಡೆದ ಕವನ-ಮನುಷ್ಯರು



ಲಿಂಗರಾಜ ಸೊಟ್ಟಪ್ಪನವರ

ಹಾವೇರಿ ಜಿಲ್ಲೆಯ ಹಿರೇಮರಳಿಯವರು. ಸರ್ಕಾರಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ. ಇವರ ಅನೇಕ ಕಥೆ, ಕವಿತೆಗಳು ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿವೆ. ಕಣವಿ ಕಾವ್ಯ ಪ್ರಶಸ್ತಿ, ಸಂಕ್ರಮಣ ಸಾಹಿತ್ಯ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ದೊರೆತಿವೆ. ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ 2020ರಲ್ಲಿ ಇವರ 'ಕೊನಡೆ' ಕಥೆ ಮೆಚ್ಚುಗೆ ಪಡೆದಿತ್ತು.

ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

### ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

## ಮುನ್ನೋಟ 01-12-2024 ರಿಂದ 07-12-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

### ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

**ಮೇಷ** — ಅಶ್ವಿನಿ, ಭರಣಿ, ಕೃತ್ತಿಕಾ 1

ಸ್ವಲ್ಪ ಆಲಸ್ಯ ಮೈದುಂಬಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹಂತಕ್ಕೆ ಬರುತ್ತದೆ. ನಡವಳಿಕೆಯಿಂದ ಜನರನ್ನು ಎದುರು ಹಾಕಿಕೊಳ್ಳುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ನಿಗದಿತ ಆದಾಯವಿಲ್ಲದಿದ್ದರೂ, ನಷ್ಟವಿಲ್ಲ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಹೊಟ್ಟೆಯಲ್ಲಿ ವಾಯು ಪ್ರಕೋಪ ಕಾಡಬಹುದು. ಸಂಗಾತಿಯಿಂದ ಅಲ್ಪ ಮಟ್ಟಿನ ಸಹಕಾರ ಸಿಗುತ್ತದೆ.

**ವೃಷಭ** — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಮಾಜದಿಂದ ಗೌರವ ಸಿಗುವ ಸಾಧ್ಯತೆಗಳಿವೆ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಸಂಗಾತಿಗೆ ಆಸ್ತಿ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ಈಗ ಸಾಮಾನ್ಯ ಫಲಿತಾಂಶ ಇರುತ್ತದೆ. ಹಣಕಾಸಿನ ವ್ಯವಹಾರಗಳಿಂದ ನಷ್ಟವಾಗಬಹುದು. ಸಂಗಾತಿಯಿಂದ ಹೆಚ್ಚು ಸಹಾಯ ದೊರೆಯುತ್ತದೆ. ವಿದೇಶಿ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವಿರುತ್ತದೆ.

**ಮಿಥುನ** — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ಮಾತನಾಡುವಾಗ ಎಚ್ಚರಿಕೆ ಇರಲಿ. ಹಿರಿಯರೊಂದಿಗೆ ಜಗಳ ಬೇಡ. ಭೂಮಿಯ ವ್ಯವಹಾರವನ್ನು ಮಾಡುವವರಿಗೆ ಸ್ವಲ್ಪಮಟ್ಟಿನ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಕಣ್ಣಿನ ಬಗ್ಗೆ ಹೆಚ್ಚು ಎಚ್ಚರ ವಹಿಸಿ. ಆದಾಯದಷ್ಟೇ ಖರ್ಚು ಇರುತ್ತದೆ.

**ಕಟಕ** — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ಧೈರ್ಯವಿದ್ದರೂ ಅದನ್ನು ವ್ಯಕ್ತಪಡಿಸಲು ಆಗುವುದಿಲ್ಲ. ಚೆನ್ನಾಗಿ ಮಾತನಾಡಿ ಜನರನ್ನು ಗೆಲ್ಲುವಿರಿ. ಸಂಗಾತಿಯ ಕಿರಿಕಿರಿಯಿಂದ ಸಂತೋಷ ಹಾಳಾಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಸಂಗಾತಿ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಭಿನ್ನಾಭಿಪ್ರಾಯ ಬರಬಹುದು. ಸರ್ಕಾರಿ ಕೆಲಸದಲ್ಲಿರುವವರಿಗೆ ಅಭಿವೃದ್ಧಿ ಇರುತ್ತದೆ.

**ಸಿಂಹ** — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಸಾಧಿಸುವ ಛಲವಿದ್ದರೂ ಅದನ್ನು ಕಾರ್ಯಗೊಳಿಸುವ ಮನಸ್ಸು ಕಡಿಮೆ ಇರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಧಾರ್ಮಿಕ ಕಾರ್ಯ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ವಾತ ಸಂಬಂಧಿ ದೋಷಗಳು ನಿಮ್ಮನ್ನು ಕಾಡಬಹುದು. ಸಂಗಾತಿಯಿಂದ ಕೆಲವೊಮ್ಮೆ ಪ್ರತಿರೋಧ ಎದುರಾಗುತ್ತದೆ.

**ಕನ್ಯಾ** — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಧರ್ಮಶ್ರದ್ಧೆ ಹೆಚ್ಚಾದಂತೆ ತೋರಿಸಿಕೊಳ್ಳುವಿರಿ. ಆದಾಯವು ಸಾಮಾನ್ಯವಾಗಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ಬಂಧುಗಳ ವಿರೋಧ ಕಟ್ಟಿಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಈಗ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ಸ್ನಾಯು ಸೆಳೆತ ಹೆಚ್ಚಾಗಬಹುದು. ಸಂಗಾತಿಯು ನಿಮ್ಮ ಮಾತುಗಳಿಗೆ ಪ್ರತಿರೋಧ ತೋರಬಹುದು. ವೃತ್ತಿಯಲ್ಲಿ ಕಾರ್ಯ ಒತ್ತಡ ಹೆಚ್ಚಾಗಬಹುದು.

**ತುಲಾ** — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಹಳ ಚುರುಕಾದ ನಡವಳಿಕೆಯನ್ನು ಹೊಂದಿರುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಮಹಿಳೆಯರಿಂದ ಹೆಚ್ಚು ಸಹಾಯ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಶ್ರೇಯಸ್ಸು ಇರುವುದಿಲ್ಲ. ಕೀಲುನೋವು ಕೆಲವರನ್ನು ಬಾಧಿಸಬಹುದು. ಸಂಗಾತಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ತಾಯಿಯ ವಿರೋಧವನ್ನು ಕಟ್ಟಿಕೊಳ್ಳಬೇಕಾಗಬಹುದು.

**ವೃಶ್ಚಿಕ** — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಶತ್ರುಗಳ ಕಾಟವನ್ನು ಬುದ್ಧಿವಂತಿಕೆಯಿಂದ ತಪ್ಪಿಸಿಕೊಳ್ಳುವಿರಿ. ಹರಿತವಾದ ಆಯುಧಗಳನ್ನು ಉಪಯೋಗಿಸುವವರು ಬಹಳ ಎಚ್ಚರದಿಂದ ಬಳಸಿ. ಸಂಗಾತಿಗೆ ಹಿರಿಯರಿಂದ ಆಸ್ತಿ ದೊರೆಯುತ್ತದೆ. ಅದಿರು ವ್ಯಾಪಾರಿಗಳು ವ್ಯಾಪಾರದಲ್ಲಿ ಏರಿಳಿತವನ್ನು ಕಾಣಬಹುದು. ಯೋಗ ಗುರುಗಳಿಗೆ ಹೆಚ್ಚು ಬೇಡಿಕೆ ಬರುತ್ತದೆ.

**ಧನುಸ್ಸು** — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಕೆಲವು ವಿಷಯಗಳಲ್ಲಿ ಜ್ಞಾನ ಸಂಪಾದನೆ ಮಾಡುವಿರಿ. ಆದಾಯವು ಕಡಿಮೆ ಇದ್ದರೂ ತೊಂದರೆ ಏನಿಲ್ಲ. ನಿಮ್ಮ ನಡವಳಿಕೆಯಿಂದಲೇ ಶತ್ರುಗಳಿಗೆ ಭಯ ಹುಟ್ಟುವಂತೆ ಮಾಡುವಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಆಹಾರ ವ್ಯತ್ಯಾಸದಿಂದ ಆರೋಗ್ಯ ವ್ಯತ್ಯಾಸವಾಗಬಹುದು. ಸಂಗಾತಿಯ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು.

**ಮಕರ** — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿಮ್ಮ ಶ್ರಮದಿಂದ ಹೆಚ್ಚು ಆದಾಯ ಮಾಡಿಕೊಳ್ಳಲು ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ಇರುತ್ತದೆ. ಅಧಿಕ ರಕ್ತದ ಒತ್ತಡವಿರುವವರು ಎಚ್ಚರ ವಹಿಸಿ. ಸಂಗಾತಿ ಕಡೆಯವರಿಂದ ನಿಮಗೆ ಹೆಚ್ಚು ಸಹಕಾರ ದೊರೆಯುತ್ತದೆ. ಸರ್ಕಾರಿ ವ್ಯವಹಾರಗಳಲ್ಲಿ ಮಂದಗತಿ ಇದ್ದರೂ ನಷ್ಟವಿರುವುದಿಲ್ಲ.


**ಕುಂಭ** — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರಲ್ಲಿ ಸಹಜವಾಗಿ ಶಾಂತತೆ ಇರುತ್ತದೆ. ಯುವಕರು ತಮ್ಮ ಮಾತಿನಿಂದಲೇ ಆದಾಯದ ಮೂಲವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ದಂತ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಫಲಿತಾಂಶ ನಿರೀಕ್ಷೆಯ ಹತ್ತಿರ ಬರುತ್ತದೆ. ಬೆಂಕಿಯೊಡನೆ ಕೆಲಸ ಮಾಡುವವರು ಎಚ್ಚರದಿಂದ ಮಾಡಿ.

**ಮೀನ** — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಆದಾಯವು ಕಡಿಮೆ ಇರುತ್ತದೆ. ಹಿರಿಯರ ಸಹಕಾರದಿಂದ ಸ್ವಲ್ಪ ಅನುಕೂಲವಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಶೀತಬಾಧೆ ಕೆಲವರನ್ನು ಕಾಡಬಹುದು. ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ.

## ಪದಬಂಧ 2868



**ಮೇಲಿನಿಂದ ಕೆಳಕ್ಕೆ**

1. ನಡವಳಿಕೆಯ ಪಕ್ವತೆಗೆ ನಡೆಸುವ ಕ್ರಿಯೆ 5
2. ಹಾಡುಗಾರಿಕೆಯ ಹುಡುಗಿ 3
4. ಯೌವ್ವನವನ್ನು ಬೇಡಿದ ಚಂದ್ರವಂಶದ ದೊರೆ 3
5. ಹದಿಹರೆಯದ ಬಲ 5
6. ಹೆಣ್ಣಿನ ಹಣೆಯನ್ನು ಶೋಭಿಸುವ ಮಂಗಳ ದ್ರವ್ಯ 3
7. ಹಲ್ಲುನೋವಿಗೆ ಬಳಸಬಹುದಾದ ವಂಗದೇಶದ ಸಾಂಭಾರ ಪದಾರ್ಥ 3
8. ಒಳಿತು ಕೆಡಕುಗಳನ್ನು ಆಲೋಚಿಸುವ ವಿಚಾರವಾದಿ 3
9. ಹೊನ್ನೆಯ ಜೊತೆ ಸೇರುವ ಮರ 3
14. ನಾಲಿಗೆಗೆ ಸವಿಯೆನಿಸಿದ್ದು 3
16. ಮದುವೆಗೆ ಕಟ್ಟಿದ ಚಪ್ಪರ 3
17. ಐಶ್ವರ್ಯವನ್ನು ಒಟ್ಟುಗೂಡಿಸುವ ಕ್ರಿಯೆ 5
18. ಕೊನೆಯಲ್ಲಿ ಬೆಲೆಬಾಳುವ ಚಪ್ಪರ 3
19. ರಾಮನಿಂದ ಬಾಹುಗಳನ್ನು ಕಳೆದುಕೊಂಡ ದಾನವ 3
20. ಎಲ್ಲಾ ಕುಲಗಳೂ ಈ ಗುಂಪಿಗೆ ಸೇರುತ್ತದೆ 3
21. ಮಾನ ಮರ್ಯಾದೆಯ ಬೆಲೆಕಟ್ಟಲು ಬಳಸುವ ಕನಿಷ್ಠ ಬಿಲ್ಲೆ 3
22. ಜನಕರಾಜನ ಮಗಳ ಪತಿಯಾಗಿ ದಶರಥಾತ್ಮಜ 5
27. ಉಭಯ ಕುಶಲೋಪರಿ.... ಮುಂದುವರೆಸಿ 3
29. ಸಾಲವಾಗಿ ಬರುವ ಈಚಲ ಮರ 3

**ಎಡದಿಂದ ಬಲಕ್ಕೆ**

1. ಬದುಕಿನಲ್ಲಿ ಸೂರ್ಯಾಸ್ತಮಾನ ಆದರೂ ಪಲ್ಲವಿಸುತ್ತವೆ ಚೈತ್ರ ವೈಶಾಖ 5
3. ಜನರ ಕಾನೂನಿನ ದೃಷ್ಟಿಯಲ್ಲಿ ಒಪ್ಪಿಕೊಳ್ಳುವಂತದ್ದು 5
6. ಶಕುಂತಲ ಮೊದಲಕ್ಷರ ಕಳೆದುಕೊಂಡಾಗ ದಂತಕತೆಯ ರಾಜ್ಯವಾಗಬಹುದು 3
8. ನಡೆದುಹೋದುದರ ಬಗ್ಗೆ ದೀರ್ಘವಾಗಿ ಆಲೋಚಿಸು 3
10. ಕೂಸುಹುಟ್ಟುವ ಮುಂಚೆ ಹೆಣೆಯುವ ಟೋಪಿ ಹಿಂದುಮುಂದಾಗಿದೆ 3
11. ವಂದನೆಗೆ ಪಾತ್ರನಾದವ 3
12. ಸರ್ವವ್ಯಾಪಿ ಸೂರ್ಯನೇ ಜಗದೊಡೆಯ 3
13. ಹೂವಿನ ಹಾರದಲ್ಲಿ ಸೇರುವ ಸುವಾಸಿತ ಎಲೆ 3
15. ಕಮ್ಮಿ ಅಂಗಿ ತೊಟ್ಟು ಕಪಿಚೇಷ್ಟೆ ಮಾಡುವವ 3
18. ಹಂತ ಹಂತವಾಗಿ ಕೊಲ್ಲುವವ 3
20. ಸಿರಿ ಸಂಪತ್ತುಗಳ ಭಾಗ್ಯ 3
23. ಹೆಗ್ಗಳಿಕೆಯ ಪ್ರಾಚೀನ ವಿಶ್ವವಿದ್ಯಾಲಯ 3
24. ಗುರಿಯಿಟ್ಟು ಸುಡುವ ತುಪಾಕಿ 3
25. ಮನದಲ್ಲಿರುವ ಮನ್ಮಥ 3
26. ದ್ರವದಲ್ಲಿ ಮುಳುಗಿದವನಿಗೆ ಕಣ್ಣೂ ಕಾಣದು 3
28. ಹಿಂದಿಯವ ಹಾಕುವ ಸೌದೆ 3
30. ಸದಾ ವಿಷ್ಣುವಿನ ಸ್ಮರಣೆ ಆಲೋಚನೆ 5
31. ಅಕ್ಕನ ಗಂಡನ ಆಂತರ್ಯದ ಕೂಡಲು 5

## ಪದಬಂಧ ಉತ್ತರ -2867

**ಮೇಲಿಂದ ಕೆಳಕ್ಕೆ**

1.ಗೋಪಿಚಂದನ 2.ಸುರಂಗದ್ವಾರ 3.ಭಯಕಾರಕ 4.ರವಿಶಂಕರ 5.ಸಾರಿಕಾ 7.ಸುಫಲ 10.ರಸಾಲ 11.ಸುಲಿಪಾ 13.ಮಜನು 14.ಹರಕು 15.ಬಾಹ್ಯಬದುಕು 16.ಗೋಮುಖ 17.ಲಲಿತಕಲೆ 18.ಮತಗಣನೆ 19.ಜಗಳ 20.ಲಕ್ಷದೇಗುಲ

**ಎಡದಿಂದ ಬಲಕ್ಕೆ**

1.ಗೋಲಿಹಾರಿಸು 3.ಭವಸಾಗರ 3.ಸಾರಂಗ 6.ಕಾಡಿಸು 8.ದ್ವಾಪರ 9.ನರಕಾಸುರ 12.ಕಮಲಹರ 13.ಬಾಲಗೋಪಾಲ 18ಮನುಜಕುಲ 21.ಲಿಖಿತ 22.ಖಚಿತ 23.ಗರಳ 24.ಕುಸುಮಬಾಲೆ 25.ನೆಲಮಂಗಲ

# ಸಮುದಾಯ ಪ್ರಜ್ಞೆಯ ಅಂತಃಕರಣ

ನ. ರವಿಕುಮಾರ

‘ದೇವರಿಗೆ ಬೇಕಾದರೂ ಲಂಚ ಕೊಡಬಹುದು, ಆದರೆ ಅನಿಲ್ ಗೋಕಾಕರಿಗಲ್ಲ’ ಇದು ಮಹಾರಾಷ್ಟ್ರದ ಮಂತ್ರಿಯೊಬ್ಬರು ಹೇಳಿದ ಮಾತು. ಒಮ್ಮೆ ಸರ್ಕಾರದ ಯೋಜನೆಯೊಂದಕ್ಕೆ ಟಿಪ್ಪಣಿಯನ್ನು ಬರೆದು ಕಳಿಸಿದ್ದ ಅನಿಲ್ ಗೋಕಾಕರನ್ನು ಕರೆದು ತಿರಸ್ಕರಿಸಿರುವುದಕ್ಕೆ ವಿವರಣೆ ಕೇಳಿದರಂತೆ ಆ ಮಂತ್ರಿ. ಮುಂದೆ ಉನ್ನತ ಅಧಿಕಾರಿಗಳ ತಂಡ ರಚಿಸಿ ಅಲ್ಲಿಯೂ ಆ ವಿಷಯ ಕುರಿತು ಹಲವು ಪ್ರಶ್ನೆಗಳನ್ನು ಅನಿಲ್ ಗೋಕಾಕರಿಗೆ ಕೇಳಿದರಂತೆ. ಅಲ್ಲಿಯೂ ಅನಿಲ್ ಅವರದು ಖಡಕ್ ಉತ್ತರ. ‘ಇಲ್ಲೇನೋ ನೀವು ಹೇಳುತ್ತೀರಿ. ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನಮ್ಮನ್ನು ಕೇಳಿದರೆ ಏನು ಹೇಳುವುದು?’ ಎಂದರಂತೆ ಮಂತ್ರಿ. ಆದರೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿಯೂ ಅನಿಲ್ ಗೋಕಾಕರು ಕೊಟ್ಟ ವಿವರಣೆಗೆ ಎಲ್ಲರೂ ಒಪ್ಪಿದರಂತೆ. ಸಭೆ ಮುಗಿದು ಹೊರಬರುತ್ತಿದ್ದಂತೆ ಆ ಯೋಜನೆಯ ಫಲಾನುಭವಿಯೊಬ್ಬ ಬಂದು ಅನಿಲ್ ಗೋಕಾಕರ ಕೈಕುಲಕಿ, ಮಂತ್ರಿ ಹೇಳಿದ ಮೇಲಿನ ಮಾತನ್ನು ಉದ್ಧರಿಸಿದನಂತೆ.

ಅನಿಲ್ ಗೋಕಾಕರು ಹುಟ್ಟಿದ್ದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ. ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರ. ಮಹಾರಾಷ್ಟ್ರದ ಕೇಡಲ್‌ನಲ್ಲಿ ಐಎಎಸ್ ಅಧಿಕಾರಿಯಾಗಿ ಸೇವೆ ಪ್ರಾರಂಭಿಸಿ, ಬಳಿಕ ವಿವಿಧ ಹುದ್ದೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದರು.

ಪುಟ್ಟಪರ್ತಿಯ ಸತ್ಯಸಾಯಿ ವಿಶ್ವವಿದ್ಯಾಲಯದಲ್ಲಿ ಕುಲಪತಿ ವಿನಾಯಕ ವಾಙ್ಮಯ ಟ್ರಸ್ಟ್ ಸ್ಥಾಪಕ ಸದಸ್ಯರಾಗಿ, ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದಾರೆ.

ಅವರ ಪ್ರಕಟಿತ ಪುಸ್ತಕಗಳು ‘ಭಾರತದ ಸಿಂಧು ರಶ್ಮಿ ಗೋಕಾಕ್’ (ಕನ್ನಡದಲ್ಲಿ ಸಂಪಾದಿಸಿದ ಕೃತಿ) ಪ್ರೊ.ಯಶೋದಾ ಭಟ್ ಅವರೊಂದಿಗೆ ‘ಇಂಡಸ್ಟ್ರಿಯಲ್ ಸಿಕ್ನೆಸ್’, ‘ಭಾರತದಲ್ಲಿ ದೂರಸಂಪರ್ಕ’, ‘ಕನ್ನಡದ ವಿಸ್ಮಯ ವಿ.ಕೃ.ಗೋಕಾಕ್’, ‘ಇಂಪ್ಯಾಕ್ಟ್ ಆಫ್ ಅರವಿಂದೋ ಆನ್ ವಿ.ಕೃ.ಗೋಕಾಕ್’ ಎರಡು ಸಂಪುಟಗಳಲ್ಲಿ ಪ್ರಕಟವಾಗಿವೆ.

ಅನಿಲ್ ಗೋಕಾಕರು ಯಾವುದೇ ಗೋಜಲಾದ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸುತ್ತಾರೆ. ಕಾರಣ ಅವರು ಆ ಸಮಸ್ಯೆಗಳ ಮೂಲಕ್ಕೆ ಹೋಗುವುದು. ಎಲ್ಲ ಆಯಾಮಗಳ ಹಿನ್ನೆಲೆಯಲ್ಲಿ ವಿವೇಚಿಸುವ ಕಾರಣಕ್ಕೆ ಸುಲಭವಾಗಿ ಜಟಿಲವಾದ ಸಮಸ್ಯೆಗಳನ್ನು ಪರಿಹರಿಸುತ್ತಾರೆ. ಟೆಲಿ ಕಮ್ಯೂನಿಕೇಷನ್ ಹಗರಣ ದೇಶದಾದ್ಯಂತ ಸದ್ದು ಮಾಡಿದಾಗ ಆ ಸಮಸ್ಯೆಯನ್ನು ಪರಿಹರಿಸಲು ಅನಿಲ್ ಗೋಕಾಕರಿಗೆ ಜವಾಬ್ದಾರಿ ನೀಡಿತು. ತಕ್ಷಣ ಅನಿಲ್ ಗೋಕಾಕರು ಮಾಡಿದ ಮೊದಲ ಕೆಲಸವೆಂದರೆ ಮಾರುಕಟ್ಟೆಗೆ ಹೋಗಿ ಟೆಲಿ ಕಮ್ಯೂನಿಕೇಷನ್ ಬಗೆಗೆ ಶಾಲಾ ವಿದ್ಯಾರ್ಥಿಗಳಿಗೆ ಗೊತ್ತುಪಡಿಸಿದ್ದ ಪಠ್ಯಪುಸ್ತಕಗಳನ್ನು ಖರೀದಿಸಿ ಅಧ್ಯಯನ ಮಾಡಿದ್ದು. ಮಾರನೆಯ ದಿನ ಗೋಕಾಕರ ಪರಿಶ್ರಮದಿಂದ ಸಮುದ್ರದಷ್ಟು ವಿಸ್ತಾರವಾಗಿದ್ದ ಸಮಸ್ಯೆ ತಾನೇ ತಾನಾಗಿ ಬಗೆಹರಿಯಿತು. ನಾವೆಲ್ಲರೂ ಯಾವಾಗಲೂ ಸಮಸ್ಯೆಯನ್ನು ಸಮುದ್ರದ ವಿಸ್ತಾರತೆಯ ಕಾರಣಕ್ಕೆ ಭಯಪಟ್ಟು ಅಥವಾ ನಮ್ಮ ಕೈಲಿ ಸಾಧ್ಯವೇ ಎಂದು ಅನುಮಾನಿಸುತ್ತೇವೆ. ಆದರೆ ಆ ಸಮುದ್ರ ಕೂಡ ಹನಿಗಳಿಂದ ಕೂಡಿದ ಗುಂಪೆಂದು- ಅದರ ಕಣವನ್ನು ಅರಿತರೆ ಸಮುದ್ರವನ್ನೇ ಅರಿಯಬಹುದೆನ್ನುವುದನ್ನು ಮರೆಯುತ್ತೇವೆ. ಅನಿಲ್ ಗೋಕಾಕರಿಗೆ ಹೀಗೆ ವಸ್ತುಸ್ಥಿತಿಗಳನ್ನು, ಗುಣಸ್ವಭಾವಗಳನ್ನು ಅರಿಯುವ ಸೂಕ್ಷ್ಮಸಂವೇದನಾಶೀಲತೆ ಇದೆ.



ಅನಿಲ್ ಗೋಕಾಕ

> ಉನ್ನತ ಹುದ್ದೆಯಲ್ಲಿದ್ದು ನಿಷ್ಠೆಯಿಂದ ಕೆಲಸ ಮಾಡಿದವರು ಅನಿಲ್ ಗೋಕಾಕ. ಅವರಂತೆ ತಮ್ಮ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಒಂಬತ್ತು ಜನರ ಸಂಕ್ಷಿಪ್ತ ಜೀವನಕಥನ ಹೊಂದಿರುವ ‘ಪ್ರತಿಭೆ ಪರಿಶ್ರಮ ಪರಿಣತಿ’ ಕೃತಿ ಈಚೆಗೆ ಬಿಡುಗಡೆಗೊಂಡಿದೆ.

ಟ್ರಸ್ಟ್ ಸಭೆಗಳಿಗೆ ಪೂರ್ವಸಿದ್ಧತೆ ಇಲ್ಲದೆ ಹೋಗಬಾರದೆನ್ನುವ ವಿಚಾರವನ್ನು ಸಿದ್ಧತೆ ಮಾಡಿಕೊಂಡು ಹೋಗುವಂತೆ ಮೌನವಾಗಿ ಕಲಿಸಿದ್ದಾರೆ. ಪ್ರಶಸ್ತಿಯ ವಿಚಾರ ಪ್ರಸ್ತಾಪಕ್ಕೆ ಬಂದರೆ ಅನಿಲ್ ಅವರು ನಾವು ಸೂಚಿಸಿದ ಹೆಸರುಗಳನ್ನು ಮೊದಲ ಸಭೆಯಲ್ಲಿ ಒಪ್ಪುತ್ತಾರಾದರೂ ತಮ್ಮ ಪರಿಚಿತ ವಲಯದಲ್ಲಿ ಅಭಿಪ್ರಾಯಗಳನ್ನು ಸಂಗ್ರಹಿಸಿಯೇ ಮುನ್ನಡೆಯುತ್ತಾರೆ. ತಮ್ಮ ಅಭಿಪ್ರಾಯವನ್ನು ತಿಳಿಸುವಾಗಲೂ ಬೇರೆಯವರ ಅಭಿಪ್ರಾಯಕ್ಕೆ ಧಕ್ಕೆಯಾಗದ ಹಾಗೆ ನಡೆದುಕೊಳ್ಳುತ್ತಾರೆ.

ಅನಿಲ್ ಗೋಕಾಕರು ದೊಡ್ಡ ಮನೆತನದಿಂದ ಬಂದವರಾದರೂ, ಸರ್ಕಾರದಲ್ಲಿ ಉನ್ನತ ಹುದ್ದೆಯನ್ನು ನಿರ್ವಹಿಸಿದರೂ ನನಗೆ ಅವರ ವ್ಯಕ್ತಿತ್ವದಲ್ಲಿ ಕಾಣುವ ಎರಡು ಪ್ರಮುಖ ಗುಣಗಳೆಂದರೆ: ಒಂದು ಸಮಾಜದ ಸ್ವಾಸ್ಥ್ಯವನ್ನು ಕಾಪಿಡಬೇಕೆಂಬ ಕಾಳಜಿ ಮತ್ತು ಸಮುದಾಯ ಪ್ರಜ್ಞೆಯ ಅಂತಃಕರಣ. ಮತ್ತೊಂದು ವ್ಯಕ್ತಿಯ ಮನೋಧರ್ಮವನ್ನು ಗೌರವಿಸುವುದು. ಇವೆರಡನ್ನೂ ಅವರು ಕೇವಲ ಅಬ್ಬರವಾಗದೆ, ಪ್ರಚಾರದ ಪೋಷಾಕಾಗದೆ ಅಂತರಂಗದ ದೀಪವಾಗಿಸಿಕೊಂಡಿದ್ದಾರೆ.

ಒಮ್ಮೆ ಹಲವರು ಗೋಕಾಕ್ ಪ್ರಶಸ್ತಿಗೆ ವಶೀಲಿ ಮಾಡಿದರು. ಅವರೆಲ್ಲರನ್ನು ಬಿಟ್ಟು ತೋಳ್ಪಾಡಿಯವರನ್ನು ಆಯ್ಕೆ ಮಾಡಿ ‘ಗ್ರಾಮೀಣ ಪ್ರದೇಶದಲ್ಲಿ ಸಹಬಾಳ್ವೆಯ ಕಥನದ ಮೂಲಕ ಸಾಮಾಜಿಕ ಕಾಳಜಿಯನ್ನು ಮೆರೆದ ಕಾರಣದಿಂದ ಆರಿಸಿದ್ದೇವೆ’ ಎಂದು ಹೇಳಲು ಮರೆಯಲಿಲ್ಲ.

ಅನಿಲ್ ಗೋಕಾಕರು ಈಗ 84ಕ್ಕೆ ಕಾಲಿರಿಸಿದ್ದಾರೆ. ಅವರು ಸ್ವಂತಕ್ಕೆ ಮಾಡಿದ ದೊಡ್ಡ ಸಾಧನೆ ಎಂದರೆ ತಂದೆ ಸಾಲದಲ್ಲಿ ಖರೀದಿಸಿದ ಮನೆಯಲ್ಲಿ ಒಂದು ಮಹಡಿಯನ್ನು ಕಟ್ಟಿದ್ದು. ಅರ್ಧ ಶತಮಾನ ಕಂಡ ಮನೆಯನ್ನು ಈಚೆಗೆ ರಿಪೇರಿ ಮಾಡಿಸಿಕೊಂಡದ್ದು.

ಗೋಕಾಕರಂತೆ ತಮ್ಮ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಒಂಬತ್ತು ಜನರ ಸಂಕ್ಷಿಪ್ತ ಜೀವನಕಥನ ‘ಪ್ರತಿಭೆ ಪರಿಶ್ರಮ ಪರಿಣತಿ’ ಪುಸ್ತಕದಲ್ಲಿದ್ದು ಈಚೆಗೆ ಬಿಡುಗಡೆಯಾಗಿದೆ. ಈ ಸಂಪುಟವನ್ನು ಅನಿಲ್ ಗೋಕಾಕ್ ಅವರಿಗೆ ಗೌರವ ಗ್ರಂಥವಾಗಿ ರೂಪಿಸಿದೆ. ಇವರು ಮಾತ್ರ ಅಲ್ಲ; ಇವರಂಥ ಸಾವಿರಾರು ಜನರಿದ್ದಾರೆ. ಅವರಲ್ಲಿ ನಮ್ಮ ಕೈಗೆ ಸಿಕ್ಕಷ್ಟು ರೂವಾರಿಗಳ ಕಥನಗಳು ಇಲ್ಲಿವೆ. ಇಂಥ ಯೋಚನೆಯನ್ನು ಕನಸನ್ನು ತೀಕ್ಷ್ಣ ಮನಸ್ಸಿನ ಮುರಳೀಧರನ್ ಅವರು ಅಕ್ಷರ ರೂಪಕ್ಕಿಳಿಸಿರುವುದು ದೊಡ್ಡ ಸಾಧನೆಯೇ ಸರಿ. ಮುಂದಿನ ಯುವ ಜನಾಂಗಕ್ಕೆ ಈ ಪುಸ್ತಕ ಕೈಮರವಾದರೆ ಅದಕ್ಕಿಂತ ದೊಡ್ಡ ಸಮಾಧಾನ ಬೇರೊಂದಿಲ್ಲ.

## ಮೊದಲ ಓದು

# ನಕ್ಸಲರ ನೆಲದಲ್ಲಿನ ಕಥನ


**ರಾಮಾಯಣದಲ್ಲಿ** ಉಲ್ಲೇಖಿಸಿರುವ ದಂಡಕಾರಣ್ಯದ ಹೆಸರನ್ನು ಬಹಳಷ್ಟು ಜನರು ಕೇಳಿರುತ್ತಾರೆ. ಆದರೆ ಇಂದು ಅದೇ ದಂಡಕಾರಣ್ಯದಲ್ಲಿ ಶಸ್ತ್ರಾಸ್ತ್ರಗಳಿಂದ ಸಿಡಿದ ಗುಂಡಿನ ಸದ್ದು ಎದೆ ನಡುಗಿಸುತ್ತದೆ. ಪ್ರಭುತ್ವ ಮತ್ತು ನಕ್ಸಲರ ನಡುವಿನ ಘರ್ಷಣೆಯಲ್ಲಿ ಕಾಡು ಸೊರಗುತ್ತಿದೆ. ಅಲ್ಲಿನ ಜನರ ಜೀವನ ನಷ್ಟವಾಗುತ್ತಿದೆ. ಹಲವು ರಾಜ್ಯಗಳಲ್ಲಿ ಹರಡಿಕೊಂಡಿರುವ ಈ ಕಾಡು ಕಳೆದ ನಲವತ್ತು ವರ್ಷಗಳಲ್ಲಿ ಸುಡುಗಾಡಾಗಿ ಬದಲಾಗುತ್ತಾ ಬಂದಿತ್ತು. ಇಂಥ ಕಾಡಿನೊಳಗೆ ಸಂಚರಿಸಿ, ಗುಂಡು ಸಿಡಿದ ಬಂದೂಕು ಹಾಗೂ ಅದಕ್ಕೆ ಬಲಿಯಾದವರ ಸ್ಥಿತಿಯನ್ನು ಅರಿಯುವ ಪ್ರಯತ್ನವನ್ನು ಲೇಖಕ ಆಶುತೋಷ್ ಭಾರದ್ವಾಜ್ ಅವರು ‘ದಿ ಡೆತ್ ಸ್ಕ್ರಿಪ್ಟ್’ ಎಂಬ ಈ ಹಿಂದಿ ಕೃತಿಯಲ್ಲಿ ಮಾಡಿದ್ದರು.

ಅದೇ ಕೃತಿಯನ್ನು ಕಾರ್ತಿಕ್ ಆರ್. ಅವರು ‘ಸತ್ತವರ ಸೊಲ್ಲು’ ಎಂಬ ಶೀರ್ಷಿಕೆಯೊಂದಿಗೆ ಕನ್ನಡಕ್ಕೆ ಅನುವಾದಿಸಿದ್ದಾರೆ. ಶರಣಾದ ನಕ್ಸಲ್ ಒಬ್ಬ ತನ್ನ ಹಳೆಯ ಕಾಮ್ರೆಡ್‌ಗಳಿಂದಲೇ ಹತನಾದ ನಂತರ, ‘ನನ್ನ ಮೇಡಂ’ ಎಂಬುವವರಿಗೆ ಬರೆಯುವ ಕಾಲ್ಪನಿಕ ಪತ್ರದ ಮೂಲಕ ಈ ಕೃತಿ ಆರಂಭವಾಗುತ್ತದೆ.

ಹಾಗೆಯೇ, ‘ದೇಶದ ಸೇನೆ ಯುದ್ಧದಲ್ಲಿ ಗೆಲ್ಲದಿದ್ದರೆ, ಅದು ಸೋತಿತೆಂದೇ ಅರ್ಥ; ಆದರೆ ಗೆರಿಲ್ಲಾ ಸೇನೆ ಯುದ್ಧದಲ್ಲಿ ಸೋಲದಿದ್ದರೆ, ಅದು ಗೆದ್ದಂತೆಯೇ ಲೆಕ್ಕ’ ಎಂದು ಬರೆಯುವ ಮೂಲಕ ಕೃತಿ ಅಂತ್ಯಗೊಳ್ಳುತ್ತದೆ. ಇದರ ನಡವಿನ ಪೂರ್ವ ಕಥನ, ಉತ್ತರ ಕಥನ ಹಾಗೂ ನಡುವಿನ ಏಳು ಅಧ್ಯಾಯಗಳಲ್ಲಿ ಒಂದು ದಟ್ಟ ವಿಷಾದವು ಮೌನವಾಗಿ ಹರಿಯುತ್ತಾ ಸಾಗುತ್ತಿರುವುದನ್ನು ಗಮನಿಸಬಹುದು.

ಇದರಲ್ಲಿ ಅಸಹಾಯಕತೆ, ಕಥೆ ಹೇಳಲೇಬೇಕಾದ ಒತ್ತಡ, ಅಂತಿಮವಾಗಿ ಇದರ ಸಾರ್ಥಕತೆ ಏನು ಎಂಬ ಪ್ರಶ್ನೆಯನ್ನೂ ಲೇಖಕರು ದಾಖಲಿಸಿದ್ದಾರೆ. ಈ ಕೃತಿ ಕೇವಲ ನಕ್ಸಲ್ ಕಥನವಾಗಿಯಲ್ಲ, ಬದಲಿಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಅರಣ್ಯದಂಚಿನ ಆದಿವಾಸಿಗಳ ಬದುಕು, ಅತಂತ್ರಗೊಳ್ಳುತ್ತಿರುವ ಬದುಕಿನ ಕಥನವನ್ನು ಹೃದಯಕ್ಕೆ ತಟ್ಟುವಂತೆ ಲೇಖಕರು ಹೇಳಿದ್ದಾರೆ.

ಆಶುತೋಷ್ ಅವರ ಹಿಂದಿಯ ಕೃತಿ ಸಾಕಷ್ಟು ಮೆಚ್ಚುಗೆ ಪಡೆದಿದೆ. ಜತೆಗೆ ಹಲವು ಪ್ರಶಸ್ತಿಗಳನ್ನೂ ಪಡೆದಿದೆ. ನಕ್ಸಲ್ ನಾಡಿನ ಮರೀಚಿಕೆಗಳನ್ನೊಳಗೊಂಡ ಕಥನಗಳ ಕನ್ನಡ ಅವತರಣಿಕೆಯೂ ಅಷ್ಟೇ ಸರಳವಾಗಿ, ಆಪ್ತವಾಗಿದೆ.




ಪು: 344 ₹380

**ಸತ್ತವರ ಸೊಲ್ಲು**
ಹಿಂದಿ ಮೂಲ: ಆಶುತೋಷ್ ಭಾರದ್ವಾಜ್
ಕನ್ನಡಕ್ಕೆ: ಕಾರ್ತಿಕ್ ಆರ್.
ಪ್ರ.: ಛಂದ ಪುಸ್ತಕ, ಬೆಂಗಳೂರು.
ಸಂ: 98444 22782



## ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

### ಕರ್ಬಿತ್ತರ

ಕರ್ಬಿತ್ತರ (ನಾ). ಕಪ್ಪನೆಯ ಆವರಣ; ಕರಿಯ ಹರಹು; ಕತ್ತಲೆಯ ವಿಸ್ತಾರ (ಕರಿದು + ಬಿತ್ತರ)

ಅಯೋಧ್ಯೆಯಲ್ಲಿ ಪುತ್ರಶೋಕದಿಂದ ದಶರಥ ಮೃತ್ಯುವಶನಾಗುತ್ತಾನೆ. ಆ ರಾತ್ರಿ ಸೋದರ ಮಾವನ ಕೇಕಯಪುರದಲ್ಲಿ ಭರತನಿಗೆ ಬಿದ್ದ ಕನಸನ್ನು ಕವಿ ವರ್ಣಿಸುವಾಗ ‘ಕರ್ಬಿತ್ತರ’ ಪದ ರೂಪಿಸಿದ್ದಾರೆ.

ಅದು ಅಯೋಧ್ಯೆಯ ಅರಮನೆಗೆ ಆವರಿಸಿದ್ದ ಅಮಂಗಳದ ಕರಿಯ ಹರಿಹನ್ನು (ಕರಿ = ಅಶುಭ; ಕಳಂಕ; ಅಮಂಗಳ) ದೊರೆಯಿಲ್ಲವಾಗಿ ಕತ್ತಲೆಯಲ್ಲಿ ಹುದುಗಿಹೋದ ಕಪ್ಪನೆಯ ಆವರಣವನ್ನು, ದುಃಖದಿಂದುಂಟಾದ ಕತ್ತಲೆಯ ವಿಸ್ತಾರವನ್ನು ಧ್ವನಿಸುತ್ತದೆ.

**ತತ್ತಳಿಸಿ ನೋಡುತಿರ್ದಂತೆ**
**ಪಜ್ಜಳಿಸುತರಿಲೊಂದು**
**ಬಾನ್‌ಪಟದೊಳುರಿದುರಿದು**
**ಕರ್ಬಿತ್ತರಕೆ ಬೆಂಕೆಗೆರೆಯ ಚಿತ್ತಾರಮಂ**
**ಮೆತ್ತಿ ಬರೆದರಮನೆಯ ಕತ್ತಲೊಳ್**
**ಹುದುಗಿರ್ದ**
**ವಸ್ತುಗಳ್ಗಿತ್ತು ನೆಳಲಂ, ಜವಂಜವದಿಂದೆ**
**ಮರೆಯಾಯ್ತು ಮುಳುಗಿ.**

### ನೀಳುಲಿ

ನೀಳ್, ನೀಳು(ಕ್ರಿ). ಉದ್ದವಾಗು; ನಿಡಿದಾಗು; ನೀಳವಾಗು

ಉದ್ದವಾದ ದಳ ನೀಳ್ದೆಸಳ್, ನಿಡಿದಾದ ದೇಹ ನೀಳ್ಒಡಲ್ ಆಗಿ ಕಾವ್ಯಗಳಲ್ಲಿ ಪ್ರಯೋಗವಾಗಿವೆ. ಕುವೆಂಪು ಅವರು ‘ಪೊಂಗುಳಿ’ ಪಕ್ಷಿಯ ನೀಳವಾದ ಉಲಿತವನ್ನು ‘ನೀಳುಲಿ’ ಎಂದು ಕರೆದು ಹೀಗೆ ಪ್ರಯೋಗಿಸಿದ್ದಾರೆ:

**‘ಇಂಪುದನಿಯ ಸರಳಮಾಲೆ,**
**ಚೀರುವದರ ನೀಳುಲಿ!’**

---

# ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



## ಡಣ್ಣ ಚಕ್ಕು ಕೀಳ್ರಸ್ಸು ಕಥೆಯ

## ಗುಂಡನ ಪ್ಯಾರಾ ಜಂಪಿಂಗ್

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಪ್ಯಾರಾ ಜಂಪಿಂಗ್ ಮಾಡಲು ಹೆಲಿಕಾಪ್ಟರ್ ಏರಿ ಆಕಾಶದೆತ್ತರ ತಲುಪಿದ್ದ. ನಿಗದಿತ ಎತ್ತರಕ್ಕೆ ಹೆಲಿಕಾಪ್ಟರ್ ತಲುಪಿದ ಕೂಡಲೇ ಗುಂಡ ಧುಮುಕಿದ. ನೆಲ ಕಾಣಿಸುತ್ತಿದ್ದಂತೇ ಪ್ಯಾರಾಚೂಟ್ ಹಗ್ಗವನ್ನು ಗುಂಡ ಎಳೆದ. ಪ್ಯಾರಾಚೂಟ್ ತೆರೆದುಕೊಂಡಿತು. ಗಾಳಿಯಲ್ಲಿ ತೇಲುತ್ತಾ ನಿಧಾನವಾಗಿ ಭೂಮಿಯತ್ತ ಬಂದ. ಆಕಾಶದಲ್ಲಿ ಏನೋ ಬರುತ್ತಿರುವುದನ್ನು ಗಮನಿಸಿದ ಅಲ್ಲೇ ಇದ್ದ ಬೀದಿ ನಾಯಿಗಳು ಜೋರಾಗಿ ಬೊಗಳುತ್ತಾ, ಗುಂಡ ಇಳಿಯುವ ಸ್ಥಳದಲ್ಲೇ ಗುಂಪಾಗಿ ಸೇರಿಕೊಂಡವು. ಇದನ್ನು ಕಂಡು ಗುಂಡ ಹೆದರಿಕೊಂಡ.




## ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರ ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ

| ಅಕ್ಷರ ಪಟ್ಟಿ | | | |
|---|---|---|---|
| ಗು | ತೋ | ಚು | ಸಂ |
| ಪ | ವಾ | ಅ | ಜ |
| ನಿ | ಸೋ | ಕೊ | ಮೋ |

**1**

| | | |
|---|---|---|
| | ಟು | ಕು |
| | ಟು | ಕು |

**2**

| | | |
|---|---|---|
| | ರಿ | ಕೆ |
| | ರಿ | ಕೆ |

**3**

| | | |
|---|---|---|
| | ಯ | ಮ |
| | ಯ | ಮ |

**4**

| | | |
|---|---|---|
| | ಳ | ಲು |
| | ಳ | ಲು |

**5**

| | | |
|---|---|---|
| | ರ | ಡಿ |
| | ರ | ಡಿ |

**6**

| | | |
|---|---|---|
| | ಹಿ | ನಿ |
| | ಹಿ | ನಿ |

## ಗಣಿತದಲ್ಲಿ ಗರ್ದಿ ಗಮ್ಮತ್ತು

### 7ರಿಂದ ಭಾಗ ಹೋಗುವುದೇ? ತಾಳೆ ನೋಡುವುದು

ಯಾವುದೇ ಅಂಕಿ ಸಂಖ್ಯೆಗಳನ್ನು ಬಲಗಡೆಯಿಂದ ಎಡಕ್ಕೆ ಮೂರು ಅಂಕಿಗಳ ಸಮೂಹದಲ್ಲಿ ವಿಂಗಡಿಸಿರಿ. ಬಲಗಡೆಯಿಂದ ಎಡಕ್ಕೆ + ಮತ್ತು – ಚಿಹ್ನೆಗಳನ್ನು ಬಳಸಿರಿ. ಹೀಗೆ ಬಂದ ಉತ್ತರವು 7ರಿಂದ ಭಾಗಿಸಲ್ಪಡುತ್ತಿದ್ದರೆ ಮೂಲ ಸಂಖ್ಯೆಯೂ ಕೂಡಾ 7ರಿಂದ ಭಾಗಿಸಲ್ಪಡುವುದೆಂದು ತಿಳಿಯಬೇಕು.

ಉದಾ: **14294863492/7**

**-14+294-863+492=-91**

ಇನ್ನೊಂದು: **147689500**

**+147-689+500=42**

**=91** ಹಾಗೂ **42**ನ್ನು **7**ರಿಂದ ಭಾಗಿಸಬಹುದು. ಆದ್ದರಿಂದ ಮೇಲಿನ ಎರಡೂ ಸಂಖ್ಯೆಗಳು **7**ರಿಂದ ಪೂರ್ಣ ಭಾಗ ಹೋಗುತ್ತವೆ ಎಂದು ತಿಳಿಯಿರಿ.

## ಸಿನಿಪದ ಶೋಧ

ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಲ್ಲಿ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಂದು ರೋಗದ ಹೆಸರು ಹುಡುಕಿ.

1.ಹೊಸಬೆಳಕು

..............................

2.ಮಕ್ಕಳಿರಲವ್ವ ಮನೆತುಂಬ

..............................

3.ಮರೆಯದ ದೀಪಾವಳಿ

..............................

4.ಆಕಾಶ

..............................

5.ತಾಯಿ ದೇವರು

..............................

6.ಆಲೆಮನೆ

..............................

## ಗಾದೆ ಗುರುತಿಸಿ

ಇಲ್ಲಿ ಕೊಟ್ಟಿರುವ ಗಾದೆಯೊಂದರ ಎರಡು ಪದಗಳನ್ನು ಉಪಯೋಗಿಸಿಕೊಂಡು ಇಡೀ ಗಾದೆ ಮಾತನ್ನು ಗುರುತಿಸಿ

| | | |
|---|---|---|
| 1 | ಆಕಳು-ಹಾಲು | |
| 2 | ಅಕ್ಕ-ಅಮವಾಸೆ | |
| 3 | ಅಡಿಕೆ-ಆನೆ | |
| 4 | ಆರು-ಮೂರು | |
| 5 | ಎಳಿ-ಹಚಡ | |
| 6 | ಸತ್ಯ-ಸುಳ್ಳು | |
| 7 | ಎತ್ತು-ಕೋಣ | |
| 8 | ಕಬ್ಬು-ಹಾಲು | |
| 9 | ಮೊಸರು-ಕಲ್ಲು | |
| 10 | ಅಮೃತ-ವಿಷ | |

## ಹಳ್ಳಿಗರ ಹಳ್ಳಿನ ಆಟ ಜಾಣಪದ ಜಾಣಗಣಿತ

ಇಲ್ಲಿ ಕೊಟ್ಟಿರುವ 6X6 ಚೌಕಗಳಲ್ಲಿ ಎಡದಿಂದ ಬಲಕ್ಕೆ ನೋಡಿದರೂ, ಮೇಲಿನಿಂದ ಕೆಳಕ್ಕೆ ನೋಡಿದರೂ ಹಾಗೂ ಮೂಲೆಯಿಂದ ಮೂಲೆಗೆ ನೋಡಿದರೂ ಕೇವಲ ಮೂರು ಹಳ್ಳು(ಹರಳು)ಕಾಣಬೇಕು. ಹೇಗೆ ಹೊಂದಿಸುವಿರಿ ಪ್ರಯತ್ನಿಸಿ.
ಹರಗಳುಗಳು:

| | | | | | |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |

**ಕಳೆದ ಸಂಚಿಕೆಯ ಸರಿ ಉತ್ತರಗಳು**

**ಪ್ರಾಸಪದಬಂಧ:** 1.ಗೆಣಸು-ಮೆಣಸು 2.ಚೇತನ-ಪತನ 3.ಕಮಲ-ಕೋಮಲ 4.ಜಳಕ-ಪುಳಕ 5.ಕೀಚಕ-ವಂಚಕ 6.ಸಾಗರ-ನಾಗರ
**ರಹಸ್ಯಪದ ಶೋಧ:** ಬಾಲಗಂಗಾಧರ ತಿಲಕ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

### ಸರಿ ಉತ್ತರ ಮುಂದಿನ ವಾರ..


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

### ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



**ಸಂಕರ್ಷಣ್ ವಿ.ಡಿ.**
ನವನಗರ




**ನನಸು.ಎ.ಗೌಡ**
ತುರುವೇಕೆರೆ



**ಸೃಷ್ಟಿ ಗೌಡರ**
ಕುಷ್ಟಗಿ



**ಸೃಜನಾ ಟಿ.ಆರ್.**
ಹೊಸಪೇಟೆ



**ಜ್ಞಾನವಿ ಎಸ್.**
ಗುಬ್ಬಿ



**ಚಿನ್ಮಯ್ ಟಿ.ಎ.**
ಹಾಸನ

# ಕಡಲತೀರದ ಕಾಲ್ನಡಿಗೆ ಶಿಲ್ಪ ಕಲಾಕೃತಿಗಳ ಅಭಿವ್ಯಕ್ತಿ

ಸಿಡ್ನಿ ನಗರದಲ್ಲಿ ಬಾಂಡೈ ಬೀಚ್‌ನಿಂದ ತಮರಮಾ ಬೀಚ್‌ವರೆಗೆ ಸುಮಾರು ಎರಡು ಕಿಲೋಮೀಟರ್ ಉದ್ದದ ಹಾದಿಯಲ್ಲಿ ಸೃಷ್ಟಿಯಾಗಿರುವ ಕಲಾಕೃತಿಗಳು ಉಸುರುವ ವಿಷಯಗಳು ಮನಸ್ಸಿಗೆ ನಾಟುವಂಥದ್ದು.

ಸಿ.ಜಿ. ಮಂಜುಳಾ

ಆಸ್ಟ್ರೇಲಿಯಾದ ಸಿಡ್ನಿ ನಗರದಲ್ಲಿ ಬಾಂಡೈ ಕಡಲ ಕಿನಾರೆಯಲ್ಲಿ ಶಿಲ್ಪ ಕಲಾಕೃತಿಗಳ ಪ್ರದರ್ಶನ ಇರುವುದು ತಿಳಿದಾಗ ಕುತೂಹಲ ಮೂಡಿತು. ಅಕ್ಟೋಬರ್ 18 ರಿಂದ ನವೆಂಬರ್ 4ರವರೆಗೆ ಈ ವರ್ಷ 'ಸ್ಕಲ್ಪ್ಚರ್ ಬೈ ದಿ ಸೀ' (ಕಡಲ ತೀರದಲ್ಲಿ ಶಿಲ್ಪ ಕಲಾಕೃತಿ) ಹೆಸರಿನ ಉಚಿತ ಸಾರ್ವಜನಿಕ ಪ್ರದರ್ಶನ ಆಯೋಜಿಸಲಾಗಿತ್ತು.

ಬಾಂಡೈ ಬೀಚ್‌ನಿಂದ ತಮರಮಾ ಬೀಚ್‌ವರೆಗೆ ಸುಮಾರು ಎರಡು ಕಿಲೋಮೀಟರ್ ಉದ್ದದ ಹಾದಿಯಲ್ಲಿ ವಿವಿಧ ವಸ್ತುಗಳಿಂದ ಸೃಷ್ಟಿಯಾದ ಕಲಾಕೃತಿಗಳು, ಇನ್‌ಸ್ಟಾಲೇಷನ್‌ಗಳನ್ನು ಕಣ್ಣು ತುಂಬಿಕೊಳ್ಳುತ್ತಾ ನಡೆಯುತ್ತಾ ಸಾಗಿದಾಗ ಮೂಡಿದ್ದು ಬೆರಗಿಗಿಂತ ಹೆಚ್ಚಾಗಿ ಸಮ್ಮಿಶ್ರ ಭಾವಗಳು. ನಾವು ಹೋಗಿದ್ದು ಭಾನುವಾರದ ದಿನವಾದ್ದರಿಂದ ಬೀಚ್‌ನಲ್ಲಿ ವಿಹರಿಸುವ ವಾರಾಂತ್ಯದ ಜನಜಂಗುಳಿ ದಟ್ಟವಾಗಿತ್ತು. ಹಾಗೆಯೇ ಕಲಾಕೃತಿಗಳ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವವರ ಭರಾಟೆಯ ನಡುವೆಯೂ ಕಲಾಕೃತಿಗಳನ್ನು ಗಂಭೀರವಾಗಿ ಅವಲೋಕಿಸಿದಾಗ ಸಮಕಾಲೀನ ಸ್ಪಂದನಗಳಿಗೆ ದೊರೆತಿರುವ ಕಲಾಭಿವ್ಯಕ್ತಿಗಳು ಮನಸ್ಸಿಗೆ ನಾಟಿತು.

ಬಾಂಡೈ ಬೀಚ್‌ನಿಂದ ತಮರಮಾ ಬೀಚ್‌ವರೆಗಿನ ನಡಿಗೆ ವರ್ಷದ ಯಾವುದೇ ಸಮಯದಲ್ಲೂ ಒಂದು ಸುಂದರ ಅನುಭವ. ಕಳೆದ ವರ್ಷದ (2023) ಚಳಿಗಾಲದಲ್ಲಿ ಇದೇ ಕಡಲ ತೀರದ ಬಾಂಡೈ ಬೀಚ್‌ನಿಂದ ಬ್ರಾಂಟೆ ಬೀಚ್‌ವರೆಗೆ ಕಾಲ್ನಡಿಗೆಯಲ್ಲಿ ಸಾಗುತ್ತಾ ಪ್ರಕೃತಿಯ ಸೊಬಗನ್ನು ಆಸ್ವಾದಿಸಿದ ನೆನಪು ಹಸಿರಾಗಿತ್ತು. ಪೆಸಿಫಿಕ್ ಸಾಗರದ ನೀಲ ಹರಹಿನ ವಿಸ್ತಾರವಾದ ತಿಳಿಜಲದ ತೀರಗಳಲ್ಲಿ ಬಿಳಿನೊರೆಯಂತೆ ಉಕ್ಕಿ ಬರುತ್ತಲೇ ಇರುವ ಅಲೆಗಳ ಸೊಬಗು ಮನಸೂರೆಗೊಳ್ಳುವಂತಹದ್ದು. ಆದರೆ, ಈ ಬಾರಿ, ಇದರ ಜೊತೆಗೇ ಕಲಾಕೃತಿಗಳು ಹಾಗೂ ಇನ್‌ಸ್ಟಾಲೇಷನ್‌ಗಳ ವೀಕ್ಷಣೆ ನೀಡಿದ ಅನುಭವ ಭಿನ್ನವಾದದ್ದು. ಕಡಲದಂಡೆಯ ವಿಹಾರದ ಜತೆ ಜತೆಗೇ ಕಲೆಯನ್ನು ಜನಸಾಮಾನ್ಯರ ಗ್ರಹಿಕೆಯ ಭಿತ್ತಿಗೆ ಇಳಿಸುವ ಯತ್ನದಂತಿತ್ತು ಇದು.

1997ರಲ್ಲಿ ಸಮುದ್ರದಂಡೆಯಲ್ಲಿ 3ಡಿ ಶಿಲ್ಪ ಕಲಾಕೃತಿಗಳ ಈ ಪ್ರದರ್ಶನ ಆರಂಭವಾದಾಗ ಅದು ಕೇವಲ ಒಂದು ದಿನದ ಕಾರ್ಯಕ್ರಮವಾಗಿತ್ತು. ಪ್ರತಿ ವರ್ಷ ನಡೆಸಲಾಗುವ ಈ ಶಿಲ್ಪ ಕಲಾಕೃತಿ ಪ್ರದರ್ಶನವು ನಂತರದ ವರ್ಷಗಳಲ್ಲಿ ದೊಡ್ಡದಾಗಿ ಬೆಳೆದಿದ್ದಲ್ಲದೆ ಪ್ರದರ್ಶನದ ದಿನಗಳೂ ಹೆಚ್ಚಾದವು. ವಿಶ್ವದಲ್ಲೇ ಅತಿ ದೊಡ್ಡದಾದ ಶಿಲ್ಪ ಕಲಾಕೃತಿಗಳ ಹೊರಾಂಗಣ ಪ್ರದರ್ಶನವೆನಿಸಿರುವ ಈ ಪ್ರದರ್ಶನದ ಅವಧಿ ಈ ಬಾರಿ ಮೂರು ವಾರಗಳ ಕಾಲ ಇತ್ತು. ಸ್ಥಳೀಯ ಕಲಾವಿದರಷ್ಟೇ ಅಲ್ಲದೆ ಹೊರ ದೇಶಗಳಿಂದಲೂ ಕಲಾವಿದರು ತಮ್ಮದೇ ಖರ್ಚಿನಲ್ಲಿ ಬಂದು ಈ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಾರೆ. ಹೀಗಾಗಿ, 'ಆಸ್ಟ್ರೇಲಿಯಾದಲ್ಲಿ ಶಿಲ್ಪಕಲೆ ಮಾತ್ರವೇ ಜಗತ್ತಿನ ಪ್ರಮುಖ ಕಲಾವಿದರನ್ನು ಆಕರ್ಷಿಸುವಂತಹ ಕಲಾ ಪ್ರಕಾರವಾಗಿದೆ' ಎಂಬುದು ಈ ಸಮುದ್ರ ತೀರದ ಶಿಲ್ಪಕಲಾ ಪ್ರದರ್ಶನದ ಪರಿಕಲ್ಪನೆಯನ್ನು ರೂಪಿಸಿದ ನ್ಯೂ ಸೌತ್ ವೇಲ್ಸ್ ಕಲಾವಿದ ಡೇವಿಡ್ ಹ್ಯಾಂಡ್ಲಿಯ ಅನಿಸಿಕೆ.

ಈ ಬಾರಿ ಭಾರತದ ಎಂಟು ಕಲಾವಿದರು ಹಾಗೂ ಆಸ್ಟ್ರೇಲಿಯಾದಲ್ಲೇ ನೆಲೆಸಿರುವ ಅನಿವಾಸಿ ಭಾರತೀಯ ಸಮುದಾಯದ ಇಬ್ಬರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. ಒಟ್ಟು 16 ದೇಶಗಳ 100 ಕಲಾವಿದರ ಕಲಾಕೃತಿಗಳು ಸಮಕಾಲೀನ ಭಾವ ಪ್ರಪಂಚ ಹಾಗೂ ತಲ್ಲಣ-ತಳಮಳಗಳಿಗೆ ಅಭಿವ್ಯಕ್ತಿ ನೀಡಿದ್ದವು. ಕಾರ್ಪೊರೇಟ್ ಪ್ರಾಯೋಜಕತ್ವ, ಖಾಸಗಿ ಸಹಾಯಧನ, ಕಲಾಕೃತಿಗಳ ಮಾರಾಟದ ಮೇಲಿನ ಕಮಿಷನ್ ಹಾಗೂ ಸರ್ಕಾರದ ಸಹಾಯಧನದ ಮೂಲಕ ಈ ಕಾರ್ಯಕ್ರಮದ ವೆಚ್ಚವನ್ನು ಭರಿಸಲಾಗುತ್ತಿದೆ.

ಎಲ್ಲರಿಗೂ ದೊಡ್ಡ ಕಲಾಕೃತಿಗಳನ್ನು ಮಾಡಲು ಸಾಧ್ಯವಿಲ್ಲ. ಏಕೆಂದರೆ, ದೊಡ್ಡ ಕಲಾಕೃತಿಗಳ ಸೃಷ್ಟಿಗೆ ಹೆಚ್ಚು ಮೂಲಸೌಕರ್ಯಗಳು ಬೇಕು. ಹೀಗಾಗಿಯೇ 2004ರಿಂದ 'ಸ್ಕಲ್ಪ್ಚರ್ ಇನ್ ಸೈಡ್' ಎಂಬ ಹೆಸರಿನ ಒಳಾಂಗಣ ಪ್ರದರ್ಶನವನ್ನೂ ಆರಂಭಿಸಲಾಗಿದೆ. ಚಿಕ್ಕದಾದ ಕಲಾಕೃತಿಗಳು ಅಥವಾ ಹೊರಾಂಗಣದಲ್ಲಿ ಪ್ರದರ್ಶಿತಗೊಂಡ ಕಲಾಕೃತಿಗಳ ಚಿಕ್ಕ ಮಾದರಿಗಳನ್ನು ಈ ಒಳಾಂಗಣ ಪ್ರದರ್ಶನದಲ್ಲಿ ಪ್ರದರ್ಶಿಸಲಾಗುತ್ತಿದೆ.



ಬನಾನಾ ಶಾರ್ಕ್

ಡ್ರ್ಯೂ ಮೆಕ್ಡೊನಾಲ್ಡ್ ಅವರ 'ಶಾರ್ನಾನಾ'(ಬನಾನಾ ಶಾರ್ಕ್)- ಈ ಬಾರಿ ನೋಡುಗರ ಅತಿ ಹೆಚ್ಚಿನ ಮೆಚ್ಚುಗೆ ಪಡೆದ ಕಲಾಕೃತಿಯಾಗಿ, ಬಹುಮಾನಗಳನ್ನೂ ಗಳಿಸಿತು. ಸಿಪ್ಪೆ ಬಿಡಿಸಿದ ಬಾಳೆಹಣ್ಣಿನಿಂದ ಹೊರ ಬರುತ್ತಿರುವಂತಹ ಶಾರ್ಕ್ ಶಿಲ್ಪ ನಮ್ಮ ಅಸ್ತಿತ್ವದ ಅಸ್ತವ್ಯಸ್ತತೆಯನ್ನು ಧ್ವನಿಸುತ್ತದೆ. ಆದರೆ, ಇದು ಬರೀ ಭೀತಿ ಹಾಗೂ ಹತಾಶೆ ಮಾತ್ರ ಧ್ವನಿಸುವುದಿಲ್ಲ. ದಿನನಿತ್ಯದ ಬದುಕಿನ ವಿರೋಧಾಭಾಸಗಳ, ಅತಾರ್ಕಿಕ ವಿಲಕ್ಷಣತೆಗಳಲ್ಲಿ (surreal)ವಿನೋದ, ಸಂತಸ ಕಂಡುಕೊಳ್ಳುವಂತಹದ್ದನ್ನೂ ಇದು ನಿರೂಪಿಸುತ್ತದೆ. ಅಸಂಗತತೆಯಲ್ಲಿ ಜೀವನಪ್ರೀತಿ ಧ್ವನಿಸುವ ಎರಡು ಮೀಟರ್ ಉದ್ದದ ಈ ಕಲಾಕೃತಿಯನ್ನು ರೀಸೈಕಲ್ ಮಾಡಿದ ಪ್ಲಾಸ್ಟಿಕ್, ಕ್ಯಾಲ್ಸಿಯಂ ಕಾರ್ಬೋನೆಟ್, ಸ್ಟೀಲ್ ಹಾಗೂ ಆಕ್ರಿಲಿಕ್ ಪೇಂಟ್ ಬಳಸಿ ನಿರ್ಮಿಸಲಾಗಿದೆ.

'ವಿಮೆನ್ ವೇರ್ ಟ್ರೌಷರ್ಸ್', ಮಹಿಳಾ ಶಿಲ್ಪಿಗಳಿಗೆ ಗೌರವ ನೀಡುವಂತಹ ಯಥಾಸ್ಥಿತಿ ಬದಲಾವಣೆಯ ಆಶಯದ ಕಲಾಕೃತಿ. ಕಲಾವಿದೆಯರಿಗೆ ತೋರಬೇಕಾದ ಸಮಾನತೆ, ಗೌರವ ಇಲ್ಲಿ ವ್ಯಕ್ತ ಎಂದು ಪರ್ತ್ ಮೂಲದ ಕಲಾವಿದೆ ಡೆನಿಸ್ ಪೆಪರ್ ಹೇಳಿಕೊಂಡಿದ್ದಾರೆ. ಅವರ ಕಲಾ ಅಭಿವ್ಯಕ್ತಿಯ ಪರಿಕರ ಅಲ್ಯುಮಿನಿಯಂ. ಹವಾಮಾನ ಬದಲಾವಣೆಯ ಕ್ಲಿಷ್ಟಕರ ಯುಗದಲ್ಲಿ ವಿಶ್ವವೀಗ ಮರುಬಳಕೆ ತತ್ವದೆಡೆ ಸಾಗುತ್ತಿರುವ ಸಂದರ್ಭದಲ್ಲಿ, ದಿನ ನಿತ್ಯದ ಹಲವು ಅಗತ್ಯಗಳಿಗೆ ಮರುಬಳಕೆಯ ಅಲ್ಯುಮಿನಿಯಂ ಮುಖ್ಯವಾಗುತ್ತಿದೆ. ಇಂತಹ ಅಲ್ಯುಮಿನಿಯಂ ಅನ್ನು ಸೃಜನಾತ್ಮಕವಾಗಿ ಬಳಸುವುದೂ ಸಾಧ್ಯ ಎಂಬುದನ್ನು ಕಲಾವಿದರು ತೋರಿಸುತ್ತಿದ್ದಾರೆ.




ವಿಮೆನ್ ವೇರ್ ಟ್ರೌಷರ್ಸ್ ಕಲಾಕೃತಿ

ಭವಿಷ್ಯದ ಪೀಳಿಗೆಗಾಗಿ ಭೂಮಿ, ಸಮುದ್ರಗಳನ್ನು ಕಾಪಿಡಲು, ವಿಶ್ವದಲ್ಲಿ ಐಕ್ಯತೆ ಕಾಪಾಡಲು ನಮ್ಮೆಲ್ಲರ ಪಾತ್ರವಿದೆ ಎಂಬ ಬಗ್ಗೆ ಜಾಗೃತಿ ಮೂಡಿಸುವ ಆಶಯವನ್ನು ವ್ಯಕ್ತಪಡಿಸಿದ್ದು, ನ್ಯೂಜಿಲೆಂಡ್ ಕಲಾವಿದ ಆ್ಯಂಟನ್ ಪೋರ್ಡೆ ಅವರ 'ರಕ್ಷಣೆ' ಕಲಾಕೃತಿ. ಕಾಳಜಿ, ಒಟ್ಟಾಗಿ ಕೆಲಸ ಮಾಡುವುದು ಹಾಗೂ ಪ್ರಕೃತಿ ಕುರಿತಾದ ಪೂಜ್ಯ ಭಾವನೆಯಿಂದ ಭೂಮಿಯನ್ನು ನಿರಂತರವಾಗಿ ಬಳಸಿಕೊಳ್ಳಲು ಸಾಧ್ಯವಾದ ನಮ್ಮ ಪೂರ್ವಿಕರ ವ್ಯವಸ್ಥೆಗಳಿಂದ ಪ್ರೇರಣೆ ಪಡೆದ ಕಲಾಕೃತಿ ಇದು . ಈ ಇನ್‌ಸ್ಟಾಲೇಷನ್ ಬಳಿಯ ನಡಿಗೆ ಅಥವಾ ಕುಳಿತುಕೊಳ್ಳುವುದೂ ನೋಡುಗರಿಗೆ ರಕ್ಷಣಾತ್ಮಕ ಆಲಿಂಗನದ ಅನುಭವ ನೀಡುತ್ತದೆ ಎಂಬುದು ಕಾರ್ಯಕ್ರಮ ಸಂಘಟಕರ ಅಭಿಮತ.

ಪರ್ತ್ ನಗರದ ಬಳಿಯ ಕೊಟೆಸ್ಲೊ ಬೀಚ್‌ನಲ್ಲಿ ಇದೇ ಪ್ರದರ್ಶನವನ್ನು 2005 ರಿಂದ ಆರಂಭಿಸಲಾಗಿದ್ದು ಅಲ್ಲೂ ಪ್ರತಿ ವರ್ಷ ಈ ಪ್ರದರ್ಶನ ನಡೆಯುತ್ತದೆ. ಹಾಗೆಯೇ ತುಂಬಾರುಂಬಾ ಪಟ್ಟಣದ ಬಳಿ ಸ್ನೋಯಿ ವ್ಯಾಲಿ ಡಿಸ್ಟ್ರಿಕ್ಟ್‌ನಲ್ಲಿ 150 ಕಿಲೋಮಿಟರ್ ಉದ್ದದ ಕಾಯಂ ಶಿಲ್ಪ ಹಾದಿಯೊಂದನ್ನು ನಿರ್ಮಿಸಲಾಗಿದೆ. ಇದು, 2019-20ರಲ್ಲಿ ಸಂಭವಿಸಿದ ಘೋರ ಕಾಳ್ಗಿಚ್ಚಿನಲ್ಲಿ ವಿನಾಶಗೊಂಡಿದ್ದಂತಹ ಸ್ಥಳ. ಈ ದುರಂತದ ನೆಲೆಯನ್ನು ಈಗ ಮರು ನಿರ್ಮಿಸಿ ಸೃಜನಾತ್ಮಕತೆಯನ್ನು ಅರಳಿಸಿ, ಸಾಂಸ್ಕೃತಿಕ ಪ್ರವಾಸೋದ್ಯಮದ ಆಕರ್ಷಣೆಯಾಗಿಸಿರುವುದು ಪುಟಿದೇಳುವ ಮನುಷ್ಯ ಚೇತನಕ್ಕೆ ಪ್ರತೀಕ.



'ರಕ್ಷಣೆ' ಕಲಾಕೃತಿ



ಭಾರತದ ಶೋವಿನ್ ಭಟ್ಟಾಚಾರ್ಜಿ ಅವರ 'ಮಿಸ್ಟರಿ ಆಫ್ ಲೈಫ್' ಕಲಾಕೃತಿ



ನಗರ ಬದುಕಿನ ಗತಿಗಳ ಕಠೋರತೆ ವಿವರಿಸುವ ದಕ್ಷಿಣ ಕೊರಿಯಾದ ಬ್ಯುಂಗ್ ಕ್ಯು ಕಿಮ್ ಅವರ 'ಸಿಟಿ ಟೈಮ್' ಕಲಾಕೃತಿ

---

## ವೀಣಾ ವರ್ಲ್ಡ್ ಪ್ರವಾಸ ಸ್ಪರ್ಧೆ

ನಿಮ್ಮ ಉತ್ತರಗಳನ್ನು ವೀಣಾ ವರ್ಲ್ಡ್ ವೆಬ್‌ಸೈಟ್‌ನಲ್ಲಿ ಸಲ್ಲಿಸಲು, ಬರುವ ಮಂಗಳವಾರದೊಳಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ. ಉಚಿತ ವೀಣಾ ವರ್ಲ್ಡ್ ಟೂರ್ "ಹೈಲೈಟ್ಸ್ ಆಫ್ ಗುಜರಾತ್" (ಟೂರ್ ಕೋಡ್ – GTSD) ಗೆಲ್ಲಬಹುದಾದ ಅವಕಾಶ ನಿಮ್ಮದಾಗಿಸಿಕೊಳ್ಳಿ. ಅದೃಷ್ಟಶಾಲಿ ವಿಜೇತರ ಹೆಸರನ್ನು 15ನೇ ಡಿಸೆಂಬರ್, 2024 ರಂದು ಪ್ರಕಟಗೊಳ್ಳುವ ಮುಂದಿನ ಲೇಖನದಲ್ಲಿ ಪ್ರಕಟಿಸಲಾಗುವುದು.

1. 'ಮಾಂಬಾ' ಎಂಬುದು ಯಾರ ಅಡ್ಡ ಹೆಸರು?
2. ಪ್ರಪಂಚದ ಅತ್ಯಂತ ದುಬಾರಿ ಖಾದ್ಯ ಯಾವುದು?
3. ಪೆಸಿಫಿಕ್ ಅಗ್ನಿ ವರ್ತುಲದಲ್ಲಿ ಎಷ್ಟು ದೇಶಗಳಿವೆ?
4. ನೈಲ್ ನದಿ ಹುಟ್ಟುವ ಜಾಗ ಯಾವುದು?
5. 'ಫಾಸ್ಟ್ & ಫ್ಯೂರಿಯಸ್' ಸರಣಿಯಲ್ಲಿ ಎಷ್ಟು ಸಿನಿಮಾಗಳಿವೆ?
6. ಸ್ವತಂತ್ರ ಭಾರತೀಯ ಸೇನೆಗೆ ಕಾರಣವಾದ ಯುದ್ಧ ಯಾವುದು?
7. ಅತ್ಯಂತ ದೀರ್ಘಕಾಲ ಜೈಲುಶಿಕ್ಷೆಗೆ ಒಳಗಾದ ಭಾರತದ ಸ್ವಾತಂತ್ರ್ಯ ಹೋರಾಟಗಾರ ಯಾರು?

ಅಕ್ಟೋಬರ್ 27ರ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆ ಅದೃಷ್ಟಶಾಲಿ ವಿಜೇತರು
'ಇಂದೋರ್ ಉಜ್ಜಯನ್ ಮಂಡು'
(ಟೂರ್ ಕೋಡ್ – STUM)
ಕೆಆರ್ ಸುಬ್ರಹ್ಮಣ್ಯ ಸ್ವಾಮಿ
ಮೈಸೂರು

ಅಭಿನಂದನೆಗಳು!

veenaworld.com
Toll-Free: 1800 22 7979
Email: travel@veenaworld.com



ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ADVERTORIAL

## ಬಾಲ್ಕನ್ಸ್ ಅಥವಾ ಬಾಲ್ಟಿಕ್ಸ್?



ಮುಂದಿನ ಬಾರಿ ಎಲ್ಲಿಗೆ ಹೋಗುವುದು? ಈ ಪ್ರಶ್ನೆ ನಿಮಗೆ ಮೂಡಿರಬಹುದು. ನೀವು ಈಗಾಗಲೇ ಸ್ವಿಟ್ಜರ್‌ಲ್ಯಾಂಡಿನ ಪರ್ವತ ಶೃಂಗಗಳು, ಐಫೆಲ್ ಟವರ್, ಇಟಲಿಯ ಅಗ್ರಬ್ಬಿಯಾಟ್ಟ ಪಿಜ್ಜಾದ ಸವಿ, ಸ್ಪೇನಿನ ಫ್ಲಮೆಂಕೊ ನೃತ್ಯ, ಗ್ರೀಸ್‌ನಲ್ಲಿ ದ್ವೀಪ ದ್ವೀಪಗಳ ನಡುವೆ "ಐಲ್ಯಾಂಡ್ ಹಾಪಿಂಗ್" ಇವೆಲ್ಲವನ್ನೂ ಕಂಡು ಮುಂದಿನ ಸ್ಫೂರ್ತಿಯ ತಾಣದ ಹುಡುಕಾಟದಲ್ಲಿದ್ದರೆ ಬಾಲ್ಕನ್ಸ್ ಅಥವಾ ಬಾಲ್ಟಿಕ್ಸ್ ಬಗ್ಗೆ ಆಲೋಚಿಸಬಾರದು? ಇವು ನಿಮಗೆ ಹೊಚ್ಚ ಹೊಸ ಶಬ್ದಗಳಂತೆ ಕೇಳಬಹುದು. ಅಷ್ಟೇ ಏಕೆ, ಈ ಪ್ರದೇಶಗಳು ಬಹುತೇಕರ ಪಾಲಿಗೆ ಈಗಲೂ ಅಜ್ಞಾತ ಸ್ಥಳಗಳೇ ಆಗಿವೆ. ಆದರೆ, ಇವು ಪ್ರತಿಯೊಬ್ಬರಿಗೂ ಸಮ್ಮೋಹನಗೊಳಿಸುವಷ್ಟು ಸಮೃದ್ಧ ಅನುಭಗಳನ್ನು ಕೊಡಮಾಡುತ್ತವೆ ಎಂಬುದು ಮಾತ್ರ ನಿಸ್ಸಂಶಯ.

ಹಾಗಾದರೆ, ಬಾಲ್ಕನ್ಸ್ ಅಥವಾ ಬಾಲ್ಟಿಕ್ಸ್ ಎಂದರೇನು? ಇವೆರಡರ ನಡುವೆ ಗೊಂದಲ ಉಂಟಾಗುವುದು ಸಹಜ. ಈ ಪ್ರದೇಶಗಳಿಗೆ ಪ್ರವಾಸ ಯೋಜಿಸುವ ಮುನ್ನ ಇವೆರಡೂ ದೇಶ ಸಮೂಹಗಳ ನಡುವಿನ ವ್ಯತ್ಯಾಸ ತಿಳಿಯುವುದು ಮುಖ್ಯವಾಗುತ್ತದೆ.

ಇವೆರಡೂ ಕೇಳಲು ಹೆಚ್ಚುಕಮ್ಮಿ ಒಂದೇ ರೀತಿ ಇವೆ. ಆದರೆ, ಇವು ಯುರೋಪಿನಲ್ಲಿರುವ ವಿಭಿನ್ನ ದೇಶ ಸಮೂಹಗಳಾಗಿವೆ. ಬಾಲ್ಟಿಕ್ ಪ್ರದೇಶವು ಯುರೋಪಿನ ವಾಯವ್ಯ ಭಾಗದಲ್ಲಿದ್ದು, ಎಸ್ಟೋನಿಯಾ, ಲಾಟ್ವಿಯ ಮತ್ತು ಲಿಥುವಿನ್ಯಾ ದೇಶಗಳನ್ನು ಒಳಗೊಳ್ಳುತ್ತದೆ. ಇವು ಬಾಲ್ಟಿಕ್ ಸಮುದ್ರದ ಪೂರ್ವ ದಂಡೆಗೆ ಹೊಂದಿಕೊಂಡಿರುವ ದೇಶಗಳು. ಇನ್ನು ಬಾಲ್ಕನ್ಸ್ ಎಂದರೆ ಯುರೋಪಿನ ನೈಋತ್ಯದಲ್ಲಿರುವ ಮೂರು ಪರ್ಯಾಯ ದ್ವೀಪಗಳನ್ನು ಒಳಗೊಂಡಿದೆ. ಅಲ್ಬೇನಿಯಾ, ಬೋಸ್ನಿಯಾ ಮತ್ತು ಹರ್ಜೆಗೋವೆನ, ಬಲ್ಗೇರಿಯಾ, ಕ್ರೊಯೇಷಿಯಾ, ಕಾಸುವ್ಹೊ, ಮ್ಯಾಸಡೋನಿಯ, ಮಾಂಟಿನಿಗ್ರೊ, ರೊಮೇನಿಯಾ, ಸರ್ಬಿಯಾ ಮತ್ತು ಸ್ಲೋವೇನಿಯಾ ಈ ವ್ಯಾಪ್ತಿಯಡಿ ಬರುತ್ತವೆ. ಜೊತೆಗೆ, ಗ್ರೀಸ್ ಮತ್ತು ಟರ್ಕಿಯ ಒಂದಷ್ಟು ಪ್ರದೇಶಗಳು ಕೂಡ ಇದಕ್ಕೆ ಸೇರುತ್ತವೆ. ಈ ವ್ಯತ್ಯಾಸ ತಿಳಿದ ಮೇಲೂ ನಿಮ್ಮ ಪ್ರವಾಸಕ್ಕೆ ಬಾಲ್ಕನ್ಸ್ ಅಥವಾ ಬಾಲ್ಟಿಕ್ಸ್ ಇವೆರಡರ ಪೈಕಿ ಯಾವುದನ್ನು ಆಯ್ಕೆ ಮಾಡಿಕೊಳ್ಳುವುದೆಂಬ ತಾಕಲಾಟ ನಿಮ್ಮನ್ನು ಕಾಡಬಹುದು. ಇವೆರಡೂ ಪ್ರದೇಶಗಳು ಸಮೃದ್ಧ ಚರಿತ್ರೆ, ಸಂಸ್ಕೃತಿಯಿಂದ ಕೂಡಿದ್ದು, ಅನನ್ಯ ಅನುಭವಗಳು, ವಿಸ್ಮಯ ಭೂಪ್ರದೇಶಗಳು ಹಾಗೂ ವೈವಿಧ್ಯಮಯ ಆಹಾರ ಪದ್ಧತಿಗಳನ್ನು ನಿಮಗೆ ಉಣಬಡಿಸುತ್ತವೆ. ಬಾಲ್ಕನ್ ಪ್ರದೇಶದಲ್ಲಾದರೆ ಬೃಹತ್ ಪರ್ವತಗಳು; ಬಾಲ್ಟಿಕ್ ವ್ಯಾಪ್ತಿಯಲ್ಲಾದರೆ ಮಧ್ಯಕಾಲೀನ ವೈಭವ ಹಾಗೂ ಪ್ರಶಾಂತಮಯ ಪ್ರಕೃತಿ; ಆಯ್ಕೆ ಯಾವುದೇ ಆಗಿದ್ದರೂ ನಿಮ್ಮ ಪ್ರವಾಸವಂತೂ ಅವಿಸ್ಮರಣೀಯವಾಗುವುದರಲ್ಲಿ ಎರಡನೇ ಮಾತಿಲ್ಲ.

ನನ್ನಮಟ್ಟಿಗೆ ಹೇಳುವುದಾದರೆ, ಇವನ್ನು ಸಮುದ್ರ ತೀರದ ದೇಶಗಳು ಹಾಗೂ ಪರ್ವತಗಳಿಂದ ಸುತ್ತುವರಿದ ದೇಶಗಳು ಎಂದು ವರ್ಗೀಕರಿಸಲು ಇಷ್ಟಪಡುತ್ತೇನೆ. ಹೀಗೆ ಗುರುತಿಸುವುದು ಅವುಗಳ ಭೂ ಸ್ಥಾನವನ್ನು ಹಾಗೂ ಅವುಗಳ ನಡುವಿನ ವ್ಯತ್ಯಾಸದ ಚಿತ್ರಣವನ್ನು ಸ್ಪಷ್ಟವಾಗಿ ಮನಗಾಣಿಸುತ್ತದೆ. ಹಾಗೆ ನೋಡಿದರೆ, ಈ ದೇಶ ಸಮೂಹಗಳ ಹೆಸರಿನಲ್ಲಿಯೇ ವ್ಯತ್ಯಾಸ ಏನೆಂಬುದು ಕೂಡ ಅಡಗಿದೆ. "ಬಾಲ್ಟಿಕ್ಸ್" ಎಂಬುದು ಬಾಲ್ಟಿಕ್ ಸಮುದ್ರದಿಂದ ಬಂದಿರುವ ಹೆಸರಾಗಿದೆ. ಈ ಸಮುದ್ರವು ಅಟ್ಲಾಂಟಿಕ್ ಸಾಗರದ ಒಂದು ಕವಲು. ಇದು ಸ್ಕ್ಯಾಂಡಿನೇವಿಯಾದಿಂದ ಸಣ್ಣ ದೋಣಿಯೊಂದರಲ್ಲಿ ಹೋಗಬಹುದಾದಷ್ಟು ಸನಿಹದಲ್ಲಿದೆ. ಮತ್ತೊಂದೆಡೆ, "ಬಾಲ್ಕನ್ಸ್" ಎಂಬುದು ಟರ್ಕಿಯ "ಬಾಲ್ಕನ್" ಎಂಬ ಶಬ್ದದಿಂದ ಬಂದಿರುವ ಹೆಸರಾಗಿದೆ. ಟರ್ಕಿ ಭಾಷೆಯಲ್ಲಿ "ಬಾಲ್ಕನ್" ಎಂದರೆ ಪರ್ವತ ಎಂದರ್ಥ. ಇದು ಯುರೋಪಿನ ನೈಋತ್ಯ ಭಾಗದಲ್ಲಿ ಪರ್ವತ ಮಾಲೆಯಂತೆ ಹಬ್ಬಿ ಹರಡಿರುವ ಪ್ರದೇಶವಾಗಿದೆ. ಅಲ್ಬೇನಿಯಾ, ಬೋಸ್ನಿಯಾ, ಹರ್ಜೆಗೋವೆನ, ಬಲ್ಗೇರಿಯಾ, ಕ್ರೊಯೇಷಿಯಾ, ಕಾಸುವ್ಹೊ, ಮಾಂಟಿನಿಗ್ರೊ, ಉತ್ತರ ಮ್ಯಾಸಡೋನಿಯ, ರೊಮೇನಿಯಾ, ಸರ್ಬಿಯಾ ಮತ್ತು ಸ್ಲೋವೇನಿಯಾ ದೇಶಗಳು ಇಲ್ಲಿ ನೆಲೆಯಾಗಿವೆ. ಬಾಲ್ಕನ್ ಪರ್ಯಾಯದ್ವೀಪವು ಮೂರು ಕಡೆಗಳಲ್ಲಿ ಏಡ್ರಿಯಾಟಿಕ್ ಸಮುದ್ರ, ಅಯೋನಿಯನ್ ಸಾಗರ ಮತ್ತು ಈಗನ್ ಸಮುದ್ರಗಳನ್ನು ಗಡಿಯಾಗಿ ಹೊಂದಿದೆ. ಭೌಗೋಳಿಕವಾಗಿ ಇಟಲಿ, ಗ್ರೀಸ್ ಮತ್ತು ಟರ್ಕಿಗೆ ಇದು ನಿಕಟವಾಗಿದೆ.

ಮೊದಲಿಗೆ ಬಾಲ್ಕನ್ಸ್ ವ್ಯಾಪ್ತಿಯ ವಿಶೇಷಗಳನ್ನು ನೋಡೋಣ. ಪ್ರಕ್ಷುಬ್ಧತೆಯಿಂದ ಕೂಡಿದ ಚರಿತ್ರೆ ಇಲ್ಲಿನದಾಗಿದೆ. ವಿವಿಧ ಸಾಮ್ರಾಜ್ಯಗಳು ಮತ್ತು ಸಂಸ್ಕೃತಿಗಳು ಇಲ್ಲಿ ಆಳ್ವಿಕೆ ನಡೆಸಿವೆ. ರೋಮನ್, ಬೈಜಾಂಟೈನ್, ಆಟಮನ್, ಆಸ್ಟ್ರೋ–ಹಂಗೇರಿಯನ್ ಸಾಮ್ರಾಜ್ಯಗಳು ಇವುಗಳಲ್ಲಿ ಕೆಲವು. ಬಾಲ್ಕನ್ ಯುದ್ಧಗಳು ಮತ್ತು ಯುಗೋಸ್ಲಾವ್ ಯುದ್ಧಗಳಂತಹ ಗಮನಾರ್ಹ ಸಂಘರ್ಷಗಳಿಗೆ ಸಾಕ್ಷಿಯಾದ ಪ್ರದೇಶವಿದು. ಇವು ಇಲ್ಲಿನ ಸಾಂಸ್ಕೃತಿಕ ಹಾಗೂ ರಾಜಕೀಯದ ಮೇಲೆ ಪ್ರಬಲ ಪ್ರಭಾವಗಳನ್ನು ಬೀರಿವೆ. ಪ್ರಸ್ತುತ, ಬಾಲ್ಕನ್ನರು ತಮ್ಮ ಕ್ಷಮತೆಗೆ, ಸಾಂಸ್ಕೃತಿಕ ವೈವಿಧ್ಯಕ್ಕೆ ಹಾಗೂ ವೈಭವದ ಪರಂಪರೆಗಳಿಗೆ ಹೆಸರಾಗಿದ್ದಾರೆ. ಮಂತ್ರಮುಗ್ಧಗೊಳಿಸುವ ಸುಂದರ ಭೂಪ್ರದೇಶಗಳು ಇಲ್ಲಿನ ಹೆಗ್ಗುರುತುಗಳಾಗಿವೆ. ಇನ್ನು, ಮೆಗಾ ಹಿಟ್ ಸರಣಿ "ದಿ ಗೇಮ್ ಆಫ್ ಥ್ರೋನ್ಸ್"ನಿಂದ ಹೆಚ್ಚು ಪ್ರಸಿದ್ಧಿಗೆ ಬಂದ ಕ್ರೊಯೇಷಿಯಾದ ಡುಬ್ರೊವ್ನಿಕ್ ನಗರದಲ್ಲಿ ಪ್ರಾಚೀನ ಗೋಡೆಗಳ ಗುಂಟ ಹೆಜ್ಜೆಹಾಕುತ್ತಾ ಚರಿತ್ರೆಯನ್ನು ಮೆಲುಕು ಹಾಕಬಹುದು; ಐತಿಹಾಸಿಕ ಓಲ್ಡ್ ಟೌನ್‌ಅನ್ನು ಅನ್ವೇಷಿಸಬಹುದು; ಏಡಿಯಾಟ್ರಿಕ್ ಕಡಲ ತೀರಗಳಲ್ಲಿ ಕಂಗೊಳಿಸುವ ಪ್ರಪಂಚದ ಪರಿಶುದ್ಧ ಜಲರಾಶಿಯನ್ನು ಕಣ್ತುಂಬಿಕೊಳ್ಳಬಹುದು. ಇಲ್ಲಿ ನೋಡಲೇಬೇಕಾದ ಮತ್ತೊಂದು ತಾಣವೆಂದರೆ ಪ್ಲಿಟ್‌ವಿಜ್ ಲೇಕ್ಸ್ ನ್ಯಾಷನಲ್ ಪಾರ್ಕ್. ಯುನೆಸ್ಕೊ ವಿಶ್ವಪಾರಂಪರಿಕ ತಾಣವೂ ಆದ ಇಲ್ಲಿ ಮನಸೂರೆಗೊಳ್ಳುವ ಹಸಿರು–ನೀಲಿ ಮಿಶ್ರಿತ ವರ್ಣಮಯ ಸರೋವರಗಳು, ಸರಣಿ ಜಲಪಾತಗಳು ಹಾಗೂ ದಟ್ಟ ಹಸಿರಿನ ಅರಣ್ಯವನ್ನು ಆನಂದಿಸಬಹುದು. ಸಾವಿರಾರು ವರ್ಷಗಳ ಹಿಂದೆ ನೈಸರ್ಗಿಕವಾಗಿ ರೂಪುಗೊಂಡ 16 ಪರಸ್ಪರ ಅಂತರ್‌ಸಂಪರ್ಕಿತ ಸರೋವರಗಳ ಬಳಿ ಸುಳಿದಾಡುತ್ತಾ ಮರದ ಕಾಲುದಾರಿಗಳು ಹಾಗೂ ಮರದ ಸೇತುವೆಗಳ ಮೇಲೆ ಅಡ್ಡಾಡಬಹುದು.

ಮಾಂಟಿನಿಗ್ರೊದ "ಕೂಟ"ದಲ್ಲಿ ಪ್ರಾಚೀನ ಕೋಟೆಗೆ ನಡೆದು ಹೋಗಿ ಅಚ್ಚಳಿಯದ ನೆನಪನ್ನು ನಿಮ್ಮದಾಗಿಸಿಕೊಳ್ಳಬಹುದು ."ಕೂಟ" ಕೊಲ್ಲಿಯ ಚಿತ್ತಾಕರ್ಷಕ ಸೊಬಗು ಸವಿಯಬಹುದು. ಬೋಸ್ನಿಯಾ ಮತ್ತು ಹರ್ಜೆಗೋವೆನದ ರಾಜಧಾನಿ ಸರಯಿವೊದಲ್ಲಿ ಲ್ಯಾಟಿನ್ ಬ್ರಿಜ್, ಮೊದಲ ವಿಶ್ವಯುದ್ಧಕ್ಕೆ ಕಾರಣವಾದ ಆರ್ಚ್ ಡ್ಯೂಕ್ ಬಿರುದಾಂಕಿತ ಫ್ರಾಂಜ್ ಫರ್ಡಿನ್ಯಾಂಡ್‌ನ ಹತ್ಯಾ ಸ್ಥಳವನ್ನು ನೋಡಬಹುದು; ಆಟೊಮನ್ ಹಾಗೂ ಆಸ್ಟ್ರೊ–ಹಂಗೇರಿಯನ್ ವಾಸ್ತುಶಿಲ್ಪದ ಅನನ್ಯ ಸಂಯೋಜನೆಗೆ ಪ್ರತ್ಯಕ್ಷ ಸಾಕ್ಷಿಯಾಗಬಹುದು. ಇಲ್ಲಿಗೆ ಹತ್ತಿರದಲ್ಲಿರುವ ಮೋಹ್‌ಸ್ತಾದಲ್ಲಿ ಪಾರಂಪರಿಕ ಡೈವಿಂಗ್ ಸ್ಪರ್ಧೆಗೆ ಹೆಸರಾದ ಸ್ಟಾರಿ ಬ್ರಿಜ್‌ಗೆ ತೆರಳಬಹುದು. ಸ್ಲೋವೇನಿಯಾದಲ್ಲಿನ ಲೇಕ್ ಬ್ಲೆಡ್‌ನಿಂದ ದೋಣಿಯಲ್ಲಿ ಬ್ಲೆಡ್ ಐಲ್ಯಾಂಡ್‌ಗೆ ಎಡತಾಕಬಹುದು; ಬ್ಲೆಡ್ ಕ್ಯಾಸಲ್‌ಗೆ ಕಾಲ್ನಡಿಗೆ ಮಾಡಬಹುದು ಹಾಗೂ ಸರೋವರದ ನಿರ್ಮಲ ಸೌಂದರ್ಯದಲ್ಲಿ ಮಿಂದೇಳಬಹುದು. ಸರ್ಬಿಯಾದ ಬೆಲ್ಗ್ರೇಡ್‌ನಲ್ಲಿ ರಸಮಯ ರಾತ್ರಿಗಳು, ಕಲೆಮ್ಯಾಗ್ಡನ್ ಕೋಟೆ, ಹಲವಾರು ವಸ್ತುಸಂಗ್ರಹಾಲಯಗಳು ಹಾಗೂ ಗ್ಯಾಲರಿಗಳು ನಿಮ್ಮನ್ನು ಸೆಳೆಯುತ್ತವೆ. ಕೊನೆಯದಾಗಿ, ಬಲ್ಗೇರಿಯಾದಲ್ಲಿನ ರೀಲಾ ಬೌದ್ಧವಿಹಾರವು ತನ್ನ ಮನೋಜ್ಞ ಭಿತ್ತಿ ವರ್ಣಚಿತ್ರಗಳು, ಸಮೃದ್ಧ ಇತಿಹಾಸ ಮತ್ತು ಕಾಲ್ನಡಿಗೆಗೆ ಹೇಳಿಮಾಡಿಸಿದಂತಹ ಸುಂದರ ರೀಲಾ ಪರ್ವತಗಳಿಂದ ಕೈಬೀಸಿ ಕರೆಯುತ್ತದೆ. ಪ್ರತಿಯೊಂದು ಸ್ಥಳವೂ ಪ್ರದೇಶದ ವೈವಿಧ್ಯಮಯ ಪರಂಪರೆ ಹಾಗೂ ನಿಸರ್ಗ ರಮಣೀಯತೆಯ ತುಣುಕಿನ ದರ್ಶನ ಮಾಡಿಸುತ್ತದೆ. ಈ ಎಲ್ಲಾ ಕಾರಣಗಳಿಗಾಗಿ ಯಾವುದೇ ಪ್ರವಾಸಿಗೆ ಬಾಲ್ಕನ್ ಪ್ರದೇಶವು ಭೇಟಿ ನೀಡಲೇಬೇಕಾದ ತಾಣವಾಗಿದೆ.

ಇನ್ನು, "ಬಾಲ್ಟಿಕ್ಸ್" ಎಂಬುದು ಬಾಲ್ಟಿಕ್ ಸಮುದ್ರದ ಪೂರ್ವದ ದಂಡೆಯಲ್ಲಿರುವ ದೇಶಗಳ ಸಮೂಹವಾಗಿದೆ. ಇದು ಎಸ್ಟೋನಿಯಾ, ಲಾಟ್ವಿಯ ಮತ್ತು ಲಿಥುವಿನ್ಯಾಗಳನ್ನು ಒಳಗೊಳ್ಳುತ್ತದೆ. ಸ್ವಾತಂತ್ರ್ಯ ಹಾಗೂ ವಿದೇಶಿ ಆಕ್ರಮಣ ಇವೆರಡನ್ನೂ ಕಂಡ ದೇಶಗಳು ಇವಾಗಿವೆ. ಇವು ಜರ್ಮನ್, ಸ್ವೀಡಿಷ್. ಪೋಲಿಶ್ ಹಾಗೂ ರಷ್ಯಾ ಸಾಮ್ರಾಜ್ಯಗಳ ಪ್ರಭಾವಗಳಿಗೆ ಒಳಗಾದ ದೇಶಗಳು. ಇವು 20ನೇ ಶತಮಾನದಲ್ಲಿ ಸೋವಿಯತ್ ರಷ್ಯಾ ಅಧೀನದಲ್ಲಿದ್ದವು. ಈ ದೇಶಗಳು ಸ್ವಾತಂತ್ರ್ಯ ಪಡೆದಿದ್ದು 1990ರ ದಶಕದ ಆರಂಭದಲ್ಲಿ. ಆನಂತರ ಈ ಬಾಲ್ಟಿಕ್ ದೇಶಗಳು ತ್ವರಿತವಾಗಿ ಅಭಿವೃದ್ಧಿ ಹೊಂದಿ, ಡಿಜಿಟಲ್ ಪ್ರಗತಿ, ಸಂರಕ್ಷಿತ ಐತಿಹಾಸಿಕ ತಾಣಗಳು ಮತ್ತು ಪ್ರಬಲ ರಾಷ್ಟ್ರೀಯ ಅಸ್ಮಿತೆಗಳಿಗೆ ಹೆಸರಾಗಿವೆ. ಬಾಲ್ಟಿಕ್ ಪ್ರದೇಶವು ಪ್ರವಾಸದ ದೃಷ್ಟಿಯಿಂದ ಅನನ್ಯ ಅನುಭವುಗಳು ಹಾಗೂ ದಿಗ್ಮೂಢಗೊಳಿಸುವ ನೋಟಗಳನ್ನು ಅನಾವರಣಗೊಳಿಸುತ್ತದೆ. ಹೆಲ್ಸಿಂಕಿಯಿಂದ ದೋಣಿಯಲ್ಲಿ ಟಾಲಿನ್ ತಲುಪಿ ಕಲ್ಪನಾ ಲೋಕದಂತಿರುವ ಓಲ್ಡ್ ಟೌನ್‌ನಲ್ಲಿ ಅಡ್ಡಾಡಬಹುದು; ಅಲೆಕ್ಸಾಂಡರ್ ನಿವಸ್ಕಿ ಕ್ಯಾಥೆಡ್ರಲ್ ನೋಡಿ ಹುಬ್ಬೇರಿಸಬಹುದು; ಹುರುಪು ಮೂಡಿಸುವ ಕಲಮಾಹ ಡಿಸ್ಟ್ರಿಕ್ಟ್ ಅನ್ನು ಅನ್ವೇಷಿಸಬಹುದು. ಲಾಟ್ವಿಯದ ರೀಗಾದಲ್ಲಿ ಅದ್ಭುತ ನೂವೊ ಕಲಾ ವಾಸ್ತುಶಿಲ್ಪ, ಚಾರಿತ್ರಿಕ ಓಲ್ಡ್ ಟೌನ್, ಜೊತೆಗೆ ಆರಾಮದಾಯಕ ನಡಿಗೆಗೆ ಹೇಳಿಮಾಡಿಸಿದಂತಹ ಸುಂದರ ಉದ್ಯಾನಗಳಿವೆ. ಲಿಥುವಿನ್ಯಾದ ವಿಲ್ನಿಯಸ್‌ನಲ್ಲಿ ಬರೋಕ್ ಅವಧಿಯ ಓಲ್ಡ್ ಟೌನ್, ಪ್ರಸಿದ್ಧ ಹಿಲ್ ಆಫ್ ಕ್ರಾಸಸ್ ಮತ್ತು ಬೊಹೀಮಿಯನ್ ಚೈತನ್ಯಶೀಲತೆಯನ್ನು ಪ್ರತಿನಿಧಿಸುವ ಊಜ್ಜುಪಿಸ್ ಡಿಸ್ಟ್ರಿಕ್ಟ್ ಅನ್ನು ನೋಡಬಹುದು. ಎಸ್ಟೋನಿಯದಲ್ಲಿನ ಲಹೇಮಾ ನ್ಯಾಷನಲ್ ಪಾರ್ಕ್, ಅರಣ್ಯದ ಮೂಲಕ ಕಾಲ್ನಡಿಗೆಯ ಅವಕಾಶವನ್ನು ಲಭ್ಯವಾಗಿಸುತ್ತದೆ. ಇಲ್ಲಿ ನೀವು ಕಡಲ ತೀರದಲ್ಲಿ ರಮಣೀಯವೆನ್ನಿಸುವ ಹಳ್ಳಿಗಳನ್ನು ಹಾಗೂ ಪರಿಶುಭ್ರ ಪ್ರಕೃತಿಯ ನಡುವೆ ವನ್ಯಜೀವಿಗಳನ್ನು ದರ್ಶಿಸಬಹುದು. ಯುನೆಸ್ಕೊ ವಿಶ್ವಪಾರಂಪರಿಕ ತಾಣಗಳಲ್ಲಿ ಒಂದಾದ ಲಿಥುವಿನ್ಯಾದ ಕುರೋನಿಯನ್ ಸ್ಪಿಟ್‌ನಲ್ಲಿ ಆಕರ್ಷಕ ಮರಳಿನ ದಿಬ್ಬಗಳು, ಸಾಂಪ್ರದಾಯಿಕ ಮೀನುಗಾರಿಕೆ ಹಳ್ಳಿಗಳು ಹಾಗೂ ಕಂಗೊಳಿಸುವ ಪ್ರಕೃತಿಯ ನಡುವೆ ಮುದಗೊಳ್ಳಬಹುದು. ಎಸ್ಟೋನಿಯದ ಸಾರೀಮಾದಲ್ಲಿ ಮಧ್ಯಕಾಲೀನ ಯುಗದ ಗಾಳಿಗಿರಣಿಗಳನ್ನು ನೋಡಬಹುದು, ಉಲ್ಕಾಪಾತದಿಂದ ಸೃಷ್ಟಿಯಾದ ಕುಳಿಗಳನ್ನು ಕಂಡು ಗದ್ದಲಮುಕ್ತ ನಿಶ್ಶಬ್ದ ತಾಣದಲ್ಲಿ ವಿರಮಿಸಬಹುದು. ಲಾಟ್ವಿಯದ ಗಾಜಾ ನ್ಯಾಷನಲ್ ಪಾರ್ಕ್, ಮಧ್ಯಕಾಲೀನ ಯುಗದ ಅರಮನೆಗಳು, ದಟ್ಟಾರಣ್ಯಗಳು ಹಾಗೂ ರಮಣೀಯ ಕಣಿವೆಗಳಿಂದ ಕೂಡಿದೆ. ಕಡೆಯದಾಗಿ, ಲಿಥುವಿನ್ಯಾದ ಟ್ರಾಕೆಯಲ್ಲಿ ದೋಣಿ ಹಿಡಿದು ಕ್ಯಾಸಲ್ ಐಲ್ಯಾಂಡ್‌ಗೆ ತೆರಳಿ ನಿಬ್ಬೆರಗಾಗಿಸುವ ನೋಟಗಳನ್ನು ಸವಿದು ಪಾರಂಪರಿಕ ಕೆರೀಮ್ ಅಡುಗೆ ಭಕ್ಷ್ಯ ಸವಿಯಬಹುದು. ಹೀಗೆ ಪ್ರತಿಯೊಂದು ಜಾಗವೂ ಬಾಲ್ಟಿಕ್ ದೇಶಗಳ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನಿಸರ್ಗ ವೈಭವದ ದರ್ಶನ ಮಾಡಿಸುತ್ತದೆ. ಹೀಗಾಗಿ, ಈ ತಾಣಗಳು ಯಾವುದೇ ಪ್ರವಾಸಿಯು ಭೇಟಿ ನೀಡಲು ಬಯಸುವಂತಹ ಮೆಚ್ಚಿನ ತಾಣಗಳಾಗಿವೆ. ಬಾಲ್ಕನ್ ಮತ್ತು ಬಾಲ್ಟಿಕ್ ಇವೆರಡೂ ತಮ್ಮದೇ ವಿಶಿಷ್ಟ ಸೌಂದರ್ಯ ರಾಶಿಯಿಂದ ಮೈಮನಗಳನ್ನು ಆವರಿಸುವ ಪ್ರಯಾಣದ ಅನುಭವಗಳನ್ನು ನೀಡುತ್ತವೆ. ಬಾಲ್ಕನ್‌ನಲ್ಲಿರುವ ಬೃಹತ್ ಪರ್ವತಗಳಿರಬಹುದು; ಅಲ್ಲಿನ ಪ್ರಾಚೀನ ನಗರಗಳಿರಬಹುದು; ಅಥವಾ ಬಾಲ್ಟಿಕ್‌ನ ಮಧ್ಯಕಾಲೀನ ವೈಭವವಿರಬಹುದು; ಇಲ್ಲವೇ ಅಲ್ಲಿನ ದಿವ್ಯಮೌನದಿಂದ ಕೂಡಿದ ನಿಸರ್ಗವಾಗಿರಬಹುದು, ಪ್ರವಾಸಿಗರಿಗೆ ಅಚ್ಚಳಿಯದ ನೆನಪುಗಳಂತೂ ಖಾತರಿ. ನಾವು, ವೀಣಾ ವರ್ಲ್ಡ್‌ನಲ್ಲಿ, ನಿಮಗೆ ರೋಮಾಂಚಕ ಅನುಭವಗಳನ್ನು ಲಭ್ಯವಾಗಿಸಲು ಅತ್ಯುತ್ತಮ ಪ್ರವಾಸ ಯೋಜನೆಗಳನ್ನು ಹೊಂದಿದ್ದೇವೆ. ಈ ದೇಶಗಳ ಪ್ರವಾಸವನ್ನು ನಿಮಗೆ ಅತ್ಯಂತ ಹೆಚ್ಚು ಖುಷಿಯಾಗುವಂತೆ ಆಸಕ್ತಿದಾಯಕವಾಗಿ ಸಂಯೋಜನೆಗೊಳಿಸುತ್ತೇವೆ. ನೀವು ಬಾಲ್ಕನ್ ಅಥವಾ ಬಾಲ್ಟಿಕ್ ಅನ್ನು ಪ್ರತ್ಯೇಕ ಪ್ರವಾಸಗಳಲ್ಲಿ ಆಯ್ಕೆ ಮಾಡಿಕೊಳ್ಳಬಹುದು ಅಥವಾ ಸ್ಕ್ಯಾಂಡಿನೇವಿಯಾ ಜೊತೆಗೆ ಸಂಯೋಜನೆಗೊಳಿಸಿಕೊಂಡು ಯೂರೋಪಿನ ಅತ್ಯುತ್ತಮ ಪ್ರವಾಸಾನುಭವವನ್ನು ನಿಮ್ಮದಾಗಿಸಿಕೊಳ್ಳಬಹುದು.

ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್‌ಸೈಟ್ www.veenaworld.com ನಲ್ಲೂ ಓದಬಹುದು.

### ಚಾಂಪಿಯನ್ಸ್ ಟ್ರೋಫಿ: ಭಾರತದ ಆತಿಥ್ಯದ ಟೂರ್ನಿಗಳಿಗೂ ಇದೇ ಮಾದರಿಗೆ ಪಿಸಿಬಿ ಒತ್ತಡ

# ಹೈಬ್ರಿಡ್ ಮಾದರಿಗೆ ಪಾಕ್ ಒಪ್ಪಿಗೆ




**ಕರಾಚಿ (ಪಿಟಿಐ):** ಬಹಿಷ್ಕಾರ ಬೆದರಿಕೆಯಿಂದ ಹಿಂದೆಸರಿದ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಕೊನೆಗೂ ಮುಂದಿನ ವರ್ಷದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲು ಸಿದ್ಧವಿರುವಾಗಿ ಐಸಿಸಿಗೆ ತಿಳಿಸಿದೆ. ಆದರೆ 2031ರವರೆಗೆ ಭಾರತ ಆತಿಥ್ಯ ವಹಿಸುವ ಪ್ರಮುಖ ಟೂರ್ನಿಗಳಿಗೂ ಐಸಿಸಿ ಇದೇ ಮಾದರಿಯನ್ನು ವ್ಯವಸ್ಥೆ ಮಾಡಬೇಕು ಎಂಬ ಐಸಿಸಿಗೆ ಷರತ್ತು ಹಾಕಿದೆ.

ಮುಂದಿನ ವರ್ಷದ ಫೆಬ್ರುವರಿ–ಮಾರ್ಚ್‌ನಲ್ಲಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ನಿಗದಿಯಾಗಿದೆ. ಭಾರತ– ಪಾಕಿಸ್ತಾನ ಪಂದ್ಯವೂ ಸೇರಿದಂತೆ ಭಾರತದ ಪಂದ್ಯಗಳನ್ನು ದುಬೈನಲ್ಲಿ ನಡೆಸಲು ಏರ್ಪಾಡು ಮಾಡಲಾಗುವುದು.

ಇದಕ್ಕಾಗಿ ಮುಂದಿನ ವರಮಾನ ಹಂಚಿಕೆ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಹೆಚ್ಚಿನ ಪಾಲು ನೀಡಬೇಕು ಎಂದೂ ಪಾಕ್ ಕ್ರಿಕೆಟ್ ಮಂಡಳಿ (ಪಿಸಿಬಿ) ಆಗ್ರಹಿಸಿರುವುದಾಗಿ ಮಂಡಳಿಯ ಉನ್ನತ ಮೂಲವೊಂದು ಪಿಟಿಐಗೆ ತಿಳಿಸಿದೆ. ಭದ್ರತೆಯ ಕಾರಣ ನೀಡಿ ಭಾರತ ಕ್ರಿಕೆಟ್ ತಂಡ, ಪಾಕಿಸ್ತಾನದಲ್ಲಿ ಆಡಲು ನಿರಾಕರಿಸಿದೆ.

ಈ ಪ್ರಸ್ತಾವದಿಂದಾಗಿ ಪಾಕಿಸ್ತಾನ ಒಂದು ಹೆಜ್ಜೆ ಹಿಂದೆ ಇಟ್ಟಂತಾಗಿದೆ. ತಟಸ್ಥ ಸ್ಥಳದಲ್ಲಿ ಪಂದ್ಯ ನಡೆಸಬೇಕೆಂಬ ಬಿಸಿಸಿಐ ಒತ್ತಾಯಕ್ಕೆ ಮಣಿದರೆ ಮತ್ತು ಪೂರ್ಣ ಪ್ರಮಾಣದಲ್ಲಿ ತನಗೆ ಆತಿಥ್ಯ ವಹಿಸದಿದ್ದರೆ ಟೂರ್ನಿಯನ್ನು ಬಹಿಷ್ಕರಿಸುವುದಾಗಿ ಇದಕ್ಕೆ ಮೊದಲು ಪಿಸಿಬಿ ಎಚ್ಚರಿಕೆ ನೀಡಿತ್ತು.'ಭವಿಷ್ಯದಲ್ಲಿ ಭಾರತದಲ್ಲಿ ನಡೆಯುವ ಐಸಿಸಿ ಟೂರ್ನಿಗಳಿಗೂ ಪಾಕಿಸ್ತಾನ ಹೋಗುವುದಿಲ್ಲ ಮತ್ತು ಆ ಟೂರ್ನಿಗಳಿಗೂ ಹೈಬ್ರಿಡ್ ಮಾದರಿ ಅನುಸರಿಸುವುದಾದಲ್ಲಿ ಮಾತ್ರ ಮುಂದಿನ ಚಾಂಪಿಯನ್ಸ್ ಟ್ರೋಫಿಯನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲು ಸಮ್ಮತಿಸುವುದಾಗಿ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಅವರು ಐಸಿಸಿ ಮಂಡಳಿಗೆ ತಿಳಿಸಿರುವುದು ಸದ್ಯದ ಬೆಳವಣಿಗೆ' ಎಂದು ಪಿಸಿಬಿ ಮೂಲವೊಂದು ಪಿಟಿಐಗೆ ತಿಳಿಸಿದೆ.

2031ರವರೆಗೆ ಭಾರತ ಐಸಿಸಿಯ ಮೂರು ಟೂರ್ನಿಗಳಿಗೆ ಆತಿಥ್ಯ ವಹಿಸಲಿದೆ. 2026ರ ಟಿ20 ವಿಶ್ವಕಪ್ ಅನ್ನು ಭಾರತವು, ಶ್ರೀಲಂಕಾ ಜೊತೆಗೂಡಿ ನಡೆಸಲಿದೆ. 2029ರ ಚಾಂಪಿಯನ್ಸ್ ಟ್ರೋಫಿಯ ಆತಿಥ್ಯದ ಜೊತೆಗೆ 2031ರ ಏಕದಿನ ವಿಶ್ವಕಪ್ ಟೂರ್ನಿಯನ್ನು ಬಾಂಗ್ಲಾದೇಶ ಜಂಟಿ ಆತಿಥ್ಯದೊಂದಿಗೆ ನಡೆಯಬೇಕಿದೆ.

ಇವುಗಳಲ್ಲಿ ಎರಡು ಟೂರ್ನಿಗಳಿಗೆ ಬಾಂಗ್ಲಾದೇಶ ಮತ್ತು ಶ್ರೀಲಂಕಾ ಜಂಟಿ ಆತಿಥ್ಯ ವಹಿಸುವುದರಿಂದ ಪಾಕಿಸ್ತಾನಕ್ಕೆ ಭಾರತದಲ್ಲಿ ಆಡುವ



**ನಾನೂ ಹೆಚ್ಚೇನೂ ಮಾತನಾಡಲು ಬಯಸುವುದಿಲ್ಲ. ನಮ್ಮ ಅಭಿಪ್ರಾಯ ತಿಳಿಸಿದ್ದೇವೆ. ಭಾರತ ಕೂಡ ತನ್ನ ಅಭಿಪ್ರಾಯ ತಿಳಿಸಿದೆ. ಎಲ್ಲರಿಗೂ ಗೆಲುವಾಗಬೇಕೆಂಬ ಪ್ರಯತ್ನ ನಡೆದಿದೆ**

**ಮೊಹ್ಸಿನ್ ನಕ್ವಿ,** ಪಿಸಿಬಿ ಮುಖ್ಯಸ್ಥ

ಅನಿವಾರ್ಯತೆ ಇಲ್ಲ. ಆದರೆ 2031ರ ವಿಶ್ವಕಪ್ ಇಡಿಯಾಗಿ ಭಾರತದ ಆತಿಥ್ಯದಲ್ಲಿ ನಡೆಯಲಿದೆ.ಇದರ ಜೊತೆಗೆ ಮುಂದಿನ ವರ್ಷದ ಅಕ್ಟೋಬರ್‌ನಲ್ಲಿ ಮಹಿಳಾ ಏಕದಿನ ವಿಶ್ವಕಪ್ ಕೂಡ ಭಾರತದಲ್ಲಿ ನಡೆಯಲಿದೆ.

ಪಾಕಿಸ್ತಾನದ ಹೊಸ ಬೇಡಿಕೆಗಳನ್ನು ಸಂಬಂಧಿಸಿ ಐಸಿಸಿಯ ಕಾರ್ಯನಿರ್ವಾಹಕ ಮಂಡಳಿ ಪರಿಗಣಿಸಿದ ಬಳಿಕ ಚಾಂಪಿಯನ್ಸ್ ಟ್ರೋಫಿ ಸುತ್ತ ಕವಿದಿರುವ ಕಾರ್ಮೋಡಗಳು ಚದುರಲಿವೆ.

ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿಗೆ ಸಂಬಂಧಿಸಿ ಐಸಿಸಿ ಮಂಡಳಿ ಶುಕ್ರವಾರ ಸಭೆ ಸೇರಿದರೂ, ಒಮ್ಮತಕ್ಕೆ ಬರಲಾಗದ ಕಾರಣ ಸಭೆ ಒಂದು ದಿನ ಮುಂದೆಹೋಗಿತ್ತು. ಒಂದೂ ಪಾಕ್ ಹೈಬ್ರಿಡ್ ಮಾದರಿಗೆ ಒಪ್ಪಬೇಕು ಇಲ್ಲವೇ ಟೂರ್ನಿಯಿಂದ ಹೊರಗಿರಲು ಸಿದ್ಧವಿರಬೇಕು ಎಂದು ಐಸಿಸಿ ಕೊನೆಗೆ ಎಚ್ಚರಿಕೆ ನೀಡಿತ್ತು. ಈ ಗೊಂದಲದಿಂದ ವೇಳಾಪಟ್ಟಿ ರೂಪಿಸುವ ಕೆಲಸವಾಗಿಲ್ಲ.

ಯಾವುದೇ ಷರತ್ತು ಇಲ್ಲದೇ ಹೈಬ್ರಿಡ್ ಮಾದರಿಯನ್ನು ಒಪ್ಪಿಕೊಂಡರೆ ನಕ್ವಿ ಅವರಿಗೆ ಪಾಕಿಸ್ತಾನದಲ್ಲಿ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗುವ ಸಂಭವವೂ ಇತ್ತು. ನಕ್ವಿ ಅವರು ಪಾಕಿಸ್ತಾನದ ಆಂತರಿಕ ಭದ್ರತೆ ಸಚಿವರೂ ಆಗಿದ್ದಾರೆ.ಇದಕ್ಕೆ ಮೊದಲು ನಕ್ವಿ, ಎಮಿರೇಟ್ಸ್ ಕ್ರಿಕೆಟ್ ಮಂಡಳಿ ಮುಖ್ಯಸ್ಥ ಮುಬಾಷಿರ್ ಉಸ್ಮಾನಿ ಅವರನ್ನು ದುಬೈನಲ್ಲಿ ಭೇಟಿ ಮಾಡಿದ್ದು, ಚಾಂಪಿಯನ್ಸ್ ಟ್ರೋಫಿ ನಡೆಸಲು ಪಾಕಿಸ್ತಾನ ಸಿದ್ಧವಿದ್ದು, ಎಲ್ಲ ತಯಾರಿಗಳು ನಿಗದಿಯಂತೆ ನಡೆಯುತ್ತಿವೆ ಎಂದು ತಿಳಿಸಿದ್ದರು.



ಐದನೇ ಪಂದ್ಯದ ವೇಳೆ ಲಿರೆನ್ ವಿರುದ್ಧ ನಡೆಯೊಂದರ ಯೋಚನೆಯಲ್ಲಿ ಮಗ್ನರಾದ ಡಿ.ಗುಕೇಶ್ —ಫಿಡೆ ವೆಬ್‌ಸೈಟ್ ಚಿತ್ರ

### ವಿಶ್ವ ಚೆಸ್ ಚಾಂಪಿಯನ್‌ಷಿಪ್ ಐದನೇ ಸುತ್ತು

## ಗುಕೇಶ್–ಲಿರೆನ್ ಪಂದ್ಯ ಮತ್ತೆ 'ಡ್ರಾ'

**ಸಿಂಗಪುರ (ಪಿಟಿಐ):** ಭಾರತದ ಚಾಲೆಂಜರ್ ಡಿ.ಗುಕೇಶ್, ವಿಶ್ವ ಚೆಸ್ ಚಾಂಪಿಯನ್‌ಷಿಪ್ ಫೈನಲ್‌ನ ಐದನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ವಿರುದ್ಧ ಶನಿವಾರ ಹೋರಾಟದ ಡ್ರಾ ಸಾಧಿಸಿದರು.

ಟೂರ್ನಿಯಲ್ಲಿ ಇದು ಸತತ ಎರಡನೇ (ಒಟ್ಟಾರೆ ಮೂರನೇ) ಡ್ರಾ ಆಗಿದ್ದು ಇಬ್ಬರೂ ತಲಾ 2.5 ಪಾಯಿಂಟ್ಸ್ ಹೊಂದಿದ್ದಾರೆ. 14 ಪಂದ್ಯಗಳ ಸರಣಿಯ ಫೈನಲ್‌ನ ಆರನೇ ಪಂದ್ಯ ಭಾನುವಾರ ನಡೆಯಲಿದೆ. ವಿಶ್ವ ಚಾಂಪಿಯನ್ ಆಗಲು ಇಬ್ಬರೂ ಇನ್ನೂ ಐದು ಪಾಯಿಂಟ್ ದೂರ ಇದ್ದಾರೆ.

ಇಬ್ಬರೂ 40 ನಡೆಗಳ ನಂತರ 'ಶಾಂತಿ ಒಪ್ಪಂದ'ಕ್ಕೆ ಸಹಿಹಾಕಿದರು. ಈ ಪಂದ್ಯವೂ 'ನಡೆಗಳ ಪುನರಾವರ್ತನೆ' ಆಧಾರದಲ್ಲಿ 'ಡ್ರಾ' ಆಯಿತು.

ಚಾಂಪಿಯನ್‌ಷಿಪ್‌ನ ಇತಿಹಾಸದಲ್ಲೇ ಅತಿ ಕಿರಿಯ ವಿಜೇತನಾಗಲು 18 ವರ್ಷ ವಯಸ್ಸಿನ ಗುಕೇಶ್ ಪ್ರಯತ್ನ ನಡೆಸುತ್ತಿದ್ದಾರೆ. 32 ವರ್ಷದ ಲಿರೆನ್ ಮೊದಲ ಪಂದ್ಯ ಗೆದ್ದರೆ, ಗುಕೇಶ್ ಮೂರನೇ ಪಂದ್ಯ ಜಯಿಸಿದ್ದರು.

ಕಪ್ಪು ಕಾಯಿಗಳಲ್ಲಿ ಆಡಿದ ಚೀನಾದ ಲಿರೆನ್ ಆಟದಲ್ಲಿ ಹೆಚ್ಚೇನೂ ತೊಂದರೆ ಎದುರಿಸಲಿಲ್ಲ. ಗುಕೇಶ್ ಅವರ ಕಿಂಗ್ ಪಾನ್ ಓಪನಿಂಗ್‌ಗೆ ಲಿರೆನ್ ಫ್ರೆಂಚ್ ಡಿಫೆನ್ಸ್ ಆಡಿದರು. ಅವರು ಪೂರ್ಣ ಸಜ್ಜಾಗಿದ್ದು ಕಂಡುಬಂತು. ಪಂದ್ಯದಲ್ಲಿ ಗುಕೇಶ್ ಅವರೇ ಹೆಚ್ಚು ಎಚ್ಚರಿಕೆ ವಹಿಸಿದರು. ತುಲನಾತ್ಮಕವಾಗಿ ನಡೆಗಳಿಗೆ ಹೆಚ್ಚು ಸಮಯವನ್ನೂ ತೆಗೆದುಕೊಂಡರು.

'ಕ್ವೀನ್'ಗಳನ್ನು ಹೊರಡಗಿಲು ಲಿರೆನ್ ಹೆಚ್ಚು ಆಸ್ಥೆ ವಹಿಸಿದ್ದರು. ಒಂದೊಂದು ರೂಕ್‌ಗಳನ್ನೂ ಹೀಗೇ ಎಕ್ಸ್‌ಚೇಂಜ್‌ನಲ್ಲಿ ಕಳೆದುಕೊಂಡರು. ಹೀಗಾಗಿ ಯಾರೊಬ್ಬರೂ ಸ್ಪಷ್ಟ ಮೇಲುಗೈ ವಹಿಸಿದಂತೆ ಕಾಣಲಿಲ್ಲ. ವಿರುದ್ಧ ವರ್ಣದ ಬಿಷಪ್‌ಗಳಿದ್ದ ಕಾರಣ ಪಂದ್ಯ ಡ್ರಾ ಹಾದಿ ಹಿಡಿಯಿತು. ನಿಯಮದಂತೆ ಪಂದ್ಯ 'ಡ್ರಾ' ಆಗಬೇಕಾದರೆ ಆಟಗಾರರು 40 ನಡೆಗಳನ್ನು ಪೂರ್ಣಗೊಳಿಸಬೇಕು. ಅದು ಈಡೇರುತ್ತಿದ್ದಂತೆ ಇಬ್ಬರೂ ಪಾಯಿಂಟ್ ಹಂಚಿಕೊಂಡರು.

### ಸಂಕ್ಷಿಪ್ತ ಸುದ್ದಿ

## ಪ್ರೊ ಕಬಡ್ಡಿ: ಬುಲ್ಸ್‌ಗೆ 13ನೇ ಸೋಲು

**ನೊಯ್ಡಾ:** ರೇಡರ್‌ಗಳಾದ ದೇವಾಂಕ್ (17 ಅಂಕ) ಮತ್ತು ಅಯಾನ್ (13 ಅಂಕ) ಅವರ ಅಮೋಘ ಆಟದಿಂದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಏಕಪಕ್ಷೀಯ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡವನ್ನು 25 ಅಂಕಗಳಿಂದ ಸೋಲಿಸಿತು.

ಸತತ ಹಿನ್ನಡೆಯಿಂದ ಕಂಗೆಟ್ಟಿರುವ ಬೆಂಗಳೂರು ತಂಡಕ್ಕೆ ಇದು 15 ಪಂದ್ಯಗಳಲ್ಲಿ 13ನೇ ಸೋಲು ಆಗಿದ್ದು ಲೀಗ್ ಪಟ್ಟಿಯ ತಳದಲ್ಲಿ ಗಟ್ಟಿಯಾಗಿದೆ. ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪೈರೇಟ್ಸ್ ತಂಡ 54–29 ಪಾಯಿಂಟ್‌ಗಳಿಂದ ಬುಲ್ಸ್ ತಂಡವನ್ನು ಸೋಲಿಸಿತು.

ದಿನದ ಎರಡನೇ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 41–28 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು.

## ತೈಪೆ ವಿರುದ್ಧ ಭಾರತ ಗೋಲಿನ ಮಳೆ

**ಮಸ್ಕತ್ (ಪಿಟಿಐ):** ಅಧಿಕಾರಯುತ ಆಟವಾಡಿದ ಭಾರತ ತಂಡ 16–0 ಗೋಲುಗಳಿಂದ ದುರ್ಬಲ ಚೀನಾ ತೈಪಿ ತಂಡವನ್ನು ಮಣಿಸಿ ಪುರುಷರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಶನಿವಾರ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ದಿಲ್‌ರಾಜ್ ಸಿಂಗ್ ನಾಲ್ಕು ಗೋಲುಗಳನ್ನು ಗಳಿಸಿದರೆ, ರೋಷನ್ ಕುಜೂರ್ ಮರ್ತು ಸೌರಭ್ ಆನಂದ್ ಕುಶ್ವಾಹ ಅವರು ಹ್ಯಾಟ್ರಿಕ್ ಸಾಧಿಸಿದರು.

ಪಿ.ಆರ್.ಶ್ರೀಜೇಶ್ ಗರಡಿಯಲ್ಲಿರುವ ಭಾರತ ತಂಡ 'ಎ' ಗುಂಪಿನಲ್ಲಿ 9 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದೆ.

## ಆಕಾಶ್‌ಗೆ ಪ್ರಶಸ್ತಿ



ಆಕಾಶ್

**ಬೆಂಗಳೂರು:** ಆತಿಥೇಯ ಕರ್ನಾಟಕದ ಆಕಾಶ್ ಅಶೋಕ ಕುಮಾರ್ ಅವರು ಇಲ್ಲಿ ಮುಕ್ತಾಯವಾದ ಎಆರ್‌ಸಿ 33ನೇ ರಾಷ್ಟ್ರೀಯ ಟೆನ್‌ಪಿನ್ ಬೌಲಿಂಗ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದ ಪ್ರಶಸ್ತಿ ಗೆದ್ದರು.

ಶನಿವಾರ ನಡೆದ ಪ್ರಶಸ್ತಿ ಸುತ್ತಿನಲ್ಲಿ ಆಕಾಶ್ 425-353ರಿಂದ ದೆಹಲಿಯ ಶೇಕ್ ಅಬ್ದುಲ್ ಹಮೀದ್ ಅವರನ್ನು ಮಣಿಸಿದರು.

ಮಹಿಳೆಯರ ವಿಭಾಗದಲ್ಲಿ ಆಂಧ್ರಪ್ರದೇಶದ ಸುಮತಿ ನಲ್ಲಬಂಟು 342--286ರಿಂದ ಕರ್ನಾಟಕದ ಪ್ರೀಮಲ್ ಜೆ. ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದರು.

# ಫೈನಲ್‌ಗೆ ಸಿಂಧು, ಸೇನ್ ಲಗ್ಗೆ

### ಬ್ಯಾಡ್ಮಿಂಟನ್: ಗಾಯತ್ರಿ– ಟ್ರೀಸಾ ಜೋಡಿ ಪ್ರಶಸ್ತಿ ಸುತ್ತಿಗೆ

**ಲಖನೌ (ಪಿಟಿಐ):** ಭಾರತದ ತಾರೆ ಪಿ.ವಿ. ಸಿಂಧು ಇಲ್ಲಿ ನಡೆಯುತ್ತಿರುವ ಸಯ್ಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದ್ದಾರೆ. ಉದಯೋನ್ಮುಖ ಆಟಗಾರ ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಸುತ್ತಿಗೆ ಮುನ್ನಡೆದಿದ್ದಾರೆ.

ಪ್ರಸಕ್ತ ಋತುವಿನಲ್ಲಿ ಪ್ರಶಸ್ತಿಯ ಬರವನ್ನು ಎದುರಿಸುತ್ತಿರುವ ಅಗ್ರ ಶ್ರೇಯಾಂಕದ ಸಿಂಧು, ಶನಿವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ 21-12, 21-9ರಿಂದ ಸ್ವದೇಶದ 17 ವರ್ಷ ವಯಸ್ಸಿನ ಉನ್ನತಿ ಹೂಡಾ ಅವರನ್ನು ಹಿಮ್ಮೆಟ್ಟಿಸಿದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಅವರಿಗೆ ಹೂಡಾ ಯಾವುದೇ ಹಂತದಲ್ಲಿ ಸರಿಸಾಟಿಯಾಗಲಿಲ್ಲ. ಪಂದ್ಯದುದ್ದಕ್ಕೂ ಹಿಡಿತ ಸಾಧಿಸಿದ ಮಾಜಿ ಚಾಂಪಿಯನ್ ಸಿಂಧು, ಕೇವಲ 36 ನಿಮಿಷದಲ್ಲಿ ಪಂದ್ಯ ಗೆದ್ದು ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು. 18ನೇ ಕ್ರಮಾಂಕದ ಅವರು, ಫೈನಲ್‌ನಲ್ಲಿ ಚೀನಾದ ವು ಲುವೊ ಯು ಇನ್ ಅವರನ್ನು ಎದುರಿಸಲಿದ್ದಾರೆ.

ಅಗ್ರ ಶ್ರೇಯಾಂಕದ ಸೇನ್, ನಾಲ್ಕರ ಘಟ್ಟದ ಹಣಾಹಣಿಯಲ್ಲಿ 21-8, 21-14ರಿಂದ ಜಪಾನ್‌ನ ಶೋಗೊ ಒಗಾವಾ ಅವರನ್ನು ಮಣಿಸಿದರು. ಸೇನ್ ಫೈನಲ್‌ನಲ್ಲಿ ಸಿಂಗಪುರದ ಜಿಯಾ ಹೆಂಗ್ ಜೇಸನ್ ತೆಹ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಜಿಯಾ ಹೆಂಗ್ ಅವರು ಮತ್ತೊಂದು ಸೆಮಿಫೈನಲ್‌ನಲ್ಲಿ 13-21, 19-21ರಿಂದ ಎರಡನೇ ಶ್ರೇಯಾಂಕದ ಪ್ರಿಯಾಂಶು ರಾಜಾವತ್ ಅವರನ್ನು ಮಣಿಸಿದರು.



ಭಾರತದ ಪಿ.ವಿ. ಸಿಂಧು ಆಟದ ವೈಖರಿ –ಪಿಟಿಐ ಚಿತ್ರ

ಎರಡನೇ ಶ್ರೇಯಾಂಕದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಮಹಿಳೆಯರ ಡಬಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ತಲುಪಿತು. ಸೆಮಿಫೈನಲ್‌ನಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಅವರು 18–21, 21, 18, 21–10ರಿಂದ ಬೆನ್ಯಾಪಾ ಐಮ್ಸಾರ್ಡ್ ಮತ್ತು ನುಂಟಕರ್ನ್ ಐಮ್ಸಾರ್ಡ್ ಜೋಡಿಯನ್ನು ಮಣಿಸಿದರು.

ಆದರೆ, ಅಗ್ರ ಶ್ರೇಯಾಂಕದ ತನಿಶಾ ಕ್ರಾಸ್ಟೊ ಮತ್ತು ಕನ್ನಡತಿ ಅಶ್ವಿನಿ ಪೊನ್ನಪ್ಪ ನಿರಾಸೆ ಅನುಭವಿಸಿದರು. ಅವರು 21-15, 16-21, 13-21ರಿಂದ ಚೀನಾದ ಬಾವೊ ಲಿ ಜಿಂಗ್ ಮತ್ತು ಲಿ ಕಿಯಾನ್ ಜೋಡಿಗೆ ಶರಣಾದರು.

ಮಿಶ್ರ ಡಬಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ತನಿಶಾ ಕ್ರಾಸ್ಟೊ ಮತ್ತು ಧ್ರುವ ಕಪಿಲಾ ಜೋಡಿ ನೇರ ಗೇಮ್‌ಗಳಿಂದ ಗೆದ್ದು ಫೈನಲ್ ಪ್ರವೇಶಿಸಿತು. ಐದನೇ ಶ್ರೇಯಾಂಕದ ಭಾರತದ ಜೋಡಿ 21-16, 21-15ರಿಂದ ಚೀನಾದ ಝಿ ಹಾಂಗ್ ಝೌ ಮತ್ತು ಜಿಯಾ ಯಿ ಯಾಂಗ್ ಅವರನ್ನು ಮಣಿಸಿತು.

ಭಾರತದ ಆಟಗಾರರ ವ್ಯವಹಾರವಾಗಿದ್ದ ಪುರುಷರ ಡಬಲ್ಸ್‌ನ ಸೆಮಿಫೈನಲ್‌ನಲ್ಲಿ ಪೃಥ್ವಿ ಕೃಷ್ಣಮೂರ್ತಿ ರಾಯ್ ಮತ್ತು ಸಾಯಿಪ್ರತೀಕ್ ಕೆ. ಜೋಡಿಯು ಫೈನಲ್ ಪ್ರವೇಶಿಸಿತು. ಆ ಜೋಡಿಯು 21-17, 17-21, 21-16ರಿಂದ ಇಶಾನ್ ಭಟ್‌ನಗರ್ ಮತ್ತು ಶಂಕರ್ ಪ್ರಸಾದ್ ಉದಯಕುಮಾರ್ ಅವರನ್ನು ಸೋಲಿಸಿತು.

### 19 ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್

# ಪಾಕಿಸ್ತಾನಕ್ಕೆ ಮಣಿದ ಭಾರತ ತಂಡ

**ದುಬೈ (ಪಿಟಿಐ):** ಶಾಹಜೇಬ್ ಖಾನ್ (159; 147ಎ) ಅವರ ಶತಕದ ನೆರವಿನಿಂದ ಪಾಕಿಸ್ತಾನ ತಂಡವು 19 ವರ್ಷದೊಳಗಿನವರ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ಭಾರತ ತಂಡವನ್ನು 43 ರನ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಪಾಕಿಸ್ತಾನ ಬ್ಯಾಟಿಂಗ್ ಆಯ್ದುಕೊಂಡಿತು. ಆರಂಭಿಕ ಆಟಗಾರರಾದ ಉಸ್ಮಾನ್ ಖಾನ್ (60;94ಎ) ಮತ್ತು ಶಾಹಜೇಬ್ ಮೊದಲ ವಿಕೆಟ್‌ಗೆ 160 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಶಾಹಜೇಬ್ ಇನಿಂಗ್ಸ್‌ನಲ್ಲಿ 10 ಸಿಕ್ಸರ್ ಹಾಗೂ ಐದು ಬೌಂಡರಿಗಳು ಸೇರಿದ್ದವು. ತಂಡವು 50 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 281 ರನ್ ಗಳಿಸಿತು.

ಸವಾಲಿನ ಮೊತ್ತವನ್ನು ಬೆನ್ನಟ್ಟಿದ ಭಾರತ 47.1 ಓವರ್‌ಗಳಲ್ಲಿ 238 ರನ್ ಗಳಿಸಿ ಹೋರಾಟವನ್ನು ಮುಗಿಸಿತು.



ಶತಕ ದಾಖಲಿಸಿದ ಶಾಹಜೇಬ್ ಖಾನ್ –ಎಪಿ/ಪಿಟಿಐ ಚಿತ್ರ

ಐಪಿಎಲ್ ಹರಾಜಿನಲ್ಲಿ ಕೋಟ್ಯಧಿಪತಿ ಎನಿಸಿರುವ ಅತಿ ಕಿರಿಯ ಆಟಗಾರ 13ರ ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ ಆರಂಭಿಕ ಆಟಗಾರನಾಗಿ ಬಂದು ಕೇವಲ 1 ರನ್ ಗಳಿಸಿ ನಿರಾಸೆ ಮೂಡಿಸಿದರು. ನಿಖಿಲ್ ಕುಮಾರ್ (67; 77ಎ) ಹೊರತುಪಡಿಸಿ ಉಳಿದವರು ಪ್ರತಿರೋಧ ತೋರಲಿಲ್ಲ. 'ಎ' ಗುಂಪಿನಲ್ಲಿರುವ ಭಾರತ ಎರಡನೇ ಪಂದ್ಯದಲ್ಲಿ ಜಪಾನ್ ತಂಡವನ್ನು ಡಿ.2ರಂದು ಎದುರಿಸಲಿದೆ.

**ಸಂಕ್ಷಿಪ್ತ ಸ್ಕೋರ್:** ಪಾಕಿಸ್ತಾನ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 281 (ಶಾಹಜೇಬ್ ಖಾನ್ 159, ಉಸ್ಮಾನ್ ಖಾನ್ 60, ಸಮರ್ಥ್ ನಾಗರಾಜ್ 45ಕ್ಕೆ 3). ಭಾರತ: 47.1 ಓವರ್‌ಗಳಲ್ಲಿ 238 (ನಿಖಿಲ್ ಕುಮಾರ್ 67, ಅಲಿ ರಜಾ 36ಕ್ಕೆ 3). ಪಂದ್ಯದ ಆಟಗಾರ: ಶಾಹಜೇಬ್ ಖಾನ್

## ಕ್ರಿಕೆಟ್: ಕರ್ನಾಟಕಕ್ಕೆ ಇನಿಂಗ್ಸ್ ಗೆಲುವು

**ಮೈಸೂರು:** ಆಫ್ ಸ್ಪಿನ್ನರ್ ಸಿದ್ಧಾರ್ಥ್ ಅಖಿಲ್ ((27ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಒಡಿಶಾ ತಂಡವನ್ನು ಇನಿಂಗ್ಸ್ ಹಾಗೂ 54 ರನ್‌ಗಳಿಂದ ಸೋಲಿಸಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಮೂರನೇ ದಿನವಾದ ಶನಿವಾರ ಮೊದಲ ಇನಿಂಗ್ಸ್ ಹಿನ್ನಡೆಯೊಂದಿಗೆ ಎರಡನೇ ಇನ್ನಿಂಗ್ಸ್ ಮುಂದುವರಿಸಿದ ಒಡಿಶಾ 107 ರನ್‌ಗಳಿಗೆ ಪತನಗೊಂಡಿತು. ಸಿದ್ಧಾರ್ಥ್ ಅಖಿಲ್‌ಗೆ ಬೆಂಬಲ ನೀಡಿದ ಗೌರವ್ ಶಾನಭಾಗ್ ಎರಡು ವಿಕೆಟ್ ಪಡೆದರು.

ಒಡಿಶಾ ಪರ ಆರಂಭಿಕ ಬ್ಯಾಟರ್‌ಗಳಾದ ಆಯುಷ್ ಸುತಾರ್ (21) ಹಾಗೂ ಪ್ರಯಾಣ್ ಸಾಮಲ್ ( 26) ಎರಡನೇ ಇನಿಂಗ್ಸ್‌ನಲ್ಲಿ ಪ್ರತಿರೋಧದ ಪ್ರಯತ್ನ ಮಾಡಿದರು. ಒಂದು ಹಂತದಲ್ಲಿ 75 ರನ್‌ಗೆ 3 ವಿಕೆಟ್ ಕಳೆದುಕೊಂಡಿದ್ದ ಒಡಿಶಾ ನಂತರ ಕೇವಲ 32 ರನ್‌ಗೆ 7 ವಿಕೆಟ್ ಒಪ್ಪಿಸಿತು. ಕೆಳಕ್ರಮಾಂಕದಲ್ಲಿ ಅಭಿಷೇಕ್ ಸಿಂಗ್ (17) ಹೊರತುಪಡಿಸಿ ಉಳಿದವರು ಒಂದಂಕಿ ಸ್ಕೋರ್ ದಾಟಲಿಲ್ಲ.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಕರ್ನಾಟಕ 308; ಒಡಿಶಾ 147; ಎರಡನೇ ಇನಿಂಗ್ಸ್: ಒಡಿಶಾ 54 ಓವರ್‌ಗಳಲ್ಲಿ 107 (ಆಯುಷ್ ಸುತಾರ್ 21, ಪ್ರಯಾಣ್ ಸಾಮಲ್ 26; ಸಿದ್ಧಾರ್ಥ್ ಅಖಿಲ್ 27ಕ್ಕೆ5, ಗೌರವ್ ಶಾನಭಾಗ್ 19ಕ್ಕೆ2).

## ದಕ್ಷಿಣ ಆಫ್ರಿಕಾಕ್ಕೆ ಸುಲಭ ಜಯ

**ಡರ್ಬನ್ (ಎಎಫ್‌ಪಿ):** ಮಾರ್ಕೊ ಯಾನ್ಸನ್ ದಾಳಿಯ ಬಲದಿಂದ ದಕ್ಷಿಣ ಆಫ್ರಿಕಾ ತಂಡ,ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯವನ್ನು 233 ರನ್‌ಗಳಿಂದ ಜಯಿಸಿದೆ.

ಗೆಲುವಿಗೆ 516 ಗುರಿ ಪಡೆದ ಲಂಕಾ ಪಡೆಯು ನಾಲ್ಕನೇ ದಿನವಾದ ಶನಿವಾರ 282 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಮೊದಲ ಇನಿಂಗ್ಸ್‌ನಲ್ಲಿ ಏಳು ವಿಕೆಟ್ ಪಡೆದಿದ್ದ ಯಾನ್ಸನ್ ಎರಡನೇ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾದರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 191. ಶ್ರೀಲಂಕಾ: 42. ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 5 ವಿಕೆಟ್‌ಗೆ 366 ಡಿಕ್ಲೇರ್. ಶ್ರೀಲಂಕಾ: 79.4 ಓವರ್‌ಗಳಲ್ಲಿ 282 (ದಿನೇಶ್ ಚಾಂಡಿಮಾಲ್ 83, ಧನಂಜಯ ಡಿಸಿಲ್ವ 59, ಕುಶಾಲ್ ಮೆಂಡೀಸ್ 48; ಮಾರ್ಕೊ ಯಾನ್ಸನ್ 73ಕ್ಕೆ 4). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 233 ರನ್ ಜಯ. ಪಂದ್ಯದ ಆಟಗಾರ: ಮಾರ್ಕೊ ಯಾನ್ಸನ್.

### ಪಿಎಂ ಇಲೆವೆನ್ ವಿರುದ್ಧ ಪಂದ್ಯದ ಮೊದಲ ದಿನ ಮಳೆ

# ಭಾರತಕ್ಕೆ ತಪ್ಪಿದ ಅಭ್ಯಾಸದ ಅವಕಾಶ

**ಕ್ಯಾನ್‌ಬೆರಾ (ಪಿಟಿಐ):** ಬಿರುಸಿನ ಮಳೆಯ ಕಾರಣ ಭಾರತ ಮತ್ತು ಆಸ್ಟ್ರೇಲಿಯಾ ಪ್ರೈಮ್ ಮಿನಿಸ್ಟರ್ಸ್ ಇಲೆವೆನ್ ನಡುವಣ ಎರಡು ದಿನಗಳ ಪಿಂಕ್‌ಬಾಲ್ ಅಭ್ಯಾಸ ಪಂದ್ಯದ ಮೊದಲ ದಿನದಾಟ ಸಾಧ್ಯವಾಗಲಿಲ್ಲ. ಹೀಗಾಗಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರಿಗೆ ಅಗತ್ಯವಾಗಿದ್ದ ಅಭ್ಯಾಸ ತಪ್ಪಿಹೋಯಿತು.

ಇವರಿಬ್ಬರು ಮೊದಲ ಟೆಸ್ಟ್‌ನಲ್ಲಿ ಆಡಿರಲಿಲ್ಲ. ಹೀಗಾಗಿ, ಮುಂದಿನ ಶುಕ್ರವಾರ (ಡಿ.6) ಅಡಿಲೇಡ್‌ನಲ್ಲಿ ಆರಂಭವಾಗುವ ಎರಡನೇ ಟೆಸ್ಟ್ ಪಂದ್ಯಕ್ಕೆ ಮೊದಲು, ಈ ಪಂದ್ಯದ ಮೂಲಕ ಅಭ್ಯಾಸ ನಡೆಸಲು ಅವರು ತವಕಗೊಂಡಿದ್ದರು. ಹವಾಮಾನ ಅವಕಾಶ ನೀಡಿದಲ್ಲಿ ತಲಾ 50 ಓವರುಗಳ ಪಂದ್ಯವನ್ನು ಆಡಲು ಉಭಯ ತಂಡಗಳು ಒಪ್ಪಿಕೊಂಡಿವೆ.

ಎರಡನೇ ಮಗುವಿಗೆ ತಂದೆಯಾಗುವ ಸಂಭ್ರಮದಲ್ಲಿ ಭಾಗಿಯಾಗಲು ರೋಹಿತ್ ಅವರು ತವರಿನಲ್ಲೇ ಉಳಿದಿದ್ದ ಕಾರಣ ಮೊದಲ ಟೆಸ್ಟ್ ಆಡಿರಲಿಲ್ಲ.

ಭಾರತ ಕೊನೆಯ ಪಿಂಕ್ ಬಾಲ್ ಟೆಸ್ಟ್ ಪಂದ್ಯವನ್ನು 2022ರ ಮಾರ್ಚ್‌ನಲ್ಲಿ ಶ್ರೀಲಂಕಾ ವಿರುದ್ಧ ಬೆಂಗಳೂರಿನಲ್ಲಿ ಆಡಿತ್ತು. ಹೀಗಾಗಿ ಅವರು ಇಲ್ಲಿನ ಅಭ್ಯಾಸ ಪಂದ್ಯ ಆಡಲು ಸಜ್ಜಾಗಿದ್ದರು. ಗಿಲ್ ಹೆಬ್ಬೆರಳಿನ ಗಾಯದಿಂದ ಟೆಸ್ಟ್ ಆಡಿರಲಿಲ್ಲ. ಚೇತರಿಸಿಕೊಂಡಿರುವ ಅವರು ಎರಡನೇ ಟೆಸ್ಟ್‌ನಲ್ಲಿ ಆಡುವುದು ಖಚಿತವಾಗಿದೆ.

ದೇವದತ್ತ ಪಡಿಕ್ಕಲ್ ಮತ್ತು ಧ್ರುವ್ ಜುರೇಲ್ ಅವರ ಬದಲು ಎರಡನೇ ಟೆಸ್ಟ್‌ಗೆ ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಆಡುವ ನಿರೀಕ್ಷೆಯಿದೆ.

### ಆಡಿಲೇಡ್‌ಗೆ ಟೆಸ್ಟ್‌ಗೆ ಹೇಜಲ್‌ವುಡ್ ಅಲಭ್ಯ



**ಆಡಿಲೇಡ್ (ಪಿಟಿಐ):** ಭಾರತ ವಿರುದ್ಧ ಎರಡನೇ ಕ್ರಿಕೆಟ್ ಟೆಸ್ಟ್ (ಹಗಲು–ರಾತ್ರಿ) ಪಂದ್ಯದಲ್ಲಿ ಆಡಲಿರುವ ಆಸ್ಟ್ರೇಲಿಯಾ ತಂಡಕ್ಕೆ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅಲಭ್ಯರಾಗಿದ್ದಾರೆ. ಎಡಭಾಗದ ಪಕ್ಕೆಲುಬಿನ ನೋವಿನಿಂದ ಅವರು ಬಳಲುತ್ತಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಪ್ರಕಟಿಸಿದೆ.

ಐದು ಪಂದ್ಯಗಳ ಬಾರ್ಡರ್–ಗಾವಸ್ಕರ್ ಟೆಸ್ಟ್ ಸರಣಿಯಲ್ಲಿ ಭಾರತ 1–0 ಮುಂದಿದೆ. ಎರಡನೇ ಟೆಸ್ಟ್ ಡಿ. 6ರಂದು ಆರಂಭ.

'ಹ್ಯಾಜಲ್‌ವುಡ್ ತಂಡದ ಜೊತೆ ಇರಲಿದ್ದು, ಸರಣಿಯ ಉಳಿದ ಪಂದ್ಯಗಳಿಗೆ ಸಿದ್ಧತೆ ನಡೆಸಲಿದ್ದಾರೆ' ಎಂದು ಸಿಎ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ವೇಗಿಗಳಾದ ಸೀನ್ ಅಬಾಟ್ ಮತ್ತು ಬ್ರೆಂಡನ್ ಡಾಜೆಟ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಇವರಿಬ್ಬರೂ ಟೆಸ್ಟ್ ಪಂದ್ಯ ಆಡಿಲ್ಲ. ಶೆಫೀಲ್ಡ್ ಶೀಲ್ಡ್ ಪಂದ್ಯಗಳಲ್ಲಿ ಇವರಿಬ್ಬರು ಉತ್ತಮ ಪ್ರದರ್ಶನ ತೋರಿದ್ದಾರೆ. ಈಗಾಗಲೇ ಬ್ಯೂ ವೆಬ್‌ಸ್ಟರ್ ಹೊಸದಾಗಿ ತಂಡ ಸೇರಿಕೊಂಡಿದ್ದಾರೆ. ಪಿಂಕ್‌ಬಾಲ್ ಟೆಸ್ಟ್ ಪಂದ್ಯಗಳಲ್ಲಿ 33 ವರ್ಷ ವಯಸ್ಸಿನ ಜೋಶ್ ದಾಖಲೆ ಅತ್ಯುತ್ತಮವಾಗಿದೆ. 2020–21ರ ಸರಣಿಯ ಆಡಿಲೇಡ್ ಟೆಸ್ಟ್ ಪಂದ್ಯದಲ್ಲಿ 5 ಓವರುಗಳಲ್ಲಿ 8 ರನ್ನಿಗೆ 5 ವಿಕೆಟ್ ಪಡೆದಿದ್ದು ಆ ಇನಿಂಗ್ಸ್‌ನಲ್ಲಿ ಭಾರತ 36 ರನ್ನಿಗೆ ಉರುಳಿತ್ತು.




ಪರಿಕ್ರಮ ಇಕ್ವಾಲಿಟಿ ಕಪ್ ಗೆದ್ದುಕೊಂಡ ಗ್ರೀನ್‌ವುಡ್ ಶಾಲಾ ತಂಡದ ಸಂಭ್ರಮ.

## ಗ್ರೀನ್‌ವುಡ್ ಹೈಸ್ಕೂಲ್‌ಗೆ ಪರಿಕ್ರಮ ಈಕ್ವಾಲಿಟಿ ಕಪ್

**ಬೆಂಗಳೂರು:** ಗ್ರೀನ್‌ವುಡ್ ಶಾಲಾ ತಂಡ ಫೈನಲ್‌ನಲ್ಲಿ 2–1 ಗೋಲುಗಳಿಂದ ಲೆಗಸಿ ಶಾಲಾ ತಂಡವನ್ನು ಸೋಲಿಸಿ 12ನೇ ವರ್ಷದ ಪರಿಕ್ರಮ ಚಾಂಪಿಯನ್ಸ್ ಲೀಗ್ ಅಂತರ ಶಾಲಾ ಫುಟ್‌ಬಾಲ್ (16 ವರ್ಷದೊಳಗಿನವರ) ಟೂರ್ನಿ ಪ್ರಶಸ್ತಿಯಾದ ಪರಿಕ್ರಮ ಈಕ್ವಾಲಿಟಿ ಕಪ್ ಗೆದ್ದುಕೊಂಡಿತು.

ಫುಟ್‌ಬಾಲ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಆರುಷ್ ಕುಮಾರ್ ಮತ್ತು ಆರುಷ್ ಗೋಯಲ್ ವಿಜೇತ ತಂಡದ ಗೋಲುಗಳನ್ನು ಗಳಿಸಿದರು. ಲೆಗಸಿ ಪರ ರೆಹಾನ್ ರೈ (21ನೇ ನಿಮಿಷ) ಗೋಲು ಹೊಡೆದರು.

ಇಕ್ವಾಲಿಟಿ ಪ್ಲೇಟ್ ವಿಭಾಗದ ಫೈನಲ್‌ನಲ್ಲಿ ಪಾಟರಿ ಟೌನ್‌ನ ಸರ್ಕಾರಿ ಪ್ರೌಢಶಾಲಾ ತಂಡ 2–1 ಗೋಲುಗಳಿಂದ ಗೋವಾದ ಸೇಂಟ್ ಆನ್ಸ್ ಪ್ರೌಢಶಾಲಾ ತಂಡವನ್ನು ಸೋಲಿಸಿತು.

# ಸಿಂಚಲ್, ಅನೀಶ್ ಸೇರಿ 22 ಮಂದಿಗೆ ಕೆಒಎ ವಾರ್ಷಿಕ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಸಿಂಚಲ್

**ಬೆಂಗಳೂರು:** ಭರವಸೆಯ ಅಥ್ಲೀಟ್ ಸಿಂಚಲ್ ಕಾವೇರಮ್ಮ, ಪ್ರತಿಭಾನ್ವಿತ ಹಾಕಿ ಆಟಗಾರ ಮೊಹಮ್ಮದ್ ರಾಹೀಲ್ ಮೌಸಿನ್, ಈಜುಪಟು ಅನೀಶ್ ಗೌಡ ಸೇರಿದಂತೆ 22 ಸಾಧಕರನ್ನು ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) 21ನೇ ವರ್ಷದ ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**ಪ್ರಶಸ್ತಿ ಪುರಸ್ಕೃತರು:** ಸಿಂಚಲ್ ಕಾವೇರಮ್ಮ ಟಿ.ಆರ್. (ಅಥ್ಲೆಟಿಕ್ಸ್), ಕೆ.ಸಾಯಿಪ್ರತೀಕ್ (ಬ್ಯಾಡ್ಮಿಂಟನ್), ಅಭಿಷೇಕ್ ಗೌಡ ಸಿ.ಆರ್. (ಬ್ಯಾಸ್ಕೆಟ್‌ಬಾಲ್), ಕೀರ್ತಿ ರಂಗಸ್ವಾಮಿ ಸಿ. (ಸೈಕ್ಲಿಂಗ್), ಸೆಜಲ್ ಗುಲಿಯಾ (ಫೆನ್ಸಿಂಗ್), ಅಂಕಿತ್ ಪಿ. (ಫುಟ್‌ಬಾಲ್), ಕೀರ್ತನಾ ಜಿ (ಜಿಮ್ನಾಸ್ಟಿಕ್), ದಾದಾಪೀರ್ (ಕಯಾಕಿಂಗ್ ಮತ್ತು ಕೆನೊಯಿಂಗ್), ಸುಹಿತಾ ಮಯೂರಿ (ಲಾನ್ ಟೆನಿಸ್), ಮೊಹಮ್ಮದ್ ರಾಹೀಲ್ ಮೌಸಿನ್ (ಹಾಕಿ), ಸುರಭಿ ಬಿ.ಆರ್. (ನೆಟ್‌ಬಾಲ್), ಯುಕ್ತಿ ರಾಜೇಂದ್ರ (ಶೂಟಿಂಗ್), ಅನೀಶ್ ಎಸ್.ಗೌಡ (ಈಜು), ಉಷಾ ಎಸ್. ಆರ್. (ವೇಟ್ ಲಿಫ್ಟಿಂಗ್), ವೀರಮಣಿ (ಪತ್ರಿಕಾ ಛಾಯಾಗ್ರಾಹಕ), ಶಮಾ ಕಿತ್ತೂರು (ಅಂತರರಾಷ್ಟ್ರೀಯ ಮಾಜಿ ಬ್ಯಾಡ್ಮಿಂಟನ್ ಆಟಗಾರ್ತಿ), ಎಂ.ಎ.ಪಾರ್ಥ ಸಾರಥಿ (ಅಂತರ ರಾಷ್ಟ್ರೀಯ ಮಾಜಿ ಬ್ಯಾಸ್ಕೆಟ್ ಬಾಲ್ ಆಟಗಾರ), ಚಂದ್ರಶೇಖರ ಜಿ.ಎ. (ಅಂತರರಾಷ್ಟ್ರೀಯ ಮಾಜಿ ಬಾಕ್ಸರ್), ಅನಿಲ್ ಆಲ್ಡ್ರಿನ್ (ಅಂತರ ರಾಷ್ಟ್ರೀಯ ಮಾಜಿ ಹಾಕಿ ಆಟಗಾರ), ಡಾ.ಅನುರಾಧಾ ನಮಶಿವಾಯ (ಅಂತರ ರಾಷ್ಟ್ರೀಯ ಮಾಜಿ ಜಿಮ್ನಾಸ್ಟ್), ಕ್ಯಾಪ್ಟನ್ ದಿಲೀಪ್ ಕುಮಾರ್ (ಅಂತರ ರಾಷ್ಟ್ರೀಯ ಮಾಜಿ ಕಯಾಕಿಂಗ್ ಮತ್ತು ಕೆನೊಯಿಂಗ್ ಆಟಗಾರ), ಬಿ.ಎನ್. ಎಸ್. ರೆಡ್ಡಿ (ಅಂತರರಾಷ್ಟ್ರೀಯ ಮಾಜಿ ಟೆನಿಸ್ ಆಟಗಾರ).

**ಇಂದು ಪ್ರಶಸ್ತಿ ಪ್ರದಾನ:** ನೃಪತುಂಗಾ ರಸ್ತೆಯ ಯವನಿಕಾದಲ್ಲಿ ಡಿ.1ರಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡುವರು.

ಗೃಹ ಸಚಿವ ಡಾ.ಜಿ.ಪರಮೇಶ್ವರ, ಶಾಸಕ ರಿಜ್ವಾನ್ ಅರ್ಷದ್ ಭಾಗವಹಿಸುವರು. ಪ್ರಶಸ್ತಿ ಪುರಸ್ಕೃತರಿಗೆ ತಲಾ ₹1ಲಕ್ಷ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ನೀಡಲಾಗುವುದು ಎಂದು ಕೆಒಎ ಮಹಾಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ದಿಗ್ಗಜ ಕ್ರಿಕೆಟಿಗರ ಹೆಸರು

# ಶಾಂತಾಗೆ ಸಿಗದ ಗೌರವ: ಬೇಸರ

• ಗಿರೀಶ ದೊಡ್ಡಮನಿ

**ಬೆಂಗಳೂರು:** ಕರ್ನಾಟಕ ಕ್ರಿಕೆಟ್ ತಂಡವು 1974ರಲ್ಲಿ ಪ್ರಥಮ ರಣಜಿ ಟ್ರೋಫಿ ಜಯಿಸಿದ ಮತ್ತು ಅದೇ ವರ್ಷ ಬೆಂಗಳೂರಿನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್‌ಗಳಿಗೆ ದಿಗ್ಗಜ ಕ್ರಿಕೆಟಿಗರ ನಾಮಕರಣ ಮಾಡುತ್ತಿದೆ.

ಆದರೆ ಈ ಸಾಲಿನಲ್ಲಿ ಮಹಿಳಾ ಕ್ರಿಕೆಟ್ ದಂತಕಥೆ ಶಾಂತಾ ರಂಗಸ್ವಾಮಿ ಅವರ ಹೆಸರಿಲ್ಲ. ಅದರಿಂದಾಗಿ ಮಹಿಳಾ ಕ್ರಿಕೆಟ್ ವಲಯದಿಂದ ಬೇಸರ ವ್ಯಕ್ತವಾಗಿದೆ.

ಎರ್ರಪಳ್ಳಿ ಪ್ರಸನ್ನ, ಬಿ.ಎಸ್. ಚಂದ್ರಶೇಖರ್, ಜಿ.ಆರ್. ವಿಶ್ವನಾಥ್, ಸೈಯದ್ ಕಿರ್ಮಾನಿ, ಬ್ರಿಜೇಶ್ ಪಟೇಲ್, ರೋಜರ್ ಬಿನ್ನಿ, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಜಾವಗಲ್ ಶ್ರೀನಾಥ್ ಮತ್ತು ವೆಂಕಟೇಶ್ ಪ್ರಸಾದ್ ಅವರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡಲು ಕೆಎಸ್‌ಸಿಎ ನಿರ್ಧರಿಸಿದೆ ಎಂದು 'ಪ್ರಜಾವಾಣಿ' ವರದಿ (2024 ನವೆಂಬರ್ 23) ಪ್ರಕಟಿಸಿತ್ತು.

ಮುಂದಿನ ತಿಂಗಳು ನಡೆಯಲಿರುವ ಸಂಸ್ಥೆಯ ವಾರ್ಷಿಕ ಮಹಾಸಭೆಯ ನಡಾವಳಿ ಪುಸ್ತಕದಲ್ಲಿ (ಇದರ ಪ್ರತಿ ಪತ್ರಿಕೆಗೆ ಲಭ್ಯವಾಗಿದೆ) ನಿರ್ಧಾರವನ್ನು ಸ್ಪಷ್ಟಗೊಳಿಸಲಾಗಿದೆ. ಆಟಗಾರರ ನಾಮಕರಣ ಮಾಡಲಿರುವ ಸ್ಟ್ಯಾಂಡ್‌ಗಳನ್ನೂ ಉಲ್ಲೇಖಿಸಲಾಗಿದೆ.

ಆದರೆ ರಾಜ್ಯ ಮತ್ತು ಭಾರತದ ಮಹಿಳಾ ಕ್ರಿಕೆಟ್ ಬೆಳವಣಿಗೆ ಮಹತ್ತರ ಪಾತ್ರ ವಹಿಸಿದ ಶಾಂತಾ ಅವರ ಹೆಸರಿನಲ್ಲಿಯೂ ಒಂದು ಸ್ಟ್ಯಾಂಡ್ ಇರಬೇಕು ಎಂದು ಈಚೆಗೆ ಮಾಜಿ ಮಹಿಳಾ ಕ್ರಿಕೆಟಿಗರು ಮತ್ತು ಅಭಿಮಾನಿಗಳು ಒತ್ತಾಯಿಸಿದ್ದರು.

'ಶಾಂತಾ ರಂಗಸ್ವಾಮಿ ಅವರು ದೇಶದ ಕ್ರಿಕೆಟ್ ರಂಗಕ್ಕೆ ನೀಡಿರುವ ಕೊಡುಗೆ ಅಪಾರವಾದದ್ದು. ಇವತ್ತು ಮಹಿಳಾ ಕ್ರಿಕೆಟ್ ಈ ಮಟ್ಟಕ್ಕೆ ಬೆಳೆಯುವಲ್ಲಿ ಅವರು ಆಟಗಾರ್ತಿಯಾಗಿ, ಆಡಳಿತದ ಭಾಗವಾಗಿ ನೀಡಿರುವ ಕೊಡುಗೆ ಮುಖ್ಯ ಕಾರಣ. ಕ್ರಿಕೆಟ್ ಸಾಧಕರಿಗೆ ಗೌರವ ಸಲ್ಲಿಸುತ್ತಿರುವುದು ಸ್ವಾಗತಾರ್ಹ ನಡೆ. ಅದರ ಬಗ್ಗೆ ನಮಗೂ ಸಂತಸವಿದೆ. ಆದರೆ, ಅರ್ಹ ಆಟಗಾರ್ತಿಯರಿಗೆ ಗೌರವ ನೀಡದಿರುವುದು ಏಕೆ' ಎಂದು ಬಿಸಿಸಿಐ ಮಹಿಳಾ ಕ್ರಿಕೆಟ್ ಆಯ್ಕೆ ಸಮಿತಿ ಸದಸ್ಯೆ ಕಲ್ಪನಾ ವೆಂಕಟಾಚಾರ್ 'ಪ್ರಜಾವಾಣಿ'ಯ ಮುಂದೆ ಅಸಮಾಧಾನ ವ್ಯಕ್ತಪಡಿಸಿದರು.

'ಮಹಿಳೆಯರ ತಂಡವು ಈಚೆಗೆ 19 ವರ್ಷದೊಳಗಿನವರ ವಿಶ್ವಕಪ್ ಗೆದ್ದ ಬಂದಿತ್ತು. ಅವರ ಅಭಿನಂದನೆಗಾಗಿ ನಡೆದ ಸಮಾರಂಭದಲ್ಲಿ ಸಚಿನ್ ತೆಂಡೂಲ್ಕರ್ ಅವರು ಕೂಡ ಮಹಿಳೆಯರ ಕ್ರಿಕೆಟ್‌ಗೆ ಶಾಂತಾ ಅವರು ನೀಡಿದ್ದ ಕಾಣಿಕೆ ಸ್ಮರಿಸಿದ್ದರು. ಶಾಂತಾ, ಡಯಾನಾ ಎಡುಲ್ಜಿ, ಅಂಜುಂ ಚೋಪ್ರಾ, ಮಿಥಾಲಿ ರಾಜ್ ಸೇರಿದಂತೆ ಹಲವು ಹಾಕಿದ ಅಡಿಪಾಯದ ಮೇಲೆ ಇವತ್ತು ವಿಶ್ವಕಪ್ ಸಾಧನೆಯಾಗಿದೆ ಎಂದು ಶ್ಲಾಘಿಸಿದ್ದರು. ಅಂತಹ ಮಹತ್ವದ ಆಟಗಾರ್ತಿ ಯನ್ನು ತವರು ರಾಜ್ಯ ಪರಿಗಣಿಸಬೇಕು' ಎಂದೂ ಕಲ್ಪನಾ ಅಭಿಪ್ರಾಯಪಟ್ಟಿದ್ದಾರೆ.



ಶಾಂತಾ ರಂಗಸ್ವಾಮಿ

**ಸ್ಟ್ಯಾಂಡ್‌ಗಳಿಗೆ ಹೆಸರುಗಳು**

| | | | |
|---|---|---|---|
| ಪಿ1 | ಎರ್ರಪಳ್ಳಿ ಪ್ರಸನ್ನ | ಎ02 | ರೋಜರ್ ಬಿನ್ನಿ |
| ಪಿ2 | ಜಿ.ಆರ್. ವಿಶ್ವನಾಥ್ | ಡೈಮಂಡ್ ಬಾಕ್ಸ್ | ಅನಿಲ್ ಕುಂಬ್ಳೆ |
| ಪಿ ಟೆರೇಸ್ | ಬಿ.ಎಸ್.ಚಂದ್ರಶೇಖರ್ | ಎನ್ ಸ್ಟ್ಯಾಂಡ್ | ರಾಹುಲ್ ದ್ರಾವಿಡ್ |
| ಪಿ ಕಾರ್ಪೋರೇಟ್ | ಸೈಯದ್ ಕಿರ್ಮಾನಿ | ಪಿ1ಎ | ಜಾವಗಲ್ ಶ್ರೀನಾಥ್ |
| ಎ01 | ಬ್ರಿಜೇಶ್ ಪಟೇಲ್ | ಪಿ4 | ವೆಂಕಟೇಶ್ ಪ್ರಸಾದ್ |

### ಕ್ರಿಕೆಟ್: ಶಾಂತಾ ಸಾಧನೆ

ಶಾಂತಾ ಅವರು 1976ರಿಂದ 1991ರವರೆಗೆ ಭಾರತ ತಂಡದಲ್ಲಿ ಆಡಿದ್ದರು. 16 ಟೆಸ್ಟ್‌ಗಳಲ್ಲಿ 750 ರನ್ ಗಳಿಸಿದ್ದರು. ಅದರಲ್ಲಿ ಒಂದು ಶತಕ ಮತ್ತು 6 ಅರ್ಧಶತಕಗಳು ಇವೆ. ಅವರು 19 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನು ಆಡಿ 267 ರನ್ ಗಳಿಸಿದ್ದಾರೆ. ಟೆಸ್ಟ್‌ನಲ್ಲಿ 21 ಮತ್ತು ಏಕದಿನ ಮಾದರಿಯಲ್ಲಿ 12 ವಿಕೆಟ್‌ಗಳನ್ನೂ ಗಳಿಸಿದ್ದರು. ಶಾಂತಾ ಅವರಿಗೆ ಅರ್ಜುನ ಪ್ರಶಸ್ತಿ, ಬಿಸಿಸಿಐ ಜೀವಮಾನ ಸಾಧನೆ ಪ್ರಶಸ್ತಿಗಳು ಸಂದಿವೆ.